ಶನಿವಾರ, ನವೆಂಬರ್ 19, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಇಂದು(ನ.19) ವಿಶ್ವ ಶೌಚಾಲಯ ದಿನ. ಸಾರ್ವಜನಿಕ ಹಾಗೂ ಉದ್ಯೋಗ ಸ್ಥಳಗಳಲ್ಲಿ ಮಹಿಳೆಯರಿಗೆ ಸಮರ್ಪಕ ಶೌಚಾಲಯ ವ್ಯವಸ್ಥೆಗಾಗಿ ಹಕ್ಕೊತ್ತಾಯಿಸುವ ದಿನ.



'ಭಯೋತ್ಪಾದನೆಗೆ ಹಣ ಬೇಡ' ಸಮಾವೇಶದಲ್ಲಿ ಆಕ್ರೋಶ ವ್ಯಕ್ತಪಡಿಸಿದ ಪ್ರಧಾನಿ

ಉಗ್ರರಿಗೆ ಚೀನಾ, ಪಾಕ್ ಬೆಂಬಲ: ಮೋದಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೆಲವು ದೇಶಗಳು ತಮ್ಮ ವಿದೇಶಾಂಗ ನೀತಿಯ ಭಾಗವಾಗಿಯೇ ಭಯೋತ್ಪಾದನೆಗೆ ಬೆಂಬಲ ಕೊಡುತ್ತಿವೆ. ಕೆಲವು ದೇಶಗಳು ಭಯೋತ್ಪಾದಕರ ವಿರುದ್ಧ ಕೈಗೊಳ್ಳುವ ಕ್ರಮಗಳಿಗೆ ಅಡ್ಡಿ ಉಂಟು ಮಾಡಿ ಉಗ್ರರ ಪರ ವಾದ ಮಂಡಿಸುತ್ತವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಹೇಳಿದ್ದಾರೆ.

ಚೀನಾ ಮತ್ತು ಪಾಕಿಸ್ತಾನವನ್ನು ಪರೋಕ್ಷವಾಗಿ ಉಲ್ಲೇಖಿಸಿ ಅವರು ಈ ಮಾತು ಆಡಿದ್ದಾರೆ.

ಭಯೋತ್ಪಾದನೆಗೆ ಬೆಂಬಲ ನೀಡುವ ದೇಶಗಳ ಮೇಲೆ ಭಯೋತ್ಪಾದನೆಯಿಂದಾಗುವ ನಷ್ಟವನ್ನು ಹೊರಿಸಬೇಕು. ಪರೋಕ್ಷ ಯುದ್ಧ ಅಪಾಯಕಾರಿ ಮತ್ತು ಹೆಚ್ಚು ಹಿಂಸಾತ್ಮಕವಾಗಿರುತ್ತದೆ. ಯುದ್ಧ ಇಲ್ಲ ಎಂಬುದರ ಅರ್ಥ ಶಾಂತಿ ನೆಲೆಸಿದೆ ಎಂದಲ್ಲ ಎಂದು ಪ್ರಧಾನಿ ಹೇಳಿದ್ದಾರೆ.

ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡಲು ಹೆಚ್ಚು ಸಕ್ರಿಯವಾದ ಪ್ರತಿಕ್ರಿಯೆ ಮತ್ತು ಜಾಗತಿಕ ಸಹಕಾರ ಬೇಕಿದೆ. ಭಯೋತ್ಪಾದಕರನ್ನು ಬೆಂಬಲಿಸುವ ದೇಶಗಳನ್ನು ಮಟ್ಟ ಹಾಕಬೇಕಿದೆ, ಅವರ ಬೆಂಬಲ ಜಾಲವನ್ನು ಒಡೆಯಬೇಕಿದೆ ಮತ್ತು ಅವರಿಗೆ ದೊರೆಯುವ ಹಣಕಾಸು ಬೆಂಬಲವನ್ನು ತಡೆಗಟ್ಟಬೇಕಿದೆ ಎಂದು ಮೋದಿ ಪ್ರತಿಪಾದಿಸಿದ್ದಾರೆ.

ಭಯೋತ್ಪಾದನೆಗೆ ಹಣಕಾಸು ನೆರವು ತಡೆಗಟ್ಟುವುದಕ್ಕೆ ಸಂಬಂಧಿಸಿದ ಸಮಾವೇಶ ಉದ್ದೇಶಿಸಿ ಅವರು ಮಾತನಾಡಿದರು. ಗೃಹ ಸಚಿವಾಲಯವು ಈ ಸಮಾವೇಶವನ್ನು ಆಯೋಜಿಸಿತ್ತು.

ಭಯೋತ್ಪಾದಕರ ಕುರಿತು ಸಹಾನುಭೂತಿ ತೋರುವ ಜನರು ಮತ್ತು ಸಂಘಟನೆಗಳನ್ನು ಕೂಡ ಏಕಾಂಗಿ ಆಗಿಸಬೇಕಾಗಿದೆ. 'ಇಂತಹ ವಿಷಯದಲ್ಲಿ ಹೀಗಾದರೆ ಅಥವಾ ಹೀಗಾಗಿದ್ದರೆ ಎಂಬಂತಹ ವಿಚಾರಗಳಿಗೆ ಅವಕಾಶ ಇಲ್ಲ. ಗುಪ್ತವಾಗಿ ಮತ್ತು ಬಹಿರಂಗವಾಗಿ ಭಯೋತ್ಪಾದನೆಗೆ ಬೆಂಬಲ ನೀಡುವವರ ವಿರುದ್ಧ ಜಗತ್ತು ಒಂದಾಗಬೇಕಿದೆ' ಎಂದು ಮೋದಿ ತಿಳಿಸಿದ್ದಾರೆ.

ಭಯೋತ್ಪಾದಕ ಸಂಘಟನೆಗಳು ವಿವಿಧ ಮೂಲಗಳಿಂದ ಹಣ ಪಡೆಯುತ್ತಿವೆ. ಸರ್ಕಾರದ ಬೆಂಬಲ ಕೂಡ ಅಂತಹ ಮೂಲಗಳಲ್ಲಿ ಒಂದು. ವಿವಿಧ ರೀತಿಯ ಭಯೋತ್ಪಾದನಾ ದಾಳಿಗಳಿಗೆ ನೀಡುವ ಪ್ರತಿಕ್ರಿಯೆಯ ತೀವ್ರತೆಯು ದಾಳಿ ಎಲ್ಲಿ ನಡೆದಿದೆ ಎಂಬುದರ ಮೇಲೆ ಆಧಾರಿತವಾಗಿ 'ಇರಬಾರದು' ಎಂದು ಮೋದಿ ಅಭಿಪ್ರಾಯಪಟ್ಟಿದ್ದಾರೆ.

ಭಯೋತ್ಪಾದಕರ ವಿರುದ್ಧ ಕೈಗೊಳ್ಳುವ ಕ್ರಮಕ್ಕೆ ತಡೆ ಒಡ್ಡುವ ಮೂಲಕ ಕೆಲವು ದೇಶಗಳು ಪರೋಕ್ಷವಾಗಿ ಬೆಂಬಲ ನೀಡಿವೆ. ಜಾಗತಿಕ ಬೆದರಿಕೆಯ ವಿರುದ್ಧ ಕ್ರಮ ಕೈಗೊಳ್ಳುವ ವಿಚಾರದಲ್ಲಿ ದ್ವಂದ್ವ ನೀತಿಗೆ ಅವಕಾಶವೇ ಇಲ್ಲ ಎಂದೂ ಅವರು ಹೇಳಿದ್ದಾರೆ.

ಪಾಕಿಸ್ತಾನ ಮೂಲದ ಭಯೋತ್ಪಾದಕರನ್ನು ಜಾಗತಿಕ ಉಗ್ರರು ಎಂದು ಅಂತರರಾಷ್ಟ್ರೀಯ ಸಂಸ್ಥೆಗಳು ಘೋಷಿಸುವಂತೆ ಭಾರತ ಪ್ರಯತ್ನ ಮಾಡಿದ್ದರೂ ಚೀನಾವು ಪ್ರತಿ ಬಾರಿ ಅದಕ್ಕೆ ತಡೆ ಒಡ್ಡಿದೆ ಎಂಬುದನ್ನು ಮೋದಿ ಅವರು ಪರೋಕ್ಷವಾಗಿ ಉಲ್ಲೇಖಿಸಿದ್ದಾರೆ. ಲಷ್ಕರ್ ಎ ತಯಬಾ ಉಗ್ರಗಾಮಿ ತಲ್ಹಾ ಸಯೀದ್ ಮತ್ತು ಶಾಹಿದ್ ಮೊಹಮ್ಮದ್ ಅವರ ಮೇಲೆ ನಿರ್ಬಂಧ ಹೇರುವಂತೆ ಭಾರತ ಮತ್ತು ಅಮೆರಿಕ ನಡೆಸಿದ ಪ್ರಯತ್ನಕ್ಕೆ ಅ. 18 ಮತ್ತು 19ರಂದು ಚೀನಾ ತಡೆ ಒಡ್ಡಿತ್ತು.



ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರು 'ಭಯೋತ್ಪಾದನೆಗೆ ಹಣ ಬೇಡ' ಸಮಾವೇಶದಲ್ಲಿ ಶುಕ್ರವಾರ ಭಾಗಿಯಾಗಿದ್ದರು ಪಿಟಿಐ ಚಿತ್ರ

> **ತಂತ್ರಜ್ಞಾನದ ಅಭಿವೃದ್ಧಿಯು ಸವಾಲು ಮತ್ತು ಪರಿಹಾರ ಕೂಡ ಆಗಿದೆ. ತಂತ್ರಜ್ಞಾನವು ಭಯೋತ್ಪಾದನೆಗೆ ಹಣ ಸಂಗ್ರಹ, ಉಗ್ರರ ನೇಮಕಾತಿಗೆ ಬಳಕೆ ಆಗುತ್ತಿದೆ**
> **ನರೇಂದ್ರ ಮೋದಿ**, ಪ್ರಧಾನಿ

> **ಹಣ ನೀಡುವುದರಿಂದ ಭಯೋತ್ಪಾದನೆಯನ್ನು ಪೋಷಿಸಿದಂತಾಗುತ್ತದೆ. ಹೀಗೆ ಹಣ ನೀಡುವುದು ದೇಶಗಳ ಆರ್ಥಿಕತೆಯನ್ನು ದುರ್ಬಲಗೊಳಿಸುತ್ತದೆ**
> **ಅಮಿತ್ ಶಾ**, ಕೇಂದ್ರ ಗೃಹ ಸಚಿವ

ಭಯೋತ್ಪಾದನೆಗೆ ಧರ್ಮದ ತಳಕು ಬೇಡ: ಶಾ

'ಭಯೋತ್ಪಾದನಾ ಬೆದರಿಕೆಯನ್ನು ಯಾವುದೇ ಧರ್ಮ, ರಾಷ್ಟ್ರ ಅಥವಾ ಗುಂಪಿಗೆ ತಳಕು ಹಾಕಬಾರದು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ಜಾಗತಿಕ ಶಾಂತಿ ಮತ್ತು ಸುರಕ್ಷತೆಗೆ ಭಯೋತ್ಪಾದನೆಯು ಬಹುದೊಡ್ಡ ಬೆದರಿಕೆ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ, ಭಯೋತ್ಪಾದನೆಗೆ ಹಣಕಾಸು ನೆರವು ನೀಡುವುದು ಭಯೋತ್ಪಾದನೆಗಿಂತಲೂ ಹೆಚ್ಚು ಅಪಾಯಕಾರಿ. 'ಭಯೋತ್ಪಾದನೆಗೆ ಹಣ ಇಲ್ಲ' ಎಂಬ ಗುರಿಯನ್ನು ಸಾಧಿಸುವುದಕ್ಕಾಗಿ ಭಯೋತ್ಪಾದನೆಗೆ ಹಣ ನೀಡಿಕೆಯ ಮಾರ್ಗ, ಮಾಧ್ಯಮ ಮತ್ತು ವಿಧಾನಗಳನ್ನು ಜಾಗತಿಕ ಸಮುದಾಯವು ಅರ್ಥ ಮಾಡಿಕೊಳ್ಳಬೇಕು ಎಂದು ಶಾ ಹೇಳಿದ್ದಾರೆ.

ಕ್ರಿಪ್ಟೊಕರೆನ್ಸಿಯಂತಹ ವರ್ಚುವಲ್ ಕರೆನ್ಸಿಯನ್ನು ಉಗ್ರರು ಬಳಸುತ್ತಿದ್ದಾರೆ. ಇಂತಹ ಚಟುವಟಿಕೆಗಳನ್ನು ಅರ್ಥ ಮಾಡಿಕೊಂಡು, ಅವುಗಳಿಗೆ ಪರಿಹಾರ ಕಂಡುಕೊಳ್ಳಬೇಕಿದೆ ಎಂದು ಶಾ ವಿವರಿಸಿದ್ದಾರೆ.

ಕೆಲವು ದೇಶಗಳು ಉಗ್ರರನ್ನು ರಕ್ಷಿಸಿ ಅವರಿಗೆ ಆಶ್ರಯ ನೀಡಿದ್ದನ್ನು ನಾವು ನೋಡಿದ್ದೇವೆ. ಉಗ್ರನೊಬ್ಬನನ್ನು ರಕ್ಷಿಸುವುದು ಭಯೋತ್ಪಾದನೆಗೆ ಉತ್ತೇಜನ ನೀಡಿದಂತೆ. ಇಂತಹ ಶಕ್ತಿಗಳು ಎಂದೂ ಯಶಸ್ಸು ಪಡೆಯದಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಸಾಮೂಹಿಕ ಹೊಣೆಗಾರಿಕೆಯಾಗಿದೆ. ಉಗ್ರರ ಸುರಕ್ಷಿತ ತಾಣಗಳ ಕುರಿತು ನಿರ್ಲಕ್ಷ್ಯ ತಾಳಬಾರದು ಎಂದು ಶಾ ಕರೆ ಕೊಟ್ಟಿದ್ದಾರೆ.

ಕೆಣಕಿದರೆ ಸುಮ್ಮನೆ ಬಿಡುವುದಿಲ್ಲ: ರಾಜನಾಥ್ ಸಿಂಗ್


ಉಡುಪಿ: 'ಭಾರತ ವಿನಾಕಾರಣ ಯಾವ ದೇಶವನ್ನೂ ಕೆಣಕುವುದಿಲ್ಲ. ತಂಟೆಗೆ ಬಂದರೆ ತಕ್ಕ ಪ್ರತ್ಯುತ್ತರ ನೀಡಲಿದೆ. ಭಯೋತ್ಪಾದನೆ ಪೋಷಿಸುತ್ತಿರುವ ರಾಷ್ಟ್ರಕ್ಕೆ ಈಗಾಗಲೇ ಭಾರತದ ಶಕ್ತಿಯ ಅರಿವಾಗಿದೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದರು.

ಮಣಿಪಾಲದ ಕೆಎಂಸಿ ಗ್ರೀನ್ಸ್‌ನಲ್ಲಿ ಶುಕ್ರವಾರ ನಡೆದ 'ಮಾಹೆ' ವಿಶ್ವವಿದ್ಯಾಲಯದ 30ನೇ ಘಟಿಕೋತ್ಸವದಲ್ಲಿ ಮಾತನಾಡಿದ ಅವರು, 'ಭಯೋತ್ಪಾದನೆಯನ್ನು ಮಟ್ಟಹಾಕುವಲ್ಲಿ ಭಾರತ ವಿಶ್ವಕ್ಕೇ ಮಾದರಿಯಾಗಿದೆ. ದೇಶ ಆತಂಕವಾದವನ್ನು ಸಹಿಸುವುದಿಲ್ಲ' ಎಂದರು.

ದಶಕಗಳ ಹಿಂದೆ ಜಾಗತಿಕ ವೇದಿಕೆಗಳಲ್ಲಿ ಇತರೆ ರಾಷ್ಟ್ರಗಳು ಭಾರತದ ಮಾತುಗಳನ್ನು ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಈಗ ಇಡೀ ಜಗತ್ತು ಕಿವಿಗೊಟ್ಟು ಕೇಳುತ್ತದೆ. ಗಂಭೀರವಾಗಿ ತೆಗೆದುಕೊಳ್ಳುತ್ತದೆ. ಇದು ಬದಲಾದ ಭಾರತದ ಸಾಮರ್ಥ್ಯ ಎಂದು ಹೇಳಿದರು.

2047ರ ಹೊತ್ತಿಗೆ ಭಾರತ ವಿಶ್ವದ ಅತಿದೊಡ್ಡ ಆರ್ಥಿಕತೆಯ ರಾಷ್ಟ್ರವಾಗಿರಲಿದೆ. ದೇಶದ ಯುವ ಸಂಪತ್ತು ಪ್ರಧಾನಿ ನರೇಂದ್ರ ಮೋದಿ ಅವರ 5 ಲಕ್ಷ ಕೋಟಿ ಆರ್ಥಿಕತೆಯ ಗುರಿ ಸಾಧನೆಗೆ ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಸಾಂಪ್ರದಾಯಿಕ ಹಾಗೂ ಆಧುನಿಕ ಜ್ಞಾನದ ಸಾರ ಶಿಕ್ಷಣದಲ್ಲಿ ಸಿಗಬೇಕು ಎಂಬುದು 2020ರ ರಾಷ್ಟ್ರೀಯ ಶಿಕ್ಷಣ ನೀತಿಯ ಪ್ರಮುಖ ಉದ್ದೇಶ. ಈ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಎನ್‌ಇಪಿ ಅನುಷ್ಠಾನಗೊಳ್ಳುತ್ತಿದೆ ಎಂದರು.



ಮಣಿಪಾಲದ ಕೆಎಂಸಿ ಗ್ರೀನ್ಸ್‌ನಲ್ಲಿ ಶುಕ್ರವಾರ ನಡೆದ ಮಾಹೆ ವಿಶ್ವವಿದ್ಯಾಲಯದ 30ನೇ ಘಟಿಕೋತ್ಸವದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಮಾತನಾಡಿದರು

ಸುದ್ದಿ 2 ನಿಮಿಷ

ಸರ್ಕಾರಿ ಇಲಾಖೆಗಳಲ್ಲಿ 30 ಲಕ್ಷ ಹುದ್ದೆ ಖಾಲಿ: ಖರ್ಗೆ ಆರೋಪ


ನವದೆಹಲಿ(ಪಿಟಿಐ): ಸರ್ಕಾರಿ ಇಲಾಖೆಗಳಲ್ಲಿ 30 ಲಕ್ಷ ಹುದ್ದೆಗಳು ಖಾಲಿ ಇವೆ. ಆದರೆ, ಕೇವಲ 75,000 ನೇಮಕಾತಿ ಪತ್ರಗಳನ್ನು ಮಾತ್ರ ವಿತರಿಸಿದ್ದಾರೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ವಾಗ್ದಾಳಿ ನಡೆಸಿದರು.

ಕೇಂದ್ರ ಸಚಿವಾಲಯದ ಸೇವೆಗಳಲ್ಲಿ 1,600 ಹುದ್ದೆಗಳು ಖಾಲಿ ಇವೆ ಎಂದು ಮಾಧ್ಯಮ ವರದಿ ಉಲ್ಲೇಖಿಸಿ ಪ್ರಶ್ನೆ ಮಾಡಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ ಅವರು ವರ್ಷಕ್ಕೆ 2 ಕೋಟಿ ಉದ್ಯೋಗ ಒದಗಿಸುವುದಾಗಿ ಭರವಸೆ ನೀಡಿದ್ದರು. ಹಾಗಿದ್ದಲ್ಲಿ ಎಂಟು ವರ್ಷಗಳಲ್ಲಿ 16 ಕೋಟಿ ಉದ್ಯೋಗ ಸೃಷ್ಟಿಯಾಗಬೇಕಿತ್ತು. 30 ಲಕ್ಷ ಹುದ್ದೆಗಳು ವಿವಿಧ ಇಲಾಖೆಗಳಲ್ಲಿ ಖಾಲಿ ಇವೆ. ಆದರೆ, ಮೋದಿ ಅವರು ಕೇವಲ 75 ಸಾವಿರ ಮಂದಿಗೆ ಉದ್ಯೋಗ ಪತ್ರಗಳನ್ನು ವಿತರಿಸಿದ್ದಾರೆ' ಎಂದು ಟ್ವೀಟ್ ಮಾಡಿದ್ದಾರೆ.

'ಕೇಂದ್ರ ಸಚಿವಾಲಯದ ಅಡಿ 1,600 ಹುದ್ದೆಗಳು ಖಾಲಿ ಇವೆ. ಇವುಗಳನ್ನು ಯಾಕೆ ಭರ್ತಿ ಮಾಡಿಲ್ಲ ಎಂದು ಅವರು ಪ್ರಶ್ನಿಸಿದ್ದಾರೆ.

ಕಳೆದ ತಿಂಗಳು ಪ್ರಧಾನಿ ಮೋದಿ ಅವರು 'ರೋಜಗಾರ್ ಮೇಳ'ಕ್ಕೆ ಚಾಲನೆ ನೀಡಿ, ಎಂಟು ವರ್ಷಗಳಲ್ಲಿ ಉದ್ಯೋಗಗಳನ್ನು ಸೃಷ್ಟಿಸುವ ತಮ್ಮ ಸರ್ಕಾರದ ಪ್ರಯತ್ನಗಳನ್ನು ಒತ್ತಿ ಹೇಳಿದ್ದರು.



ಮತಾಂತರಕ್ಕೆ ಪೀಡಿಸಿ ಪತ್ನಿ ಮೇಲೆ ಹಲ್ಲೆ: ಪತಿಯ ಬಂಧನ

ಚಿತ್ರದುರ್ಗ: ಪ್ರೀತಿಸಿ ಮದುವೆಯಾಗಿದ್ದ ಪತ್ನಿ ಮುಸ್ಲಿಂ ಧರ್ಮಕ್ಕೆ ಮತಾಂತರಗೊಳ್ಳಲು ಒಪ್ಪಲಿಲ್ಲ ಎಂಬ ಕಾರಣಕ್ಕೆ ಹಲ್ಲೆ ನಡೆಸಿದ ಆರೋಪದ ಮೇಲೆ ಅಬ್ದುಲ್ ಖಾದರ್ (38) ಎಂಬಾತನನ್ನು ಕೋಟೆ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನೆಹರೂ ನಗರದ ನಿವಾಸಿ ಎಂ.ಉಮಾ (36) ದೂರು ನೀಡಿದ ಮಹಿಳೆ. ಪತಿಯಿಂದ ಹಲ್ಲೆಗೆ ಒಳಗಾಗಿ ತೀವ್ರವಾಗಿ ಗಾಯಗೊಂಡಿರುವ ಅವರು ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಶಿವಮೊಗ್ಗ ಮೂಲದ ಉಮಾ 2011ರಲ್ಲಿ ಶ್ರೀನಾಥ್ ಎಂಬುವರನ್ನು ವಿವಾಹವಾಗಿದ್ದರು. ಈ ದಂಪತಿಗೆ ಒಬ್ಬ ಮಗಳಿದ್ದಾಳೆ. 2019ರಲ್ಲಿ ವಿಚ್ಛೇದನ ಪಡೆದಿದ್ದರು. 2020ರ ಅಕ್ಟೋಬರ್‌ನಲ್ಲಿ ಅಬ್ದುಲ್ ಖಾದರ್ ಅವರನ್ನು ಪ್ರೇಮ ವಿವಾಹವಾಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ. ಉಮಾ ಹಾಗೂ ಖಾದರ್ ದಂಪತಿಗೆ ಹತ್ತು ತಿಂಗಳ ಗಂಡು ಮಗುವಿದೆ. ಮುಸ್ಲಿಂ ಧರ್ಮಕ್ಕೆ ಮತಾಂತರಗೊಳ್ಳುವಂತೆ ಖಾದರ್ ಪತ್ನಿಗೆ ಪೀಡಿಸಿದ್ದಾನೆ. ಉಮಾ ಒಪ್ಪದಿದ್ದಾಗ ಕಲಹ ಉಂಟಾಗಿದೆ. ನ.16ರಂದು ಸಂಜೆ ಗಲಾಟೆ ತೀವ್ರ ಸ್ವರೂಪಕ್ಕೆ ತಿರುಗಿದೆ. ಈ ಮಾಹಿತಿಯನ್ನು ಮಹಿಳೆ ಸಂಬಂಧಿಕರಿಗೆ ತಿಳಿಸಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಒಂದೇ ಕ್ಷೇತ್ರದಿಂದ ಸ್ಪರ್ಧೆ: ಸಿದ್ದರಾಮಯ್ಯ

ಮೈಸೂರು: 'ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಒಂದು ಕ್ಷೇತ್ರದಿಂದ ಮಾತ್ರ ಸ್ಪರ್ಧಿಸುವೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

'ಕೋಲಾರ, ಬಾದಾಮಿ ಹಾಗೂ ವರುಣಾದಲ್ಲಿ ಸ್ಪರ್ಧಿಸುವಂತೆ ಆಹ್ವಾನವಿದೆ. ಚುನಾವಣೆ ಘೋಷಣೆ ನಂತರ ಸ್ಪರ್ಧಿಸುವ ಕ್ಷೇತ್ರದ ಬಗ್ಗೆ ತಿಳಿಸಲಾಗುವುದು. ಅದನ್ನು ಹೈಕಮಾಂಡ್ ತೀರ್ಮಾನಿಸುತ್ತದೆ' ಎಂದು ಶುಕ್ರವಾರ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

ಪಕ್ಷದ ಗೆಲುವಿಗೆ ಸಹಕಾರಿ ಆಗಲಿದೆ ಎಂದ ಕಾಂಗ್ರೆಸ್ ಮುಖಂಡ ಸಂತೋಷ ಲಾಡ್

ಸಿದ್ದರಾಮಯ್ಯ, ಡಿಕೆಶಿ ಸ್ಪರ್ಧಿಸದೇ ಪಕ್ಷ ಸಂಘಟಿಸಲಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸುವ ಬದಲು, ರಾಜ್ಯದಾದ್ಯಂತ ಪ್ರವಾಸ ಮಾಡಿ ಪಕ್ಷವನ್ನು ಸಂಘಟಿಸಲಿ' ಎಂದು ಮಾಜಿ ಸಚಿವ, ಕಾಂಗ್ರೆಸ್ ಮುಖಂಡ ಸಂತೋಷ ಲಾಡ್ ಸಲಹೆ ನೀಡಿದ್ದಾರೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಇಬ್ಬರು ನಾಯಕರು ಎಲ್ಲಿಯೇ ಸ್ಪರ್ಧಿಸಿದರೂ ಗೆಲ್ಲುತ್ತಾರೆ. ಚುನಾವಣೆಗೆ ಸ್ಪರ್ಧಿಸಿದರೆ ಆಯಾ ಕ್ಷೇತ್ರಕ್ಕಷ್ಟೇ ಸೀಮಿತವಾಗುತ್ತಾರೆ. ಅವರು ಪ್ರಚಾರದಲ್ಲಿ ಹೆಚ್ಚು ತೊಡಗಿಕೊಂಡರೆ ಪಕ್ಷದ ಗೆಲುವಿಗೆ ಸಹಕಾರಿ ಆಗುತ್ತದೆ' ಎಂದು ಅಭಿಪ್ರಾಯಪಟ್ಟರು.

'ಸಿದ್ದರಾಮಯ್ಯನವರ ವಯಸ್ಸು ಹಾಗೂ ಬೇಸಿಗೆಯಲ್ಲಿ ಚುನಾವಣೆಯು ನಡೆಯುವುದರಿಂದ ಅವರು ಸ್ಪರ್ಧೆ ಮಾಡದಿರುವುದೇ ಉತ್ತಮ. ಇದು ನನ್ನ ವೈಯಕ್ತಿಕವಾದ ಅಭಿಪ್ರಾಯ. ಚುನಾವಣೆಯಲ್ಲಿ ಸ್ಪರ್ಧಿಸದೆಯೂ ಅವರು ಮುಖ್ಯಮಂತ್ರಿ ಆಗಬಹುದು. ಹೈಕಮಾಂಡ್ ಅವರಿಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಬಿಡಬೇಕು' ಎಂದು ಲಾಡ್ ಹೇಳಿದರು.

ಕ್ಷೇತ್ರವನ್ನು ಬಿಟ್ಟು ನಾನು ಎಲ್ಲಿಯೂ ಸ್ಪರ್ಧಿಸುವುದಿಲ್ಲ: 'ಸಂತೋಷ ಲಾಡ್ ಅವರು ಬಳ್ಳಾರಿಗೆ ಹೋಗ್ತಾರೆ. ನಾನು ಕಲಘಟಗಿಯಲ್ಲಿ ಸ್ಪರ್ಧಿಸುತ್ತೇನೆ' ಎಂದು ನಾಗರಾಜ ಛಬ್ಬಿ ಅವರು ಸಿದ್ದರಾಮಯ್ಯ ಅವರಲ್ಲಿ ಹೇಳಿದ್ದಾರೆ. ಈ ವಿಚಾರವನ್ನು ಸಿದ್ದರಾಮಯ್ಯ ಅವರು ನನಗೆ ಹೇಳಿದ್ದಾರೆಯೇ ಹೊರತು, ಬಳ್ಳಾರಿಗೆ ಹೋಗು ಎಂದು ಹೇಳಿಲ್ಲ. ಕಲಘಟಗಿ ವಿಧಾನಸಭಾ ಕ್ಷೇತ್ರವನ್ನು ಬಿಟ್ಟು ನಾನು ಎಲ್ಲಿಯೂ ಸ್ಪರ್ಧಿಸುವುದಿಲ್ಲ' ಎಂದು ಅವರು ಪ್ರತಿಕ್ರಿಯಿಸಿದರು.

'ಪಕ್ಷದಿಂದ ಆಂತರಿಕ ಸಮೀಕ್ಷೆ – ಕಾಂಗ್ರೆಸ್‌ಗೆ 130 ಕಡೆ ಗೆಲುವು'

ಹುಬ್ಬಳ್ಳಿ: 'ಮುಂಬರುವ ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ನಡೆಸಿರುವ ಮೂರು ಆಂತರಿಕ ಸಮೀಕ್ಷೆಯ ಪ್ರಕಾರ ಕಾಂಗ್ರೆಸ್ 130 ಸ್ಥಾನಗಳನ್ನು ಗೆಲ್ಲಲಿದೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್ ಹೇಳಿದರು.

'ಟಿಕೆಟ್ ಕೋರಿ ಕೆಪಿಸಿಸಿಗೆ ಈವರೆಗೆ ಒಂದು ಸಾವಿರ ಅರ್ಜಿಗಳು ಸಲ್ಲಿಕೆಯಾಗಿವೆ. ಧಾರವಾಡ ಜಿಲ್ಲೆಯಿಂದ 60 ಆಕಾಂಕ್ಷಿಗಳು ಅರ್ಜಿಸಲ್ಲಿಸಿದ್ದಾರೆ. ಅರ್ಜಿ ಸಲ್ಲಿಸುವ ಅವಧಿಯನ್ನು ಒಂದು ತಿಂಗಳು ವಿಸ್ತರಿಸಲಾಗಿದೆ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ಟಿಕೆಟ್ ಹಂಚಿಕೆ ಪ್ರಕ್ರಿಯೆಯು ಎಂಟು ಹಂತಗಳಲ್ಲಿ ನಡೆಯಲಿದೆ. ಮೊದಲ ಹಂತದಲ್ಲಿ 150 ಕ್ಷೇತ್ರಗಳ ಪಟ್ಟಿಯನ್ನು ಡಿಸೆಂಬರ್ ಅಂತ್ಯದೊಳಗೆ ಅಂತಿಮಗೊಳಿಸಲಾಗುವುದು' ಎಂದರು.

'ಬಿಜೆಪಿ ಆಂತರಿಕ ಸಮೀಕ್ಷೆಯಲ್ಲಿ ಕೇವಲ 60 ಸೀಟು ಸಿಗಲಿವೆ ಎಂಬುದು ಗೊತ್ತಾಗಿದೆ. ಇದರಿಂದ ಹತಾಶರಾಗಿ ಆ ಪಕ್ಷದ ನಾಯಕರು, ಖಾಸಗಿ ಕಂಪನಿ ಮೂಲಕ ಮತದಾರರ ಮಾಹಿತಿ ಸಂಗ್ರಹಿಸಿ ಚುನಾವಣೆಯಲ್ಲಿ ಅಕ್ರಮ ಎಸಗಲು ಸಿದ್ಧತೆ ನಡೆಸಿದ್ದಾರೆ' ಎಂದು ಸಲೀಂ ಅಹ್ಮದ್ ಆರೋಪಿಸಿದರು.

ಗಾಯತ್ರಿ ಶಾಂತೇಗೌಡ ಮನೆ 2ನೇ ದಿನವೂ ಶೋಧ

ಚಿಕ್ಕಮಗಳೂರು: ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎ.ವಿ.ಗಾಯತ್ರಿ ಶಾಂತೇಗೌಡ ಅವರ ಮನೆ, ಕಚೇರಿಯಲ್ಲಿ ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳು ಶುಕ್ರವಾರವು ದಾಖಲೆ ಪರಿಶೀಲನೆ ನಡೆಸಿದರು.

'ಗುರುವಾರ ಬೆಳಿಗ್ಗೆಯಿಂದ ಕಾರ್ಯಾಚರಣೆಯಲ್ಲಿ ತೊಡಗಿರುವ ಅಧಿಕಾರಿಗಳು, ಗಾಯತ್ರಿ ಅವರ ವ್ಯವಹಾರ ಕುರಿತು ವಿವರಗಳನ್ನು ಸಂಗ್ರಹಿಸಿದ್ದಾರೆ. ಕ್ರಷರ್ ಕೆಲಸಗಾರರಿಂದಲೂ ಮಾಹಿತಿ ಕಲೆ ಹಾಕಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಗಾಯತ್ರಿ ಅವರ ಮನೆ ಮುಂದಿನ ರಸ್ತೆಯಲ್ಲಿ ಓಡಾಟ ನಿರ್ಬಂಧಿಸಿದ್ದು, ಪೊಲೀಸ್ ಪಹರೆ ಇತ್ತು. 'ಗಾಯತ್ರಿ ಅವರು ಊರಿಗೆ ಹೋಗಿದ್ದು, ಚಿಕ್ಕಮಗಳೂರಿಗೆ ವಾಪಸಾಗಿಲ್ಲ' ಎಂದು ಕುಟುಂಬದ ಆಪ್ತರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ಫೇಸ್ ಬುಕ್ ಪೋಸ್ಟ್: ಗಾಯತ್ರಿ ಅವರ ಫೇಸ್‌ಬುಕ್ ಖಾತೆಯಲ್ಲಿ 'ಕೆಲವರಿಗೆ ಸದ್ಯದಲ್ಲಿಯೇ ಉತ್ತರ ಕೊಡುವೆ' ಎಂದು ಪೋಸ್ಟ್ ಮಾಡಲಾಗಿದೆ.

ಸ್ವಮೂತ್ರಪಾನ ಪಾಠವಿಲ್ಲ: ಕುಲಸಚಿವ

ಪ್ರಜಾವಾಣಿ ವಾರ್ತೆ

ಮೈಸೂರು: 'ಮೈಸೂರು ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಷಯ ಅಧ್ಯಯನ ಮಾಡುತ್ತಿರುವ ಪದವಿ ವಿದ್ಯಾರ್ಥಿಗಳಿಗೆ 5ನೇ ಸೆಮಿಸ್ಟರ್‌ನಲ್ಲಿ ವೈದ್ಯಕೀಯ ಸಮಾಜಶಾಸ್ತ್ರ ಪಠ್ಯಕ್ರಮ ನೀಡಲಾಗಿದ್ದು, ಪಠ್ಯಕ್ರಮದಲ್ಲಿ ಏಡ್ಸ್, ಕ್ಯಾನ್ಸರ್‌ಗೆ ಸ್ವಮೂತ್ರ ಪಾನವೇ ಮದ್ದು ಎಂಬ ಪಾಠವಿಲ್ಲ' ಎಂದು ವಿಶ್ವವಿದ್ಯಾಲಯದ ಕುಲಸಚಿವ ಪ್ರೊ.ಆರ್.ಶಿವಪ್ಪ ತಿಳಿಸಿದ್ದಾರೆ.

'15 ಪರಾಮರ್ಶನ ಪುಸ್ತಕಗಳನ್ನು ಹೆಸರಿಸಲಾಗಿದ್ದು, ಅದರಲ್ಲಿ ಬೈರಪ್ಪ ಅವರ ಪುಸ್ತಕವೂ ಇದೆ. ಅದು ಪಠ್ಯ ಪುಸ್ತಕವಲ್ಲ' ಎಂದಿದ್ದಾರೆ. 'ಪರಾಮರ್ಶನ ಗ್ರಂಥಗಳ ಪಟ್ಟಿಯಲ್ಲಿರುವ ಕೆ.ಬೈರಪ್ಪನವರ 'ವೈದ್ಯಕೀಯ ಸಮಾಜಶಾಸ್ತ್ರ' ಪುಸ್ತಕದಲ್ಲಿ ಆ ಮಾಹಿತಿ ಬಂದಿದೆ. ಅದು ಲೇಖಕರ ಅಭಿಪ್ರಾಯವೇ ಹೊರತು. ವಿಶ್ವವಿದ್ಯಾಲಯದ ಅಭಿಪ್ರಾಯವಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

ಕಮಿಷನ್ ಬೇಡಿಕೆ: ಕಡೂರು ತಾ.ಪಂ. ಪ್ರಭಾರ ಇಒ ಅಮಾನತು

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಕಮಿಷನ್ ಬೇಡಿಕೆ ಪ್ರಕರಣದಲ್ಲಿ, ಕಡೂರು ತಾಲ್ಲೂಕು ಪಂಚಾಯಿತಿ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ ಆಗಿರುವ ಹಿರಿಯ ಪಶುವೈದ್ಯಾಧಿಕಾರಿ ಡಾ.ದೇವರಾಜ್ ನಾಯಕ್ ಅವರನ್ನು ಅಮಾನತುಗೊಳಿಸಲಾಗಿದೆ.



ದೇವರಾಜ್ ನಾಯಕ್

'ಕಡೂರು ತಾಲ್ಲೂಕಿನ ಗ್ರಾಮ ಪಂಚಾಯಿತಿಗಳಿಗೆ ಕೋವಿಡ್ ಪರಿಕರಗಳನ್ನು ಪೂರೈಕೆ ಮಾಡಿದ್ದ ಬಿಲ್ ಪಾವತಿಸಲು ದೇವರಾಜ್ ನಾಯಕ್ ಅವರು ಕಮಿಷನ್‌ಗೆ ಬೇಡಿಕೆ ಇಟ್ಟಿದ್ದಾರೆ' ಎಂದು ಹುಬ್ಬಳ್ಳಿಯ ಗುತ್ತಿಗೆದಾರ ಬಸವರಾಜ್ ಅಮರಗೋಳ ಅವರು ಆರೋಪಿಸಿದ್ದರು.

'ಕೋವಿಡ್ ಪರಿಕರಗಳ ಪೂರೈಕೆ ಬಿಲ್ ಪಾವತಿಗೆ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ಅವರು ಸೂಚನೆ ನೀಡಿ ಒಂದು ವರ್ಷವಾದರೂ ಕ್ರಮ ವಹಿಸದಿರುವುದು ಹಾಗೂ ಗ್ರಾಮ ಪಂಚಾಯಿತಿಗಳ ಪಿಡಿಒಗಳಿಗೆ ಬಿಲ್ ಪಾವತಿಸಲು ನಿರ್ದೇಶನ ನೀಡಿ ಅಗತ್ಯ ಕ್ರಮವಹಿಸದೆ ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಈ ಕ್ರಮ ಜರುಗಿಸಲಾಗಿದೆ' ಎಂದು ಅಮಾನತು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಪಿಎಸ್‌ಐ ಅಕ್ರಮ ನೇಮಕಾತಿ 12 ಆರೋಪಿಗಳಿಗೆ ಜಾಮೀನು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದಲ್ಲಿ ಬಂಧಿತರಾಗಿರುವ ಒಟ್ಟು 12 ಜನ ಆರೋಪಿಗಳಿಗೆ ನಗರದ 23ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದ್ದು, ಇಬ್ಬರು ಸರ್ಕಾರಿ ಅಧಿಕಾರಿಗಳಿಗೆ ಜಾಮೀನು ನಿರಾಕರಿಸಿದೆ.

ಜಾಗೃತ್, ಸೋಮನಾಥ, ರಘುವೀರ್, ಮಮತೇಶ್ ಗೌಡ, ಸಿ.ಎಂ.ನಾರಾಯಣ , ಆರ್. ಮಧು, ಸಿ.ಕೆ.ದಿಲೀಪ್ ಕುಮಾರ್, ರಚನಾ ಹಣಮಂತ, ಪ್ರವೀಣ್ ಕುಮಾರ್ ರಾಘವೇಂದ್ರ, ಮಧ್ಯವರ್ತಿಗಳಾದ ಕೇಶವಮೂರ್ತಿ ಮತ್ತು ಶರತ್ ಕುಮಾರ್ ಜಾಮೀನು ಪಡೆದವರಾಗಿದ್ದಾರೆ. ಪೊಲೀಸ್ ಇಲಾಖೆಯ ವಿಭಾಗಾಧಿಕಾರಿ ಆರ್. ಮಂಜುನಾಥ್ ಮತ್ತು ಬ್ಯಾಡರಹಳ್ಳಿ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಹರೀಶ್‌ಅವರಿಗೆ ಜಾಮೀನು ನಿರಾಕರಿಸಲಾಗಿದೆ. ಅರ್ಜಿದಾರರ ಪರ ಹೈಕೋರ್ಟ್‌ನ ಹಿರಿಯ ವಕೀಲ ಎಂ.ಎಸ್.ಶ್ಯಾಮ ಸುಂದರ್ ಮಂಡಿಸಿದ್ದ ವಾದಾಂಶವನ್ನು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ.ಲಕ್ಷ್ಮೀನಾರಾಯಣ ಭಟ್ ಪುರಸ್ಕರಿಸಿದ್ದಾರೆ.

ಸಿಐಡಿ ಪರ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, 'ಹಗರಣದಿಂದ 55 ಸಾವಿರ ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಇದೊಂದು ಸಾಮಾಜಿಕ-ಆರ್ಥಿಕ ಅಪರಾಧ. ವಿಧಿವಿಜ್ಞಾನ ಪ್ರಯೋಗಾಲಯದ ವರದಿ ಪ್ರಕಾರ, ಈ ಆರೋಪಿಗಳು ಒಎಂಆರ್ ಶೀಟ್ ಸೇರಿದಂತೆ ಪರೀಕ್ಷಾ ದಾಖಲೆಗಳನ್ನು ತಿರುಚಿಸಿದ್ದಾರೆ. ಸಿಬಿಐ ಹೆಚ್ಚುವರಿ ತನಿಖೆ ನಡೆಸುತ್ತಿರುವುದರಿಂದ ಆರೋಪಿಗಳಿಗೆ ಜಾಮೀನು ನೀಡಬಾರದು' ಎಂದು ಕೋರಿದ್ದರು.

545 ಪಿಎಸ್‌ಐ ಹುದ್ದೆಗಳ ನೇಮಕ ಅಕ್ರಮದ ಈ ಹಗರಣದಲ್ಲಿ ಅರ್ಜಿದಾರರ ವಿರುದ್ಧ ಕ್ರಿಮಿನಲ್ ಪಿತೂರಿ, ವಂಚನೆ, ನಕಲು ಮತ್ತು ವಂಚನೆಗೆ ವಿದ್ಯುನ್ಮಾನ ಸಾಧನಗಳ ಬಳಕೆ ಮಾಡಿರುವುದೂ ಸೇರಿದಂತೆ ಹಲವು ಆರೋಪಗಳನ್ನು ಹೊರಿಸಲಾಗಿದೆ.

ಗೌತಮ್ ನವಲಖಾ ಗೃಹಬಂಧನ ತೀರ್ಪು ಎತ್ತಿ ಹಿಡಿದ 'ಸುಪ್ರೀಂ'

ನವದೆಹಲಿ: ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅರ್ಜಿಯನ್ನು ವಜಾಗೊಳಿಸಿರುವ ಸುಪ್ರೀಂಕೋರ್ಟ್, ಎಲ್ಗಾರ್-ಪರಿಷತ್ ಪ್ರಕರಣದಲ್ಲಿ ಬಂಧನಕ್ಕೊಳಗಾಗಿರುವ ಸಾಮಾಜಿಕ ಕಾರ್ಯಕರ್ತ ಗೌತಮ್ ನವಲಖಾ ಅವರನ್ನು 24 ಗಂಟೆಗಳ ಒಳಗಾಗಿ ಗೃಹ ಬಂಧನದಲ್ಲಿ ಇರಿಸುವಂತೆ ಶುಕ್ರವಾರ ಸೂಚಿಸಿದೆ.

ನವಲಖಾ ಅವರನ್ನು ಸುಪ್ರೀಂ ಕೋರ್ಟ್ ಆದೇಶದ ಹೊರತಾಗಿಯೂ ಮುಂಬೈನ ತಲೋಜ ಕಾರಾಗೃಹದಲ್ಲಿ ಇರಿಸಲಾಗಿದೆ. ಸುಪ್ರೀಂಕೋರ್ಟ್, ನ.10ರಂದು ನವಲಖಾ ಅವರನ್ನು ಗೃಹ ಬಂಧನದಲ್ಲಿ ಇರಿಸುವಂತೆ ನೀಡಿದ್ದ ತೀರ್ಪು ಪರಿಶೀಲಿಸುವಂತೆ ಎನ್‌ಐಎ ಕೇಳಿತ್ತು. ನವಲಖಾ ಅವರು ಸತತವಾಗಿ ಹಾದಿ ತಪ್ಪಿಸುವ ಹೇಳಿಕೆ ನೀಡುತ್ತಿದ್ದಾರೆ. ಇವರು ವಾಸಿಸಲು ಬಯಸುತ್ತಿರುವ ಮನೆಯಲ್ಲಿಯೇ ಸಿಪಿಐ ಗ್ರಂಥಾಲಯ ಇದೆ. ಹೀಗಾಗಿ ತೀರ್ಪನ್ನು ಪುನರ್ ಪರಿಶೀಲಿಸಬೇಕು ಎಂದು ಎನ್‌ಐಎ ಮನವಿ ಮಾಡಿತ್ತು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಕೆ.ಎಂ.ಜೋಸೆಫ್ ಮತ್ತು ಋಷಿಕೇಶ್ ರಾಯ್ ಅವರನ್ನು ಒಳಗೊಂಡ ನ್ಯಾಯಪೀಠ, 'ಸಿಪಿಐ ಗ್ರಂಥಾಲಯ ಇದ್ದರೆ ಸಮಸ್ಯೆ ಏನು, ಅದು ಮಾನ್ಯತೆ ಪಡೆದ ರಾಜಕೀಯ ಪಕ್ಷವಲ್ಲವೇ ಎಂದು ಪ್ರಶ್ನಿಸಿದೆ'.

ಅಲ್ಲದೆ ನವಲಖಾ ಅವರನ್ನು ಗೃಹ ಬಂಧನದಲ್ಲಿ ಇಡುವ ಕಟ್ಟಡದ ಮೊದಲನೆಯ ಮಹಡಿಗೆ ಹೆಚ್ಚಿನ ಭದ್ರತೆ ಒದಗಿಸುವಂತೆ ಕೋರ್ಟ್ ತಿಳಿಸಿದೆ.

ಬಾಬಾಬುಡನ್ ಗಿರಿ: ಬಾಷಾ ಸೇರಿ 8 ಸದಸ್ಯರ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿಕ್ಕಮಗಳೂರು ಜಿಲ್ಲೆಯ ಇನಾಂ ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾದ ಆಡಳಿತ ನಿರ್ವಹಣೆಗೆ ಅಲ್ಲಿನ ಎಸ್.ಎಂ. ಬಾಷಾ ಸೇರಿದಂತೆ ಎಂಟು ಸದಸ್ಯರ ವ್ಯವಸ್ಥಾಪನಾ ಸಮಿತಿಯನ್ನು ನೇಮಿಸಿ ರಾಜ್ಯ ಧಾರ್ಮಿಕ ಪರಿಷತ್ತು ಶುಕ್ರವಾರ ಆದೇಶ ಹೊರಡಿಸಿದೆ.

ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ತಿದ್ದುಪಡಿ ಕಾಯ್ದೆ 2011ರ ಸೆಕ್ಷನ್ 25ರ ಅಡಿಯಲ್ಲಿ ಈ ನೇಮಕ ಮಾಡಲಾಗಿದೆ.

ಎಂಟು ಮಂದಿಯ ಪೈಕಿ ಏಳು ಮಂದಿ ಹಿಂದೂ ಧರ್ಮೀಯರು. ಅವರಲ್ಲಿ ಇಬ್ಬರು ಮಹಿಳೆಯರು ಮತ್ತು ಪರಿಶಿಷ್ಟ ಜಾತಿ/ ಪಂಗಡಗಳಿಗೆ ಸೇರಿದ ಒಬ್ಬರು ಇದ್ದಾರೆ. ಮೂರು ವರ್ಷಗಳ ಅವಧಿಗೆ ಈ ಸಮಿತಿಯು ಕಾರ್ಯನಿರ್ವಹಿಸಲಿದೆ.

ಚಿಕ್ಕಮಗಳೂರು ತಾಲ್ಲೂಕು ಅತ್ತಿಗುಂಡಿಯ ಸತೀಶ್ ಕೆ., ಕೈಮರ ಬಾಗಡೇಹಳ್ಳಿಯ ಲೀಲಾ ಸಿ.ಜಿ., ಯರೇಹಳ್ಳಿ ಸಮೀಪದ ಅರೇಹಳ್ಳಿಯ ಶೀಲಾ, ಚಿಕ್ಕಮಗಳೂರಿನ ವಿಜಯಪುರದ ತಿಲಕ್ ಪಾರ್ಕ್ ರಸ್ತೆಯ ಸುಮಂತ್ ಎನ್.ಎಸ್., ರಾಮನಹಳ್ಳಿಯ ಹನುಮಂತನಗರದ ಕೆ.ಎಸ್. ಗುರುವೇಶ್, ರತ್ನಗಿರಿ ಬಡಾವಣೆಯ ಜಿ.ಎಚ್. ಹೇಮಂತ್ ಕುಮಾರ್ ಮತ್ತು ನರಿಗುಡ್ಡೇನಹಳ್ಳಿಯ ಜ್ಯೋತಿನಗರದ ಸಿ.ಎಸ್. ಚೇತನ ವ್ಯವಸ್ಥಾಪನಾ ಸಮಿತಿಯ ಇತರ ಸದಸ್ಯರು.

'ಹೈಕೋರ್ಟ್‌ನಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ 1110/2022ಕ್ಕೆ ಸಂಬಂಧಿಸಿದ ಅಂತಿಮ ಆದೇಶಕ್ಕೆ ಒಳಪಟ್ಟು ಈ ನೇಮಕಾತಿ ಆದೇಶ ಹೊರಡಿಸಲಾಗಿದೆ. ಈ ಸದಸ್ಯರು ಯಾವುದೇ ರಾಜಕೀಯ ಪಕ್ಷದ ಪದಾಧಿಕಾರಿ ಆಗಿರುವುದು ಕಂಡುಬಂದಲ್ಲಿ ಅಂಥವರ ಸದಸ್ಯತ್ವವು ಸಹಜವಾಗಿಯೇ ರದ್ದಾಗುವುದು' ಎಂದು ರಾಜ್ಯ ಧಾರ್ಮಿಕ ಪರಿಷತ್ತಿನ ಸದಸ್ಯ ಕಾರ್ಯದರ್ಶಿಯೂ ಆಗಿರುವ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಇಲಾಖೆ ಆಯುಕ್ತೆ ರೋಹಿಣಿ ಸಿಂಧೂರಿ ಆದೇಶದಲ್ಲಿ ತಿಳಿಸಿದ್ದಾರೆ.

ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿಯು ವ್ಯವಸ್ಥಾಪನಾ ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ. ಈಗ ನೇಮಕಗೊಂಡಿರುವ ಸದಸ್ಯರು ತಮ್ಮ ಪ್ರಥಮ ಸಭೆಯಲ್ಲಿ ಒಬ್ಬರನ್ನು ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿಕೊಳ್ಳಬಹುದು ಎಂದು ಹೇಳಿದ್ದಾರೆ.

42 ಅರ್ಜಿ ಸಲ್ಲಿಕೆ

ಇನಾಂ ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾದ ಆಡಳಿತ ನಿರ್ವಹಣೆಗೆ ವ್ಯವಸ್ಥಾಪನಾ ಸಮಿತಿ ರಚಿಸಲು ಹಿಂದೂ ಮತ್ತು ಮುಸ್ಲಿಂ ಭಕ್ತರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿತ್ತು. ಒಟ್ಟು 42 ಮಂದಿ ಅರ್ಜಿ ಸಲ್ಲಿಸಿದ್ದರು ಎಂದು ಧಾರ್ಮಿಕ ದತ್ತಿ ಇಲಾಖೆ ಆಯುಕ್ತ ರೋಹಿಣಿ ಸಿಂಧೂರಿ ತಿಳಿಸಿದ್ದಾರೆ.

ಅರ್ಜಿ ಸಲ್ಲಿಸಿದ್ದ ವ್ಯಕ್ತಿಗಳ ಅರ್ಹತೆ ಕುರಿತು ಚಿಕ್ಕಮಗಳೂರಿನ ಜಿಲ್ಲಾಧಿಕಾರಿ ಹಾಗೂ ಎಸ್‌ಪಿಯವರಿಂದ ವರದಿ ಪಡೆಯಲಾಗಿತ್ತು. ವರದಿಗಳ ಕುರಿತು ರಾಜ್ಯ ಧಾರ್ಮಿಕ ಪರಿಷತ್ ಸಭೆಯಲ್ಲಿ ಚರ್ಚಿಸಿದ ಬಳಿಕ ಎಂಟು ಸದಸ್ಯರ ವ್ಯವಸ್ಥಾಪನಾ ಸಮಿತಿ ನೇಮಿಸಲು ನಿರ್ಧರಿಸಲಾಗಿದೆ ಎಂದು ಹೇಳಿದ್ದಾರೆ.

ಚಳ್ಳಕೆರೆಯ ಪ್ರೊ.ಸೀತಾರಾಮ್ ಗುವಾಹಟಿ ಐಐಟಿಯ ಚೇರ್‌ಮನ್

ಚಳ್ಳಕೆರೆ (ಚಿತ್ರದುರ್ಗ ಜಿಲ್ಲೆ): ಅಯೋಧ್ಯೆ ಶ್ರೀರಾಮಂದಿರ ನಿರ್ಮಾಣ ತಂತ್ರಜ್ಞರ ಸಮಿತಿಯ ಮುಖ್ಯಸ್ಥರಾಗಿದ್ದ ಚಳ್ಳಕೆರೆಯ ತ್ಯಾಗರಾಜನಗರದ ಪ್ರೊ.ಟಿ.ಜಿ. ಸೀತಾರಾಮ್ ಅವರನ್ನು ಗುವಾಹಟಿ ಐಐಟಿ ಚೇರ್‌ಮನ್ ಆಗಿ ಕೇಂದ್ರ ಸರ್ಕಾರವು ನೇಮಕ ಮಾಡಿ ಗುರುವಾರ ಆದೇಶ ಹೊರಡಿಸಿದೆ.



ಪ್ರೊ.ಟಿ.ಜಿ. ಸೀತಾರಾಮ್

ಸೀತಾರಾಮ್ ಅವರು ತ್ಯಾಗರಾಜನಗರ ನಿವಾಸಿ ಟಿ.ಎಸ್. ಗುಂಡೂರಾವ್ ಮತ್ತು ವತ್ಸಲಾ ದಂಪತಿ ಪುತ್ರ. ಇವರು ತಾಲ್ಲೂಕಿನ ತಳಕು ಗ್ರಾಮದವರಾಗಿದ್ದು, ಹೆಸರಾಂತ ಕಾದಂಬರಿಕಾರ ತರಾಸು ಅವರ ಸಂಬಂಧಿಯಾಗಿದ್ದಾರೆ.

ಸೀತಾರಾಮ್ ಅವರು ತಳಕು ಗ್ರಾಮದಲ್ಲಿ ಪ್ರಾಥಮಿಕ ಶಿಕ್ಷಣ, ತಾಯಿಯ ತವರು ಮಲೇಬೆನ್ನೂರಿನಲ್ಲಿ ಪ್ರೌಢಶಿಕ್ಷಣ ಹಾಗೂ ಬೆಂಗಳೂರಿನ ನ್ಯಾಷನಲ್ ಕಾಲೇಜಿನಲ್ಲಿ ಪಿಯು ಶಿಕ್ಷಣ ಪಡೆದಿದ್ದರು. ದಾವಣಗೆರೆಯ ಯುಬಿಡಿಟಿ ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದು, ಬೆಂಗಳೂರಿನ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿದ್ದರು. ಕೆನಡಾದಲ್ಲಿ ಭೂ ವಿಜ್ಞಾನ ವಿಷಯದಲ್ಲಿ ಪಿಎಚ್‌.ಡಿ ಮಾಡಿದ ಮೇಲೆ ಅಮೆರಿಕದ ವಿಜ್ಞಾನ ಸಂಸ್ಥೆಯಲ್ಲಿ ಎರಡು ವರ್ಷ ಕಾರ್ಯನಿರ್ವಹಿಸಿದ ಬಳಿಕ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು.

'ಹಲವು ಸಂಕಷ್ಟಗಳ ನಡುವೆ ಬೆಳೆದ ಸೀತಾರಾಮ್ ಬಾಲ್ಯದಿಂದಲೂ ಪರಿಶ್ರಮ ಹಾಗೂ ಶ್ರದ್ಧೆಯಿಂದ ವಿದ್ಯಾಭ್ಯಾಸ ನಡೆಸಿದ್ದು, ಇಂದು ಅತ್ಯುನ್ನತ ಹುದ್ದೆಗೆ ಏರಿದ್ದಾನೆ. ನೇಮಕದ ಸುದ್ದಿ ಕೇಳಿ ಎಲ್ಲಿಲ್ಲದ ಸಂತೋಷವಾಯಿತು' ಎಂದು ತಂದೆ ಟಿ.ಎಸ್.ಗುಂಡೂರಾವ್, ತಾಯಿ ವತ್ಸಲಾ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಯಾಜಿ ಯಕ್ಷಮಿತ್ರ ಪ್ರಶಸ್ತಿ' ಪ್ರದಾನ ಇಂದು

ಕಾರವಾರ: ಕುಮಟಾದ ಯಾಜಿ ಯಕ್ಷಮಿತ್ರ ಮಂಡಳಿಯ 'ಯಾಜಿ ಯಕ್ಷಮಿತ್ರ ಪ್ರಶಸ್ತಿ'ಗೆ ಪ್ರಸಿದ್ಧ ಸ್ತ್ರೀ ವೇಷಧಾರಿ ಮೂರೂರು ವಿಷ್ಣು ಭಟ್ ಆಯ್ಕೆ ಆಗಿದ್ದಾರೆ. ಕುಮಟಾದಲ್ಲಿ ನ. 19ರಂದು ಸಂಜೆ 4ಕ್ಕೆ, ಮಂಡಳಿಯ 15ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನವಾಗಲಿದೆ ಎಂದು ಮಂಡಳಿಯ ಅಧ್ಯಕ್ಷ ಕೃಷ್ಣ ಯಾಜಿ ತಿಳಿಸಿದ್ದಾರೆ.

7ನೇ ವೇತನ ಆಯೋಗಕ್ಕೆ ಸದಸ್ಯರ ನೇಮಕ: ಶಿಫಾರಸಿಗೆ 6 ತಿಂಗಳ ಗಡುವು

ಬೆಂಗಳೂರು: ರಾಜ್ಯ ಸರ್ಕಾರಿ ನೌಕರರ ವೇತನ ಪರಿಷ್ಕರಣೆಗೆ ರಚಿಸಲಾಗಿರುವ ಏಳನೆ ವೇತನ ಆಯೋಗದ ಅಧ್ಯಕ್ಷರಾಗಿ ನಿವೃತ್ತ ಮುಖ್ಯಕಾರ್ಯದರ್ಶಿ ಕೆ. ಸುಧಾಕರ್ ರಾವ್ ಹಾಗೂ ಮೂವರು ಸದಸ್ಯರನ್ನು ನೇಮಕ ಮಾಡಲಾಗಿದೆ.

ಸುಧಾಕರರಾವ್ ಅಧ್ಯಕ್ಷತೆಯಲ್ಲಿ ಆಯೋಗ ರಚಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ ಮಾಡಿದ್ದರು. ಆಯೋಗದ ರಚನೆಗೆ ಶುಕ್ರವಾರ ಅನುಮೋದನೆ ನೀಡಲಾಗಿದೆ.

ನಿವೃತ್ತ ಐಎಎಸ್ ಅಧಿಕಾರಿ ಪಿ.ಬಿ.ರಾಮಮೂರ್ತಿ, ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ ನಿವೃತ್ತ ಪ್ರಧಾನ ನಿರ್ದೇಶಕ ಶ್ರೀಕಾಂತ ಬಿ. ವನಹಳ್ಳಿ ಸದಸ್ಯರಾಗಿದ್ದು, ಮೂಲಸೌಕರ್ಯ ಇಲಾಖೆಯ ಜಂಟಿ ಕಾರ್ಯದರ್ಶಿ ಹೆಪ್ಸಿಬಾ ರಾಣಿ ಕೊರ್ಲಪಾಟಿ ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಲಿದ್ದಾರೆ.

ಸರ್ಕಾರದ ಸಂಪನ್ಮೂಲಗಳು, ಅಭಿವೃದ್ಧಿ ಯೋಜನೆಗಳಿಗೆ ಅಗತ್ಯವಿರುವ ಸಂಪನ್ಮೂಲ ಮತ್ತು ವಿತ್ತೀಯ ಹೊಣೆಗಾರಿಕೆ ಅಧಿನಿಯಮ–2002ರ ಮಾರ್ಗಸೂಚಿಗಳನ್ನು ಗಮನದಲ್ಲಿಟ್ಟುಕೊಂಡು ಆರು ತಿಂಗಳ ಒಳಗಾಗಿ ತನ್ನ ಶಿಫಾರಸು ಮಾಡುವಂತೆ ಆಯೋಗಕ್ಕೆ ಸೂಚಿಸಲಾಗಿದೆ.

ಸರ್ಕಾರಿ ನೌಕರರು, ಅನುದಾನಿತ ಶಿಕ್ಷಣ ಸಂಸ್ಥೆಗಳು, ಸ್ಥಳೀಯ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯಗಳ ಬೋಧಕೇತರ ಸಿಬ್ಬಂದಿಯ (ಯುಜಿಸಿ/ ಎಐಸಿಟಿಇ/ ಐಸಿಎಆರ್ ವೇತನ ಶ್ರೇಣಿಯ ವೇತನ ಪಡೆಯುತ್ತಿರುವವರನ್ನು ಹೊರತು ಪಡಿಸಿ) ವೇತನ ಹಾಗೂ ವಿವಿಧ ಭತ್ಯೆಗಳು ಹಾಗೂ ನಿವೃತ್ತಿ ಸೌಲಭ್ಯಗಳನ್ನು ಪರಿಶೀಲಿಸಿ, ಕಾರ್ಯಸಾಧುವಾದ ನೂತನ ವೇತನ ಶ್ರೇಣಿಯನ್ನು ಶಿಫಾರಸು ಮಾಡುವುದು, ಕೇಂದ್ರದ ವೇತನ ಶ್ರೇಣಿಯನ್ನು ರಾಜ್ಯದಲ್ಲಿ ಅಳವಡಿಸುವ ಕುರಿತು ಪರಿಶೀಲಿಸುವುದು, ರಾಜ್ಯ ಸರ್ಕಾರವು ತುಟ್ಟಿ ಭತ್ಯೆ ನೀಡಲು ಅನುಸರಿಸಬೇಕಾದ ಸೂತ್ರವನ್ನು ರೂಪಿಸುವುದು, ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ, ಪ್ರವಾಸ ರಜೆ ಸೌಲಭ್ಯ, ವೈದ್ಯಕೀಯ ಸೌಲಭ್ಯಗಳನ್ನು ನಿಗದಿ ಪಡಿಸಲು ಹಾಗೂ ಸುಧಾರಣೆ ತರಲು ಸಲಹೆ ನೀಡುವುದು, ನಿವೃತ್ತಿ ವೇತನ ಮತ್ತು ಸಂಬಂಧಿತ ಸೌಲಭ್ಯಗಳ ಪರಿಷ್ಕರಣೆ ಮೊದಲಾದ ಅಂಶಗಳ ಕುರಿತು ವೇತನ ಆಯೋಗವು ಪರಿಶೀಲಿಸಿ ಶಿಫಾರಸು ನೀಡಲಿದೆ.

ಯುವತಿ ಹತ್ಯೆ: ತಲೆಮರೆಸಿಕೊಂಡಿದ್ದ ಆರೋಪಿ ಸೆರೆ

ಲಖನೌ (ಪಿಟಿಐ): ಮತಾಂತರ ಮತ್ತು ಮದುವೆಯಾಗಲು ನಿರಾಕರಿಸಿದ ಯುವತಿಯನ್ನು ಹತ್ಯೆ ಮಾಡಿ ತಲೆಮರೆಸಿಕೊಂಡಿದ್ದ ಆರೋಪಿ ಸೂಫಿಯಾನ್‌ನನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಬಂಧನಕ್ಕೂ ಮುನ್ನ ನಡೆದ ಎನ್‌ಕೌಂಟರ್‌ನಲ್ಲಿ ಆತನ ಕಾಲಿಗೆ ಗುಂಡೇಟು ತಗುಲಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ಪಕ್ಕದ ಮನೆಯ ಯುವತಿಗೆ ಬಲವಂತವಾಗಿ ಮದುವೆ ಹಾಗೂ ಮತಾಂತರವಾಗಲು ಸೂಫಿಯಾನ್ ಒತ್ತಾಯಿಸಿದ್ದು, ಯುವತಿ ನಿರಾಕರಿಸಿದಾಗ ನಾಲ್ಕನೇ ಮಹಡಿಯಿಂದ ತಳ್ಳಿ ಹತ್ಯೆ ಮಾಡಿರುವ ಘಟನೆ ಮಂಗಳವಾರ ರಾತ್ರಿ ನಡೆದಿತ್ತು.

ಲಖನೌನ ದುಬಗ್ಗಾ ಪ್ರದೇಶದಲ್ಲಿ ಆರೋಪಿಯನ್ನು ಬಂಧಿಸಲಾಗಿದೆ. ಎನ್‌ಕೌಂಟರ್‌ನಲ್ಲಿ ಆತನ ಬಲ ಪಾದಕ್ಕೆ ಗುಂಡೇಟು ತಗುಲಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿಸಲಾಗಿದೆ ಎಂದು ದುಬಗ್ಗಾ ಪೊಲೀಸ್ ಠಾಣಾಧಿಕಾರಿ ಸುಖ್‌ವೀರ್ ಸಿಂಗ್ ಭದೌರಿಯಾ ತಿಳಿಸಿದ್ದಾರೆ.

ಮತಾಂತರ ನಿಷೇಧ ಕಾಯ್ದೆ ಅಡಿ ದೂರು ದಾಖಲಾಗಿದೆ. ಆರೋಪಿ ಬಂಧನಕ್ಕೆ ಸುಳಿವು ನೀಡಿದವರಿಗೆ ₹25 ಸಾವಿರ ಬಹುಮಾನ ಘೋಷಿಸಲಾಗಿತ್ತು.

ಶನಿವಾರ, ನವೆಂಬರ್ 19, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 319 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಟ್ವಿಟರ್ ಭವಿಷ್ಯದ ಬಗ್ಗೆ ತಲೆಕೆಡಿಸಿಕೊಂಡಿಲ್ಲ: ಇಲಾನ್ ಮಸ್ಕ್ 12
‘ಬಿಜೆಪಿ ವೀರಶೈವರ ಪಕ್ಷವಲ್ಲ; ಮೋದಿ, ಶಾ ಪಕ್ಷ’ 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,663	18,307	₹54,445 (ಬೆಂಗಳೂರು)	₹62,100 (ಬೆಂಗಳೂರು)	81.74

ಮತಪಟ್ಟಿಗೆ ಕನ್ನ: ಇಬ್ಬರ ಬಂಧನ • ಹಲವೆಡೆ ಪೊಲೀಸರ ಶೋಧ • ತನಿಖೆ ಚುರುಕು

‘ಚಿಲುಮೆ’ ಬೆನ್ನುಬಿದ್ದ ಖಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ಮಾಹಿತಿ ಕಳವು ಮಾಡುತ್ತಿದ್ದ ಆರೋಪಕ್ಕೆ ಗುರಿಯಾಗಿರುವ ‘ಚಿಲುಮೆ’ ಸಂಸ್ಥೆಯ ಇಬ್ಬರನ್ನು ಬಂಧಿಸಿರುವ ಪೊಲೀಸರು ತನಿಖೆಯನ್ನು ಚುರುಕುಗೊಳಿಸಿದ್ದಾರೆ. ಈ ಮಧ್ಯೆಯೇ, ಪ್ರಕರಣದ ಸಮಗ್ರ ತನಿಖೆ ನಡೆಸಲು ಚುನಾವಣಾ ಆಯೋಗ ಮುಂದಡಿ ಇಟ್ಟಿದೆ.

‘ಆಡಳಿತಾರೂಢ ಬಿಜೆಪಿ ಸರ್ಕಾರವೇ ಮತದಾರರ ಪಟ್ಟಿಗೆ ಕನ್ನ ಹಾಕಲು ಕುಮ್ಮಕ್ಕು ನೀಡಿದೆ’ ಎಂದು ವಿರೋಧ ಪಕ್ಷಗಳಾದ ಕಾಂಗ್ರೆಸ್ ಮತ್ತು ಜೆಡಿಎಸ್ ಮತ್ತೆ ವಾಗ್ದಾಳಿ ನಡೆಸಿವೆ. ಸಾಮಾಜಿಕ, ಶೈಕ್ಷಣಿಕ, ಆರ್ಥಿಕ ಸಮೀಕ್ಷೆ ಹೆಸರಿನಲ್ಲಿ ಕಲೆಹಾಕಲಾಗಿದ್ದ ಮಾಹಿತಿಯನ್ನು ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಸೋರಿಕೆ ಮಾಡಿದ್ದಲ್ಲದೇ, ಚುನಾವಣೆಯಲ್ಲಿ ದುರುಪಯೋಗ ಮಾಡಿಕೊಂಡಿದೆ ಎಂದು ಬಿಜೆಪಿ ದೂರಿದೆ.

ಮಹದೇವಪುರ ವಿಧಾನಸಭಾ ಕ್ಷೇತ್ರದಲ್ಲಿ ಮಾತ್ರ ಮತದಾರರ ಪಟ್ಟಿಯಿಂದ ಹೆಸರುಗಳನ್ನು ತೆಗೆದಿಲ್ಲ. ಶಿವಾಜಿನಗರ, ಹೆಬ್ಬಾಳ ಸೇರಿದಂತೆ ಕಾಂಗ್ರೆಸ್ ಶಾಸಕರಿರುವ ಕ್ಷೇತ್ರಗಳಲ್ಲಿ ದುರುದ್ದೇಶಪೂರ್ವಕವಾಗಿ ಹೆಸರುಗಳನ್ನು ಕೈಬಿಡಲಾಗಿದೆ ಎಂದು ವಿರೋಧ ಪಕ್ಷದ ಶಾಸಕರು ಆರೋಪಿಸಿದ್ದಾರೆ. ಇದೇ 9ರಂದು ಚುನಾವಣಾ ಆಯೋಗ ಬಿಡುಗಡೆ ಮಾಡಿದ್ದ ಮತದಾರರ ಕರಡು ಪಟ್ಟಿಯಲ್ಲಿ 6.69 ಲಕ್ಷ ಮತದಾರರನ್ನು ಕೈಬಿಟ್ಟು, 3.07 ಲಕ್ಷ ಮತದಾರರನ್ನು ಸೇರ್ಪಡೆ ಮಾಡಲಾಗಿತ್ತು. ಈ ಅಂಕಿ ಸಂಖ್ಯೆಯೂ ಮತ್ತೆ ಚರ್ಚೆಯ ಮುನ್ನೆಲೆಗೆ ಬಂದಿದೆ.

9ನೇ ಪುಟ ನೋಡಿ
ಮತದಾರರ ಪಟ್ಟಿ 9

‘ಪರಿಷ್ಕರಣೆ: ರಾಕಿಭಾಯ್ ಸೇಡಿನ ಕತೆಯಲ್ಲ’

‘ಮತದಾರರ ಪಟ್ಟಿ ಪರಿಷ್ಕರಣೆ ಎನ್ನುವುದು ‘ಕೆಜಿಎಫ್’ ಚಿತ್ರದ ರಾಕಿಭಾಯ್‌ನ ಸೇಡಿನ ಕತೆಯೂ ಅಲ್ಲ, ‘ಕಾಂತಾರ’ ಚಿತ್ರದ ಗುಳಿಗ-ಪಂಜುರ್ಲಿಯ ದಂತಕತೆಯೂ ಅಲ್ಲ. ಯಾರು ಯಾವ ಕೆಲಸ ಮಾಡಬೇಕೋ, ಅದನ್ನೇ ಮಾಡಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕುಟುಕಿದ್ದಾರೆ.

ಈ ಕುರಿತು ಶುಕ್ರವಾರ ಟ್ವೀಟ್ ಮಾಡಿರುವ ಅವರು, ‘ಮತದಾರರ ಪಟ್ಟಿ ಪರಿಷ್ಕರಣೆ ಹಗರಣದ ರೂವಾರಿಗಳನ್ನು ರಕ್ಷಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಯತ್ನಿಸುತ್ತಿದ್ದಾರೆ. ಮತದಾರರ ಪಟ್ಟಿ ಪರಿಷ್ಕರಣೆ ಹಗರಣವನ್ನು ಮುಖ್ಯಮಂತ್ರಿಯವರು ಜಾತಿ ಗಣತಿಗೆ ಹೋಲಿಸಿದ್ದಾರೆ. ಒಂದು ಸಂಸ್ಥೆಯ ಹಿನ್ನೆಲೆಯನ್ನೂ ಪರಿಶೀಲಿಸದೆ ಮತದಾರರ ಪಟ್ಟಿ ಪರಿಷ್ಕರಣೆಗೆ ನೀಡಿರುವ ಅನುಮತಿಗೂ, ಸುಪ್ರೀಂ ಕೋರ್ಟ್ ಆದೇಶದಂತೆ ರಾಜ್ಯ ಸರ್ಕಾರ ನಡೆಸಿರುವ ಜಾತಿ ಗಣತಿಗೂ ಏನು ಸ್ವಾಮಿ ಸಂಬಂಧ’ ಎಂದು ಪ್ರಶ್ನಿಸಿದ್ದಾರೆ.

‘ಉಚಿತವಾಗಿ ಮತದಾರರ ಪಟ್ಟಿ ಪರಿಷ್ಕರಣೆ ನಡೆಸಿರುವ ಚಿಲುಮೆ ಸಂಸ್ಥೆಯ ಹಿನ್ನೆಲೆ, ಮಾಲೀಕರು, ಹಣಕಾಸು ಸಾಮರ್ಥ್ಯ ಮತ್ತು ಮೂಲದ ಕುರಿತು ತನಿಖೆಯಾಗಲಿ. ಚಿಲುಮೆ ಸಂಸ್ಥೆಗೆ ನೀಡಿದ್ದ ಅನುಮತಿಯನ್ನು ದೂರು ಬಂದ ಬಳಿಕ ಬಿಬಿಎಂಪಿ ರದ್ದುಪಡಿಸಿರುವುದನ್ನು ಸ್ವಾಗತಿಸುತ್ತೇನೆ. ಅನುಮತಿ ರದ್ದತಿ ಮಾಡಿರುವ ಅಪರಾಧಕ್ಕೆ ಶಿಕ್ಷೆ ಅಲ್ಲ, ಗುತ್ತಿಗೆಯನ್ನು ರದ್ದುಗೊಳಿಸುವ ಮೂಲಕ ಆಗಿರುವ ಅಪರಾಧವನ್ನು ಇಲಾಖೆ ಒಪ್ಪಿಕೊಂಡಂತಾಗಿಲ್ಲವೆ’ ಎಂದು ಕೇಳಿದ್ದಾರೆ.

‘ಜಾತಿ ಗಣತಿ ದುರ್ಬಳಕೆ ಮಾಡಿದ್ದ ಕಾಂಗ್ರೆಸ್’

‘ಹಿಂದುಳಿದ ವರ್ಗಗಳ ಆಯೋಗದ ಮೂಲಕ ₹ 130 ಕೋಟಿ ವೆಚ್ಚದಲ್ಲಿ ನಡೆಸಿದ್ದ ಜಾತಿ ಗಣತಿ ವರದಿಯನ್ನು ಕಾಂಗ್ರೆಸ್ ಪಕ್ಷ ದುರ್ಬಳಕೆ ಮಾಡಿಕೊಂಡಿತ್ತು’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಆರೋಪಿಸಿದರು.

‘ಜಾತಿ ಗಣತಿ ವರದಿಯನ್ನು ಸರ್ಕಾರ ಸ್ವೀಕರಿಸಿರಲಿಲ್ಲ. ಆದರೆ, ಕಾಂಗ್ರೆಸ್ ನಾಯಕರು ಈ ವರದಿಯನ್ನು ತಮ್ಮ ಪಕ್ಷದ ಅಭ್ಯರ್ಥಿಗಳೊಂದಿಗೆ ಹಂಚಿಕೊಂಡಿದ್ದರು. ನನ್ನ ಬಳಿ ಈ ಬಗ್ಗೆ ಸಂಪೂರ್ಣ ಮಾಹಿತಿ ಇದೆ. ಜಾತಿ ಗಣತಿ ವರದಿಯನ್ನು ದುರ್ಬಳಕೆ ಮಾಡಿಕೊಂಡ ಹೊಣೆಯನ್ನು ಕಾಂಗ್ರೆಸ್ ನಾಯಕರು ಹೊರುತ್ತಾರೆಯೆ’ ಎಂದು ಪ್ರಶ್ನಿಸಿದರು.

ಶಿಕ್ಷಕರ ನೇಮಕಾತಿ: 13,363 ಅಭ್ಯರ್ಥಿಗಳ ಪಟ್ಟಿ ಪ್ರಕಟ

ಬೆಂಗಳೂರು: ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಯ ತಾತ್ಕಾಲಿಕ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದ್ದು, 13,363 ಅಭ್ಯರ್ಥಿಗಳು ಸ್ಥಾನ ಪಡೆದಿದ್ದಾರೆ. 9

‘ಪಟ್ಟಿ ಬಿಡುಗಡೆಗೆ ಪಕ್ಷದ ಜ್ಯೋತಿಷಿಯ ತಕರಾರಿದೆ’

ಮೈಸೂರು: ‘ವಿಧಾನಸಭೆ ಚುನಾವಣೆಗೆ ಜೆಡಿಎಸ್ ಅಭ್ಯರ್ಥಿಗಳ ಪಟ್ಟಿ ಸಿದ್ಧವಿದೆ. ಅದರೆ, ಪಕ್ಷದ ಜ್ಯೋತಿಷಿ ಎಚ್.ಡಿ.ರೇವಣ್ಣ ಘೋಷಣೆಗೆ ದಿನ ಪ್ರಶಸ್ತವಾಗಿಲ್ಲವೆಂದು ತಕರಾರು ತೆಗೆದಿದ್ದಾರೆ’ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದರು. 9

ಏಷ್ಯಾಕಪ್ ಟಿಟಿ: ಮಣಿಕಾ ಸಾಧನೆ

ಬ್ಯಾಂಕಾಕ್ (ಪಿಟಿಐ): ಒಲಿಂಪಿಯನ್ ಆಟಗಾರ್ತಿ ಮಣಿಕಾ ಬಾತ್ರಾ, ಏಷ್ಯಾಕಪ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದಾರೆ. ಈ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡರು. 14



ರಾಹುಲ್ ಮತ್ತು ಗಾಂಧಿ

ಮಹಾರಾಷ್ಟ್ರದ ಶೆಗಾಂವ್‌ನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಮಹಾತ್ಮ ಗಾಂಧಿ ಮರಿ ಮೊಮ್ಮಗ, ವಿಚಾರವಾದಿ ತುಷಾರ್ ಗಾಂಧಿ ಅವರು ‘ಭಾರತ್ ಜೋಡೊ ಯಾತ್ರೆ’ಯಲ್ಲಿ ಶುಕ್ರವಾರ ಪಾಲ್ಗೊಂಡರು –ಪಿಟಿಐ ಚಿತ್ರ 8

ಮೊದಲ ಖಾಸಗಿ ರಾಕೆಟ್ ಉಡಾವಣೆ ಯಶಸ್ವಿ

ಶ್ರೀಹರಿಕೋಟಾ (ಆಂಧ್ರಪ್ರದೇಶ) (ಪಿಟಿಐ): ಸ್ಕೈರೂಟ್ ಏರೋಸ್ಪೇಸ್ ಕಂಪನಿಯು ಅಭಿವೃದ್ಧಿಪಡಿಸಿರುವ ದೇಶದ ಮೊದಲ ಖಾಸಗಿ ರಾಕೆಟ್ ‘ವಿಕ್ರಮ್-ಎಸ್’ ಮೂಲಕ ಮೂರು ಉಪಗ್ರಹಗಳನ್ನು ಶುಕ್ರವಾರ ಯಶಸ್ವಿಯಾಗಿ ಕಕ್ಷೆಗೆ ಸೇರಿಸಲಾಗಿದೆ. ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಖಾಸಗಿ ಕಂಪನಿಗಳ ಪಾಲ್ಗೊಳ್ಳುವಿಕೆಗೆ 2020ರಲ್ಲಿ ಅವಕಾಶ ನೀಡಿದ ನಂತರ, ನಡೆದ ಮೊದಲ ಕಾರ್ಯಾಚರಣೆ ಇದಾಗಿದೆ.

ಸ್ಕೈರೂಟ್ ಏರೋಸ್ಪೇಸ್ 2018ರಲ್ಲಿ ಸ್ಥಾಪನೆಯಾದ ನವೋದ್ಯಮ. ದೇಶದಲ್ಲಿ ಬಾಹ್ಯಾಕಾಶ ಸಂಶೋಧನೆಗೆ ಅಡಿಗಲ್ಲು ಹಾಕಿದ ವಿಜ್ಞಾನಿ ವಿಕ್ರಮ್ ಸಾರಾಭಾಯಿ ಅವರ ಗೌರವಾರ್ಥ ಈ ರಾಕೆಟ್‌ಗೆ ಕಂಪನಿಯು ‘ವಿಕ್ರಮ್–ಎಸ್’ ಎಂದು ಹೆಸರಿಟ್ಟಿದೆ.

ದೇಶೀಯವಾಗಿ ಖಾಸಗಿ ಕಂಪನಿಯೊಂದು ಅಭಿವೃದ್ಧಿಪಡಿಸಿದ ಕ್ರಯೋಜೆನಿಕ್ ಎಂಜಿನ್ ಮತ್ತು ಬೂಸ್ಟರ್ ರಾಕೆಟ್‌ಗಳನ್ನು ಹೊಂದಿರುವ ವಿಕ್ರಮ್–ಎಸ್, ಈ ಸರಣಿಯ ಮೊದಲ ರಾಕೆಟ್. ಇದು 490 ಕೆ.ಜಿ. ತೂಕದಷ್ಟು ಉಪಗ್ರಹಗಳನ್ನು ಗರಿಷ್ಠ 500 ಕಿ.ಮೀ. ಎತ್ತರದ ಕಕ್ಷೆಗೆ ಸೇರಿಸುವ ಸಾಮರ್ಥ್ಯ ಹೊಂದಿದೆ. 510 ಕೆ.ಜಿ. ಭಾರ ಹೊರುವ ಸಾಮರ್ಥ್ಯವಿರುವ ವಿಕ್ರಮ್–2 ಮತ್ತು 815 ಕೆ.ಜಿ. ಭಾರ ಹೊರುವ ಸಾಮರ್ಥ್ಯದ ವಿಕ್ರಮ್–3 ರಾಕೆಟ್‌ಗಳನ್ನು ಸಹ ಸ್ಕೈರೂಟ್ ಅಭಿವೃದ್ಧಿಪಡಿಸಿದೆ.



ವಿಕ್ರಂ–ಎಸ್ ರಾಕೆಟ್ ನಭದತ್ತ ಜಿಗಿದ ಕ್ಷಣ –ಪಿಟಿಐ ಚಿತ್ರ

9ನೇ ಪುಟ ನೋಡಿ

ಒಳ ಪುಟಗಳು



ಜೆಟ್ ಏರ್‌ವೇಸ್‌ನಿಂದ ವೇತನ ಕಡಿತ 12

ಮೆಟ್ರೊ 3ನೇ ಹಂತ: ಕೇಂದ್ರಕ್ಕೆ ಪ್ರಸ್ತಾವನೆ 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆನಂದ್ ತೇಲ್ತುಂಬ್ಡೆಗೆ ಜಾಮೀನು

ಮುಂಬೈ(ಪಿಟಿಐ): ಎಲ್ಗಾರ್ ಪರಿಷತ್– ಮಾವೊ ಸಂಪರ್ಕ ಪ್ರಕರಣದಲ್ಲಿ ಬಂಧನಕ್ಕೊಳಗಾಗಿ ಮುಂಬೈನ ತಲೋಜಾ ಜೈಲಿನಲ್ಲಿರುವ ಸಾಮಾಜಿಕ ಕಾರ್ಯಕರ್ತ ಆನಂದ್ ತೇಲ್ತುಂಬ್ಡೆ ಅವರಿಗೆ ಬಾಂಬೆ ಹೈಕೋರ್ಟ್ ಶುಕ್ರವಾರ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿಗಳಾದ ಎ.ಎಸ್. ಗಡ್ಕರಿ ಮತ್ತು ಎಂ.ಎನ್. ಜಾಧವ್ ಅವರನ್ನೊಳಗೊಂಡ ವಿಭಾಗೀಯ ಪೀಠವು, ‘ಆನಂದ್ ವಿರುದ್ಧ ಮಾಡಿರುವ ಆರೋಪದ ಪ್ರಕಾರ



ಭಯೋತ್ಪಾದನೆ ಸಂಘಟನೆಗಳೊಂದಿಗೆ ಸಂಪರ್ಕ ಮತ್ತು ಅದಕ್ಕೆ ಬೆಂಬಲ ನೀಡಿರುವುದಕ್ಕೆ ಸಂಬಂಧಿಸಿದ ಒಂದೇ ಪ್ರಕರಣವಿದೆ. ಇದಕ್ಕೆ ಗರಿಷ್ಠ 10 ವರ್ಷ ಜೈಲು ಶಿಕ್ಷೆ ಇದೆ. ಆರೋಪಿಯು ಈಗಾಗಲೇ ಎರಡು ವರ್ಷ ಜೈಲಿನಲ್ಲಿ ಕಳೆದಿದ್ದಾರೆ ಎಂಬುದನ್ನು ಗಮನಿಸಲಾಗಿದೆ’ ಎಂದು ತಿಳಿಸಿದೆ.

ಜಾಮೀನು ಮಂಜೂರು ಮಾಡಿರುವುದನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಲು ರಾಷ್ಟ್ರೀಯ ತನಿಖಾ ಸಂಸ್ಥೆಗೆ(ಎನ್‌ಐಎ) ಅವಕಾಶ ಕಲ್ಪಿಸಲಾಗಿದೆ. ಹಾಗಾಗಿ, ಬಾಂಬೆ ಹೈಕೋರ್ಟ್ ತನ್ನ ಜಾಮೀನು ಆದೇಶಕ್ಕೆ ಒಂದು ವಾರ ಕಾಲ ತಡೆಯೊಡ್ಡಿದೆ.

ಅಲ್ಲಿಯ ತನಕ ಆನಂದ್ ಅವರು ಜೈಲಿನಿಂದ ಹೊರಬರುವಂತಿಲ್ಲ. ಆನಂದ್ ತೇಲ್ತುಂಬ್ಡೆ ಅವರು, ಅಂಬೇಡ್ಕರ್ ಅವರ ಮೊಮ್ಮಗಳಾದ ರಮಾಬಾಯಿ ಅಂಬೇಡ್ಕರ್ ಅವರ ಪತಿ.

ಕಲಬುರಗಿ ಜಿಲ್ಲೆ ಸೊನ್ನದ ಶಿವಾನಂದ ಶ್ರೀಗಳಿಂದ ಅಕ್ಷರ ಜೋಳಿಗೆ

ಶಾಲೆಗಾಗಿ ₹ 61 ಲಕ್ಷ ಸಂಗ್ರಹಿಸಿದ ಸ್ವಾಮೀಜಿ!

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಅಫಜಲಪುರ ತಾಲ್ಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಘತ್ತರಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಕಟ್ಟಡಕ್ಕೆ ಭೂಮಿ ಖರೀದಿಸಲು ಸೊನ್ನ ವಿರಕ್ತಮಠದ ಡಾ. ಶಿವಾನಂದ ಸ್ವಾಮೀಜಿ ಅವರು ‘ಅಕ್ಷರ ಜೋಳಿಗೆ’ ಅಭಿಯಾನ ನಡೆಸಿ, ಈವರೆಗೆ ₹ 61 ಲಕ್ಷ ಸಂಗ್ರಹಿಸಿದ್ದಾರೆ.

ಭೂಮಿ ಖರೀದಿಸಲು ಹಣ ನೀಡುವಂತೆ ಹಲವು ಬಾರಿ ಕೋರಿದರೂ ಸರ್ಕಾರ ಸ್ಪಂದಿಸಿರಲಿಲ್ಲ. ಈ ಸಂಬಂಧ ಒತ್ತಾಯಿಸಲು ಪಾದಯಾತ್ರೆ ಮೂಲಕ ಶಾಲಾ ವಿದ್ಯಾರ್ಥಿಗಳು ಮತ್ತು ಗ್ರಾಮಸ್ಥರು ಕಲಬುರಗಿಗೆ ಬಂದಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿಯಾಗಲು ನಿರ್ಧರಿಸಿದ್ದರು. ಆಗ, ಪಾದಯಾತ್ರೆ ತಡೆದಿದ್ದ ಜಿಲ್ಲಾಡಳಿತವುಹಣ ಒದಗಿಸುವ ಭರವಸೆ ನೀಡಿತ್ತು. ನಂತರ ಈಡೇರಿಸಲಿಲ್ಲ.

‘ಈ ಬೆಳವಣಿಗೆಯನ್ನು ಗಮನಿಸಿ ಗ್ರಾಮದ ಮನೆಗಳಿಗೆ ತೆರಳಿ, ಹಣ ಸಂಗ್ರಹಿಸತೊಡಗಿದೆ. ವಾರದ ಹಿಂದೆ ₹ 25 ಲಕ್ಷ ಸಂಗ್ರಹವಾಗಿತ್ತು. ಈಗ ಆ ಮೊತ್ತ ₹ 61 ಲಕ್ಷಕ್ಕೆ ಏರಿದೆ. 2.5 ಎಕರೆ ಜಮೀನು ಖರೀದಿಸಿ ಅದರಲ್ಲಿ ಕಟ್ಟಡ ನಿರ್ಮಿಸುವ ಉದ್ದೇಶವಿದೆ. ಶುಕ್ರವಾರ ಭೂಮಿ ಖರೀದಿ ಪ್ರಕ್ರಿಯೆ ಆಗಿದೆ’ ಎಂದು ಡಾ. ಶಿವಾನಂದ ಸ್ವಾಮೀಜಿ ‘ಪ್ರಜಾವಾಣಿ’ಗೆ ತಿಳಿಸಿದರು.

ಒಳ್ಳೆ ಸುದ್ದಿ

ಶಾಲೆಗೆ ಘತ್ತರಗಿಯ ಭಾಗ್ಯವಂತಿ ದೇವಿಯ ಹೆಸರಿಡಲು ನಿರ್ಧರಿಸಲಾಗಿದೆ. ಹಾಲಿ ಕಟ್ಟಡವು ಮುಜರಾಯಿ ಇಲಾಖೆಯ ಅಧೀನದಲ್ಲಿದೆ. ಭಕ್ತರ ಸಂಖ್ಯೆ ಹೆಚ್ಚುತ್ತಿರುವುದರಿಂದ ಅಲ್ಲಿಂದ ಶಾಲೆ ತೆರವುಗೊಳಿಸಲು ಸೂಚಿಸಿತ್ತು. ಅಲ್ಲದೇ, ದುರಸ್ತಿ ಕಾರ್ಯ ನಡೆಸದಂತೆ ಇಲಾಖೆಯು ನಿರ್ಬಂಧ ವಿಧಿಸಿತ್ತು ಎನ್ನಲಾಗಿದೆ. ಹೀಗಾಗಿ, ಕಟ್ಟಡ ನಿರ್ಮಿಸಲು ಮಂಜೂರಾಗಿದ್ದ ₹ 2 ಕೋಟಿ ಹಣ ಬಳಕೆಯಾಗದೇ ಶಿಕ್ಷಣ ಇಲಾಖೆಯಲ್ಲೇ ಉಳಿದಿತ್ತು.

‘ಶಾಲೆ ಕಟ್ಟಡದ ವಿಚಾರವನ್ನು ಶಿವಾನಂದ ಸ್ವಾಮೀಜಿ ಅವರ ಗಮನಕ್ಕೆ ತಂದೆವು. ಆಗ ಸ್ವಾಮೀಜಿ ಅವರು ಎಲ್ಲರಿಂದ ಹಣ ಸಂಗ್ರಹಿಸಿ ಶಾಲೆ ನಿರ್ಮಿಸಲು ಸಂಕಲ್ಪ ತೊಟ್ಟರು. ಮೊದಲಿಗೆ ತಾವೇ ಮಠದಿಂದ ₹ 1 ಲಕ್ಷ ದೇಣಿಗೆ ನೀಡಿದರು’ ಎಂದು ಗ್ರಾಮಸ್ಥರು ತಿಳಿಸಿದರು.

‘ಈಗ ಖರೀದಿಸುವ ಜಾಗದ ಜೊತೆಗೆ ಸ್ಥಳೀಯ ಶಾಸಕ ಎಂ.ವೈ.ಪಾಟೀಲ ಅವರು 1 ಎಕರೆ ಜಮೀನು ಖರೀದಿಸಿ ಕೊಡಲು ಒಪ್ಪಿದ್ದಾರೆ. ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ನಿತಿನ್ ಗುತ್ತೇದಾರ ಅವರೂ ಜಮೀನು ಖರೀದಿಗೆ ಹಣ ನೀಡುವ ಭರವಸೆ ನೀಡಿದ್ದಾರೆ’ ಎಂದು ತಿಳಿಸಿದರು.



ಕಲಬುರಗಿ ಜಿಲ್ಲೆಯ ಘತ್ತರಗಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಕಟ್ಟಡ ನಿರ್ಮಾಣಕ್ಕೆ ಗ್ರಾಮಸ್ಥರಿಂದ ದೇಣಿಗೆ ಸ್ವೀಕರಿಸಿದ ಸೊನ್ನ ದಾಸೋಹ ವಿರಕ್ತಮಠದ ಡಾ.ಶಿವಾನಂದ ಸ್ವಾಮೀಜಿ

‘ಸಚಿವರ ನಡೆ ಸಹಿಸಲಾಗದು’

‘ಹೋತೋಟ...ಸಮಸ್ಯೆಗಳ ನೋಟ’ ಶೀರ್ಷಿಕೆಯಲ್ಲಿ ಪ್ರಕಟವಾದ ಲಾಲ್‌ಬಾಗ್ ಕುರಿತ ಸುದ್ದಿಗುಚ್ಛಕ್ಕೆ ಓದುಗರಲ್ಲದೆ ಜನಪ್ರತಿನಿಧಿಗಳೂ ಪ್ರತಿಕ್ರಿಯಿಸಿದ್ದಾರೆ. ಸಚಿವರ ಮನಸೋಇಚ್ಛೆಯ ನಡೆ ಸಹಿಸಲು ಸಾಧ್ಯವಿಲ್ಲ ಎಂಬ ಅಭಿಪ್ರಾಯದಿಂದ ಹಿಡಿದು ಸಸ್ಯಕಾಶಿಯ ಅಭಿವೃದ್ಧಿಗೆ ಸರ್ಕಾರದಿಂದ ₹ 20 ಕೋಟಿ ಅನುದಾನ ಕೋರಿರುವುದರವರೆಗೆ ಹೊಳಹುಗಳು ಇವುಗಳಲ್ಲಿ ಇವೆ...

ಪ್ರಜಾವಾಣಿ 75

ಲಾಲ್‌ಬಾಗ್‌ನಲ್ಲಿ ನೀವು ಕಂಡ, ಅನುಭವಿಸಿದ ಸಮಸ್ಯೆಗಳ ಕುರಿತು ಸಂಕ್ಷಿಪ್ತವಾಗಿ ಬರೆದು ನಮಗೆ ವಾಟ್ಸ್‌ಆ್ಯಪ್ ಮಾಡಿ. ಜೊತೆಗೆ ನಿಮ್ಮ ಪೂರ್ಣ ವಿಳಾಸ ಹಾಗೂ ಪಾಸ್‌ಪೋರ್ಟ್ ಅಳತೆಯ ಫೋಟೊವನ್ನು ‘ಪ್ರಜಾವಾಣಿ’ಗೆ ಕಳಿಸಿ. ಆಯ್ದ ಅನುಭವಗಳು ಪ್ರಕಟವಾಗಲಿವೆ.

9606038256



‘ನಗರದ ಹೆಗ್ಗುರುತು ಉಳಿಯಲಿ’



ಲಾಲ್‌ಬಾಗ್ ಎಂಬುದು ಒಂದು ಸಾಮಾನ್ಯ ತೋಟವಲ್ಲ. ಬೆಂಗಳೂರು ನಗರದ ಹೆಗ್ಗುರುತು. ಅದನ್ನು ಉಳಿಸಿ, ಬೆಳೆಸಿ, ಸ್ವಚ್ಛವಾಗಿ ರಕ್ಷಿಸಿಕೊಳ್ಳುವುದು ಎಲ್ಲರ ಕರ್ತವ್ಯ. ಅಧಿಕಾರಿಗಳು ಹಾಗೂ ಸಚಿವರು ತಮ್ಮ ಕಾಲಾವಧಿಯಲ್ಲಿ ಅವರ ಮನಸೋಇಚ್ಛೆ ಕಾರ್ಯ-ನಿರ್ವಹಿಸಿದರೆ ಅದನ್ನು ಸಹಿಸಲು ಸಾಧ್ಯವಿಲ್ಲ. ಲಾಲ್‌ಲಾಗ್ ಒಂದು ಭಾಗದ ಜನರಿಗೆ ಮಾತ್ರ ಸೀಮಿತವಲ್ಲ. ನಗರ, ಹೊರರಾಜ್ಯ, ದೇಶ–ವಿದೇಶಗಳಿಂದಲೂ ಜನರು ಇಲ್ಲಿಗೆ ಬರುತ್ತಾರೆ. ಅವರಿಗೆ ಸೌಲಭ್ಯ ಒದಗಿಸುವುದು ಅಧಿಕಾರಿಗಳು ಹಾಗೂ ಸಚಿವರ ಆದ್ಯ ಕರ್ತವ್ಯ. ಎಸ್.ಎಂ. ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ನಾನು ನಗರಾಭಿವೃದ್ಧಿ ಸಚಿವನಾಗಿದ್ದೆ. ಆ ಸಂದರ್ಭದಲ್ಲಿ ₹17 ಕೋಟಿ ವೆಚ್ಚ ಮಾಡಿ ಗಾಜಿನ ಮನೆ ಸೇರಿ ಹಲವು ರೀತಿಯ ಸೌಲಭ್ಯಗಳನ್ನು ಎಲ್ಲರೂ ಬೆರಗುಗಣ್ಣಿನಿಂದ ನೋಡುವಂತೆ ಅಭಿವೃದ್ಧಿಪಡಿಸಲಾಗಿತ್ತು. ಆದರೆ, ಇಂದು ಸ್ವಚ್ಛತೆ ಮರೀಚಿಕೆಯಾಗಿದೆ. ಲಾಲ್‌ಬಾಗ್‌ನಲ್ಲಿರುವ ಕೆರೆಯನ್ನು ಶುದ್ಧವಾಗಿ ಉಳಿಸಿಕೊಳ್ಳಲು ವಿಫಲರಾಗಿದ್ದಾರೆ. ನಾಗರಿಕರ ಒತ್ತಾಸೆಯಂತೆ ಎಲ್ಲ ಸೌಕರ್ಯಗಳನ್ನು ಇಲ್ಲಿ ಕಲ್ಪಿಸಬೇಕು.

ರಾಮಲಿಂಗಾರೆಡ್ಡಿ, ಕೆಪಿಸಿಸಿ ಕಾರ್ಯಾಧ್ಯಕ್ಷ


‘ಉದ್ಯಾನ ರಕ್ಷಣೆ ಆದ್ಯ ಕರ್ತವ್ಯವಾಗಬೇಕು’



ಲಾಲ್‌ಬಾಗ್ ಎಂದರೆ ಸುಂದರ ಉದ್ಯಾನ ಎಂಬ ಕಲ್ಪನೆಯೊಂದಿಗೆ ಜನ ಬರುತ್ತಾರೆ. ಮಕ್ಕಳಿಂದ ವಯೋವೃದ್ಧರ ತನಕ ಎಲ್ಲರೂ ಬಂದು ಹೋಗುವ ಉತ್ತಮ ವಾತಾವರಣ ಇತ್ತು. ಈಗ ಅದು ಹಾಳಾಗಿದೆ. ಬೀದಿ ನಾಯಿಗಳ ಹಾವಳಿ, ದೀಪದ ವ್ಯವಸ್ಥೆ ಇಲ್ಲದಿರುವುದು, ಪಾದಚಾರಿ ಮಾರ್ಗಗಳು ಹಾಳಾಗಿರುವುದು, ಕುಡಿಯುವ ನೀರಿಗೆ ಅವ್ಯವಸ್ಥೆಯಾಗಿರುವುದು ಬೇಸರದ ಸಂಗತಿ. ಹೊಸ ಉದ್ಯಾ-ನಗಳನ್ನು ಅಭಿವೃದ್ಧಿಪಡಿಸುವ ಜತೆಗೆ ಹಳೇ ಉದ್ಯಾನಗಳನ್ನೂ ಕಾಪಿಟ್ಟುಕೊಳ್ಳಬೇಕಾಗುತ್ತದೆ. ಅದರಲ್ಲೂ ಇತಿಹಾಸದೊಂದಿಗೆ ಬೆರೆತಿರುವ ಉದ್ಯಾನಗಳನ್ನು ಸಂರಕ್ಷಿಸುವುದು ಎಲ್ಲಾ ಜನಪ್ರ-ತಿನಿಧಿಗಳ ಆದ್ಯ ಕರ್ತವ್ಯ ಆಗಬೇಕು.

ಗಂಗಾಂಬಿಕೆ, ಮಾಜಿ ಮೇಯರ್

‘₹20 ಕೋಟಿ ಅನುದಾನ ಕೋರಲಾಗಿದೆ’



ಲಾಲ್‌ಬಾಗ್ ಒಳಗಿನ ಪ್ರದೇಶ ತೋಟಗಾರಿಕೆ ಇಲಾಖೆ ವ್ಯಾಪ್ತಿಗೆ ಬರಲಿದೆ. ರಸ್ತೆ, ಒಳಚರಂಡಿ, ಶೌಚಾಲಯ, ಪಾದಚಾರಿ ಮಾರ್ಗ ಅಭಿವೃದ್ಧಿ ಕಾಮಗಾರಿಗಳಿಗೆ ಮುಖ್ಯಮಂತ್ರಿ ಅವರಿಂದ ಪ್ರತ್ಯೇಕವಾಗಿ ಅನುದಾನ ಕೋರಿದ್ದೇವೆ. ₹20 ಕೋಟಿ ತನಕ ಅನುದಾನ ಬೇಕಾಗಲಿದ್ದು, ಒದಗಿಸುವ ಭರವಸೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ನೀಡಿದ್ದಾರೆ. ಶೀಘ್ರವೇ ಅನುದಾನ ಬಿಡುಗಡೆಯಾಗಲಿದ್ದು, ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು. ಆಗ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ದೊರಕಲಿದೆ.

ಉದಯ ಗರುಡಾಚಾರ್, ಚಿಕ್ಕಪೇಟೆ ಶಾಸಕ

‘ಐತಿಹಾಸಿಕ ಉದ್ಯಾನ ಅಭಿವೃದ್ಧಿಯಾಗಬೇಕು’



ಲಾಲ್‌ಬಾಗ್‌ಗೆ ಬಹಳ ವರ್ಷಗಳ ಇತಿಹಾಸವಿದೆ. ಬೇರೆ ಊರುಗಳು ಮಾತ್ರವಲ್ಲ ಬೇರೆ ದೇಶಗಳಿಂದಲೂ ಲಾಲ್‌ಬಾಗ್ ಮತ್ತು ಕಬ್ಬನ್ ಪಾರ್ಕ್‌ಗಳಿಗೆ ಜನ ಬಂದು ಹೋಗುತ್ತಾರೆ. ಹಿರಿಯರು, ಮಕ್ಕಳು ದಿನನಿತ್ಯ ಉದ್ಯಾನಕ್ಕೆ ಭೇಟಿ ನೀಡುತ್ತಾರೆ. ವಾರಾಂತ್ಯದಲ್ಲಿ ಕುಟುಂಬ ಸಮೇತ ಬಂದು ಹೋಗುತ್ತಾರೆ. ಹಲವು ವೈಶಿಷ್ಟ್ಯಗಳಿಂದ ಕೂಡಿರುವ ಹೂವಿನ ಗಿಡಗಳು ಇದ್ದವು. ಎಚ್.ನರಸಿಂಹಯ್ಯ ಅಂತಹವರು ಇದೇ ಉದ್ಯಾನದಲ್ಲಿ ವಾಯುವಿಹಾರಕ್ಕೆ ಬರುತ್ತಿದ್ದುದನ್ನು ನೋಡಿದ್ದೇವೆ. ಈಗ ಎಲ್ಲವೂ ಹಾಳಾಗಿದೆ. ಸಸ್ಯಕಾಶಿಯ ಕೆಲ ಭಾಗವನ್ನು ಖಾಸಗಿ ಸೊಸೈಟಿಗಳಿಗೆ ವಹಿಸುವ ಪ್ರಯತ್ನವೂ ಸರಿಯಲ್ಲ. ಒಂದು ಐತಿಹಾಸಿಕ ತಾಣವನ್ನು ಮತ್ತಷ್ಟು ಅಭಿವೃದ್ಧಿಪಡಿಸಬೇಕೆ ಹೊರತು ಹಾಳುಗೆಡವಬಾರದು.

ಸೌಮ್ಯಾ ರೆಡ್ಡಿ, ಜಯನಗರ ಶಾಸಕಿ

‘ರಾಜ್ಯದ ಪಾಲು ನೀಡದ ಕೇಂದ್ರ’

ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರವು ರಾಜ್ಯಕ್ಕೆ ತೆರಿಗೆ ಪಾಲನ್ನು ಸಮರ್ಪಕವಾಗಿ ನೀಡುತ್ತಿಲ್ಲ. ಇದರಿಂದಾಗಿ ಇಲ್ಲಿ ಅಭಿವೃದ್ಧಿ ಕ್ಷೀಣಿಸುತ್ತಿದೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ವಿಕಾಸ ರಂಗ ಹಾಗೂ ಕನ್ನಡ ಗೆಳೆಯರ ಬಳಗ ಜಂಟಿಯಾಗಿ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ‘ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ–8’ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು. ‘ಕೇಂದ್ರದಲ್ಲಿ ನಮ್ಮನ್ನಾಳಿದ ಎಲ್ಲ ಪಕ್ಷಗಳ ಸರ್ಕಾರಗಳು ನಮ್ಮ ರಾಜ್ಯದಿಂದ ಪಡೆದ ತೆರಿಗೆ ಹಣವನ್ನು ಸರಿಯಾಗಿ ನೀಡಿಲ್ಲ. ಆದ್ದರಿಂದ ಕನ್ನಡಿಗರು ಈ ಬಗ್ಗೆ ಗಟ್ಟಿ ಧ್ವನಿಯಲ್ಲಿ ಕೇಂದ್ರ ಸರ್ಕಾರವನ್ನು ಪ್ರಶ್ನಿಸಬೇಕು. ಎಲ್ಲ ಸೌಲಭ್ಯಗಳನ್ನು ಪಡೆಯಲು ಸಂಘಟಿತರಾಗಬೇಕು’ ಎಂದರು.



ಬಿ.ಎಂ. ಶ್ರೀಕಂಠಯ್ಯ ಅವರ ಪ್ರತಿಮೆಗೆ ಮನು ಬಳಿಗಾರ್, ರಾ.ನಂ. ಚಂದ್ರಶೇಖರ, ವ.ಚ. ಚನ್ನೇಗೌಡ ಹಾಗೂ ಕನ್ನಡ ಪರ ಹೋರಾಟಗಾರರು ಪುಷ್ಪ ನಮನ ಸಲ್ಲಿಸಿದರು.

ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ, ‘ಕನ್ನಡಿಗರಿಗೆ ಉದ್ಯೋಗ ದೊರಕಿಸಿಕೊಡಲು ಪರಿಷ್ಕೃತ ಡಾ. ಸರೋಜಿನಿ ಮಹಿಷಿ ವರದಿಯನ್ನು ಮುಂಬರುವ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಿ, ಅನುಮೋದನೆ ಪಡೆದು-ಕೊಳ್ಳಬೇಕು’ ಎಂದು ತಿಳಿಸಿದರು.

ಕರ್ನಾಟಕ ವಿಕಾಸ ರಂಗದ ಅಧ್ಯಕ್ಷ ವ.ಚ. ಚನ್ನೇಗೌಡ, ‘ಕರ್ನಾಟಕ ಏಕೀಕರಣದ ನಂತರವೂ ಕನ್ನಡಿಗರ ಆಶೋತ್ತರಗಳು ಈಡೇರದ ಕಾರಣ, 1962ರಲ್ಲಿ ಅ.ನ. ಕೃಷ್ಣರಾಯ ಮತ್ತು ಮ. ರಾಮಮೂರ್ತಿ ಅವರು ಕರ್ನಾಟಕ ಸಂಯುಕ್ತ ರಂಗವನ್ನು ಸ್ಥಾಪಿಸಿ, ಹೋರಾಟ ಆರಂಭಿಸಿದರು. ಅದು ಇಂದಿಗೂ ಮುಂದುವರಿಯುತ್ತಿದೆ. ಗಡಿವಿವಾದ, ಜಲವಿವಾದ, ಗೋಕಾಕ್ ವರದಿ ಜಾರಿ, ಮಹಿಷಿ ವರದಿ ಜಾರಿ ಹಾಗೂ ಶಾಸ್ತ್ರೀಯ ಭಾಷಾ ಸ್ಥಾನ-ಮಾನಕ್ಕಾಗಿ ಕನ್ನಡ ಚಳವಳಿಗಾರರು ನಿರಂತರ ಹೋರಾಟ ಮಾಡಿ, ನಾಡು-ನುಡಿಯನ್ನು ರಕ್ಷಿಸಿದ್ದಾರೆ’ ಎಂದರು.

ಕನ್ನಡ ಪರಿಚಾರಕರಿಗೆ ಸನ್ಮಾನ: ನಾಡು–ನುಡಿಯ ಹಿತಕ್ಕಾಗಿ ಶ್ರಮಿಸಿದ ಕೆ.ಎಂ. ರೇವಣ್ಣ, ಗೋವಿಂದಹಳ್ಳಿ ಕೃಷ್ಣೇಗೌಡ, ಕೃಷ್ಣಮೂರ್ತಿ, ವಿ. ಶ್ರೀನಿವಾಸ್, ಕೆ. ಕೃಷ್ಣಪ್ಪ, ರುದ್ರೇಶ್ ಜೆ.ಎಚ್., ಎಂ.ಪುಟ್ಟಸ್ವಾಮಿ, ವೈ.ಆರ್. ವಸಂತ್‌ಕುಮಾರ್, ಮಲ್ಲೇಶಪ್ಪ ಬಿ. ಯಾವಗಲ್ ಹಾಗೂ ಹ.ನ. ವಸಂತಕುಮಾರಿ ಅವರನ್ನು ಸನ್ಮಾನಿಸಲಾಯಿತು.

‘ಅಕ್ರಮ ಗುರುತಿನ ಚೀಟಿ: ತಪ್ಪಿತಸ್ಥರ ಮೇಲೆ ಕ್ರಮ’

ಬೆಂಗಳೂರು: ‘ಸ್ವೀಪ್ ಚಟುವಟಿಕೆಯಲ್ಲಿ 2018ರಿಂದ ಮತದಾರರ ಪರಿಷ್ಕರಣೆ ಸಂದರ್ಭದಲ್ಲಿ ಚಿಲುಮೆ ಸಂಸ್ಥೆಗೆ ಅವಕಾಶ ನೀಡಲಾಗುತ್ತಿದೆ. ಅವರು ಮತಗಟ್ಟೆ ಅಧಿಕಾರಿ ಎಂದು ಗುರುತಿನ ಚೀಟಿ ಪಡೆದಿರುವುದು ತಪ್ಪು’ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

‘ಅಕ್ರಮವಾಗಿ ಗುರುತಿನ ಚೀಟಿ ಪಡೆದವರು ಹಾಗೂ ಗುರುತಿನ ಚೀಟಿ ನೀಡಿದವರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ. ನಮ್ಮ ಎಲ್ಲ ಅಧಿಕಾರಿಗಳಿಗೆ ಈ ಬಗ್ಗೆ ಸೂಚನೆ ನೀಡಿದ್ದು, ಅವರ ವರದಿ ಬಂದ ಮೇಲೆ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ’ ಎಂದರು.

‘ಬಿಬಿಎಂಪಿ ವ್ಯಾಪ್ತಿಯಲ್ಲಿ ಮತದಾರರ ಚೀಟಿಯೊಂದಿಗೆ ಆಧಾರ್ ಸಂಖ್ಯೆ ಜೋಡಣೆ ಕಡಿಮೆ ಪ್ರಮಾಣದಲ್ಲಿ ಇದ್ದುದರಿಂದ ಅರಿವು ಜೊತೆಗೆ ಅದನ್ನು ನಿರ್ವಹಿಸುತ್ತಿದ್ದರು. ಅವರು ಖಾಸಗಿಯಾಗಿ ಮಾಹಿತಿ ಪಡೆದಿರುವ ಬಗ್ಗೆ ಮಾಹಿತಿ ಇಲ್ಲ. ತನಿಖೆಯಿಂದ ಹೊರಬರುತ್ತದೆ. ಚಿಲುಮೆ ಸಂಸ್ಥೆಯೊಂದಕ್ಕೆ ಮಾತ್ರ ಅರಿವು ಮೂಡಿಸುವ ಅನುಮತಿ ನೀಡಲಾಗಿತ್ತು’ ಎಂದರು.

ಡಿ.18ರ ವರೆಗೆ ವಾಹನ ಸಂಚಾರ ನಿರ್ಬಂಧ

ಬೆಂಗಳೂರು: ಶಾಂತಲಾ ವೃತ್ತದಿಂದ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ಶನಿವಾರದಿಂದ ವೈಟ್ ಟಾಪಿಂಗ್ ಕಾಮಗಾರಿ ಪ್ರಾರಂಭವಾಗಲಿದೆ. ಆದ್ದರಿಂದ ನ.19ರಿಂದ ಡಿ.18ರವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ ಎಂದು ಬಿಬಿಎಂಪಿ ತಿಳಿಸಿದೆ.

ಯೋಜನೆ ಕೇಂದ್ರ-1 ವಿಭಾಗದ ವತಿಯಿಂದ ಶಾಂತಲಾ ವೃತ್ತದಿಂದ ಸಂಗೊಳ್ಳಿ ರಾಯಣ್ಣ ವೃತ್ತದವರೆಗೆ ಸುಮಾರು 580 ಮೀಟರ್ ರಸ್ತೆಯಲ್ಲಿ ವೈಟ್ ಟಾಪಿಂಗ್ ಮಾಡಲಾಗುತ್ತದೆ ಎನ್ನಲಾಗಿದೆ.

ಬ್ಯಾಂಕ್ ಮುಷ್ಕರ ಕೈಬಿಟ್ಟ ಎಐಬಿಇಎ

ನವದೆಹಲಿ (ಪಿಟಿಐ): ಅಖಿಲ ಭಾರತ ಬ್ಯಾಂಕ್ ಉದ್ಯೋಗಿಗಳ ಸಂಘವು (ಎಐಬಿಇಎ) ಶನಿವಾರ ಕರೆ ನೀಡಿದ್ದ ಮುಷ್ಕರವನ್ನು ಕೈಬಿಟ್ಟಿದೆ. ಇದರಿಂದಾಗಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಸೇವೆಗಳಲ್ಲಿ ಯಾವುದೇ ವ್ಯತ್ಯಯ ಆಗುವುದಿಲ್ಲ.

ಬಹುತೇಕ ಬೇಡಿಕೆಗಳನ್ನು ಈಡೇರಿಸಲು ಭಾರತೀಯ ಬ್ಯಾಂಕ್‌ಗಳ ಒಕ್ಕೂಟವು ಒಪ್ಪಿಗೆ ನೀಡಿರುವುದರಿಂದ ಈ ನಿರ್ಧಾರಕ್ಕೆ ಬಂದಿರುವುದಾಗಿ ಶುಕ್ರವಾರ ತಿಳಿಸಿದೆ.

ಅಧ್ಯಕ್ಷರಾಗಿ ವಿ.ಆರ್.ಸಿ ಶೇಖರ್ ಆಯ್ಕೆ

ಬೆಂಗಳೂರು: ಕರ್ನಾಟಕ ವ್ಯಂಗ್ಯಚಿತ್ರಕಾರರ ಸಂಘದ ಅಧ್ಯಕ್ಷರಾಗಿ ವಿ.ಆರ್.ಸಿ. ಶೇಖರ್ ಆಯ್ಕೆಯಾಗಿದ್ದಾರೆ.



ಶೇಖರ್

ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮುಂದಿನ ಮೂರು ವರ್ಷದ ಅವಧಿಗೆ ಈ ಆಯ್ಕೆ ನಡೆದಿದೆ. ಸಂಘದ ಮಹಾಪೋಷಕರಾಗಿ ಬಿ.ಜಿ. ಗುಜ್ಜಾರಪ್ಪ, ಗೌರವ ಪೋಷಕರಾಗಿ ಬಾಬು ಜತ್ಕರ್, ಉಪಾಧ್ಯಕ್ಷರಾಗಿ ಜಿ.ಎಸ್. ನಾಗಾನಾಥ್, ಪ್ರಧಾನ ಕಾರ್ಯದರ್ಶಿಯಾಗಿ ವಿನಾಯಕ ಪೈ, ಸಹಾಯಕ ಕಾರ್ಯದರ್ಶಿಯಾಗಿ ವೈ.ಎಸ್. ನಂಜುಂಡಸ್ವಾಮಿ ಹಾಗೂ ಶಿವರಾಂ ಆಯ್ಕೆಯಾಗಿದ್ದಾರೆ.

ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ರಘುಪತಿ ಶೃಂಗೇರಿ, ಎಂ.ಎನ್. ಸುಬ್ರಹ್ಮಣ್ಯ, ಚಂದ್ರ ಗಂಗೊಳ್ಳಿ, ಬಾವುರಾಯ ಪತ್ತಾರ್, ಜೆ. ಬಾಲಕೃಷ್ಣ, ಜೀವನ್ ಶೆಟ್ಟಿ, ವೆಂಕಟ ಭಟ್ಟ ಎಡನೂರು ಹಾಗೂ ಬದರಿ ಪುರೋಹಿತ ಕೊಪ್ಪಳ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜ.20ರಿಂದ ಸಮಾವೇಶ

ಬೆಂಗಳೂರು: ಅಂತರರಾಷ್ಟ್ರೀಯ ಲಿಂಗಾಯತ ಯುವ ವೇದಿಕೆಯು 2023ರ ಜ.20ರಿಂದ ಜ.22ರವರೆಗೆ ಇಲ್ಲಿನ ಅರಮನೆ ಮೈದಾನದಲ್ಲಿ ವೀರಶೈವ ಲಿಂಗಾಯತ ಜಾಗತಿಕ ಉದ್ಯಮಿಗಳ ಸಮಾವೇಶವನ್ನು ಹಮ್ಮಿಕೊಂಡಿದೆ.

ಇಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಾವೇಶದ ಅಧ್ಯಕ್ಷ ನವೀನ್ ಕೊಟ್ಟಿಗೆ, ‘ವೀರಶೈವ ಲಿಂಗಾಯತ ಸಮುದಾಯದ ಎಲ್ಲ ಉದ್ಯಮಿಗಳನ್ನು ಒಂದೇ ವೇದಿಕೆಯಡಿ ತರುವುದು ಸಮಾವೇಶದ ಉದ್ದೇಶ. ಕರ್ನಾಟಕದಲ್ಲಿನ ಹೂಡಿಕೆ ಅವಕಾಶಗಳ ಬಗ್ಗೆ ಚರ್ಚಿಸಲಾಗುತ್ತದೆ. 250ಕ್ಕೂ ಅಧಿಕ ಮಳಿಗೆಗಳನ್ನು ಸ್ಥಾಪಿಸಲಾಗುವುದು’ ಎಂದು ಹೇಳಿದರು.



ಅರ್ಜೆಂಟು ಮತ್ತು ಟಾಯ್ಲೆಟ್ಟು

ಇಂದು (ನ 19) ವಿಶ್ವ ಶೌಚಾಲಯ ದಿನ.
ಇದು ವರ್ಷಕ್ಕೊಮ್ಮೆ 'ಆಚರಿಸುವ' ದಿನವಲ್ಲ, ಸಮರ್ಪಕ ವ್ಯವಸ್ಥೆಯ ಶೌಚಾಲಯ ಎನ್ನುವುದು ಕೊಡುಗೆಯಲ್ಲ, ಹಕ್ಕು ಎನ್ನುವುದನ್ನು ಸರ್ಕಾರಿ ಮತ್ತು ಸಾರ್ವಜನಿಕ ಮಟ್ಟದಲ್ಲಿ ಅರಿಯಬೇಕಾದ ದಿನ

ಸಂಧ್ಯಾರಾಣಿ

ಬಹುಶಃ ಅದು 2017ರಲ್ಲಿರಬೇಕು. ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದಲ್ಲಿ ರಾಜ್ಯಮಟ್ಟದ ಪತ್ರಕರ್ತೆಯರ ಸಮಾವೇಶವನ್ನು ಆಯೋಜಿಸಲಾಗಿತ್ತು. ಹಿರಿಕಿರಿಯ ಪತ್ರಕರ್ತೆಯರೆಲ್ಲಾ ಅಲ್ಲಿ ಸೇರಿ ತಮ್ಮ ವೃತ್ತಿಜೀವನದ ಸವಾಲು, ಸವಿನೆನಪುಗಳನ್ನು ಹಂಚಿಕೊಂಡಿದ್ದರು. ಆಗ ಹಂಚಿಕೊಂಡ ಸಾಮಾನ್ಯ ಸಂಗತಿಯೆಂದರೆ ಸವಾಲು ಕೆಲಸದಲ್ಲಿರುವಾಗ ಶೌಚಾಲಯಗಳು ಸರಿಯಾಗಿ ಸಿಗದ, ಸಿಕ್ಕರೂ ಉಪಯೋಗಿಸಲು ಸಾಧ್ಯವಾಗುವ ರೀತಿಯಲ್ಲಿ ಇರದ ಪರಿಸ್ಥಿತಿ. ಬಹುಮಟ್ಟಿಗೆ ಎಲ್ಲಾ ಪತ್ರಕರ್ತೆಯರೂ ಅನುಭವಿಸಿದ್ದ ಪಡಿಪಾಟಲಿದು.

'ಫೀಲ್ಡಿಗೆ ಹೋಗುವಾಗ, ಫೀಲ್ಡಿನಲ್ಲಿದ್ದಾಗ ನಾನು ನೀರು ಕುಡಿಯುವುದನ್ನೇ ಮುಂದೂಡುತ್ತೇನೆ' ಈ ಮಾತು ಹೇಳಿದ್ದು ಒಬ್ಬ ಸ್ನೇಹಿತೆಯಾದರೆ, ಹೌದೆಂದು ತಲೆ ಆಡಿಸಿದವರು ನನ್ನನ್ನೂ ಒಳಗೊಂಡು ಬಹಳಷ್ಟು ಮಂದಿ.

ಕನ್ನಡ ಸಾಹಿತ್ಯ ಅಕಾಡೆಮಿ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಮಹಿಳೆಯರ ವರ್ಕ್‌ಶಾಪ್ ಏರ್ಪಡಿಸಿತ್ತು. ಗಾರ್ಮೆಂಟ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ ಸಹೋದರಿಯರ ಪರವಾಗಿ ಬಂದಿದ್ದ ಸ್ನೇಹಿತೆ ಒಬ್ಬರು ಕೆಲಸ ಮಾಡುವಾಗ ತಾವು ಅನುಭವಿಸುವ ಬವಣೆಯ ಕುರಿತು ಹೇಳುವಾಗ ಬಂದದ್ದು ಇದೇ ಸಮಸ್ಯೆ. 'ಹೆಚ್ಚು ಸಲ ಬಾತ್ರೂಮಿಗೆ ಹೋದರೆ ಸೂಪರ್‌ವೈಸರ್ ಬೈಯ್ಯುವುದರಿಂದ ನೀರು ಕುಡಿಯುವುದನ್ನು ಅವಾಯ್ಡ್ ಮಾಡುತ್ತೇವೆ'. ಇಂಥವರಿಗೆ ಪ್ರತಿದಿನ 3-4 ಲೀಟರ್ ಆದರೂ ನೀರು ಕುಡಿಯಬೇಕು ಎಂದು ಆರೋಗ್ಯ ಸಲಹೆ ಕೊಡುವುದು ಅದೆಂತಹ ಕ್ರೂರ ಜೋಕ್ ಆಗಬಹುದು?

ಇನ್ನೊಂದು ವೈಯಕ್ತಿಕ ಅನುಭವವನ್ನು ಹೇಳುವುದಾದರೆ; ರಂಗಭೂಮಿಯ ಕಾರ್ಯಕ್ರಮವೊಂದರ ಭಾಗವಾಗಿ, ರಂಗಕರ್ಮಿಗಳ ಜೊತೆ ಕರ್ನಾಟಕದುದ್ದಕ್ಕೂ ಓಡಾಡಬೇಕಿತ್ತು. ಒಂದೆಡೆ ಭವ್ಯವಾದ ರಂಗಮಂದಿರ. ನಾಟಕ ಮುಗಿದ ಮೇಲೆ ಇನ್ನೊಂದೂರಿಗೆ ಧಾವಿಸಬೇಕಿತ್ತು. ಅವಸರವಸರವಾಗಿ ಟಾಯ್ಲೆಟ್‌ಗೆ ಓಡಿದೆ. ಮುಚ್ಚಲಿಕ್ಕಾಗದ ಬಾಗಿಲು, ಕಿಟಕಿ, ಗೋಡೆಗಳ ಮೇಲೆ ಬೆಳೆದಿದ್ದ ಹುತ್ತ. ನೋಡುತ್ತಲೇ ಗಾಬರಿಯಾಗಿತ್ತು.

ಸಣ್ಣ ಸಣ್ಣ ಬಟ್ಟೆ ಅಂಗಡಿಗಳಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳಿರುತ್ತಾರೆ. ಅಂಗಡಿಯ ಸುತ್ತಳತೆಯೇ 10 ಅಡಿ x 10 ಅಡಿ ಇರುತ್ತದೆ. ಇನ್ನು ಅಲ್ಲಿ ಟಾಯ್ಲೆಟ್ ವ್ಯವಸ್ಥೆ ಸಾಧ್ಯವೆ? ಹಾಗಿರುವಾಗ ಅವರ ಪರಿಸ್ಥಿತಿ ಏನು? ಯಾವುದಾದರೂ ಹೋಟೆಲ್‌ನ ಟಾಯ್ಲೆಟ್‌ಗೆ ಹೋಗಬೇಕೆಂದರೂ ಅಲ್ಲಿ ಕಾಫಿಯನ್ನಾದರೂ ಖರೀದಿಸಬೇಕು. ದಿನಕ್ಕೆರಡು ಕಾಫಿ ಎಂದರೆ ಅವರ ಪುಡಿ ಸಂಬಳದ ಮೇಲೆ ಅದು ದೊಡ್ಡದೇ ಹೊರೆ. ಈ ಸಮಸ್ಯೆಯನ್ನು ಇಟ್ಟುಕೊಂಡು ತಮಿಳಿನಲ್ಲಿ ಒಂದು ಸಿನಿಮಾ ಸಹ ಬಂದಿತ್ತು.

ಈ ಮಾತು ಮತ್ತೆ ಬಂದಿದ್ದು ಮೊನ್ನೆ ಪತ್ರಕರ್ತೆಯರ ವಾಟ್ಸ್ಆ್ಯಪ್ ಗುಂಪಿನಲ್ಲಿ. ಕೆಲಸ ಮಾಡುವ ಕಡೆ, ರಾತ್ರಿ ಪ್ರಯಾಣ ಮಾಡುವಾಗ ಬಸ್ ನಿಲ್ಲಿಸಿದ ಕಡೆಗಳಲ್ಲಿ ಶೌಚಾಲಯಗಳ ದುರ್ಗತಿ, ಕೊಳಕು, ದುರ್ವಾಸನೆ.... ಎಲ್ಲರ ಬಳಿಯೂ ಇದನ್ನು ಕುರಿತಂತೆ ಕತೆಗಳಿದ್ದವು. ಭಾರತ ಎಷ್ಟೇ ಪ್ರಕಾಶಿಸಿದರೂ ಈ ಸಮಸ್ಯೆ ಮಾತ್ರ ತೀರುವುದೇ ಇಲ್ಲ.

ನಗರ ಪ್ರದೇಶಗಳಲ್ಲಿ ಇಷ್ಟು ದೊಡ್ಡದಾಗಿರುವ ಈ ಸಮಸ್ಯೆಯೂ ಚಿಕ್ಕದು ಅನ್ನಿಸುವುದು ಯಾವಾಗ? ಸರಿಯಾದ ಶೌಚ ವ್ಯವಸ್ಥೆಯೇ ಇಲ್ಲದೆ, ಗಂಟೆಗಟ್ಟಲೆ ಮೂತ್ರ, ಮಲ ವಿಸರ್ಜಿಸದೆ ಹೊಟ್ಟೆ ಕಟ್ಟಿಕೊಂಡು ಕೆಲಸ ಮಾಡುವ ಹೆಂಗಸರ ಕಥೆ ಹೊಸತಲ್ಲ.

ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಕೆಳ ಮತ್ತು ಮಧ್ಯಮ ಆದಾಯ ಹೊಂದಿರುವ ದೇಶಗಳ ಸುಮಾರು 8,29,000 ಮಂದಿ ಪ್ರತಿ ವರ್ಷ ಅಸಮರ್ಪಕ ನೀರು, ನೈರ್ಮಲ್ಯ, ಮತ್ತು ಆರೋಗ್ಯದ ಕಾರಣಕ್ಕೆ ಸಾವನ್ನಪ್ಪುತ್ತಾರೆ.

ಭಾರತ ಒಂದರಲ್ಲೇ ಸುಮಾರು 550 ದಶಲಕ್ಷ ಮಂದಿ ಶೌಚಾಲಯವಿಲ್ಲದ ಸ್ಥಿತಿಯಲ್ಲಿದ್ದು ಇದು ಪ್ರಪಂಚದಲ್ಲಿ ತೆರೆದ ಶೌಚವನ್ನು ಅನುಸರಿಸುವವರ ಪ್ರಮಾಣದ ಸುಮಾರು ಅರ್ಧದಷ್ಟು ಎಂದು ಇನ್ನೊಂದು ವರದಿ ಹೇಳುತ್ತದೆ.

ಆರೋಗ್ಯದ ಮೇಲೆ ವ್ಯತಿರಿಕ್ತ ಪರಿಣಾಮ

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ- 5 (NFHS – 5)ರ ದತ್ತಾಂಶದ ಪ್ರಕಾರ ಭಾರತದ ಪ್ರತಿ 5 ಮನೆಗಳಲ್ಲಿ ಒಂದು ಮನೆಯವರು ಇಂದಿಗೂ ತೆರೆದ ಶೌಚವನ್ನೇ ಅವಲಂಬಿಸಿದ್ದಾರೆ. ಆ ಹೆಂಗಸರು ಕತ್ತಲಿರುವಾಗಲೇ ಶೌಚ ಮುಗಿಸಿಕೊಳ್ಳಬೇಕು ಮತ್ತು ಮತ್ತೊಮ್ಮೆ ಹೋಗಬೇಕಾದರೆ ಕತ್ತಲನ್ನೇ ಕಾಯಬೇಕು. ಇದು ಕೇವಲ ನಾಚಿಕೆಯ ಪ್ರಶ್ನೆಯಷ್ಟೇ ಅಲ್ಲ, ಆ ಹೆಣ್ಣುಮಕ್ಕಳ ಸುರಕ್ಷತೆ ಮತ್ತು ಲೈಂಗಿಕ ದೌರ್ಜನ್ಯದ ಪ್ರಶ್ನೆಯೂ ಹೌದು. ಈ ಸಮಯದಲ್ಲಿ ಉಂಟಾಗಬಹುದಾದ ಹಿಂಸೆ ಮತ್ತು ನಾಚಿಕೆಯ ಕಾರಣಕ್ಕೆ ಹೆಣ್ಣುಮಕ್ಕಳು ಪ್ರತಿದಿನ 13 ಗಂಟೆಗಳ ಅವಧಿಯವರೆಗೂ ತಮ್ಮ ಮಲಮೂತ್ರಗಳನ್ನು ಕಟ್ಟಿಹಿಡಿಯುತ್ತಾರೆ. ಹೀಗೆ ಮೂತ್ರವಿಸರ್ಜನೆಯನ್ನು ತಡೆಯುವುದರಿಂದ ಸಹ ಮೂತ್ರನಾಳದ ಸೋಂಕಿಗೆ ಒಳಪಡುತ್ತಾರಲ್ಲದೆ, ಕಡಿಮೆ ನೀರು ಕುಡಿಯುವುದು ಮಲಬದ್ಧತೆಯ ಜೊತೆಜೊತೆಗೆ ಇನ್ನೂ ಅನೇಕ ಆರೋಗ್ಯ ಸಮಸ್ಯೆಗಳಿಗೆ ಕಾರಣವಾಗುತ್ತದೆ ಎಂದು ವೈದ್ಯರು ಎಚ್ಚರಿಸುತ್ತಲೇ ಇರುತ್ತಾರೆ.

ಆರೋಗ್ಯದ ದೃಷ್ಟಿಯಿಂದ ನೋಡುವಾಗ ಇದರ ಪರಿಣಾಮಗಳು ಹೆಣ್ಣು ಮತ್ತು ಗಂಡು ಇಬ್ಬರ ಮೇಲೂ ಆಗುವುದು ನಿಜವಾದರೂ ತನ್ನ ದೈಹಿಕ ಗುಣಧರ್ಮದ ಕಾರಣಕ್ಕೆ ಹೆಣ್ಣು ಇದರಿಂದ ಇನ್ನೂ ಹೆಚ್ಚು ಬಾಧೆಗೊಳಗಾಗುತ್ತಾಳೆ. ಹೆಣ್ಣಿನ ಗೌಪ್ಯತೆ ಮತ್ತು ಘನತೆ ಎರಡೂ ಇದರಿಂದ ಹಾನಿಗೊಳಗಾಗುವುದಲ್ಲದೆ ಲೈಂಗಿಕ ಹಲ್ಲೆ ಮತ್ತು ದೌರ್ಜನ್ಯಗಳಂತಹ ಬಾಹ್ಯ ದಾಳಿಗಳ ಜೊತೆಜೊತೆಗೆ ನೈರ್ಮಲ್ಯದ ಕೊರತೆಯ ಕಾರಣಕ್ಕೆ ಆಕೆ ಆಂತರಿಕ ಅಪಾಯಕ್ಕೆ ಕೂಡಾ ಒಳಗಾಗುತ್ತಾಳೆ. ಮುಟ್ಟಿನ ಸಮಯದಲ್ಲಿ ಈ ಕಾರಣಕ್ಕೆ ಬರುವ ಸೋಂಕು ಆಕೆಯ ಆರೋಗ್ಯದ ಮೇಲೆ ಗಂಭೀರ ಪರಿಣಾಮವನ್ನು ಬೀರುತ್ತದೆ.

ನೈರ್ಮಲೀಕರಣದ ಕೊರತೆ ವೈಯಕ್ತಿಕ ಮಾನವ ಹಕ್ಕುಗಳ ಮೇಲೆ ಎಸಗಿದ ಸವಾಲು ಎಂದು ವಿಶ್ವಸಂಸ್ಥೆ ಹೇಳುತ್ತದೆ. ಇದರಿಂದ ಹೆಣ್ಣುಮಕ್ಕಳ ಮೇಲೆ ಆಗುವ ಪ್ರತಿಕೂಲ ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡ ವಿಶ್ವಸಂಸ್ಥೆ ಈ ವಿಷಯವನ್ನು ರಾಷ್ಟ್ರ ಮಟ್ಟದಲ್ಲಿ ಗ್ರಹಿಸಿ, ಪರಿಹಾರ ಹುಡುಕದೆ ಇರುವುದು ಲಿಂಗ ಅಸಮಾನತೆಯ ಜೊತೆಜೊತೆಗೆ ಮಾನವಹಕ್ಕುಗಳ ಉಲ್ಲಂಘನೆಯೂ ಹೌದು ಎಂದು ಹೇಳುತ್ತದೆ. ಅಸಮರ್ಪಕ ಟಾಯ್ಲೆಟ್ ವ್ಯವಸ್ಥೆ ಕೇವಲ ಹೆಣ್ಣುಮಕ್ಕಳ ಆರೋಗ್ಯ ಮತ್ತು ಸುರಕ್ಷತೆಗೆ ಮಾತ್ರ ಸವಾಲಲ್ಲ. ಇದು ಹೆಣ್ಣಿನ ವಿದ್ಯಾಭ್ಯಾಸಕ್ಕೂ ಸವಾಲೆಸೆಯಬಹುದು. ಶಾಲೆಗಳಲ್ಲಿ ಸರಿಯಾದ ಶೌಚಾಲಯದ ಕೊರತೆಯಿಂದ ಮುಟ್ಟಿನ ಸಮಯದಲ್ಲಿ ಹೆಣ್ಣುಮಕ್ಕಳು ಶಾಲೆಗೆ ಬರದೆ ಮನೆಗಳಲ್ಲಿಯೇ ಉಳಿಯುವ ಸಾಧ್ಯತೆಯನ್ನು ತಳ್ಳಿಹಾಕಲಾಗದು.



ಹೆಚ್ಚಲಿ 'ರಾಣಿ ಮೇಸ್ತ್ರಿ'

UNICEF ಜಾರ್ಖಂಡ್ ರಾಜ್ಯದಲ್ಲಿ ಹೆಣ್ಣು ಮಕ್ಕಳಿಗೆ ಒಂದು ವಿಶೇಷ ತರಬೇತಿ ಕೊಡುತ್ತಿದೆ. ಅವರನ್ನು 'ರಾಣಿ ಮೇಸ್ತ್ರಿ' ಎಂದು ಕರೆಯಲಾಗುತ್ತದೆ. ಈ ಹೆಣ್ಣುಮಕ್ಕಳು ತಮ್ಮ ತಮ್ಮ ಸಮುದಾಯಗಳಲ್ಲಿ ಶೌಚಾಲಯಗಳನ್ನು ನಿರ್ಮಿಸುವ ತರಬೇತಿ ಪಡೆದು ಅದನ್ನು ಸಮುದಾಯದ ಮಟ್ಟದಲ್ಲಿ ಅನುಷ್ಠಾನಕ್ಕೆ ತರುತ್ತಿದ್ದಾರೆ.

ಲೈಂಗಿಕ ಶಿಕ್ಷಣ ಕಬ್ಬಿಣದ ಕಡಲೆಯೇ?

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

• ನನಗೆ 8 ವರ್ಷದ ಮಗ, 12 ವರ್ಷದ ಮಗಳಿದ್ದಾಳೆ. ಅವರಿಗೆ ಲೈಂಗಿಕತೆಯ ಬಗ್ಗೆ ಅರಿವು ಮೂಡಿಸುವುದು ಹೇಗೆ? ಯಾವ ವಯಸ್ಸಿನಿಂದ ಈ ಬಗ್ಗೆ ಅರಿವು ಮೂಡಿಸುವುದು ಸೂಕ್ತ? ಇದರ ಬಗ್ಗೆ ವಿಸ್ತೃತವಾಗಿ ಹೇಳಬಹುದೇ?


ರಂಜನಿ, ಶಿರೂರು

ಮಕ್ಕಳ ಜೊತೆ ಲೈಂಗಿಕತೆಯ ಕುರಿತಾಗಿ ಮಾತನಾಡುವ ನಿಮ್ಮ ಆಸಕ್ತಿಗೆ ಅಭಿನಂದನೆಗಳು. ಇದು ಎಲ್ಲಾ ಪೋಷಕರು ಅಗತ್ಯವಾಗಿ ಮಾಡಲೇಬೇಕಾದ ಕರ್ತವ್ಯ. ದುರದೃಷ್ಟದಿಂದ ಮಕ್ಕಳಿಗೆ ಲೈಂಗಿಕತೆಯ ಶಿಕ್ಷಣ ಕೊಡುವ ಕುರಿತಾಗಿ ಹೆಚ್ಚಿನ ಅರಿವನ್ನು ಪೋಷಕರಲ್ಲಿ ಮೂಡಿಸಲಾಗುತ್ತಿಲ್ಲ. ಅದಕ್ಕೆ ಅಗತ್ಯವಿರುವ ಮಾಹಿತಿಗಳನ್ನು ಪೋಷಕರಿಗೆ ಒದಗಿಸಲಾಗುತ್ತಿಲ್ಲ. ಹಾಗಾಗಿ ಎಷ್ಟೋ ಪೋಷಕರು ಅಸಹಾಯಕರಾಗಿದ್ದಾರೆ.

ಲೈಂಗಿಕತೆಯ ಶಿಕ್ಷಣವನ್ನು ಬೇರೆಲ್ಲಾ ಶಿಕ್ಷಣದಂತೆ ಮಕ್ಕಳ ವಯಸ್ಸು ಮತ್ತು ತಿಳಿವಳಿಕೆಯ ಮಟ್ಟದ ಆಧಾರದ ಮೇಲೆ ಹಂತಹಂತವಾಗಿ ಕೊಡಬೇಕಾಗುತ್ತದೆ. ಇದರ ಕುರಿತಾಗಿ ವಿಸ್ತೃತವಾಗಿ ಈ ಅಂಕಣದಲ್ಲಿ ಬರೆಯುವುದು ಸಾಧ್ಯವಾಗದಿರಬಹುದು. 'ಪ್ರಜಾವಾಣಿ' ಯ ಹಳೆಯ ಸಂಚಿಕೆಗಳು ಗ್ರಂಥಾಲಯದಲ್ಲಿ ಅಥವಾ ಇತರ ಕಡೆ ಲಭ್ಯವಿದ್ದರೆ 21ನೇ ಸೆಪ್ಟೆಂಬರ್ 2012ರಿಂದ 20ನೇ ಅಕ್ಟೋಬರ್ 2012ರವರೆಗಿನ ಶನಿವಾರದ ಭೂಮಿಕಾ ಪುರವಣಿಗಳಲ್ಲಿ ಐದು ಕಂತುಗಳಲ್ಲಿ ಇದರ ಕುರಿತಾಗಿ ಸಾಕಷ್ಟು ಮಾಹಿತಿಗಳನ್ನು ನೀಡಲಾಗಿದೆ. ಇದು 'ಮಕ್ಕಳಿಗೆ ವೈವಾಹಿಕ ಶಿಕ್ಷಣ' ಎನ್ನುವ ಹೆಸರಿನ ಪುಸ್ತಕ ರೂಪದಲ್ಲಿ ಹೆಚ್ಚಿನ ಮಾಹಿತಿಯೊಂದಿಗೆ ಸದ್ಯದಲ್ಲಿಯೇ ಪ್ರಕಟವಾಗಲಿದೆ. ಸಂಕ್ಷಿಪ್ತವಾಗಿ ಕೆಲವು ಮಾಹಿತಿಗಳನ್ನು ಇಲ್ಲಿ ಹೇಳಬಹುದು.

- ಮಕ್ಕಳಿಗೆ ಸುಮಾರು 3 ವರ್ಷಗಳಾಗುವ ಹೊತ್ತಿಗೆ ಅವರ ಖಾಸಗಿ ಅಂಗಾಂಗಗಳ ಕುರಿತು ತಿಳಿವಳಿಕೆ ನೀಡಬೇಕು. ಮುಜುಗರವನ್ನು ತಪ್ಪಿಸಲು ಅಂಗಾಂಗಗಳಿಗೆ ಯಾವುದಾದರೂ ಅಡ್ಡ ಹೆಸರನ್ನು ಇಡದೆ ವೈಜ್ಞಾನಿಕ ಶಬ್ದಗಳನ್ನೇ ಬಳಸಬೇಕು. ಶುಚಿತ್ವವನ್ನು ಕಲಿಸುತ್ತಲೇ ಲೈಂಗಿಕ ಅಂಗಾಂಗಗಳು ಅಸಹ್ಯ ಎನ್ನುವ ಭಾವನೆ ಮೂಡಿಸಬಾರದು. ಆದರೆ ಅವುಗಳನ್ನು ಮುಚ್ಚಿಕೊಂಡು ಖಾಸಗಿತನ ಕಾಯ್ದುಕೊಳ್ಳುವ ತರಬೇತಿ ನೀಡಬೇಕು.
- ಸುಮಾರು 5-6 ವರ್ಷಗಳಾಗುವ ಹೊತ್ತಿಗೆ ಭಿನ್ನ ಲಿಂಗದವರ ಲೈಂಗಿಕ ಅಂಗಾಂಗಗಳ ಸ್ಥೂಲ ವಿವರಣೆ ನೀಡಬೇಕು. ಜೊತೆಗೆ ಯಾರಾದರೂ ಅವರ ಖಾಸಗಿ ಅಂಗಾಂಗಗಳನ್ನು ಸ್ಪರ್ಶಿಸಿದರೆ ಪ್ರತಿಭಟಿಸಬೇಕು ಮತ್ತು ತಮಗೆ ತಕ್ಷಣ ತಿಳಿಸಬೇಕು ಎನ್ನುವ ಮಾಹಿತಿಯನ್ನು ನೀಡಲೇಬೇಕು. ಮಕ್ಕಳೂ ಕೂಡ ಬೇರೆ ಮಕ್ಕಳ ಖಾಸಗಿ ಅಂಗಾಂಗಗಳನ್ನು ಮುಟ್ಟಬಾರದು ಎನ್ನುವುದನ್ನೂ ತಿಳಿಸಬೇಕು.
- 8-9 ವರ್ಷಗಳಾಗುವ ಹೊತ್ತಿಗೆ ಮಕ್ಕಳು ಹುಟ್ಟುವುದಕ್ಕೆ ಗಂಡುಹೆಣ್ಣುಗಳ ಅಗತ್ಯವಿರುವುದನ್ನು ತಿಳಿಸಬೇಕು. ಆಗಲೇ ಪೂರ್ಣ ಲೈಂಗಿಕಕ್ರಿಯೆಯ ವಿವರಣೆ ಕೊಡುವ ಅಗತ್ಯವೇನಿಲ್ಲ. ಆದರೆ ಅವುಗಳನ್ನು ಮುಂದೆ ತಾವೇ ತಿಳಿಸುವ ಭರವಸೆಯನ್ನು ನೀಡಬೇಕು. ಬೇರೆಯವರಿಂದ ದೊರೆತ ಮಾಹಿತಿಯನ್ನು ನಂಬಿಕೊಳ್ಳುವ ಮೊದಲು ತಮ್ಮನ್ನು ಕೇಳಿ ತಿಳಿದುಕೊಳ್ಳಬೇಕು ಎನ್ನುವುದನ್ನೂ ಹೇಳುವ ಅಗತ್ಯವಿರುತ್ತದೆ.
- 12 ವರ್ಷಗಳಾಗುವ ಹೊತ್ತಿಗೆ ಹೆಣ್ಣುಮಕ್ಕಳಿಗೆ ಋತುಸ್ರಾವದ ಕುರಿತು ವೈಜ್ಞಾನಿಕ ವಿವರಣೆ ನೀಡಬೇಕು. ಗಂಡು ಮಕ್ಕಳಿಗೂ ಇದರ ಕುರಿತು ಸ್ಥೂಲ ವಿವರಣೆ ನೀಡಿದರೆ ಅವರ ಕುತೂಹಲ ತಣಿಯುತ್ತದೆ.
- 15 ವರ್ಷಗಳಾಗುವ ಹೊತ್ತಿಗೆ ಸಂಪೂರ್ಣ ಲೈಂಗಿಕತೆಯ ಕುರಿತು ಮಾತನಾಡಬೇಕು. ಲೈಂಗಿಕತೆಯಲ್ಲಿ ಕೇವಲ ಮಿಲನದ ವಿಚಾರವಿದ್ದರೆ ಸಾಲದು. ಮಕ್ಕಳಿಗೆ ತಮ್ಮ ಲೈಂಗಿಕ ಆಕರ್ಷಣೆಯನ್ನು ಸಹಜವೆಂದು ಒಪ್ಪಿಕೊಂಡು ಅದನ್ನು ಜವಾಬ್ದಾರಿಯುತವಾಗಿ ನಿಭಾಯಿಸುವುದನ್ನು ಕಲಿಸಬೇಕು. ದೀರ್ಘಕಾಲದ ಲೈಂಗಿಕತೆಗೆ ಒಂದು ಗಟ್ಟಿಯಾದ ಸಂಬಂಧದ ಅಗತ್ಯವಿರುವುದನ್ನು ಮನಗಾಣಿಸಬೇಕು. ಲೈಂಗಿಕ ರೋಗಗಳ ಅಪಾಯ, ಕಾನೂನಿನ ನಿರ್ಬಂಧಗಳನ್ನೂ ತಿಳಿಸಬೇಕು. ಭಿನ್ನಲಿಂಗದವರೊಡನೆ ಸ್ನೇಹವಿದ್ದರೂ ಅದರ ಮಿತಿಗಳನ್ನು ಗುರುತಿಸಿ ಖಾಸಗೀತನವನ್ನು ಕಾಪಾಡಿಕೊಳ್ಳುವ ತರಬೇತಿ ನೀಡಬೇಕು.
- ತಂದೆತಾಯಿ ಇಬ್ಬರೂ ಕುಳಿತು ಮಾತನಾಡಿದರೆ ಹೆಚ್ಚು ಪ್ರಭಾವಕಾರಿ. ಪೋಷಕರಿಗೆ ಹೆಚ್ಚಿನ ಮಾಹಿತಿಗಳು ಗೊತ್ತಿರದಿದ್ದರೆ ಅಥವಾ ಅವರಿಗೆ ಹಿಂಜರಿಕೆಯಾದರೆ ಕುಟುಂಬ ವೈದ್ಯರ ಅಥವಾ ಲೈಂಗಿಕ ತಜ್ಞರ ಸಹಾಯ ಪಡೆಯಬಹುದು. ಅಗತ್ಯವಿದ್ದಲ್ಲಿ ಪೋಷಕರೇ ವೈದ್ಯರಿಂದ ಮಾಹಿತಿ ಪಡೆದುಕೊಳ್ಳಬಹುದು. ಸಮಾನ ವಯಸ್ಸಿನ ಮಕ್ಕಳನ್ನು ಸೇರಿಸಿ ತಜ್ಞರಿಂದ ಶಿಕ್ಷಣ ಕೊಡಿಸಬಹುದು.

ಇವೆಲ್ಲವನ್ನೂ ಮಾಡುವುದಕ್ಕೆ ಪೋಷಕರಿಗೆ ಮಾನಸಿಕ ಸಿದ್ಧತೆ ಬೇಕಾಗುತ್ತದೆ ಎನ್ನುವುದು ನಿಜ. ಒಮ್ಮೆ ಪ್ರಯತ್ನವನ್ನು ಪ್ರಾರಂಭಿಸಿದರೆ ಇದು ಎಲ್ಲರೂ ಅಂದುಕೊಳ್ಳುವಷ್ಟು ಕಷ್ಟವಂತೂ ಖಂಡಿತಾ ಅಲ್ಲ ಎನ್ನುವುದರ ಅರಿವಾಗುತ್ತದೆ. ಅಂತರ್ಜಾಲ ಮತ್ತು ಸುತ್ತಲಿನ ಸಮಾಜದಿಂದ ತಪ್ಪುಮಾಹಿತಿಗಳೇ ಸಿಗುತ್ತಿರುವಾಗ ಭವಿಷ್ಯದ ದೃಷ್ಟಿಯಿಂದ ಪೋಷಕರು ಕ್ರಿಯಾಶೀಲರಾಗದಿದ್ದರೆ ಮಕ್ಕಳಿಗೆ ಸಹಾಯ ಮಾಡುವವರು ಯಾರಿದ್ದಾರೆ?



ಏನಾದ್ರೂ ಕೇಳ್ಬಹುದು.. !ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಚಳಿಗೆ ಬೆಚ್ಚನೆಯ ಖಾದ್ಯ ಸರ್ಸೋಂ ಕಾ ಸಾಗ್

ನಳಪಾಕ

ದೀಪಾಶ್ರೀ ಕೂಡ್ಲಿಗಿ

ಚಳಿಗಾಲಕ್ಕೆ ಹೇಳಿ ಮಾಡಿಸಿದ ಖಾದ್ಯಗಳ ಪೈಕಿ ಸರ್ಸೋಂ ಕಾ ಸಾಗ್ ಕೂಡ ಒಂದು. ಇದೇನಿದು ಚೀನಾ ರೆಸಿಪಿ ಅಂದುಕೊಂಡಿರಾ? ಹಾಗೆ ಅಂದುಕೊಂಡರೆ ನಿಮ್ಮ ಊಹೆ ತಪ್ಪು. ಸಾಸಿವೆ ಎಲೆಗಳಿಂದ ಮಾಡಿದ ಖಾದ್ಯವನ್ನು ಸರ್ಸೋಂ ಕಾ ಸಾಗ್ ಎನ್ನಲಾಗುತ್ತದೆ. ಸಾಸಿವೆ ಎಲೆಗಳ ಸೇವನೆ ಆರೋಗ್ಯಕ್ಕೆ ಹಲವು ಪ್ರಯೋಜನ ತಂದುಕೊಡುತ್ತದೆ. ಪೋಷಕಾಂಶ ಹಾಗೂ ಖನಿಜಗಳ ಆಗರವಾದ ಈ ಎಲೆಗಳನ್ನು ಹುರಿದಾದರೂ, ಹಬೆಯಲ್ಲಿ ಬೇಯಿಸಿಯಾದರೂ ಖಾದ್ಯ ತಯಾರಿಸಬಹುದು.

ಎಲೆಯಿಂದಾಗುವ ಪ್ರಯೋಜನ: ಸಾಸಿವೆ ಎಲೆಯಲ್ಲಿ ಕಡಿಮೆ ಕ್ಯಾಲರಿ ಇರುವ ಕಾರಣ ತೂಕ ನಿಯಂತ್ರಣಕ್ಕೆ ಹೆಚ್ಚು ಸಹಕಾರಿ. ನಾರಿನಂಶ ಹೊಂದಿದ್ದು, ವಿಟಮಿನ್ ಕೆ, ಎ, ಸಿ, ಈ ಆ್ಯಂಟಿ ಆಕ್ಸಿಡೆಂಟ್ ಹಾಗೂ ಪೋಲಿಕ್ ಇದ್ದು, ಆರೋಗ್ಯಕ್ಕೆ ಒಳ್ಳೆಯದು. ಕ್ಯಾನ್ಸರ್‌ಕಾರಕ ಫ್ರೀರಾಡಿಕಲ್ ಕಣಗಳ ವಿರುದ್ಧ ಹೋರಾಡಲು ಇದು ಸಹಕಾರಿ. ನಿಯಮಿತ ಸೇವನೆಯಿಂದ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ ಎನ್ನುತ್ತಾರೆ ತಜ್ಞರು.

ನೆನಪಿರಲಿ: ರಕ್ತ ಹೆಪ್ಪುಗಟ್ಟುವುದನ್ನು ತಡೆಯುವ ಔಷಧಿ ಸೇವಿಸುತ್ತಿರುವವರು, ಕಿಡ್ನಿ ಸ್ಟೋನ್(ಮೂತ್ರಪಿಂಡದ ಕಲ್ಲುಗಳು) ಸಮಸ್ಯೆ ಇರುವವರು ಇದನ್ನು ಸೇವಿಸಬಾರದು.

ಸಾಸಿವೆ ಎಣ್ಣೆಯಂತೆಯೇ ಸಾಸಿವೆ ಎಲೆಗಳನ್ನು ತರಕಾರಿ ರೀತಿಯಲ್ಲಿ ಬಳಸಬಹುದು. ಸಾಸಿವೆಯ ಹಸಿರೆಲೆಗಳನ್ನು ಖಾದ್ಯಗಳ ಬದಲಾಗಿ ಹಸಿಯಾಗಿ ತಿನ್ನುವುದರಿಂದ ಅದರಲ್ಲಿರುವ ಪ್ರೊಟೀನ್,



ಕಾರ್ಬೋಹೈಡ್ರೇಟ್, ಫೈಬರ್, ಕ್ಯಾಲ್ಸಿಯಂ, ಕಬ್ಬಿಣ ಪೊಟ್ಯಾಷಿಯಂ, ಸೋಡಿಯಂ, ವಿಟಮಿನ್, ತಾಮ್ರ, ಸತು, ಸೆಲೆನಿಯಮ್, ಮಿನರಲ್, ಕೆರೊಟಿನ್‌ಗಳು ದೇಹಾರೋಗ್ಯವನ್ನು ರಕ್ಷಿಸುತ್ತವೆ.

ಹಸಿರೆಲೆಗಳನ್ನು ಬೇಳೆಯೊಡನೆ ಬೇಯಿಸಿ ತೊವ್ವೆ ರೂಪದಲ್ಲಿ, ಹಸಿಯಾಗಿ, ಸ್ಮೂತಿ, ಪಾಸ್ತ, ಜ್ಯೂಸ್, ಸಲಾಡ್, ಉಪ್ಪಿನಕಾಯಿ, ಸೂಪ್, ಚಟ್ನಿ, ಗೊಜ್ಜು .. ಹೀಗೆ ಹಲವು ರೂಪದಲ್ಲಿ ಸೇವಿಸ ಬಹುದು. ಇದರಿಂದ ಮಾಡಿದ ಕೆಲವು ರೆಸಿಪಿಗಳು ಇಲ್ಲಿವೆ.

ಸಾಸಿವೆ ಎಲೆಯ ಜ್ಯೂಸ್

ಬೇಕಾಗುವ ಸಾಮಗ್ರಿಗಳು: ಅರ್ಧಕಪ್ ಸಾಸಿವೆ ಎಲೆಗಳು, ಒಂದು ಸೌತೆಕಾಯಿ, ಒಂದು ಸೇಬು, ಸಕ್ಕರೆ ರುಚಿಗೆ ತಕ್ಕಷ್ಟು, ನಿಂಬೆ ರಸ , ಶುಂಠಿ ತುಂಡು

ಮಾಡುವ ವಿಧಾನ: ಸಾಸಿವೆ ಎಲೆ, ಸೇಬು, ಸೌತೆಕಾಯಿ, ನಿಂಬೆ ರಸ ಶುಂಠಿ, ಸಕ್ಕರೆ ಎಲ್ಲಾ ಪದಾರ್ಥಗಳನ್ನು ಐಸ್ ಕ್ಯುಬ್, ನೀರು ಸೇರಿಸಿ ನುಣ್ಣಗೆ ರುಬ್ಬಿಕೊಂಡು ಒಂದು ಲೋಟಕ್ಕೆ ವರ್ಗಾಯಿಸಿ ತಣ್ಣನೆಯ ಸಾಸಿವೆ ಎಲೆಯ ಜ್ಯೂಸ್ ಕುಡಿಯಿರಿ.



ಸಾಸಿವೆ, ಸಾಸಿವೆ ಎಣ್ಣೆ ಹಾಗೂ ಎಲೆಗಳು ಆರೋಗ್ಯಕ್ಕೆ ಸಹಕಾರಿ. ಈ ಎಲೆಗಳನ್ನು ನಿಯಮಿತ ಸೇವನೆ ವಾತ, ಪಿತ್ತ ಹಾಗೂ ಕಫಕ್ಕೆ ಉತ್ತಮ ಮದ್ದು. ಹಸಿಯಾಗಿ ತಿನ್ನಲು ಇಷ್ಟ ಪಡದವರು ನಿತ್ಯ ಆಹಾರದಲ್ಲಿ ಇರುವಂತೆ ನೋಡಿಕೊಳ್ಳಬಹುದು.

ಡಾ. ರವಿಕುಮಾರ್, ಆಯುರ್ವೇದತಜ್ಞರು, ಕೂಡ್ಲಿಗಿ

ಸಾಸಿವೆ ಎಲೆಯ ಸಲಾಡ್

ಬೇಕಾಗುವ ಸಾಮಗ್ರಿಗಳು: ಒಂದು ಬಟ್ಟಲು ಸಾಸಿವೆ ಎಲೆ, ಮೂರರಿಂದ ನಾಲ್ಕು ಚಮಚ ನಿಂಬೆ ರಸ, 3 ಚಮಚ ಆಲಿವ್ ಎಣ್ಣೆ, ಒಂದು ಚಮಚ ಸೋಯಾ ಸಾಸ್ , ಹೆಚ್ಚಿದ ಬೆಳ್ಳುಳ್ಳಿ ಎರಡು, ರುಚಿಗೆ ತಕ್ಕಷ್ಟು ಉಪ್ಪು.

ಮಾಡುವ ವಿಧಾನ: ಬಟ್ಟಲಿನಲ್ಲಿ ತೊಳೆದ ಸಾಸಿವೆ ಸೊಪ್ಪು, ನಿಂಬೆ ರಸ, ಸೋಯಾ ಸಾಸ್, ಆಲಿವ್ ಎಣ್ಣೆ ಮತ್ತು ಬೆಳ್ಳುಳ್ಳಿಯನ್ನು ಒಟ್ಟಿಗೆ ಮಿಕ್ಸ್ ಮಾಡಿ ರುಚಿಗೆ ತಕ್ಕಷ್ಟು ಉಪ್ಪು ಬೆರೆಸಿ ಮತ್ತೊಮ್ಮೆ ಕಲಕಿ ಸಾಸಿವೆ ಸಲಾಡ್ ಸವಿಯಿರಿ.

ಉಲ್ಲನ್ ಫ್ಯೂಷನ್‌ವೇರ್

ಫ್ಯಾಷನ್

ರೂಪಾ ಕೆ.ಎಂ.

ಚಳಿಗಾಲಕ್ಕೆ ಉಲ್ಲನ್ ಬಟ್ಟೆಗಳು ಬೆಚ್ಚಗಿನ ಭಾವ ನೀಡುತ್ತವೆ. ಚಳಿಯಿಂದ ರಕ್ಷಣೆ ಪಡೆಯಲು, ಚರ್ಮ ಬಿರುಕು ಬಿಡದಂತೆ ನೋಡಿಕೊಳ್ಳಲು ಉಲ್ಲನ್ ಸಹಕಾರಿ. ಮೊದಲೆಲ್ಲ ಉಲ್ಲನ್ ಎಂದರೆ ಸ್ವೆಟರ್ ಎನ್ನುವಂತಾಗಿತ್ತು. ಆದರೆ, ಈಗ ಉಲ್ಲನ್ ದಾರ ಬಳಸಿ ಬಗೆ ಬಗೆಯ ಟ್ರೆಂಡಿಂಗ್ ದಿರಿಸುಗಳನ್ನು ತಯಾರಿಸಲಾಗುತ್ತದೆ. ಅದರಲ್ಲಿ ಮಾರ್ಡ್ರನ್ ಹಾಗೂ ಫ್ಯೂಷನ್ ವೇರ್‌ಗಳಿಗೆ ಎಲ್ಲಿಲ್ಲದ ಬೇಡಿಕೆ ಇದೆ. ಹೀಗಾಗಿ ಸ್ವೆಟರ್ ಜಾಗವನ್ನು ಹಲವು ದಿರಿಸುಗಳು ಆಕ್ರಮಿಸಿಕೊಂಡಿವೆ. ಸ್ವೆಟರ್ ಹಾಗೂ ಜಾಕೆಟ್‌ನ ಸಂಯೋಜಿತ ರೂಪ ಶ್ಯಾಕೆಟ್ಸ್, ಸ್ವೆಟರ್ ಹಾಗೂ ಶರ್ಟ್‌ನ ಸಂಯೋಜಿತ ರೂಪ ಸ್ವೆಟ್ ಶರ್ಟ್ ಹೀಗೆ ಹಲವು ಫ್ಯೂಷನ್‌ಗಳು ಚಳಿಗಾಲಕ್ಕೆ 'ಕ್ಯಾಷ್ಯುಯೆಲ್ ವೇರ್' ಎನಿಸಿವೆ.

ಪಫರ್ ಕೋಟ್: ಚಳಿಗಾಲಕ್ಕೆ ಅಗತ್ಯವಿರುವ ಔಟ್‌ಫಿಟ್‌ಗಳಲ್ಲಿ ಇದು ಒಂದು. ಜೀನ್ಸ್ ಮೇಲೆ ಸುಲಭವಾಗಿ ತೊಡಬಲ್ಲ, ಸರಳ ಎನಿಸಿದರೂ ರಿಚ್ ಲುಕ್ ನೀಡುವ ಪಫರ್ ಕೋಟ್‌ಗಳು ಬಿಳಿ, ಕಂದು ಹಾಗೂ ಕಪ್ಪು ಬಣ್ಣಗಳು ಟ್ರೆಂಡ್‌ನಲ್ಲಿವೆ. ಜೀನ್ಸ್ ಮತ್ತು ಟೀ ಶರ್ಟ್ ಮೇಲೆ ಉದ್ದನೆಯ ಪಫರ್ ಕೋಟ್‌ಗಳು ಧರಿಸಿದರೆ ಚೆನ್ನಾಗಿ ಕಾಣುತ್ತದೆ.

ಶ್ಯಾಕೆಟ್ಸ್: ಶರ್ಟ್ ಮತ್ತು ಜಾಕೆಟ್‌ನ ಸಂಯೋಜಿತ ರೂಪವೇ ಶ್ಯಾಕೆಟ್ಸ್. ಶರ್ಟ್ ಮತ್ತು ಜಾಕೆಟ್ ಎರಡನ್ನೂ ಒಟ್ಟಿಗೆ ಹಾಕಿಕೊಂಡ ಫೀಲ್ ಬರುವಂಥ ಶ್ಯಾಕೆಟ್ಸ್‌ಗಳು ಚಳಿಗಾಲದ ವಾರ್ಡ್‌ರೋಬ್‌ನಲ್ಲಿ ಇರಬೇಕಾದ ದಿರಿಸು. ಕಂದು, ಕಪ್ಪು, ಬಿಳಿ ಹೀಗೆ ವೈರುಧ್ಯ ಬಣ್ಣದ ಕಾಂಬಿನೇಷನ್‌ಗಳಲ್ಲಿ ಬರುವ ಈ ಉಲ್ಲನ್ ಶ್ಯಾಕೆಟ್ಸ್‌ಗಳು ಆಫೀಸಿಗೂ ಹೇಳಿ ಮಾಡಿಸಿದ ಉಡುಗೆ. ಚೌಕುಳಿ ವಿನ್ಯಾಸ ಇರುವ ಶ್ಯಾಕೆಟ್ಸ್‌ಗಳು, ದೊಗಲೆ ಶ್ಯಾಕೆಟ್ಸ್‌ಗಳನ್ನೇ ಹೆಚ್ಚು ಟ್ರೆಂಡಿಂಗ್‌ನಲ್ಲಿವೆ.

ಕೃತಕ ಉಣ್ಣೆ ಕೋಟ್: ಇದು ನೋಡಲು ಉಣ್ಣೆಯಿಂದ ಮಾಡಿದಂತೆ ಕಾಣಿಸಿದರೂ ಕೃತಕ ಉಣ್ಣೆ ಬಳಸಿ ಮಾಡಿದ ದಿರಿಸುಗಳು. ಇದನ್ನು ಹಾಕಿಕೊಂಡಾಗ ಸಾಮಾನ್ಯವಾಗಿ ಕೃತಕ ಉಣ್ಣೆಯಿಂದ ಮಾಡಿದ ಪರ್ಸ್‌ಗಳು, ಇತರೆ ಆ್ಯಕ್ಸೆಸರಿಗಳನ್ನು ಧರಿಸಿದರೆ ಮುದ್ದಾಗಿ ಕಾಣಬಹುದು.

ದೊಗಲೆ ಕೋಟ್: ಇದು ದೊಗಲೆ ದಿರಿಸಾದರೂ ನೋಡಲು ಆಕರ್ಷಕ ವಾಗಿ ಕಾಣುತ್ತದೆ. ಹಿಮಚ್ಛಾದಿತ ಪ್ರದೇಶಗಳಿಗೆ ಪ್ರವಾಸ ಹೋಗುವವರು ಸಾಮಾನ್ಯವಾಗಿ ಖರೀದಿಸುವ ಕೋಟ್‌ಗಳಿವು. ಮೈಗೆ ಫಿಟ್ ಆಗಿ ಕೂರುವ ದಿರಿಸಿಗಿಂತ ಬಹುತೇಕ ಚಳಿಗಾಲದ ದಿರಿಸುಗಳು ದೊಗಲೆಯಾಗಿಯೇ ಇರುತ್ತವೆ ಅನ್ನುವುದು ವಿಶೇಷ.

ಕುರ್ತಾ: ಗಾಢ ಹಾಗೂ ತಿಳಿ ಎರಡೂ ಬಗೆಯ ಬಣ್ಣಗಳಲ್ಲಿ ಲಭ್ಯವಿರುವ ಉಲ್ಲನ್ ದಾರ ಬಳಸಿ ಮಾಡಿದ ಕುರ್ತಾಗಳಿವು. ನಿತ್ಯ ಬಳಕೆಗೆ ಹೇಳಿ ಮಾಡಿಸಿದ ದಿರಿಸಾಗಿದ್ದು, ಇದನ್ನು ಧರಿಸಿದರೆ ಚಳಿಯಿಂದ ರಕ್ಷಣೆ ಪಡೆಯಲು ಮತ್ತೊಂದು ದಿರಿಸು ಹಾಕಿಕೊಳ್ಳುವ ಅಗತ್ಯವಿರುವುದಿಲ್ಲ. ಎಲ್ಲ ಬಣ್ಣದ ಜೀನ್ಸ್ ಪ್ಯಾಂಟ್ ಮೇಲೂ ಆರಾಮಾಗಿ ತೊಡಬಹುದಾದ ಕುರ್ತಾಗಳಿವು. ಸಣ್ಣ ಸಣ್ಣ ಕಸೂತಿ ಇರುವ ಉಲ್ಲನ್ ಕುರ್ತಾಗಳೂ ಸದ್ಯಕ್ಕೆ ಸಿಕ್ಕಾಪಟ್ಟೆ ಟ್ರೆಂಡ್‌ನಲ್ಲಿವೆ.

ಸ್ವೆಟ್ ಶರ್ಟ್/ಟಾಪ್ : ಉಲ್ಲನ್ ದಾರಗಳಿಂದ ಮಾಡಿದ ತುಂಬು ತೋಳಿನ ದಿರಿಸು ಇವು. ವೆಸ್ಟರ್ನ್ ಲುಕ್ ಇರುವ ಈ ಶರ್ಟ್‌ಗಳು ವಿದ್ಯಾರ್ಥಿಗಳಿಗೆ ಅಚ್ಚುಮೆಚ್ಚು. ಸ್ವೆಟರ್ ಹಾಗೂ ಶರ್ಟ್‌ರ ಸಂಯೋಜಿತವೇ ಸ್ವೆಟ್ ಶರ್ಟ್ ಹಾಗೂ ಟಾಪ್‌ಗಳು.

ಜೀನ್ಸ್ ಕೋಟ್: ಎಲ್ಲ ಬಗೆಯ ಟೀ ಶರ್ಟ್ ಹಾಗೂ ಕುರ್ತಾಗಳಿಗೆ ಜೀನ್ಸ್ ಬಟ್ಟೆಯ ಕೋಟ್‌ಗಳು ಒಪ್ಪುತ್ತವೆ. ಈ ಕೋಟ್ ಮೇಲೆ ಉಲ್ಲನ್ ದಾರಗಳಿಂದ ಮಾಡಿದ ಕತ್ತಿನಪಟ್ಟಿ ಅಥವಾ ಕಸೂತಿ ನೋಡಬಹುದು. ಚಳಿಯಿಂದ ರಕ್ಷಣೆ ಸಿಗುವುದಲ್ಲದೇ ಜೀನ್ಸ್ ಕೋಟ್ ಫ್ಯಾಷನೇಬಲ್ ಆಗಿಯೂ ಕಾಣುತ್ತದೆ. ಹೆಚ್ಚಾಗಿ ಗಾಢ ನೀಲಿ, ಅರ್ಧ ಬಿಳಿ– ಅರ್ಧ ನೀಲಿ, ತಿಳಿ ನೀಲಿ, ಹಸಿರು ಮಿಶ್ರಿತ ನೀಲಿ, ಕಪ್ಪು ನೀಲಿ ಹೀಗೆ ಬಗೆ ಬಗೆಯ ಬಣ್ಣಗಳಲ್ಲಿ ಜೀನ್ಸ್ ಕೋಟ್ ಲಭ್ಯವಿದೆ. ಹೆಚ್ಚಾಗಿ ತಿಳಿ ಬಣ್ಣದ ಟೀ ಶರ್ಟ್ ಅಥವಾ ಕುರ್ತಾಗಳಿಗೆ ಜೀನ್ ಕೋಟ್ ಒಪ್ಪುತ್ತದೆ.



44.65 ಕಿ.ಮೀ ಉದ್ದದ ಮಾರ್ಗ | 31 ನಿಲ್ದಾಣಗಳ ಪೈಕಿ ಬಹು ಮಾದರಿ 10 ಇಂಟರ್‌ಚೇಂಜ್ ನಿಲ್ದಾಣ

ಮೆಟ್ರೊ 3ನೇ ಹಂತ: ಕೇಂದ್ರಕ್ಕೆ ಪ್ರಸ್ತಾವನೆ

ಪ್ರಜಾವಾಣಿ ವಾರ್ತೆ



ಮೆಟ್ರೊ ರೈಲು

ಬೆಂಗಳೂರು: ಮೂರನೇ ಹಂತದ ಮೆಟ್ರೊ ರೈಲು ಕಾಮಗಾರಿಗೆ ಅನುಮೋದನೆ ನೀಡಿರುವ ರಾಜ್ಯ ಸರ್ಕಾರ, ಕೇಂದ್ರದ ಒಪ್ಪಿಗೆ ಕೋರಿ ಪ್ರಸ್ತಾವನೆ ಸಲ್ಲಿಸಿದೆ. ಈ ಮಾರ್ಗದಲ್ಲಿ ಬಹು ಮಾದರಿಯ ನಿಲ್ದಾಣಗಳೂ ಸೇರಿ 10 ಇಂಟರ್‌ಚೇಂಜ್ ನಿಲುಗಡೆ ತಾಣಗಳು ನಿರ್ಮಾಣವಾಗಲಿವೆ.

ಅಂದಾಜು ₹16,328 ಕೋಟಿ ಮೊತ್ತದ ಯೋಜನೆಯ ಎರಡು ಕಾರಿಡಾರ್‌ಗಳಲ್ಲಿ ಒಟ್ಟು 44.65 ಕಿಲೋ ಮೀಟರ್‌ನಷ್ಟು ಮೆಟ್ರೊ ರೈಲು ಮಾರ್ಗ ನಿರ್ಮಿಸಲು ಉದ್ದೇಶಿಸಲಾಗಿದೆ. 31 ನಿಲ್ದಾಣಗಳು ನಿರ್ಮಾಣವಾಗಲಿದ್ದು, ಸರಾಸರಿ ಮೂರರಿಂದ ನಾಲ್ಕು ಕಿಲೋ ಮೀಟರ್ ವ್ಯಾಪ್ತಿಗೊಂದು ಇಂಟರ್ ಚೇಂಜ್ ನಿಲ್ದಾಣ ನಿರ್ಮಾಣವಾಗಲಿದೆ.

ಕಾಮಾಕ್ಯ ವೃತ್ತದಲ್ಲಿ ಈಗಾಗಲೇ ಬಿಎಂಟಿಸಿ ಬಸ್ ಟರ್ಮಿನಲ್ ಇದೆ. ಇದಕ್ಕೆ ಹೊಂದಿಕೊಂಡಂತೆ ಮೆಟ್ರೊ ನಿಲ್ದಾಣ ನಿರ್ಮಾಣ ಮಾಡಲು ಬಿಎಂಆರ್‌ಸಿಎಲ್ ಸಿದ್ಧಪಡಿಸಿರುವ ಸಮಗ್ರ ಯೋಜನಾ ವರದಿಯಲ್ಲಿ(ಡಿಪಿಆರ್) ಉದ್ದೇಶಿಸಿದೆ. ಬಿಇಎಲ್ ವೃತ್ತದ ಬಳಿ ಈಗಾಗಲೇ ಲೊಟ್ಟೆಗೊಲ್ಲಹಳ್ಳಿ ರೈಲು ನಿಲ್ದಾಣವಿದ್ದು, ಇಲ್ಲಿ ಉಪನಗರ ರೈಲು ಕಾರಿಡಾರ್ ಹಾದು ಹೋಗಲಿದೆ. ಇದರ ಜತೆಗೆ ಬಿಇಎಲ್ ವೃತ್ತದಲ್ಲಿ 3ನೇ ಹಂತದ ಮೆಟ್ರೊ ರೈಲು ಯೋಜನೆಯಲ್ಲಿ ಮೆಟ್ರೊ ರೈಲು ನಿಲ್ದಾಣ ನಿರ್ಮಾಣಕ್ಕೂ ಪ್ರಸ್ತಾಪಿಸಲಾಗಿದೆ.

ಹೆಬ್ಬಾಳ ರೈಲು ನಿಲ್ದಾಣದ ಮೂಲಕವೇ ಉಪನಗರ ರೈಲು ಕಾರಿಡಾರ್ ಹಾದು ಹೋಗಲಿದೆ. ಇದಕ್ಕೆ ಹೊಂದಿಕೊಂಡಂತೆ ಮೆಟ್ರೊ ರೈಲು ನಿಲ್ದಾಣ ನಿರ್ಮಿಸಲು ಪ್ರಸ್ತಾಪಿಸಲಾಗಿದೆ. ಉಳಿದಂತೆ ಎಲ್ಲಾ ಇಂಟರ್‌ಚೇಂಜ್ ನಿಲ್ದಾಣಗಳಲ್ಲಿ ಮೆಟ್ರೊ ರೈಲು ಬದಲಾವಣೆಗೆ ಅವಕಾಶವಾಗಲಿದೆ. ಇದರೊಂದಿಗೆ ಅತಿ ಹೆಚ್ಚು ಮಾರ್ಗ ಬದಲಾವಣೆಗೆ ಅವಕಾಶ ಇರುವ ಕಾರಿಡಾರ್ ಇದಾಗಲಿದೆ. ಕ್ರಮವಾಗಿ 42 ಕಿ.ಮೀ ಮತ್ತು 72 ಕಿ.ಮೀ ಜಾಲದ ಮೊದಲೆರಡು ಹಂತಗಳು ಸೇರಿ ಕೇವಲ ಮೂರು ಇಂಟರ್‌ಚೇಂಜ್‌ಗಳಿವೆ.

1ನೇ ಕಾರಿಡಾರ್ ಜೆ.ಪಿ. ನಗರ 4ನೇ ಹಂತದಿಂದ ಆರಂಭವಾಗಿ ಪಶ್ಚಿಮ ಹೊರ ವರ್ತುಲ ರಸ್ತೆ ಮಾರ್ಗದಲ್ಲಿ ಹಾದು ಕೆಂಪಾಪುರ ತಲುಪಲಿದ್ದು, ಸುಮಾರು 32.15 ಕಿ.ಮೀ ಮಾರ್ಗ ಇದಾಗಲಿದೆ. 2ನೇ ಕಾರಿಡಾರ್ ಹೊಸಹಳ್ಳಿಯಿಂದ ಮಾಗಡಿ ರಸ್ತೆ ಮೂಲಕ ಕಡಬಗೆರೆ ತನಕ 12.5 ಕಿ.ಮೀ ಮಾರ್ಗ ಇದಾಗಿದೆ. ಎರಡೂ ಎತ್ತರಿಸಿದ ಮಾರ್ಗಗಳಾಗಿದ್ದು, ಇವುಗಳ ನಿರ್ವಹಣೆಗೆ ಸುಂಕದಕಟ್ಟೆಯಲ್ಲಿ ಡಿಪೊ ತಲೆ ಎತ್ತಲಿದೆ. ಒಟ್ಟಾರೆ ಈ ಯೋಜನೆಗೆ 110 ಎಕರೆ ಭೂಮಿ ಸ್ವಾಧೀನವಾಗಲಿದ್ದು, ಇದರಲ್ಲಿ ಶೇ 15ರಷ್ಟು ಖಾಸಗಿ ಮಾಲಿಕತ್ವದ ಜಾಗವೂ ಸೇರಿದೆ.

ಈ ಯೋಜನೆಗೆ ಶೇ 20ರಷ್ಟು ಆರ್ಥಿಕ ನೆರವನ್ನು ಕೇಂದ್ರ ಸರ್ಕಾರ ನೀಡಲಿದ್ದು, ಉಳಿದ ಮೊತ್ತವನ್ನು ವಿವಿಧ ಹಣಕಾಸು ಸಂಸ್ಥೆ, ಮಹಡಿ ವಿಸ್ತೀರ್ಣ ಅನುಪಾತ (ಎಫ್‌ಎಆರ್) ಹೆಚ್ಚಳ, ಜಾಹೀರಾತು, ಆಸ್ತಿ ಅಭಿವೃದ್ಧಿ ಸೇರಿ ವಿವಿಧ ಕ್ರಮಗಳ ಮೂಲಕ ಕೂಡಿಸಲು ಉದ್ದೇಶಿಸಲಾಗಿದೆ. ನಗರ ಸಾರಿಗೆ ನಿಧಿ (ಎಸ್‌ಯುಟಿಎಫ್), ನಗರ ಮೂಲಸೌಕರ್ಯ ಅಭಿವೃದ್ಧಿ ನಿಧಿ (ಯುಐಡಿಎಫ್), ಮೆಗಾ ಸಿಟಿ ರಿವಾಲ್ವಿಂಗ್ ನಿಧಿ ಮೂಲಕವೂ ಅನುದಾನ ಪಡೆದುಕೊಳ್ಳಲು ಉದ್ದೇಶಿಸಲಾಗಿದೆ.

ಮೆಟ್ರೊ ಯೋಜನೆಗಳು ಈಗ ಕೇಂದ್ರ ಸರ್ಕಾರದ 'ಗತಿಶಕ್ತಿ' ಯೋಜನೆಯಡಿ ಸೇರಿಕೊಂಡಿವೆ. ಆದ್ದರಿಂದ ಮೂರನೇ ಹಂತದ ಮೆಟ್ರೊ ರೈಲು ಯೋಜನೆಗೆ ಈ ಯೋಜನೆಯಡಿಯೂ ಹೆಚ್ಚಿನ ಅನುದಾನ ನೀಡಿದರೆ ಸಾಲದ ಹೊರೆ ತಗ್ಗಲಿದೆ ಎಂದು ಬಿಎಂಆರ್‌ಸಿಎಲ್ ಮನವಿ ಮಾಡಿದೆ.

ಉದ್ದೇಶಿತ ಮಾರ್ಗದಲ್ಲಿ ಬರುವ ರಸ್ತೆ ಮೇಲ್ಸೇತುವೆ ಮತ್ತು ಇತರ ರಸ್ತೆಗಳ ಅಭಿವೃದ್ಧಿಗೂ ₹507.29 ಕೋಟಿ ಮೊತ್ತದ ಯೋಜನೆ ರೂಪಿಸಲಾಗಿದೆ. ಈ ಮೊತ್ತವನ್ನು ಬಿಎಂಆರ್‌ಸಿಎಲ್ ಮತ್ತು ಬಿಬಿಎಂಪಿ ಕ್ರಮವಾಗಿ 75:25ರ ಅನುಪಾತದಲ್ಲಿ ಭರಿಸಲಿವೆ. ಕನಕಪುರ ರಸ್ತೆ ಜಂಕ್ಷನ್ ಬಳಿ 1.366 ಕಿ.ಮೀ ಹಾಗೂ ಕಾಮಾಕ್ಯ- ಇಟ್ಟಮಡು- ಹೊಸಕೆರೆಹಳ್ಳಿ ಜಂಕ್ಷನ್ ಬಳಿ 1.563 ಕಿ.ಮೀ ಉದ್ದದ ಎರಡು ಮೇಲ್ಸೇತುವೆಗಳನ್ನು ಮೆಟ್ರೊ ರೈಲು ನಿಲ್ದಾಣಗಳ ಜತೆ ಇಂಟಿಗ್ರೇಟ್ ಮಾಡಲು ಉದ್ದೇಶಿಸಲಾಗಿದೆ.

ಎಲ್ಲೆಲ್ಲಿ ಮೆಟ್ರೊ ನಿಲ್ದಾಣ?

1ನೇ ಕಾರಿಡಾರ್‌ನಲ್ಲಿ 22 ನಿಲ್ದಾಣಗಳನ್ನು ನಿರ್ಮಿಸಲು ಬಿಎಂಆರ್‌ಸಿಎಲ್ ಡಿಪಿಆರ್‌ನಲ್ಲಿ ಪ್ರಸ್ತಾಪಿಸಿದೆ. ಜೆ.ಪಿ.ನಗರ 4ನೇ ಹಂತ, ಜೆ.ಪಿ.ನಗರ 5ನೇ ಹಂತ, ಜೆ.ಪಿ.ನಗರ, ಕದಿರೇನಹಳ್ಳಿ, ಕಾಮಾಕ್ಯ ಜಂಕ್ಷನ್, ಹೊಸಕೆರೆಹಳ್ಳಿ, ದ್ವಾರಕನಗರ, ಮೈಸೂರು ರಸ್ತೆ, ನಾಗರಬಾವಿ ವೃತ್ತ, ವಿನಾಯಕ ಲೇಔಟ್, ಪಾಪಿರೆಡ್ಡಿಪಾಳ್ಯ, ನಾಗರಬಾವಿ ಬಿಡಿಎ ಕಾಂಪ್ಲೆಕ್ಸ್, ಸುಮನಹಳ್ಳಿ ಕ್ರಾಸ್, ಚೌಡೇಶ್ವರಿನಗರ, ಸ್ವಾತಂತ್ರ್ಯ ಯೋಧರ ಕಾಲೊನಿ, ಕಂಠೀರವನಗರ, ಪೀಣ್ಯ, ಮುತ್ಯಾಲನಗರ, ಬಿಇಎಲ್ ಸರ್ಕಲ್, ನಾಗಶೆಟ್ಟಿಹಳ್ಳಿ, ಹೆಬ್ಬಾಳ ರೈಲು ನಿಲ್ದಾಣ, ಕೆಂಪಾಪುರದಲ್ಲಿ ನಿಲ್ದಾಣಗಳನ್ನು ನಿರ್ಮಿಸಲು ಉದ್ದೇಶಿಸಿದೆ.

ಕಾರಿಡಾರ್–2ರಲ್ಲಿ 9 ನಿಲ್ದಾಣಗಳನ್ನು ಪ್ರಸ್ತಾಪಿಸಲಾಗಿದ್ದು, ಹೊಸಹಳ್ಳಿ, ಕೆ.ಎಚ್.ಬಿ. ಕಾಲೊನಿ, ಕಾಮಕ್ಷಿಪಾಳ್ಯ, ಸುಮನಹಳ್ಳಿ ಕ್ರಾಸ್, ಸುಂಕದಕಟ್ಟೆ, ಹೇರೋಹಳ್ಳಿ, ಬ್ಯಾಡರಹಳ್ಳಿ, ಕಾಮತ್ ಲೇಔಟ್, ಕಡಬಗೆರೆಯಲ್ಲಿ ನಿಲ್ದಾಣಗಳನ್ನು ನಿರ್ಮಿಸುವ ಯೋಜನೆ ಇದೆ.

ಪೈಕಿ ಜೆ.ಪಿ.ನಗರ 4ನೇ ಹಂತ, ಜೆ.ಪಿ.ನಗರ, ಕಾಮಕ್ಯ ಜಂಕ್ಷನ್, ಮೈಸೂರು ರಸ್ತೆ, ಸುಮನಹಳ್ಳಿ ಕ್ರಾಸ್, ಪೀಣ್ಯ, ಬಿಇಎಲ್ ಸರ್ಕಲ್, ಹೆಬ್ಬಾಳ ರೈಲು ನಿಲ್ದಾಣ, ಕೆಂಪಾಪುರ, ಹೊಸಹಳ್ಳಿ ನಿಲ್ದಾಣಗಳು ಮಾರ್ಗ ಬದಲಾಯಿಸುವ ನಿಲ್ದಾಣಗಳಾಗಲಿವೆ ಎಂದು ಡಿಪಿಆರ್‌ನಲ್ಲಿ ವಿವರಿಸಿದೆ.

ಒಳಾಂಗಣ ಜಾಹೀರಾತು ಅಳವಡಿಕೆಗೆ ಸಮ್ಮತಿ

ಮೆಟ್ರೊ ನಿಲ್ದಾಣಗಳ ಒಳಾಂಗಣದಲ್ಲಿ ಜಾಹಿರಾತು ಫಲಕಗಳ ಅಳವಡಿಕೆಗೆ ಸರ್ಕಾರ ಅನುಮತಿ ನೀಡಿದೆ.

ಹೊರಾಂಗಣ ಜಾಹೀರಾತು ಫಲಕ ಅಳವಡಿಕೆಗೆ ಬಿಬಿಎಂಪಿ ನಿಷೇಧ ಹೇರಿದ ಬಳಿಕ ಮೆಟ್ರೊ ರೈಲು ಮಾರ್ಗದ ಕಂಬಗಳಿಗೆ ಅಳವಡಿಸಿದ್ದ ಜಾಹಿರಾತು ಫಲಕಗಳನ್ನು ತೆರವುಗೊಳಿಸಲಾಗಿತ್ತು. ಇದರಿಂದ ನಿಗಮಕ್ಕೆ ವರಮಾನದಲ್ಲಿ ಖೋತಾ ಆಗಿತ್ತು.

ಮೆಟ್ರೊ ರೈಲು ನಿಲ್ದಾಣಗಳ ಒಳಾಂಗಣ ಮತ್ತು ರೈಲುಗಳಲ್ಲಿ ಜಾಹೀರಾತು ಫಲಕ ಅಳವಡಿಕೆಗೆ ನಿಷೇಧ ಇಲ್ಲದಿರುವುದರಿಂದ ಅನುಮತಿ ನೀಡುವಂತೆ ಸರ್ಕಾರಕ್ಕೆ ಇತ್ತೀಚೆಗೆ ಬಿಎಂಆರ್‌ಸಿಎಲ್ ಪ್ರಸ್ತಾವನೆ ಸಲ್ಲಿಸಿತ್ತು.

ನಿರೀಕ್ಷಿತ ಪ್ರಯಾಣಿಕರ ಸಂಖ್ಯೆ (ದಿನಕ್ಕೆ- ಲಕ್ಷಗಳಲ್ಲಿ)

ವರ್ಷ	2028	2031	2041	2051
ಕಾರಿಡಾರ್–1	4.63	4.89	5.91	6.66
ಕಾರಿಡಾರ್–2	1.72	1.81	2.18	2.46
ಒಟ್ಟು	6.35	6.70	8.10	9.12

ಹಣಕಾಸಿನ ಮೂಲ ಮತ್ತು ಹಂಚಿಕೆ

- ಮೂರನೇ ಹಂತದ ಎರಡು ಕಾರಿಡಾರ್‌ಗೆ ಒಟ್ಟು ಮೊತ್ತ ₹16,328 ಕೋಟಿ
- ಕೇಂದ್ರ ಸರ್ಕಾರದ ಪಾಲು ₹2526 ಕೋಟಿ(ಶೇ 20)
- ರಾಜ್ಯ ಸರ್ಕಾರದ ಪಾಲು ₹2526 ಕೋಟಿ(ಶೇ 20)
- ಇತರ ಮೂಲಗಳಿಂದ ₹3699 ಕೋಟಿ

'ಸುಲಲಿತ ಜೀವನದ ವಾತಾವರಣ ಸೃಷ್ಟಿಯಾಗಲಿ'

ಪ್ರಜಾವಾಣಿ ವಾರ್ತೆ



ಮೋಹನ್ ದಾಸ್ ಪೈ

ಬೆಂಗಳೂರು: 'ಡಿಜಿಟಲ್ ಲೋಕ ವೇಗವಾಗಿ ಬೆಳೆಯುತ್ತಿದೆ. ಆದರೆ, ಇತರ ಹಲವು ವಲಯಗಳು ಹಿನ್ನಡೆ ಸಾಧಿಸುತ್ತಿವೆ. ಹೀಗಾಗಿ, ಪ್ರತಿಯೊಬ್ಬರೂ ಸುಲಲಿತವಾಗಿ ಜೀವನ ಸಾಗಿಸುವ ವಾತಾವರಣ ಸೃಷ್ಟಿಸಬೇಕು' ಎಂದು ಉದ್ಯಮಿ ಟಿ.ವಿ. ಮೋಹನ್ ದಾಸ್ ಪೈ ಪ್ರತಿಪಾದಿಸಿದರು.

'ಬೆಂಗಳೂರು ಟೆಕ್ ಸಮಿಟ್'ನಲ್ಲಿ ಶುಕ್ರವಾರ ಉಪನ್ಯಾಸ ನೀಡಿದ ಅವರು, ಬೆಂಗಳೂರಿನ ಅಭಿವೃದ್ಧಿ, ಸಾಫ್ಟ್‌ವೇರ್ ಉದ್ಯಮ ಮತ್ತು ಸರ್ಕಾರ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿಶ್ಲೇಷಿಸಿದರು.

'ಜಾಗತಿಕವಾಗಿ ಪರಿಣಾಮ ಬೀರಿರುವ ಹವಾಮಾನ ಬದಲಾವಣೆ, ಹಣಕಾಸು ವಿಷಯಗಳು ರಾಜಕೀಯವಾಗಿಯೂ ಪ್ರಾಮುಖ್ಯ ಪಡೆಯುತ್ತಿವೆ. ಪ್ರತಿ ವರ್ಷ ಭಾರತದಲ್ಲಿ ಕಂಪ್ಯೂಟರ್ ವಿಷಯದಲ್ಲಿ ಕೇವಲ 500 ಪಿಎಚ್‌ಡಿ ಪದವಿ ಪಡೆಯಲಾಗುತ್ತಿದೆ. ಈ ಸಂಖ್ಯೆ 10 ಸಾವಿರಕ್ಕೆ ತಲುಪಬೇಕು. ಸಂಶೋಧನೆ ಮತ್ತು ಅಭಿವೃದ್ಧಿ ವಲಯಕ್ಕೆ ಆದ್ಯತೆ ದೊರೆಯಬೇಕು. ಇದಕ್ಕಾಗಿ ಹಲವು ಮಹತ್ವದ ಸಂಸ್ಥೆಗಳನ್ನು ಸ್ಥಾಪಿಸುವುದು ಅಗತ್ಯವಿದೆ' ಎಂದು ವಿವರಿಸಿದರು.

ತಂತ್ರಜ್ಞಾನದ ಬೆಳವಣಿಗೆ ಕುರಿತು ವಿವರಿಸಿದ ಅವರು, 'ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಈಗ ಮುಂಚೂಣಿಯಲ್ಲಿದೆ ಮತ್ತು ಆಧುನಿಕ ತಂತ್ರಜ್ಞಾನದ ಆವಿಷ್ಕಾರವಾಗಿರುವ ಮೆಟಾವರ್ಸ್ ಸಹ ವೇಗವಾಗಿ ಬೆಳೆಯುತ್ತಿದೆ. ಇನ್ನು 10 ವರ್ಷಗಳಲ್ಲಿ ಪ್ರತಿಯೊಂದು ಕಾರ್ಯವನ್ನು ರೋಬೋಗಳೇ ನಡೆಸಲಿವೆ' ಎಂದು ಹೇಳಿದರು.

'ಜಗತ್ತಿನ ಜನಸಂಖ್ಯೆ ಎಂಟು ನೂರು ಕೋಟಿಗೆ ತಲುಪಿದೆ. ಆದರೆ, ಭವಿಷ್ಯದಲ್ಲಿ ಯುವಕರಿಗಿಂತ ವಯಸ್ಸಾದವರ ಸಂಖ್ಯೆ ಹೆಚ್ಚಲಿದೆ. ಕೆಲವು ಸಮುದಾಯಗಳ ಜನಸಂಖ್ಯೆಯೇ ಕಡಿಮೆಯಾಗುತ್ತಿರುವುದು ಆತಂಕ ಮೂಡಿಸಿದೆ' ಎಂದರು.

'ಬೆಂಗಳೂರಿನ ಸಂಚಾರ ವ್ಯವಸ್ಥೆ ಹದಗೆಟ್ಟಿದೆ'

'ಜಾಗತಿಕವಾಗಿ ಬೆಂಗಳೂರು ಆವಿಷ್ಕಾರಗಳ ನಾಯಕತ್ವ ವಹಿಸಬೇಕು. ಆದರೆ, ಬೆಂಗಳೂರಿನ ಸಂಚಾರ ವ್ಯವಸ್ಥೆ ಸಂಪೂರ್ಣ ಹದಗೆಟ್ಟಿದೆ' ಎಂದು ಪದೇ ಪದೇ ಮೋಹನ್‌ದಾಸ್ ಪೈ ಪ್ರಸ್ತಾಪಿಸಿದರು.

'ಇನ್ನು ನಾಲ್ಕೈದು ವರ್ಷಗಳಲ್ಲಿ 250 ಕಿ.ಮೀ.ವರೆಗೆ ಮೆಟ್ರೊ ವಿಸ್ತರಿಸಬಹುದು. ಈಗಿನ ಪರಿಸ್ಥಿತಿ ನೋಡಿದರೆ ಮತ್ತಷ್ಟು ರಸ್ತೆಗಳನ್ನು ಅಭಿವೃದ್ಧಿಪಡಿಸುವುದು ಅನಿವಾರ್ಯವಾಗಲಿದೆ. ಆದರೆ, ಬೆಂಗಳೂರು ಈಗ ದುಬಾರಿಯಾಗುತ್ತಿದೆ. ಬೆಂಗಳೂರಿನ ಜತೆಗೆ ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಮೈಸೂರು, ಮಂಗಳೂರು ನಗರಗಳನ್ನು ಅಭಿವೃದ್ಧಿಪಡಿಸುವುದು ಮಹತ್ವದ್ದಾಗಿದೆ. ಇದಕ್ಕಾಗಿ ಕಾರ್ಯಯೋಜನೆ ರೂಪಿಸಬೇಕು' ಎಂದು ಸಲಹೆ ನೀಡಿದರು.

ಸಂಕ್ಷಿಪ್ತ ಸುದ್ದಿ

ಹಿಮ ಕುಸಿತ: 3 ಸೈನಿಕರ ಸಾವು

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಮಚಿಲ್ ಸೆಕ್ಟರ್‌ನಲ್ಲಿ ಹಿಮಪಾತಕ್ಕೆ ಸಿಲುಕಿ ಮೂವರು ಸೇನಾ ಸಿಬ್ಬಂದಿ ಶುಕ್ರವಾರ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕುಪ್ವಾರ ಜಿಲ್ಲೆಯ ಮಚಿಲ್ ಸೆಕ್ಟರ್‌ನಲ್ಲಿ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ಕಾರ್ಯನಿರ್ವಹಿಸುತ್ತಿದ್ದ ಆರ್‌ಆರ್ 56ರ ಮೂವರು ಸೈನಿಕರು ಮೃತರಾಗಿದ್ದು, ಅವರ ಮೃತದೇಹ ಸಿಕ್ಕಿದ್ದು, ಮೃತರ ಮಾಹಿತಿ ಇನ್ನಷ್ಟೇ ತಿಳಿಯಬೇಕಿದೆ.

ರಷ್ಯಾ ದಾಳಿ ತೀವ್ರ: ಉಕ್ರೇನ್ ಅನ್ನು ಆವರಿಸಿದ ಕತ್ತಲು

ಕೀವ್ (ಎಪಿ): ರಷ್ಯಾ ಕ್ಷಿಪಣಿ ಮತ್ತು ಭಾರಿ ಶೆಲ್ ದಾಳಿಯಿಂದ ಉಕ್ರೇನ್ ಇಂಧನ ಮೂಲಸೌಕರ್ಯ ಸಂಪೂರ್ಣ ನಿಶ್ಶಬ್ದಗೊಂಡಿದೆ. ಹಲವು ಗಂಟೆಗಳ ಕಾಲ ವಿದ್ಯುತ್ ಸಂಪರ್ಕ ಸ್ಥಗಿತವಾಗಲಿದೆ. ಶೇ 40ಕ್ಕೂ ಹೆಚ್ಚು ವಿದ್ಯುತ್ ಸರಬರಾಜು ವ್ಯತ್ಯಯಗೊಂಡಿದೆ. ದೇಶದ ಜನತೆ ಚಳಿಗಾಲದಲ್ಲಿ ವಿದ್ಯುತ್ ಕೊರತೆಯಿಂದ ನಲುಗುವಂತಾಗಲಿದೆ ಎಂದು ಉಕ್ರೇನ್ ವಿದ್ಯುತ್ ಗ್ರಿಡ್ ಮುಖ್ಯಸ್ಥರು ಶುಕ್ರವಾರ ಹೇಳಿದ್ದಾರೆ.

ರಷ್ಯಾ ಪಡೆಗಳು ಉಕ್ರೇನ್‌ನ ಆಗ್ನೇಯ ಭಾಗದಲ್ಲಿ ಡ್ರೋನ್, ಕ್ಷಿಪಣಿ, ಶೆಲ್ ಹಾಗೂ ವೈಮಾನಿಕ ದಾಳಿ ನಡೆಸಿದ್ದು, ಆರು ನಾಗರಿಕರು ಮೃತಪಟ್ಟಿದ್ದಾರೆ. ಹಲವು ಜನರು ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಅಧ್ಯಕ್ಷರ ಕಚೇರಿ ತಿಳಿಸಿದೆ. ರಷ್ಯಾದಿಂದ ಸುಮಾರು 40 ಕ್ಷಿಪಣಿಗಳು ನಿಕೊ ಪೋಲ್ ನಗರಕ್ಕೆ ಅಪ್ಪಳಿಸಿ, ಹಲವು ಗಗನಚುಂಬಿ ಕಟ್ಟಡಗಳು, ವಸತಿಗಳು ಹಾಗೂ ವಿದ್ಯುತ್ ಮಾರ್ಗಗಳು ಹಾನಿಗೀಡಾಗಿವೆ.

ಟಿಆರ್‌ಎಸ್ ಶಾಸಕರ ಖರೀದಿ ಯತ್ನ ಪ್ರಕರಣ: ಬಿ.ಎಲ್. ಸಂತೋಷ್‌ಗೆ ಸಮನ್ಸ್

ಹೈದರಾಬಾದ್: ಟಿಆರ್‌ಎಸ್‌ನ ನಾಲ್ವರು ಶಾಸಕರನ್ನು ಖರೀದಿಸಲು ಪ್ರಯತ್ನಿಸಿದ ಆರೋಪಕ್ಕೆ ಸಂಬಂಧಿಸಿದಂತೆ ತೆಲಂಗಾಣ ಪೊಲೀಸರು ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರಿಗೆ ಸಮನ್ಸ್ ನೀಡಿದ್ದಾರೆ.

ಬಿ.ಎಲ್.ಸಂತೋಷ್ ಅವರು ನ.21 ರಂದು ಖುದ್ದು ವಿಚಾರಣೆಗೆ ಹಾಜರಾಗಬೇಕು. ಹಾಜರಾಗದಿದ್ದರೆ ಬಂಧಿಸಲಾಗುವುದು ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ ಎಂದು ಎನ್‌ಡಿಟಿವಿ ವರದಿ ಮಾಡಿದೆ.

ಪೊಲೀಸರು ತನಿಖೆ ಮುಂದುವರಿಸಬಹುದು. ಆದರೆ, ನ್ಯಾಯಾಧೀಶರು ಅದನ್ನು ಮೇಲ್ವಿಚಾರಣೆ ಮಾಡುತ್ತಾರೆ ಎಂದು ಹೈಕೋರ್ಟ್ ತೀರ್ಪು ನೀಡಿದ ಕೆಲವು ದಿನಗಳ ನಂತರ ಈ ಬೆಳವಣಿಗೆ ನಡೆದಿದೆ.

ತೆಲಂಗಾಣ ರಾಷ್ಟ್ರ ಸಮಿತಿ (ಟಿಆರ್‌ಎಸ್) ಶಾಸಕರಿಗೆ ಫಾರ್ಮ್‌ಹೌಸ್‌ನಲ್ಲಿ ₹ 100 ಕೋಟಿ ಆಮಿಷವೊಡ್ಡಿದ ಆರೋಪದ ಮೇಲೆ ಮೂವರನ್ನು ಕಳೆದ ತಿಂಗಳು ಬಂಧಿಸಲಾಗಿತ್ತು. ಅವರೆಲ್ಲಾ ಜಾಮೀನು ಪಡೆದಿದ್ದಾರೆ.

ಬಿಜೆಪಿಯು ಟಿಆರ್‌ಎಸ್‌ನ ನಾಲ್ವರು ಶಾಸಕರನ್ನು ಖರೀದಿಸಲು ಯತ್ನಿಸುತ್ತಿದೆ ಎಂದು ಆರೋಪಿಸಿದ್ದ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್, ಅದಕ್ಕೆ ಸಂಬಂಧಿಸಿದ ವಿಡಿಯೊವನ್ನು ನವೆಂಬರ್ ಮೊದಲ ವಾರ ಬಿಡುಗಡೆ ಮಾಡಿದ್ದರು.

'ಪ್ರತಿಯೊಬ್ಬ ಶಾಸಕನಿಗೆ ₹ 50 ಕೋಟಿ ಖರ್ಚು ಮಾಡಲು ನಾವು ಸಿದ್ಧರಿದ್ದೇವೆ. ಬಿಜೆಪಿಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್ ಸಂತೋಷ್ ಅವರು ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಸಭೆ ಏರ್ಪಡಿಸುತ್ತಾರೆ' ಎಂಬ ಮಧ್ಯವರ್ತಿಗಳ ಮಾತನ್ನು ಉಲ್ಲೇಖಿಸಿ ಸಿ.ಎಂ ಕೆಸಿಆರ್ ವಿಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಂಚಿಕೊಂಡಿದ್ದರು.

'ಬರಲಿದೆ ಮೆಟ್ರೊ, ಬಸ್ ಎಲ್ಲಕ್ಕೂ ಒಂದೇ ಕಾರ್ಡ್'

'ಬೆಂಗಳೂರು ಟೆಕ್ ಸಮ್ಮಿಟ್'ನಲ್ಲಿ 'ಭವಿಷ್ಯದ ಸಾರಿಗೆ ವ್ಯವಸ್ಥೆ' ಕುರಿತು ನಡೆದ ವಿಚಾರ ಮಂಥನ

ಪ್ರಜಾವಾಣಿ ವಾರ್ತೆ

ಬೆಂಗಳೂರು ಟೆಕ್ ಸಮಿಟ್

ಬೆಂಗಳೂರು: ಮೆಟ್ರೊ, ಬಸ್, ಟ್ಯಾಕ್ಸಿ, ಆಟೊ, ಬಾಡಿಗೆ ದ್ವಿಚಕ್ರ ವಾಹನ... ಹೀಗೆ ಎಲ್ಲವುಗಳಲ್ಲೂ ಸಂಚರಿಸಲು ಅನುವು ಮಾಡಿಕೊಡುವಂತಹ ರಾಷ್ಟ್ರೀಯ ಸಾಮಾನ್ಯ ಸಾರಿಗೆ ಕಾರ್ಡ್ ಅನ್ನು ಭವಿಷ್ಯದಲ್ಲಿ ನಗರದಲ್ಲಿಯೂ ಪರಿಚಯಿಸಲಾಗುವುದು ಎಂದು ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ತಿಳಿಸಿದರು.

'ಬೆಂಗಳೂರು ಟೆಕ್ ಸಮಿಟ್'ನಲ್ಲಿ ಶುಕ್ರವಾರ ನಡೆದ 'ಭವಿಷ್ಯದ ಸಾರಿಗೆ ವ್ಯವಸ್ಥೆ' ಎಂಬ ವಿಚಾರಗೋಷ್ಠಿಯಲ್ಲಿ ಅವರು ಮಾತನಾಡಿದರು.

'ಒಂದು ನಿರ್ದಿಷ್ಟ ಆ್ಯಪ್ ಅಭಿವೃದ್ಧಿಪಡಿಸಿ, ಅದರಿಂದಲೇ ನಗರದಲ್ಲಿ ಹಲವು ಬಗೆಯ ಸಾರ್ವಜನಿಕ ಸಾರಿಗೆ ವ್ಯವಸ್ಥೆ ಬಳಸುವಂತಹ ಏಕರೂಪ ಸೌಕರ್ಯ ಮುಂದಿನ ದಿನಗಳಲ್ಲಿ ಬರಲಿದೆ. ಮೆಟ್ರೊದಲ್ಲಿ ಕುಳಿತೇ ಇಳಿಯುವ ಸ್ಥಳದಿಂದ ಟ್ಯಾಕ್ಸಿಯನ್ನೋ, ಆಟೊವನ್ನೋ ಬುಕ್ ಮಾಡಿಕೊಳ್ಳುವಂತಾಗಲಿದೆ' ಎಂದು ಮಾಹಿತಿ ನೀಡಿದರು.



2025ರ ಜೂನ್ ಹೊತ್ತಿಗೆ 175 ಕಿ.ಮೀನಷ್ಟು ಮೆಟ್ರೊ ಸಂಚಾರ ಸಾಧ್ಯವಾಗಲಿದೆ. 2041ರ ಹೊತ್ತಿಗೆ 314 ಕಿ.ಮೀ.ಗೆ ಮೆಟ್ರೊ ರೈಲು ಮಾರ್ಗ ವಿಸ್ತರಣೆಯಾಗಲಿದೆ.

ಅಂಜುಂ ಪರ್ವೇಜ್
ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ

ವಿದ್ಯುತ್ ಉತ್ಪಾದನೆಗೆ ಕಲ್ಲಿದ್ದಲು ಸುಡುವಂತಹ ಸಾಂಪ್ರದಾಯಿಕ ವ್ಯವಸ್ಥೆಯಿಂದ ಹೊರಬಂದು ಸೌರಶಕ್ತಿ, ವಿಂಡ್‌ಮಿಲ್‌ಗಳ ಉಪಯೋಗದಂತಹ ಪರ್ಯಾಯ ಮಾರ್ಗಗಳನ್ನು ಹೆಚ್ಚಿಸಿಕೊಳ್ಳುವುದು ಅವಶ್ಯ ಎಂದು ಸಲಹೆ ಕೊಟ್ಟರು.

ಟಿಕೆಟ್ ಕೊಳ್ಳಲು ಕ್ಯೂನಲ್ಲಿ ನಿಲ್ಲುವುದನ್ನು ತಪ್ಪಿಸಲು ಇತ್ತೀಚೆಗೆ ಕ್ಯೂಆರ್ ಕೋಡ್ ಜಾರಿಗೆ ತರಲಾಗಿತ್ತು. ಅದನ್ನು ಬಳಸಿಕೊಂಡು ಒಂದೇ ವಾರದಲ್ಲಿ 10 ಸಾವಿರ ಮಂದಿ ಟಿಕೆಟ್ ಖರೀದಿಸಿದ್ದಾರೆ ಎಂದು ಹೇಳಿದರು.

ಬರಲಿವೆ ಸಾಫ್ಟ್‌ವೇರ್ ಸಂಸ್ಕರಿತ ವಾಹನಗಳು: ಸಾಫ್ಟ್‌ವೇರ್ ಸುಧಾರಿತ ವಾಹನಗಳು (ಎಸ್‌ಡಿವಿ) ಭವಿಷ್ಯದಲ್ಲಿ ಭಾರತದ ರಸ್ತೆಗಳಿಗೆ ಇಳಿಯಲಿವೆ. ಅವು ಸ್ವಯಂ ಚಾಲಿತವೂ, ರಸ್ತೆ ಮೇಲೆ ಸಂಚರಿಸುವ ವಾಹನಗಳೊಟ್ಟಿಗೆ ತಾಂತ್ರಿಕವಾಗಿ ಸಂವಹನ ನಡೆಸಿಕೊಂಡು ಚಲಿಸಬಲ್ಲ ಸಾಮರ್ಥ್ಯ ಇರುವಂತಹವೂ ಆಗಿರಲಿವೆ ಎಂದು ಬಾಶ್ ಗ್ಲೋಬಲ್ ಸಾಫ್ಟ್‌ವೇರ್ ಟೆಕ್ನಾಲಜಿಯ ಮುಖ್ಯ ತಂತ್ರಜ್ಞಾನ ಅಧಿಕಾರಿ ವಾದಿರಾಜ್ ಕೃಷ್ಣಮೂರ್ತಿ ತಿಳಿಸಿದರು.

ಬ್ಯಾಟರಿಗಳ ಮರುಬಳಕೆ ಹಾಗೂ ವಿಲೇವಾರಿಯ ಸಮಸ್ಯೆ ಭವಿಷ್ಯದಲ್ಲಿ ಎದುರಾಗಲಿರುವುದರಿಂದ ವಾಹನಗಳಲ್ಲಿ 'ಫ್ಯುಯೆಲ್ ಸೆಲ್ಸ್ ಹೈಡ್ರೋಜನ್' (ಹೈಡ್ರೋಜನ್ ಇಂಧನ ಶಕ್ತಿ ಆಧರಿತ ಸೆಲ್‌ಗಳು) ಅಳವಡಿಕೆಯಾಗಲಿವೆ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವಿವಿಧ ಸಂಚಾರ ವ್ಯವಸ್ಥೆಗಳನ್ನು ಏಕತ್ರಗೊಳಿಸಿ, ಜನರು ಚಂದಾದಾರರಂತೆ ಶುಲ್ಕ ಪಾವತಿಸುವ ಸೌಕರ್ಯ ಕಲ್ಪಿಸಿಕೊಡಬೇಕು. ಬಸ್‌ಗಳು ಜನರಿಗೆ ಎಷ್ಟು ಹೊತ್ತಿಗೆ ಲಭ್ಯ ಹಾಗೂ ಜನರು ಎಲ್ಲೆಲ್ಲಿ ಹೆಚ್ಚಾಗಿ ಬಸ್‌ಗಾಗಿ ಬರುತ್ತಾರೆ ಎಂದು ಪರಸ್ಪರ ತಿಳಿಸಿಕೊಡಬಲ್ಲ ತಾಂತ್ರಿಕ ವ್ಯವಸ್ಥೆಯನ್ನೂ ಅಳವಡಿಸಬೇಕು ಎಂದು ಚಲೊ ಕಂಪನಿಯ ಸಹ ಸ್ಥಾಪಕ ಹಾಗೂ ಸಿಟಿಒ ವಿನಾಯಕ್ ಭಾವ್ನಾನಿ ಸಲಹೆ ನೀಡಿದರು.

ಇಂಟರ್‌ನ್ಯಾಷನಲ್ ಕೌನ್ಸಿಲ್ ಆನ್ ಟ್ರಾನ್ಸ್‌ಪೋರ್ಟೇಷನ್‌ನ ವ್ಯವಸ್ಥಾಪಕ ನಿರ್ದೇಶಕ ಅಮಿತ್ ಭಟ್ ಗೋಷ್ಠಿಯನ್ನು ನಿರ್ವಹಿಸಿದರು.

'ಬಯಸಿದವರಿಗೆ ಮೆಟ್ರೊ ತಲುಪಲು ಕಾರಿಡಾರ್'

ಮೆಟ್ರೊ ಮೊದಲ ಹಂತದಲ್ಲಿ ನಿಲ್ದಾಣಗಳ ಪ್ರವೇಶ ದ್ವಾರಗಳ ಎದುರಲ್ಲೇ ಬಿಎಂಟಿಸಿ ಬಸ್ ನಿಲ್ಲುವಂತೆ ಮಾಡಲು ವೆಚ್ಚ ದುಬಾರಿಯಾದ ಕಾರಣಕ್ಕೆ ಸಾಧ್ಯವಾಗಿರಲಿಲ್ಲ. ಎರಡನೇ ಹಂತದಲ್ಲಿ ಅದು ಸಾಧ್ಯವಾಗಲಿದೆ. ಮೆಟ್ರೊ ನಿಲ್ದಾಣಕ್ಕೆ ಹೊಂದಿಕೊಂಡ ಜಾಗದಲ್ಲಿ ಹಣ್ಣು–ತರಕಾರಿ ಕೂಡ ಸಿಗುವಂತೆ ಮಾಡಲಾಗುವುದು ಎಂದು ಅಂಜುಂ ಪರ್ವೇಜ್ ತಿಳಿಸಿದರು.

ಎಲೆಕ್ಟ್ರಾನಿಕ್ ಸಿಟಿಯಲ್ಲಿ ಇನ್ಫೊಸಿಸ್ ಫೌಂಡೇಷನ್ ₹175 ಕೋಟಿ ವ್ಯಯಿಸಲು ಮನಸ್ಸು ಮಾಡಿದ್ದರಿಂದ ಅಲ್ಲಿನ ನೌಕರರಿಗೆ ಕೆಲಸ ಮಾಡುವ ಸ್ಥಳದಿಂದಲೇ ಮೆಟ್ರೊಗೆ ಸಂಪರ್ಕ ಕಲ್ಪಿಸುವ ಕಾರಿಡಾರ್ ನಿರ್ಮಾಣ ಸಾಧ್ಯವಾಯಿತು. ಬಯೊಟೆಕ್, ಐಟಿಪಿಎಲ್, ಬಾಗ್‌ಮನೆ ಟೆಕ್ ಪಾರ್ಕ್ ಎಲ್ಲವೂ ಇಂತಹ ಕಾರಿಡಾರ್ ನಿರ್ಮಿಸಿಕೊಳ್ಳಲು ಆಸಕ್ತಿ ತೋರಿವೆ. ವೈಟ್‌ಫೀಲ್ಡ್‌ನಲ್ಲಿ ಅಪಾರ್ಟ್‌ಮೆಂಟ್ ಒಂದರ ನಿವಾಸಿಗಳು ಬಿಎಂಟಿಸಿ ಬಸ್ ಮೂಲಕ ಅಲ್ಲಿನ ಪ್ರಯಾಣಿಕರನ್ನು ಮೆಟ್ರೊ ನಿಲ್ದಾಣಕ್ಕೆ ತಲುಪಿಸುವ ವ್ಯವಸ್ಥೆ ಮಾಡಿಕೊಳ್ಳಲು ಮುಂದಾಗಿದ್ದಾರೆ ಅವರು ವಿವರಿಸಿದರು.


ಬರುವ ದಿನಗಳಲ್ಲಿ ಮೆಟ್ರೊ ನಿಲ್ದಾಣಗಳನ್ನೇ ಬಹುಮಹಡಿ ಕಟ್ಟಡಗಳಾಗಿ ನಿರ್ಮಿಸಿ, ಅಲ್ಲಿ ಕಂಪನಿಗಳಿಗೆ ಜಾಗಗಳನ್ನು ಬಾಡಿಗೆಗೆ ಕೊಡುವ ಯೋಚನೆ ಇರುವುದನ್ನೂ ಅವರು ಹಂಚಿಕೊಂಡರು.

ನಗರದಲ್ಲಿ ಇಂದು

ಸಮೂಹ ಗಾಯನ ಸ್ಪರ್ಧೆ: ಉದ್ಘಾಟನೆ: ಡಿ. ಮಹೇಂದ್ರ, ಅಪ್ಪಗೆರೆ ತಿಮ್ಮರಾಜು, ಮುಖ್ಯ ಅತಿಥಿಗಳು: ಪ್ರಸಾದ್ ಎಂ.ಆರ್.ವಿ., ಅಶೋಕ್ ಛಲವಾದಿ, ಪಟೇಲ್ ಪಾಂಡು, ದೇವರಾಜ್ ಬಿ.ಕೆ., ಆಯೋಜನೆ: ಗಾನಮಾಧುರ್ಯ ಸಾಂಸ್ಕೃತಿಕ ಕಲಾ ಸಂಘ, ಸ್ಥಳ: ಇಂದಿರಾಗಾಂಧಿ ರಾಷ್ಟ್ರೀಯ ಕಲಾ ಕೇಂದ್ರ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

ಸಿಎಂಆರ್ ಸಮೂಹ ಸಂಸ್ಥೆಗಳ ಸಂಸ್ಥಾಪನಾ ದಿನ: ಉದ್ಘಾಟನೆ: ಡಿ.ವಿ. ಸದಾನಂದಗೌಡ, ಡಾ.ಕೆ. ಸುಧಾಕರ್, ಶಿಷ್ಯವೇತನ ಪ್ರದಾನ: ಎಸ್.ಆರ್. ವಿಶ್ವನಾಥ್, ಕೆ. ಗೋವಿಂದರಾಜ್, ಗೌರವ ಅತಿಥಿಗಳು: ಕೆ.ಸಿ. ರಾಜು ರೆಡ್ಡಿ, ಕೆ.ಸಿ. ರಾಮಮೂರ್ತಿ, ಸಬಿತಾ ರಾಮಮೂರ್ತಿ, ಆಯೋಜನೆ ಮತ್ತು ಸ್ಥಳ: ಸಿಎಂಆರ್ ವಿಶ್ವವಿದ್ಯಾಲಯದ ಮುಖ್ಯ ಕ್ಯಾಂಪಸ್, ಚಾಗಲಹಟ್ಟಿ, ಬೆಳಿಗ್ಗೆ 9.30

ಕನ್ನಡ ಕಾವ್ಯೋತ್ಸವ: ಧ್ವನಿಸುರುಳಿ ಬಿಡುಗಡೆ: ಮನು ಬಳಿಗಾರ್, ಕಾವ್ಯೋತ್ಸವ ಕವಿಗಳು: ಬಿ.ಆರ್. ಲಕ್ಷ್ಮಣರಾವ್, ನಾ. ದಾಮೋದರ ಶೆಟ್ಟಿ, ಎಚ್. ಡುಂಡಿರಾಜ್, ಶ್ರೀಶೈಲ ಮಾದಣ್ಣವರ, ಕಾ.ವೆಂ. ಶ್ರೀನಿವಾಸಮೂರ್ತಿ, ಸದಾಶಿವ ದೊಡ್ಡಮನಿ, ಶೈಲೇಸ್ ಪಟವರ್ಧನ್, ಮಲ್ಲಿಕಾರ್ಜುನ ಛಬ್ಬಿ, ಗಾಯಕರು: ಮೃತ್ಯುಂಜಯ ದೊಡ್ಡವಾಡ, ಆನಂದ ಮಾದಲಗೆರೆ, ಮಂಗಳಾ ರವಿ, ದರ್ಶನ್, ಜೆ.ಎಚ್. ನಾಗಾರ್ಜುನ, ಶ್ವೇತಾ ಪ್ರಭು, ಆಕಾಶ್ ಬಿ.ಆರ್., ಸೃಷ್ಟಿ ಸುರೇಶ್, ಆಯೋಜನೆ: ಭಾರತೀಯ ವಿದ್ಯಾಭವನ, ಇನ್ಫೊಸಿಸ್ ಪ್ರತಿಷ್ಠಾನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಬೆಳಿಗ್ಗೆ 10



ಮನು ಬಳಿಗಾರ್

ಸಂವಿಧಾನ ಹಬ್ಬ: ವಿಶೇಷ ಅಂಚೆ ಲಕೋಟೆ ಬಿಡುಗಡೆ, ಕೆ.ಪಿ. ಅಶ್ವಿನಿ ಅವರಿಗೆ ಅಭಿನಂದನೆ, ಆಯೋಜನೆ: ಅಂಚೆ ಇಲಾಖೆ, ಸ್ಥಳ: ಮೇಘದೂತ ಸಭಾಂಗಣ, ಜಿಪಿಒ, ಬೆಳಿಗ್ಗೆ 10

69ನೇ ಅಖಿಲ ಭಾರತ ಸಹಕಾರ ಸಪ್ತಾಹ: ಉದ್ಘಾಟನೆ ಹಾಗೂ 'ಸಹಕಾರ ರತ್ನ' ಪ್ರಶಸ್ತಿ ಪ್ರದಾನ: ವಿಶ್ವೇಶ್ವರ ಹೆಗಡೆ ಕಾಗೇರಿ, ಅಧ್ಯಕ್ಷತೆ: ಎಸ್.ಟಿ. ಸೋಮಶೇಖರ್, ಸಹಕಾರ ಧ್ವಜಾರೋಹಣ: ಜಿ.ಟಿ. ದೇವೇಗೌಡ, ಯಶಸ್ವಿನಿ ಯೋಜನೆ ಗುರುತಿನ ಚೀಟಿ ವಿತರಣೆ: ಡಿ.ವಿ. ಸದಾನಂದಗೌಡ, ಸಹಕಾರ ಪತ್ರಿಕೆ ವಿಶೇಷ ಸಂಚಿಕೆ ಬಿಡುಗಡೆ: ಎಚ್.ಸಿ. ಗೋಪಿನಾಥ ರೆಡ್ಡಿ, ಆಯೋಜನೆ: ಸಹಕಾರ ಇಲಾಖೆ, ಸ್ಥಳ: ಗಣೇಶ ಮೈದಾನ, ಕೆಂಗೇರಿ ಉಪನಗರ, ಬೆಳಿಗ್ಗೆ 11


ಪದವಿ ಪ್ರದಾನ ಸಮಾರಂಭ: ಮುಖ್ಯ ಅತಿಥಿ: ಎಸ್. ವಿದ್ಯಾಶಂಕರ್, ಗೌರವ ಅತಿಥಿ: ಎನ್.ಆರ್. ಶೆಟ್ಟಿ, ಅಧ್ಯಕ್ಷತೆ: ಎನ್.ವಿ. ಹೆಗ್ಡೆ, ಆಯೋಜನೆ ಮತ್ತು ಸ್ಥಳ: ನಿಟ್ಟೆ ಮೀನಾಕ್ಷಿ ತಾಂತ್ರಿಕ ವಿದ್ಯಾಲಯ, ಯಲಹಂಕ, ಬೆಳಿಗ್ಗೆ 11

ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ: ಆಯೋಜನೆ: ಟಿಲೋನಿಯಾದ ಬೇರ್‌ಫುಟ್ ಕಾಲೇಜು, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ಬೆಳಿಗ್ಗೆ 11ರಿಂದ

ಸಾಕುಪ್ರಾಣಿಗಳ ಉತ್ಸವ: ಆಯೋಜನೆ: ಪೆಟ್ ಫೆಡ್ ಬೆಂಗಳೂರು, ಸ್ಥಳ: ಜಯಮಹಲ್ ಪ್ಯಾಲೆಸ್, ಬೆಳಿಗ್ಗೆ 11ರಿಂದ

ಕರ್ನಾಟಕ ರಾಜ್ಯೋತ್ಸವ: ಉದ್ಘಾಟನೆ: ಎಂ. ನಂಜುಂಡಸ್ವಾಮಿ, ಮುಖ್ಯ ಅತಿಥಿ: ಬಿ.ಎಂ. ಪಾರ್ಥಸಾರಥಿ, ಅಧ್ಯಕ್ಷತೆ: ಎನ್.ಪಿ. ಕಾರ್ತಿಕ್, ಆಯೋಜನೆ: ಶೇಷಾದ್ರಿಪುರ ಪದವಿಪೂರ್ವ ಕಾಲೇಜು, ಸ್ಥಳ: ದತ್ತಿ ಸಭಾಂಗಣ, ಶೇಷಾದ್ರಿಪುರ ಕಾಲೇಜು, ಬೆಳಿಗ್ಗೆ 11.30

ನಾಡೋಜ ಡಾ.ಜಿ. ನಾರಾಯಣ ಅವರ ಸಂಸ್ಮರಣ ದಿನಾಚರಣೆ: ಉದ್ಘಾಟನೆ: ಹಂ.ಪ. ನಾಗರಾಜಯ್ಯ, ಪುಸ್ತಕ ಬಿಡುಗಡೆ: ಬೈರಮಂಗಲ ರಾಮೇಗೌಡ, ಅಧ್ಯಕ್ಷತೆ: ವರದಾ ಶ್ರೀನಿವಾಸ್, ಸಂಸ್ಮರಣಾ ನುಡಿಗಳು: ಸಿ.ಕೆ. ರಾಮೇಗೌಡ, ಉಪಸ್ಥಿತಿ: ಎನ್. ರಾಘವೇಂದ್ರ, ಮುಖ್ಯ ಅತಿಥಿ: ಜಿ.ನಾ. ಗೋಪಾಲಕೃಷ್ಣ, ಆಯೋಜನೆ: ಸದ್ಭಾವನಾ ಪ್ರತಿಷ್ಠಾನ, ಸ್ಥಳ: ಕುವೆಂಪು ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5



ಹಂ.ಪ. ನಾಗರಾಜಯ್ಯ

ಸುವರ್ಣ ಮಹೋತ್ಸವದ ಸಮಾರೋಪ ಸಮಾರಂಭ: ಮುಖ್ಯ ಅತಿಥಿ: ರಾಜ್ಯಪಾಲ ಥಾವರಚಂದ್ ಗೆಹಲೋತ್, ಪೀಟರ್ ಮಚಾದೋ, ಗೌರವ ಅತಿಥಿಗಳು: ಎಫ್. ಆರ್. ಸಿಂಫ್ವಿ, ಟಿ.ವಿ. ಮೋಹನ್ ದಾಸ್ ಪೈ, ಅಧ್ಯಕ್ಷತೆ: ಡಿಯೋನೈಸಿಯಸ್ ವಾಜ್, ಆಯೋಜನೆ ಹಾಗೂ ಸ್ಥಳ: ಸೇಂಟ್ ಜೋಸೆಫ್ಸ್ ಕಾಲೇಜ್ ಆಫ್ ಕಾಮರ್ಸ್, ಬೆಳಿಗ್ಗೆ 11.30

ಮಕ್ಕಳ ಹಕ್ಕುಗಳ ಸಂಸತ್: ಉದ್ಘಾಟನೆ: ಸೌಮ್ಯಾ ರೆಡ್ಡಿ, ಮುಖ್ಯ ಅತಿಥಿಗಳು: ನೆ.ಲ. ನರೇಂದ್ರಬಾಬು, ಪ್ರಿಯಾಂಕ ಮೇರಿ ಫ್ರಾನ್ಸಿಸ್, ಪ್ರಸೂನ್ ಸೇನ್, ವಾಸುದೇವ್ ಶರ್ಮಾ, ಆಯೋಜನೆ: ಕರ್ನಾಟಕ ಚೈಲ್ಡ್ ರೈಟ್ಸ್ ಟ್ರಸ್ಟ್ ಅಬ್ಸರ್ವೇಟರಿ (ಕೆಸಿಆರ್‌ಒ), ಸ್ಥಳ: ಐಎಸ್‌ಐ, ಮೈಸೂರು ರಸ್ತೆ,

ಚಾಣಕ್ಯ ವಿಶ್ವವಿದ್ಯಾಲಯ ಉದ್ಘಾಟನೆ: ಮುಖ್ಯ ಅತಿಥಿ: ಪ್ರೊ. ಮಂಜುಲ್ ಭಾರ್ಗವ, ಗೌರವ ಅತಿಥಿಗಳು: ಡಾ.ಸಿ.ಎನ್. ಅಶ್ವತ್ಥನಾರಾಯಣ, ಸುಧಾ ಮೂರ್ತಿ, ಸೀತಾರಾಮ್ ಜಿಂದಾಲ್, ಅಧ್ಯಕ್ಷತೆ: ಕೆ. ಕಸ್ತೂರಿರಂಗನ್, ಉಪಸ್ಥಿತಿ: ಪ್ರೊ. ಯಶವಂತ ಡೋಂಗ್ರೆ, ಎಂ.ಪಿ. ಕುಮಾರ್, ಪ್ರೊ. ಎಂ.ಕೆ. ಶ್ರೀಧರ್, ಸ್ಥಳ: ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಸಂಜೆ 5 ಮಧ್ಯಾಹ್ನ 3



ಸುಧಾ ಮೂರ್ತಿ

ಜಾದೂ ಮತ್ತು ನಾಟಕ ಪ್ರದರ್ಶನ: ಎಸ್.ಎಲ್.ಎನ್. ಸ್ವಾಮಿ ನಿರ್ದೇಶನದ ನಾಟಕ '(ಅ)ದೃಶ್ಯಂ', ಆಯೋಜನೆ: ಯು.ಕೆ. ಆರ್ಟ್ಸ್ ಆ್ಯಂಡ್ ಕಲ್ಚರಲ್ ಟ್ರಸ್ಟ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4.30

ಉಪನ್ಯಾಸ ಸರಣಿ: ಅತಿಥಿ: ಮಕರಂದ್ ಪರಾಂಜಪೆ, ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ನಿಮ್ಹಾನ್ಸ್ ಸಭಾಂಗಣ, ಸಂಜೆ 4.30

ಡಾ.ನಾಗರಾಜ್ ಜಮಖಂಡಿ ಸ್ಮಾರಕ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಮುರುಗೇಶ್ ನಿರಾಣಿ, ಸಿ.ಟಿ. ರವಿ, ಆರ್.ವಿ. ವೆಂಕಟೇಶ್, ಅಧ್ಯಕ್ಷತೆ: ಮೋಹನ ಲಿಂಬಿಕಾಯಿ, ಪ್ರಶಸ್ತಿ ಪುರಸ್ಕೃತರು: ಬಿ.ಪಿ. ಮಲ್ಲಪ್ಪ, ಪ್ರಶಾಂತ್ ನಾತು, ದಿ. ಗುರುಲಿಂಗಸ್ವಾಮಿ (ಮರಣೋತ್ತರ), ಆಯೋಜನೆ: ಡಾ.ನಾಗರಾಜ ಜಮಖಂಡಿ ಮೆಮೋರಿಯಲ್ ಟ್ರಸ್ಟ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಸಂಜೆ 5

ಊಂಜಲ್ ಸಂಗೀತೋತ್ಸವ: ಗಾಯನ: ದೀಪ್ತಿ ಮೋಹನ್, ಪಿಟೀಲು: ಸಂಜೀವ್ ಕುಮಾರ್, ಮೃದಂಗ: ಮುರಳಿ ನಾರಾಯಣರಾವ್, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು, ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ವೆಂಕಟೇಶ್ವರಸ್ವಾಮಿ ದೇವಸ್ಥಾನ (ಟಿಟಿಡಿ), ವೈಯಾಲಿಕಾವಲ್, ಸಂಜೆ 6

ಕೊಳಲು ವಾದನ: ಹೇರಂಬ, ಹೇಮಂತ, ಸಹಕಾರ: ಅಚ್ಯುತ ರಾವ್, ಮಂಜುನಾಥ್ ಬಿ.ಸಿ., ಕಾರ್ತಿಕ್ ಆರ್., ಆಯೋಜನೆ: ಎಂಇಎಸ್ ಕಲಾವೇದಿ, ಸ್ಥಳ: ಎಂಇಎಸ್ ಸಭಾಂಗಣ, ಮಲ್ಲೇಶ್ವರ, ಸಂಜೆ 6.30

ಕಾರ್ತಿಕ ಮಾಸದ ದೀಪೋತ್ಸವ: ಉದ್ಘಾಟನೆ: ಟಿ.ಎನ್. ಶ್ರೀನಿವಾಸಮೂರ್ತಿ, ಮಹೇಂದ್ರ ಮುನೋತ್, ಮುಖ್ಯ ಅತಿಥಿಗಳು: ಸೌಮ್ಯಾ ರೆಡ್ಡಿ, ಬಿ. ಸೋಮಶೇಖರ್, ಆರ್. ಎನ್. ಸ್ವಾಮಿ, ಶ್ರೀವತ್ಸ, ಆಯೋಜನೆ ಮತ್ತು ಸ್ಥಳ: ಶ್ರೀ ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6.30

ಅಂಧರಿಂದ ಭರತನಾಟ್ಯ ಹಾಗೂ ನೃತ್ಯ ಪ್ರದರ್ಶನ: ಮುಖ್ಯ ಅತಿಥಿಗಳು: ಡಾ.ಸಿ. ಎನ್. ಅಶ್ವತ್ಥನಾರಾಯಣ, ರಶ್ಮಿ ರವಿ ಕಿರಣ್, ಆಯೋಜನೆ: ದೀಪಾ ಅಕಾಡೆಮಿ ಫಾರ್ ದಿ ಡಿಫರೆಂಟ್ಲಿ ಏಬಲ್ಡ್, ಸ್ಥಳ: ಚೌಡಯ್ಯ ಮೆಮೋರಿಯಲ್ ಹಾಲ್, ಸಂಜೆ 7



ಥೀಮ್ ಪಾರ್ಕ್‌ನ ದ್ವಾರದಲ್ಲಿ ಗಾಜಿನ ಮನೆ



ಜಿಂಕೆ ಪಾರ್ಕ್‌ನಲ್ಲಿ ಡೈನೊಸಾರ್ ವರ್ಲ್ಡ್

ಬಸವನಗುಡಿ: ಪಾರಂಪರಿಕ ತಾಣವಾಗಿಸುವ ಒಂದನೇ ಹಂತ ಪೂರ್ಣ

'ಕೆಂಪಾಂಬುಧಿ'ಗೆ ಥೀಮ್ ಪಾರ್ಕ್ ಆಕರ್ಷಣೆ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ನಾಡಪ್ರಭು ಕೆಂಪೇಗೌಡರು ಕಟ್ಟಿಸಿದ ಕೆಂಪಾಂಬುಧಿ ಕೆರೆಗೆ ಹೊಸರೂಪ ಕೊಡುವ ನೀಲನಕ್ಷೆ ಸಿದ್ಧವಾಗಿದ್ದು, ಪಾರಂಪರಿಕ ತಾಣವನ್ನಾಗಿಸಲು ಯೋಜನೆ ಸಿದ್ಧವಾಗಿದೆ. ಇದಕ್ಕೆ ಮುನ್ನುಡಿಯಾಗಿ ಕೆರೆಗೆ ಹೊಂದಿಕೊಂಡಂತಿರುವ ಜಿಂಕೆ ಪಾರ್ಕ್ ಅನ್ನು ಥೀಮ್ ಪಾರ್ಕ್ ಅನ್ನಾಗಿ ರೂಪಿಸಲಾಗಿದೆ.

ಕೆಂಪಾಂಬುಧಿ ಕೆರೆಗೆ ಹೊಂದಿಕೊಂಡಂತಿರುವ ಜಿಂಕೆ ಪಾರ್ಕ್ ಸಾಕಷ್ಟು ಸಮಸ್ಯೆಗಳಿಂದ ಹಲವು ಸೌಲಭ್ಯಗಳಿಂದ ವಂಚಿತವಾಗಿತ್ತು. 2019ರಲ್ಲಿ ಪುನರುಜ್ಜೀವನ ಯೋಜನೆ ಆರಂಭವಾಗಿದ್ದು, ಪ್ರಥಮ ಹಂತದಲ್ಲಿ ಹಲವು ಸೌಲಭ್ಯಗಳನ್ನು ಒದಗಿಸಲಾಗಿದೆ. ಎಲ್ಲ ವಯೋಮಾನದವರಿಗೂ ಸೌಕರ್ಯಗಳಿವೆ.

ಎರಡನೇ ಹಂತದಲ್ಲಿ ಜಿಂಕೆ ಪಾರ್ಕ್‌ನಿಂದ ಕೆಂಪಾಂಬುಧಿ ಕೆರೆಯ ದಡಕ್ಕೆ ರೋಪ್ ವೇ ಮಾಡಲು ಯೋಚಿಸಲಾಗಿದೆ. ಕೆರೆಯಲ್ಲಿ ಸುರಕ್ಷಿತ ಹಾಗೂ ಆಕರ್ಷಣೆಯ ಬೋಟಿಂಗ್ ವ್ಯವಸ್ಥೆ ಕಲ್ಪಿಸಲಾಗುತ್ತದೆ.

ಕೆರೆ ಸೇರಿ ಸುಮಾರು 45 ಎಕರೆ ಪ್ರದೇಶದಲ್ಲಿರುವ ಥೀಮ್ ಪಾರ್ಕ್‌ನಲ್ಲಿ ಎರಡನೇ ಹಂತದಲ್ಲಿ ಲೇಸರ್ ಷೋ, ಮ್ಯೂಸಿಕಲ್ ಫೌಂಟೇನ್ ಸ್ಥಾಪಿಸಲಾಗುತ್ತಿದೆ. ಇಲ್ಲಿದ್ದ ರೈಲು ಮಕ್ಕಳ ಆಕರ್ಷಣೆಯ ತಾಣವಾಗಿತ್ತು. ಅದರ ಬದಲು ಕೇಬಲ್ ಕಾರ್ ಇಲ್ಲಿ ಆರಂಭವಾಗಲಿದೆ.

ಕೆರೆಯೊಳಗೆ ಎಂದಿಗೂ ನೀರು ಇರಬೇಕು ಎಂದು ತ್ಯಾಜ್ಯ ನೀರು ಸಂಸ್ಕರಣೆ ಘಟಕದಿಂದ (ಎಸ್‌ಟಿಪಿ) ಮಾತ್ರ ನೀರು ಹರಿಸಲು ಯೋಜಿಸಲಾಗಿದೆ. ಬೇರೆಡೆಯಿಂದ ಬರುತ್ತಿರುವ ಎಲ್ಲ ರೀತಿಯ ಕಲ್ಮಶಕ್ಕೂ ತಡೆ ಹಾಕಲಾಗುತ್ತದೆ. ಶುದ್ಧವಾಗಿರುವ ನೀರು ಮಾತ್ರ ಕೆರೆಯಲ್ಲಿರುವಂತೆ ಮಾಡುವ ವ್ಯವಸ್ಥೆ ಕಲ್ಪಿಸಲಾಗಿದೆ.

ನೂರಾರು ವರ್ಷಗಳ ಇತಿಹಾಸ ಹೊಂದಿರುವ ಕೆಂಪಾಂಬುಧಿ ಕೆರೆ ಕುಡಿಯುವ ನೀರಿನ ತಾಣವಾಗಿತ್ತು. ಗವಿಗಂಗಾಧರ ದೇವಸ್ಥಾನದ ಸಮೀಪದಲ್ಲಿರುವ ಕೆರೆ ಕಲ್ಮಶದ ತಾಣವಾಗಿತ್ತು. ಇದೀಗ ಕಲ್ಮಶದ ಹರಿವಿಗೆ ತಡೆಯಾಗಿದ್ದು, ಕಡಲೆಕಾಯಿ ಪರಿಷೆ ಅಂಗವಾಗಿ 13 ವರ್ಷಗಳ ನಂತರ ಕೆರೆಯಲ್ಲಿ ತೆಪ್ಪೋತ್ಸವ ನಡೆಯುತ್ತಿದೆ. 2008ರಲ್ಲಿ ನಡೆದ ಕೊನೆಯದಾಗಿ ತೆಪ್ಪೋತ್ಸವ ನಡೆದಿತ್ತು.

ಕೆಂಪೇಗೌಡರು ನಿರ್ಮಿಸಿದ ಗೋಪುರ ಕೆರೆಯ ದಡದಲ್ಲಿದೆ. ಅದನ್ನು ಅಭಿವೃದ್ಧಿಗೊಳಿಸುವ ಜೊತೆಗೆ ಕೆಂಪೇಗೌಡ ಪ್ರತಿಮೆ ಸ್ಥಾಪಿಸಲಾಗುತ್ತದೆ. ಥೀಮ್ ಪಾರ್ಕ್ ಹಾಗೂ ಕೆರೆಗೆ ಒಂದನೇ ಹಂತದಲ್ಲಿ ₹10 ಕೋಟಿ ವೆಚ್ಚ ಮಾಡಲಾಗಿದೆ. ಎರಡನೇ ಹಂತದಲ್ಲಿ ಇನ್ನೂ ₹10 ಕೋಟಿ ವೆಚ್ಚವಾಗಲಿದೆ.

ಥೀಮ್ ಪಾರ್ಕ್‌ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಇದೇ 20ರಂದು (ಭಾನುವಾರ) ಚಾಲನೆ ನೀಡಲಿದ್ದಾರೆ ಎಂದು ಶಾಸಕ ರವಿ ಸುಬ್ರಮಣ್ಯ ತಿಳಿಸಿದರು.

ಥೀಮ್ ಪಾರ್ಕ್‌ನಲ್ಲಿರುವ ಸೌಲಭ್ಯಗಳು: ವೃತ್ತಾಕಾರದ ಫೌಂಟೇನ್, ಡೈನೊಸಾರ್ ಪಾರ್ಕ್, ಯೋಗ ಕೇಂದ್ರ, ಜಿಮ್ ಸಲಕರಣೆ, ಅಂಬ್ರೆಲಾ ಗಜೆಬೊ, ಗ್ಲಾಸ್ ಹೌಸ್, ಮಕ್ಕಳಿಗೆ ಆಟದ ಪ್ರದೇಶ, ವಿಶೇಷ ಆಸನ ವ್ಯವಸ್ಥೆ.

ಟೆಂಪಲ್ ಸರ್ಕ್ಯೂಟ್

'ಬಸವನಗುಡಿಯಲ್ಲಿ ಟೆಂಪಲ್ ಸರ್ಕ್ಯೂಟ್ ಆರಂಭಿಸಲಾಗುತ್ತಿದೆ. ಈ ಮೂಲಕ ಪ್ರಸಿದ್ಧ ದೇವಸ್ಥಾನ ಹಾಗೂ ಕೆಂಪಾಂಬುಧಿ ಕೆರೆ– ಥೀಮ್ ಪಾರ್ಕ್ ಪ್ರವಾಸವನ್ನು ಕೈಗೊಳ್ಳಬಹುದಾಗಿದೆ' ಎಂದು ಶಾಸಕ ರವಿಸುಬ್ರಮಣ್ಯ ತಿಳಿಸಿದರು.

ದೊಡ್ಡ ಗಣಪತಿ ದೇವಸ್ಥಾನದಿಂದ ಆರಂಭವಾಗುವ ಈ ಟೆಂಪಲ್ ಸರ್ಕ್ಯೂಟ್, ದೊಡ್ಡ ಬಸವಣ್ಣ ದೇವಸ್ಥಾನ, ಕಾರಂಜಿ ಆಂಜನೇಯ ದೇವಸ್ಥಾನ, ಮಲ್ಲಿಕಾರ್ಜುನ ದೇವಸ್ಥಾನ, ರಾಮಾಂಜನೇಯ ಗುಡ್ಡ, ಸುಬ್ರಮಣ್ಯ ದೇವಸ್ಥಾನ, ಹರಿಹರ ಗುಡ್ಡ, ಗವಿ ಗಂಗಾಧರೇಶ್ವರ ದೇವಸ್ಥಾನ, ಪ್ರಳಯಕಾಲ ವೀರಭದ್ರಸ್ವಾಮಿ ದೇವಸ್ಥಾನ, ಬಂಡಿಮಹಾಕಾಳಮ್ಮ ದೇವಸ್ಥಾನ, ಗುಹೆ ದೇವಸ್ಥಾನ ತಲುಪುತ್ತದೆ. ಅಂತ್ಯದಲ್ಲಿ ಕೆಂಪಾಂಬುಧಿ ಕೆರೆ ಇರುವುದರಿಂದ ಇಲ್ಲಿ ಬೋಟಿಂಗ್, ರೋಪ್‌ವೇ, ಜಿಂಕೆ–ಥೀಮ್ ಪಾರ್ಕ್ ಸೊಬಗನ್ನು ಸವಿಯಬಹುದು. ಸುಬ್ರಮಣ್ಯ ದೇವಸ್ಥಾನದ ಮೇಲ್ಭಾಗದಲ್ಲಿ 'ವ್ಯೂ ಪಾಯಿಂಟ್' ಮಾಡಲಾಗುತ್ತದೆ. ಈ ಮೂಲಕ ಸುತ್ತಮುತ್ತಲಿನ ಹತ್ತಾರು ಕಿ.ಮೀ. ಪ್ರದೇಶವನ್ನು ನೋಡಬಹುದಾಗಿದೆ.

ನೇಮಕಾತಿ, ಬಡ್ತಿ ಸ್ಥಗಿತಕ್ಕೆ ಮುಖ್ಯ ಕಾರ್ಯದರ್ಶಿ ಸೂಚನೆ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಮೀಸಲಾತಿ ಹೆಚ್ಚಳದ ಪ್ರಮಾಣಕ್ಕೆ ಅನುಗುಣವಾಗಿ ರೋಸ್ಟರ್ ಬಿಂದುಗಳನ್ನು ಗುರುತಿಸುವವರೆಗೂ ಎಲ್ಲ ಇಲಾಖೆಗಳಲ್ಲಿ ನೇರ ನೇಮಕಾತಿ ಮತ್ತು ಬಡ್ತಿ ಪ್ರಕ್ರಿಯೆ ಸ್ಥಗಿತಗೊಳಿಸಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ ಸೂಚನೆ ನೀಡಿದ್ದಾರೆ.

ಎಲ್ಲ ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯ ದರ್ಶಿಗಳು ಹಾಗೂ ಕಾರ್ಯದರ್ಶಿಗಳಿಗೆ ಗುರುವಾರ ಟಿಪ್ಪಣಿ ರವಾನಿಸಿರುವ ಅವರು, 'ಹೆಚ್ಚಿಸಲಾಗಿರುವ ಮೀಸಲಾತಿ ಜಾರಿಗೊಳಿಸಲು ರೋಸ್ಟರ್ ಬಿಂದುಗಳನ್ನು ಗುರುತಿಸುವ ಪ್ರಕ್ರಿಯೆ ಚಾಲನೆಯಲ್ಲಿದೆ. ಇದು ಅಂತಿಮಗೊಂಡು, ಪ್ರಕಟಿಸುವವರೆಗೂ ನೇರ ನೇಮಕಾತಿ ಪ್ರಕ್ರಿಯೆಯನ್ನು ತಡೆ ಹಿಡಿಯಬೇಕು. ಮೀಸಲಾತಿ ಅನ್ವಯವಾಗುವ ಹುದ್ದೆಗಳಿಗೆ ಬಡ್ತಿ ನೀಡಲು ಇಲಾಖಾ ಮುಂಬಡ್ತಿ ಸಮಿತಿ ಸಭೆ ಆಯೋಜಿಸಬಾರದು' ಎಂದಿದ್ದಾರೆ.

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ (ರಿ), ಕೊಪ್ಪಳ

ನೊಂದಣಿ ಸಂಖ್ಯೆ:KOL-S243-2012-13 ದಿನಾಂಕ:15-03-2013
(ಕರ್ನಾಟಕ ಸರಕಾರದ ಸ್ವಾಯತ್ತ ಸಂಸ್ಥೆ)
Website: www.kimskoppal.karnataka.gov.in Office : 08539-225523
email :directorkimskoppal@gmail.com Office : 08539 225522

ಸಂ.ಕಿಮ್ಸ್/ಕೊಪ್ಪಳ/ಸರಬರಾಜು/ಟೆಂಡರ್/60/ಸ್ಕ್ರ್ಯಾಪ್/2022-23/ ದಿ: 16/11/2022

ಇ- ಟೆಂಡರ್ ಅಧಿಸೂಚನೆ

ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅನುಪಯುಕ್ತ (Scrap Items) ವಸ್ತುಗಳನ್ನು ಹರಾಜು ಮಾಡಲು ಇ-ಟೆಂಡರ್ ಆಹ್ವಾನಿಸಲಾಗಿದೆ. ಆಸಕ್ತ ಟೆಂಡರ್‌ದಾರರು ನಿಗದಿಪಡಿಸಿದ ಟೆಂಡರ್ ಫಾರ್ಮಗಳನ್ನು http://www.eproc.karnataka.gov.in ವೆಬ್‌ಸೈಟಿನಲ್ಲಿ ಪಡೆಯಬಹುದು.ಟೆಂಡರ್ ಅಂದಾಜು ಮೊತ್ತ ರೂ. 4.62 ಲಕ್ಷಗಳು.

ಸಹಿ/- ನಿರ್ದೇಶಕರು
ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕೊಪ್ಪಳ

ವಾ.ಸಾ.ಇ/ಕೊಪ್ಪಳ/449/2022-23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ

ಆವರಣ ಬಿ.ಡಿ. ರಸ್ತೆ, ಚಿತ್ರದುರ್ಗ ಜಿಲ್ಲೆ.
ದೂ: ಸಂ: 08194-235464 ಇ-ಮೇಲ್: dhochitradurga@gmail.com

No.DPMU/NHM/CTA/CHO/01/2022-23 ದಿನಾಂಕ:16.11.2022

ತಿದ್ದುಪಡಿ ಪ್ರಕಟಣೆ

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಚಿತ್ರದುರ್ಗ ಜಿಲ್ಲೆಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಮೂಲಕ 03 ಸಮುದಾಯ ಆರೋಗ್ಯ ಅಧಿಕಾರಿಗಳ ಹುದ್ದೆಗಳಿಗೆ ಆನ್‌ಲೈನ್ ಮೂಲಕ ದಿನಾಂಕ 25.10.2022 ರಂದು ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಅರ್ಜಿ ಸ್ವೀಕರಿಸಲು ನಿಗದಿಪಡಿಸಲಾಗಿದ್ದ ಕೊನೆಯ ದಿನಾಂಕ 08.11.2022 ಆಗಿರುತ್ತದೆ. ಸದರಿ ದಿನಾಂಕವನ್ನು ಅಭ್ಯರ್ಥಿಗಳ ಕೋರಿಕೆ ಮೇರೆಗೆ ದಿನಾಂಕ 25.11.2022 ರವರಿಗೆ ವಿಸ್ತರಿಸಲಾಗಿದೆ.ಹೆಚ್ಚಿನ ಮಾಹಿತಿಗಾಗಿ: http://www.karnataka.gov.in/hfw ಸಂಪರ್ಕಿಸಬಹುದು. ಸೂಚನೆ: ನೇಮಕಾತಿ ಸಂಬಂಧಿಸಿದ ತಿದ್ದೋಲೆಗಳನ್ನು ಹಾಗೂ ಹೆಚ್ಚಿನ ವಿವರಗಳನ್ನು ಮೇಲೆ ಸೂಚಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

DIPR/CTA/MCA/700/2022-23
ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿತ್ರದುರ್ಗ.

ರಿಜಿಸ್ಟ್ರಾರ್‌ರವರ ಕಚೇರಿ, ಕಾನೂನುಬಾಹಿರ ಚಟುವಟಿಕೆಗಳ (ನಿಯಂತ್ರಣ) ನ್ಯಾಯಾಧಿಕರಣ, ಚೇಂಬರ್ ನಂ. 15, ನೆಲಮಹಡಿ, ಬ್ಲಾಕ್ 'ಎ', ದೆಹಲಿ ಉಚ್ಚ ನ್ಯಾಯಾಲಯ, ನವದೆಹಲಿ – 110503

ಉಲ್ಲೇಖ: 28 ಸೆಪ್ಟಂಬರ್, 2022ರಂದು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಣೆ ಆಗಿರುವ ದಿನಾಂಕ 27 ಸೆಪ್ಟಂಬರ್, 2022ರ ಅಧಿಸೂಚನೆ ಸಂ. ಎಸ್.ಒ.4559(ಇ) ಮೂಲಕ ಘೋಷಿಸಿರುವುದು ಏನೆಂದರೆ, ಕಾನೂನುಬಾಹಿರ ಚಟುವಟಿಕೆಗಳ (ನಿಯಂತ್ರಣ) ಕಾಯ್ದೆ, 1967ರ ಸೆಕ್ಷನ್-3ರ ಸಬ್-ಸೆಕ್ಷನ್ (1) ಮತ್ತು (3) ಗಳನ್ನು ದಿನಾಂಕ 06 ಅಕ್ಟೋಬರ್, 2022ರ ಅಧಿಸೂಚನೆ ಸಂ. ಎಸ್.ಒ.4758(ಇ) ಜೊತೆಗೆ ಓದಿಕೊಂಡಂತೆ ಪ್ರದತ್ತವಾದ ಹಕ್ಕುಗಳ ಮೇರೆಗೆ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್ಐ) ಮತ್ತು ಅದರ ಸಹವರ್ತಿಗಳು ಅಥವಾ ಅಂಗ ಸಂಸ್ಥೆಗಳು ಅಥವಾ ರಂಗಗಳಾದ ರಿಹ್ಯಾಬ್ ಇಂಡಿಯಾ ಫೌಂಡೇಶನ್ (ಆರ್‌ಐಎಫ್), ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ (ಸಿಎಫ್ಐ), ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್ (ಎಐಐಸಿ), ನ್ಯಾಷನಲ್ ಕಾನ್ಫೆಡರೇಶನ್ ಆಫ್ ಹ್ಯುಮನ್ ರೈಟ್ಸ್ ಆರ್ಗನೈಸೇಶನ್ (ಎನ್‌ಸಿಹೆಚ್‌ಆರ್‌ಒ), ನ್ಯಾಷನಲ್ ವುಮನ್ಸ್ ಫ್ರಂಟ್, ಜೂನಿಯರ್ ಫ್ರಂಟ್, ಎಂಪವರ್ ಇಂಡಿಯಾ ಫೌಂಡೇಶನ್ ಮತ್ತು ರಿಹ್ಯಾಬ್ ಫೌಂಡೇಶನ್, ಕೇರಳ ಇವುಗಳನ್ನು "ಕಾನೂನುಬಾಹಿರ ಸಂಘಟನೆಗಳು" ಎಂದು ಘೋಷಿಸಲಾಗಿದೆ.

ಗೆ,

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್ಐ) ಮತ್ತು ಇದರ ಸಹವರ್ತಿಗಳು ಅಥವಾ ಅಂಗಸಂಸ್ಥೆಗಳು ಅಥವಾ ರಂಗಗಳು

ಅದಾಗ್ಯೂ, ಕೇಂದ್ರ ಸರ್ಕಾರವು, ದಿನಾಂಕ 27 ಸೆಪ್ಟಂಬರ್, 2022ರಂದು ಹೊರಡಿಸಲಾಗಿರುವ ಅಧಿಸೂಚನೆ ಸಂ. ಎಸ್.ಒ.4559(ಇ) [ಭಾರತೀಯ ಗೆಜೆಟ್‌ನಲ್ಲಿ ಪ್ರಕಟಗೊಂಡಿರುವ: ಎಕ್ಸ್ಟ್ರಾರ್ಡಿನಾರಿ ಪಾರ್ಟ್ 2, ಸೆಕ್ಷನ್ 3 (2)] ಮೂಲಕ, ಕಾನೂನುಬಾಹಿರ ಚಟುವಟಿಕೆಗಳ (ನಿಯಂತ್ರಣ) ಕಾಯ್ದೆ, 1967ರ (1967/37) (ಇಲ್ಲಿ ಇನ್ನುಮುಂದೆ "ಕಾಯ್ದೆ" ಎನ್ನಲಾಗುವ) ಸೆಕ್ಷನ್ 3ರ ಸಬ್-ಸೆಕ್ಷನ್ (1) ಮತ್ತು (3) ರಲ್ಲಿ ಪ್ರದತ್ತವಾದ ಹಕ್ಕುಗಳನ್ನು ಚಲಾಯಿಸುವ ಮೇರೆಗೆ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್ಐ) ಮತ್ತು ಅದರ ಸಹವರ್ತಿಗಳು ಅಥವಾ ಅಂಗ ಸಂಸ್ಥೆಗಳು ಅಥವಾ ರಂಗಗಳನ್ನು ಘೋಷಿಸಿದೆ.

ಮತ್ತು ಅದಾಗ್ಯೂ, ದಿನಾಂಕ 06 ಅಕ್ಟೋಬರ್, 2022ರ ಗೆಜೆಟ್ ಅಧಿಸೂಚನೆ ಸಂ. ಎಸ್.ಒ.4758(ಇ) [ಭಾರತೀಯ ಗೆಜೆಟ್‌ನಲ್ಲಿ ಪ್ರಕಟಗೊಂಡಿರುವ: ಎಕ್ಸ್ಟ್ರಾರ್ಡಿನರಿ ಪಾರ್ಟ್ 2, ಸೆಕ್ಷನ್ 3 (2)] ಮುಖೇನ, ಸದರಿ ಕಾಯ್ದೆಯ ಸೆಕ್ಷನ್ 4ರ ಸಬ್‌ಸೆಕ್ಷನ್ (1)ರ ಜೊತೆಗೆ ಸೆಕ್ಷನ್ 5ರ ಸಬ್‌ಸೆಕ್ಷನ್ (1) ಅನ್ನು ಓದಿಕೊಂಡಂತೆ ಪ್ರದತ್ತವಾದ ಹಕ್ಕುಗಳನ್ನು ಚಲಾಯಿಸುವ ಮೇರೆಗೆ, ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್ಐ) ಮತ್ತು ಅದರ ಸಹವರ್ತಿಗಳು ಅಥವಾ ಅಂಗ ಸಂಸ್ಥೆಗಳು ಅಥವಾ ರಂಗಗಳಾದ ರಿಹ್ಯಾಬ್ ಇಂಡಿಯಾ ಫೌಂಡೇಶನ್ (ಆರ್‌ಐಎಫ್), ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ (ಸಿಎಫ್ಐ), ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್ (ಎಐಐಸಿ), ನ್ಯಾಷನಲ್ ಕಾನ್ಫೆಡರೇಶನ್ ಆಫ್ ಹ್ಯುಮನ್ ರೈಟ್ಸ್ ಆರ್ಗನೈಸೇಶನ್ (ಎನ್‌ಸಿಹೆಚ್‌ಆರ್‌ಒ), ನ್ಯಾಷನಲ್ ವುಮನ್ಸ್ ಫ್ರಂಟ್, ಜೂನಿಯರ್ ಫ್ರಂಟ್, ಎಂಪವರ್ ಇಂಡಿಯಾ ಫೌಂಡೇಶನ್ ಮತ್ತು ರಿಹ್ಯಾಬ್ ಫೌಂಡೇಶನ್, ಕೇರಳ ಇವುಗಳನ್ನು "ಕಾನೂನುಬಾಹಿರ ಸಂಘಟನೆ" ಎಂದು ಘೋಷಿಸಲು ಸಮರ್ಪಕ ಕಾರಣಗಳಿವೆಯೆ ಎಂದು ಸದರಿ ಕಾಯ್ದೆಯ ಸೆಕ್ಷನ್ 4ರ ಸಬ್-ಸೆಕ್ಷನ್ (1)ಕ್ಕೆ ಅನುಗುಣವಾಗಿ ತೀರ್ಪು ನೀಡಲು, ದೆಹಲಿ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಮಾನ್ಯ ಶ್ರೀ. ಜಸ್ಟೀಸ್ ದಿನೇಶ್ ಕುಮಾರ್ ಶರ್ಮಾ ಇವರನ್ನು ಒಳಗೊಂಡಿರುವ ನ್ಯಾಯಾಧಿಕರಣವನ್ನು ಕೇಂದ್ರ ಸರ್ಕಾರದಿಂದ ರೂಪಿಸಲಾಗಿದೆ.

[illegible]

... ದಾಖಲಿಸುವುದು/ಸಲ್ಲಿಸುವುದು. ಇಂತಹ ಆಕ್ಷೇಪಣೆಗಳು/ಪ್ರತಿಕ್ರಿಯೆಗಳು ಪ್ರಾದೇಶಿಕ ಭಾಷೆಯಲ್ಲಿ ಇದ್ದಲ್ಲಿ, ಅವುಗಳ ವಾಸ್ತವಿಕ ಇಂಗ್ಲಿಷ್ ಅನುವಾದ ಪ್ರತಿಗಳನ್ನು ಲಗತ್ತಿಸತಕ್ಕದ್ದು.

ಈ ಕುರಿತಂತೆ ಮುಂದಿನ ನಡಾವಳಿಗಳನ್ನು ತಿಳಿದುಕೊಳ್ಳಲು ದಿನಾಂಕ 08.12.2022 ರಂದು ಕೋರ್ಟ್ ರೂಮ್ ನಂ. 24, ನೆಲಮಹಡಿ, 'ಎ' ಬ್ಲಾಕ್, ದೆಹಲಿ ಉಚ್ಚ ನ್ಯಾಯಾಲಯ, ಶೇರ್ ಶಾ ರೋಡ್, ನವದೆಹಲಿ – 110503 ವಿಳಾಸದಲ್ಲಿ, ಸಂಜೆ 4:00 ಗಂಟೆಗೆ ನೀವು ಅಧಿಕೃತ ವ್ಯಕ್ತಿಯ ಮೂಲಕ ಹಾಜರಾಗಬಹುದು.

ಇಂದು 3 ಅಕ್ಟೋಬರ್, 2022 ರಂದು ನನ್ನ ಕೈಯಾರೆ, ಕಾನೂನುಬಾಹಿರ ಚಟುವಟಿಕೆಗಳ (ನಿಯಂತ್ರಣ) ನ್ಯಾಯಾಧಿಕರಣದ ಮೊಹರಿನೊಂದಿಗೆ ನೀಡಲಾಗಿದೆ.

(ರಿತೇಶ್ ಸಿಂಗ್)
ರಿಜಿಸ್ಟ್ರಾರ್
ಕಾನೂನುಬಾಹಿರ ಚಟುವಟಿಕೆಗಳ (ನಿಯಂತ್ರಣ) ನ್ಯಾಯಾಧಿಕರಣ

DP/9403/2022

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಕೆರೆಗಳು-2 ವಿಭಾಗ, ಕೊಠಡಿ ಸಂಖ್ಯೆ 309, 3ನೇ ಮಹಡಿ, ಹೊಸ ಕಟ್ಟಡ, ಎನ್.ಆರ್. ಚೌಕ, ಬೆಂಗಳೂರು-560 040

ಸಂಖ್ಯೆ :ಕಾಪಾಅ-6(ಕೆರೆಗಳು)/ತಿದ್ದುಪಡಿ-1/2022-23 ದಿನಾಂಕ:18.11.2022

ತಿದ್ದುಪಡಿ

ದಿನಾಂಕ 30.10.2022ರಂದು ಈ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವ **ಟೆಂಡರ್ ಪ್ರಕಟಣೆ ಸಂಖ್ಯೆ: ಸಂ: ಕಾಪಾಅ-2(ಕೆರೆಗಳು)/ಟೆಂಡ್-07/2022-23 ದಿನಾಂಕ: 29.10.2022** ಟೆಂಡರ್ ಅಧಿಸೂಚನೆಯ ದಿನಾಂಕಗಳನ್ನು ತಾಂತ್ರಿಕ ಕಾರಣಗಳಿಂದಾಗಿ ಈ ಕೆಳಕಂಡಂತೆ ಮುಂದೂಡಲಾಗಿದೆ.

1) ಪೂರ್ವಭಾವಿ ಸಭೆ ದಿನಾಂಕ: **23.11.2022ರ ಅಪರಾಹ್ನ 3.00 ಗಂಟೆಗೆ.**
2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **05.12.2022ರ ಸಂಜೆ 4.00 ಗಂಟೆಯವರೆಗೆ.** 3) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ : **07.12.2022ರ ಸಂಜೆ 4.10 ಗಂಟೆಗೆ.** ಉಳಿದ ನಿಯಮ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು, ಕೆರೆಗಳು-2 ವಿಭಾಗ.

ಅಡ್ವೋಕೇಟ್ ಜನರಲ್ ಕಛೇರಿ

ಉಚ್ಚನ್ಯಾಯಾಲಯ ಕಟ್ಟಡ, ವಿಧಾನ ಸೌಧದ ಎದುರು, ಡಾ: ಅಂಬೇಡ್ಕರ್ ರಸ್ತೆ, ಬೆಂಗಳೂರು-560001
ದೂರವಾಣಿ: 080-2286 2583, ಮಿಂಚಂಚೆ: advgentender2022@gmail.com

ಸಂಖ್ಯೆ:55/ಎಜಿ/ಲೇಖನಸಾಮಗ್ರಿ/2022-23 ದಿನಾಂಕ: 18.11.2022

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್ಮೆಂಟ್ ಮುಖಾಂತರ)

ಅಡ್ವೊಕೇಟ್ ಜನರಲ್ ರವರ ಕಛೇರಿ, ಕೇಂದ್ರ ಕಛೇರಿ, ಹಾಗೂ ಘಟಕ ಕಛೇರಿಗಳಾದ ಧಾರವಾಡ ಮತ್ತು ಕಲಬುರ್ಗಿ ಜಲ್ಲೆಗಳಿಗೆ ಅಗತ್ಯವಿರುವ ಮೂಲ ಸೌಕರ್ಯವನ್ನು ಉನ್ನತೀಕರಿಸಲು/CCMS ಮತ್ತು e-filing ಅನ್ನು ಜಾರಿಗೊಳಸಲು ಅಗತ್ಯವಿರುವ Consolidated requirement (LAN & UPS) ಇತ್ಯಾದಿಗಳ ಅಳವಡಿಕೆ ಮತ್ತು ನಿರ್ವಹಣೆಗಾಗಿ ಆನ್‌ಲೈನ್ ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೌಲ್ಯ ರೂ.5.46 ಕೋಟಿಗಳು (ಐದು ಕೋಟಿ ನಲವತ್ತಾರು ಲಕ್ಷ ರೂಪಾಯಿಗಳು ಮಾತ್ರ). ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 16.12.2022, 4.00 ಗಂಟೆಗಳು. ಇತರೆ ಮಾಹಿತಿಯನ್ನು https://eproc.karnataka.gov.in ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಆಡಳಿತಾಧಿಕಾರಿಗಳು (ಪ್ರ)
DIPR/CP/RO3145/AAPL/2022-23 ಅಡ್ವೊಕೇಟ್ ಜನರಲ್ ರವರ ಕಛೇರಿ, ಬೆಂಗಳೂರು.

ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ (ಕರ್ನಾಟಕ ಸರ್ಕಾರದ ಉದ್ಯಮ)

ವಿ.ಜ.ನಿ.ನಿ, ಭದ್ರಾ ಮೇಲ್ದಂಡೆ ಯೋಜನೆ ವಿಭಾಗ ನಂ.4, ಹೊಸದುರ್ಗ, ಚಿತ್ರದುರ್ಗ (ಜಿ)
ಫೋನ್/ಫ್ಯಾಕ್ಸ್ 08199-230018. ಇ-ಮೇಲ್: eeubpdvn4@gmail.com

ಸಂಖ್ಯೆ : ಕಾಇಂ/ವಿಜನಿನಿ/ಭಮೇಯೋ/ವಿ-4/ಹೊ/ತಾ.ಶಾ/2022-23/1138
ದಿನಾಂಕ : 14.11.2022

ಬಹಿರಂಗ ಹರಾಜು ಪ್ರಕಟಣೆ

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ, ಬೆಂಗಳೂರು ಇವರ ಪರವಾಗಿ ಕೆಳಗೆ ಸಹಿ ಮಾಡಿರುವವರಿಂದ **"Disposal of Hard rock obtained during excavation of canal from 0.00 to 16.00 km Under Upper Bhadra Project" "As is Where is Basis"** ಬಹಿರಂಗ ಹರಾಜು ಪ್ರಕ್ರಿಯೆಯನ್ನು ಆಹ್ವಾನಿಸಲಾಗಿದ್ದು, ದಿನಾಂಕ:23.11.2022 ರಂದು ಕಾಮಗಾರಿ ಸ್ಥಳದಲ್ಲಿ ಹರಾಜು ಪ್ರಕ್ರಿಯೆ ಕೈಗೊಳ್ಳಲಾಗುವುದು. ವಿವರ ಕೆಳಕಂಡಂತಿದೆ.

(1) ಗಟ್ಟಿಕಲ್ಲಿನ ಪರಿಮಾಣ: **635059.75 ಘ.ಮೀ** (2) ಆರಂಭಿಕ ಮೂಲ ಶುಲ್ಕ- ರೂ.**483.04** ಪ್ರತೀ ಘ.ಮೀ (ಜಿ.ಎಸ್.ಟಿ ಹಾಗೂ ಇತರೆ ತೆರಿಗೆ ಸೇರಿ). (3) ಇ.ಎಂ.ಡಿ ಮೊತ್ತ- ರೂ. **30.68** ಲಕ್ಷ ಸದರಿ ಹರಾಜಿಗೆ ಸಂಬಂಧಿಸಿದಂತೆ ಹರಾಜು ಮೊತ್ತ/ವೇಳಾಪಟ್ಟಿ/ಇಎಂಡಿ ಮೊತ್ತ/ಹರಾಜು ನಿಯಮ/ಪ್ರಕಟಣೆ/ಹರಾಜು ಸ್ಥಳ ಇತ್ಯಾದಿ ವಿವರಗಳಿಗೆ ಈ ಕೆಳಗೆ ಸಹಿ ಮಾಡಿದವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ಹರಾಜು ಸ್ವೀಕರಿಸುವ ಅಧಿಕಾರಿಯು ಯಾವುದೇ ಕಾರಣ ನೀಡದೆ ಯಾವುದೇ ಹರಾಜನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

DIPR/CTA/MCA/698/2022-23
ಸಹಿ/- **ಕಾರ್ಯಪಾಲಕ ಇಂಜಿನಿಯರ್**, ವಿಜನಿನಿ, ಭದ್ರಾ ಮೇಲ್ದಂಡೆ ಯೋಜನಾ ವಿಭಾಗ ನಂ.04, ಹೊಸದುರ್ಗ

ರಾಷ್ಟ್ರೀಯ ಆರೋಗ್ಯ ಅಭಿಯಾನ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಾರ್ಯಾಲಯ, ಬೆಂಗಳೂರು ನಗರ ಜಿಲ್ಲೆ

ಹಳೇ ಟಿ.ಬಿ. ಆಸ್ಪತ್ರೆ ಆವರಣ, ಹಳೇ ಮದ್ರಾಸ್ ರಸ್ತೆ, ಇಂದಿರಾನಗರ, ಬೆಂಗಳೂರು-560038.

ಸಂಖ್ಯೆ: ಡಿಎಸ್‌ಯು/ಬೆಂನಜಿ/ಹೆಚ್‌ಡಬ್ಲ್ಯೂಸಿ/01/2022-23 ದಿನಾಂಕ: 16-11-2022

ತಿದ್ದುಪಡಿ ಪ್ರಕಟಣೆ

ಉಲ್ಲೇಖ: ಹೆಚ್‌ಎಫ್‌ಡಬ್ಲ್ಯೂ/ಎನ್‌ಹೆಚ್‌ಎಂ/ಸಿಪಿಹೆಚ್‌ಸಿ-ಯುಹೆಚ್‌ಸಿ/ಸಆಅ/ನೇಮಕಾತಿ/20/2022-23 ದಿನಾಂಕ: 15-11-2022

ರಾಷ್ಟ್ರೀಯ ಆರೋಗ್ಯ ಅಭಿಯಾನದಡಿಯಲ್ಲಿ ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘದ ಮೂಲಕ 32 ಸಮುದಾಯ ಆರೋಗ್ಯ ಅಧಿಕಾರಿಗಳ ಹುದ್ದೆಗಳಿಗೆ ಆನ್‌ಲೈನ್ ಮೂಲಕ ದಿನಾಂಕ: 27-10-2022 ರಂದು ಅರ್ಜಿಗಳನ್ನು ಆಹ್ವಾನಿಸಿದ್ದು, ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಲಾಗಿದ್ದ ಕೊನೆಯ ದಿನಾಂಕ: 08-11-2022 ಆಗಿರುತ್ತದೆ. ಸದರಿ ದಿನಾಂಕವನ್ನು ಅಭ್ಯರ್ಥಿಗಳ ಕೋರಿಕೆ ಮೇರೆಗೆ ದಿನಾಂಕ: **25-11-2022 ರವರೆಗೆ ವಿಸ್ತರಿಸಲಾಗಿದೆ.** ಅದರಂತೆ ಹೆಚ್ಚಿನ ಮಾಹಿತಿಗಾಗಿ: **http://karunadu.karnataka.gov.in/hfw** ಸಂಪರ್ಕಿಸಬಹುದು.

ಸೂಚನೆ: ನೇಮಕಾತಿ ಸಂಬಂಧಿಸಿದ ತಿದ್ದೋಲೆಗಳನ್ನು ಹಾಗೂ ಹೆಚ್ಚಿನ ವಿವರಗಳನ್ನು ಮೇಲೆ ಸೂಚಿಸಿರುವ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.

ವಾಸಾಸಂಇ/ವಾ.ಪ್ರ/3156/ಅಡ್ವರ್ಟೋರ್/2022-23

ಕರ್ನಾಟಕ ಸರ್ಕಾರ

ವಾಣಿಜ್ಯ ತೆರಿಗೆಗಳ ಇಲಾಖೆ

ವಾಣಿಜ್ಯ ತೆರಿಗೆಗಳ ಆಯುಕ್ತರವರ ಕಚೇರಿ, ವಾಣಿಜ್ಯ ತೆರಿಗೆ ಕಾರ್ಯಾಲಯ, ಗಾಂಧಿನಗರ, ಬೆಂಗಳೂರು-560 009. ದೂ: 080-22208402

ಸಂಖ್ಯೆ: ಎಸಿ/ಇಜಿ-4/ಸಿಆರ್-38/2021-22 ದಿನಾಂಕ: 18.11.2022

ಇ-ಟೆಂಡರ್ ಪ್ರಕಟಣೆ

ವಾಣಿಜ್ಯ ತೆರಿಗೆಗಳ ಇಲಾಖೆಯು 1275 Desktops and 150 Laptops ಗಳ ಪೂರೈಕೆಗಾಗಿ ದ್ವಿಲಕೋಟೆ/ದ್ವಿಭಾಗಗಳ ಪದ್ಧತಿಯಲ್ಲಿ ಕರ್ನಾಟಕ ಸರ್ಕಾರದ ಇ-ಸಂಗ್ರಹಣಾ ವೇದಿಕೆ ಮೂಲಕ ಟೆಂಡರ್ ಕರೆಯಲಾಗಿದೆ.

ಟೆಂಡರ್ ನಿಬಂಧನೆಗಳು ಮತ್ತು ಷರತ್ತುಗಳು ಹಾಗೂ ಇತರೆ ವಿವರಗಳನ್ನು ಜಾಲತಾಣ ವಿಳಾಸ **https://eproc.karnataka.gov.in/** ದಿಂದ ಅಥವಾ ಜಾಲತಾಣ **https://ctax.kar.nic.in** ದಿಂದ ಪಡೆದುಕೊಳ್ಳಬಹುದು. ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **19.12.2022 ಬೆಳಿಗ್ಗೆ 10.30 ಘಂಟೆ.** ಹೆಚ್ಚಿನ ವಿವರಗಳಿಗಾಗಿ ಕಚೇರಿಯ ದೂರವಾಣಿ ಸಂಖ್ಯೆ: 080-22208402 ಅಥವಾ ಇ-ಮೇಲ್ ವಿಳಾಸ: **addlcom.gst@ka.gov.in/ addlcom.gst@ctd.ka.gov.in** ಅನ್ನು ಸಂಪರ್ಕಿಸಬಹುದಾಗಿದೆ.

ಸಹಿ/- ಟೆಂಡರ್ ಆಹ್ವಾನಿಸುವ ಪ್ರಾಧಿಕಾರ ಮತ್ತು ವಾಣಿಜ್ಯ ತೆರಿಗೆಗಳ ಅಪರ ಆಯುಕ್ತರು (ಇ-ಆಡಳಿತ), ಬೆಂಗಳೂರು

ಕರ್ನಾಟಕ ಸರಕಾರ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ವಿಜಯಪುರ.

ಹಳೇ ಆಸ್ಪತ್ರೆ ಆವರಣ, ಶಿವಾಜಿ ವೃತ್ತ, ಅಥಣಿ ರೋಡ, ವಿಜಯಪುರ
ದೂರವಾಣಿ ಸಂ:08352-250107 ಇ-ಮೇಲ್:dhobijapur@gmail.com

ಸಂಖ್ಯೆ:ಜಿಆಸ/ಜಿಆಕುಕಅ/35/2022-23 ದಿನಾಂಕ:17.11.2022

CALLING OF EXPRESSION OF INTEREST

Expression of interest is called from specialist doctors to work in women wellness clinics on honorarium basis, at urban health centers Vijayapur.

Gynecologist-01(MS.OBG/DGO), Orthopaedician-01 (MS.ORTHO/D.ORTHO), Paediatrician-01(MD.PAED/DCH), Physician-01(MD), General Surgeon-01 (MS.General surgery), Dentist-01.

The work is on hourly basis or day basis with rotation among Women wellness clinics.

Eligible candidates should submit their applications along with honorarium for service in Rupees, to CPM Unit,RCH Section Vijayapur within 21.11.2022.

For additional information contact RCHO Vijayapur, DHO Office premises Vijayapur during office hours.

ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ವಿಜಯಪುರ

ವಾಸಾಸಂಇ/ವಿಜಯಪುರ/581/ಎಂಸಿಎ/2022-23

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಬಳ್ಳಾರಿ.

ಬೆಂಗಳೂರು ರಸ್ತೆ, ಬಂಡಿಮೋಟ್, ಬಳ್ಳಾರಿ-583101
ಇಮೇಲ್- apmcballari@gmail.com,
ದೂ:08392-250442 ಫ್ಯಾಕ್ಸ್:08392-250890

ಸಂ: ಕೃಉಮಾಸ/ಬ/ಅಭಿಕೆ/ 862 /2022-23 ದಿನಾಂಕ:15-11-2022.

Invitation of Expression of Interest ನ ಸಂಕ್ಷಿಪ್ತ ಪ್ರಕಟಣೆ

ಬಳ್ಳಾರಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಆಲದಹಳ್ಳಿ ಗ್ರಾಮದ ಅತ್ಯಾಧುನಿಕ ಸೌಲಭ್ಯವುಳ್ಳ ಒಣಮೆಣಸಿನಕಾಯಿ ಮಾರುಕಟ್ಟೆ ಉಪ ಪ್ರಾಂಗಣದಲ್ಲಿ ಸಾರ್ವಜನಿಕ-ಖಾಸಗಿ-ಸಹಭಾಗಿತ್ವದಲ್ಲಿ (Public Private Partnership) ಅಭಿವೃದ್ಧಿ ಪಡಿಸಿ ಅನುಷ್ಠಾನಗೊಳಿಸಲು Invitation of Expression of Interest ನ ಪ್ರಕಟಣೆಯನ್ನು e-Procurement ಮೂಲಕ Pre-Qualify Tender ಕರೆಯಲಾಗಿದ್ದು, ಒಣಮೆಸಿನಕಾಯಿ ಮಾರುಕಟ್ಟೆಯನ್ನು ಸಾರ್ವಜನಿಕ-ಖಾಸಗಿ-ಸಹಭಾಗಿತ್ವದಲ್ಲಿ (Public Private Partnership) ಅಡಿಯಲ್ಲಿ ಅಭಿವೃದ್ಧಿ ಪಡಿಸಿ ಅನುಷ್ಠಾನಗೊಳಿಸಿ ಹೂಡಿಕೆ ಮಾಡಲು ಇಚ್ಛೆವುಳ್ಳವರಿಗಾಗಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಬಳ್ಳಾರಿಯ ಸಹಾಯವಾಣಿ 08392-250890 ಹಾಗೂ http://eproc.karnataka.gov.in Helpdesk at 080-22441076 ನಲ್ಲಿ ಪಡೆಯಬಹುದಾಗಿದೆ.

Indent No.860/APMC/DEV/BLY/2022-23

1. ಪ್ರಿ-ಬಿಡ್ ಸಭೆಯ ದಿನಾಂಕ:06-12-2022.
2. ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ 16-12-2022 ರ ಸಾಯಂಕಾಲ 4:30 ಗಂಟೆವರೆಗೆ.**
3. ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ **ದಿನಾಂಕ 19-12-2022 ರ ಸಾಯಂಕಾಲ 4:00 ಗಂಟೆವರೆಗೆ.**

ಸಹಿ/- ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ,ಬಳ್ಳಾರಿ.
ಸಹಿ/- ಅಧ್ಯಕ್ಷರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ,ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/645/ಎಂಸಿಎ/2022-23

ಕರ್ನಾಟಕ ಸರ್ಕಾರ

ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ,

ಆಯುಕ್ತರವರ ಕಛೇರಿ, ಪಶುಪಾಲನಾ ಭವನ, ಮೊದಲನೇ ಮಹಡಿ, ಸಿ.ಬಿ.ಐ ಕಛೇರಿ ಮುಂಭಾಗ, ಬಳ್ಳಾರಿ ಮುಖ್ಯರಸ್ತೆ, ಹೆಬ್ಬಾಳ, ಬೆಂಗಳೂರು-560024.
ಇ-ಮೇಲ್: pdkldabangalore@gmail.com ಫೋನ್: 080-29533854

No: PDKLDA/LIV.INS./ಮರು ಟೆಂಡರ್/2022-23 Date : 17.11.2022

ಟೆಂಡರ್ ಅಧಿಸೂಚನೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಆಯುಕ್ತರು, ಪಶುಪಾಲನೆ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಹೆಬ್ಬಾಳ, ಬೆಂಗಳೂರು ವತಿಯಿಂದ ಕರ್ನಾಟಕ ರಾಜ್ಯದಲ್ಲಿ ಜಾನುವಾರು ವಿಮೆಯನ್ನು ಕೈಗೊಳ್ಳಲು ವಿಮಾ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ (IRDA) ಅಡಿಯಲ್ಲಿ ನೋಂದಾಯಿಸಲಾದ ವಿಮಾ ಸಂಸ್ಥೆಗಳಿಂದ ಇ-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದೆ.

ವಿಮೆಗೊಳಪಡಿಸಲು ಉದ್ದೇಶಿಸಿರುವ ಜಾನುವಾರುಗಳು: ಸ್ಥಳೀಯ / ಮಿಶ್ರತಳಿ / ಹಾಲು ಹಿಂಡುವ ರಾಸುಗಳು/ದನ/ಎಮ್ಮೆ/ಎತ್ತು, ಕತ್ತೆ, ಕುದುರೆ ಮತ್ತು ಇತರ ಜಾನುವಾರುಗಳು (ಆಡು, ಕುರಿ, ಹಂದಿಗಳು, ಮೊಲ)

ವಿಮೆಗೊಳಪಡಿಸಲುದ್ದೇಶಿಸಿರುವ ಜಾನುವಾರುಗಳ ಅಂದಾಜು ಸಂಖ್ಯೆ: 300000 ಜಾನುವಾರು ಘಟಕ.

ಲಭ್ಯವಿರುವ ಅಂದಾಜು ಅನುದಾನ ರೂ. 4500.00 ಲಕ್ಷಗಳು

ಆಸಕ್ತ ಅರ್ಹ ಟೆಂಡರ್‌ದಾರರು ದಿನಾಂಕ: 17-11-2022 ರಿಂದ ವೆಬ್‌ಸೈಟ್ https://e-proc.karnataka.gov.in ಗೆ ಭೇಟಿ ನೀಡುವ ಮೂಲಕ ಸಂಪೂರ್ಣ ದಾಖಲೆಯನ್ನು ವೀಕ್ಷಿಸಬಹುದು. ಟೆಂಡರ್‌ದಾರರು ಎಲ್ಲಾ ಸಂಬಂಧಿತ ದಾಖಲೆಗಳನ್ನು 17-11-2022 ರಿಂದ 01-12-2022 ಸಂಜೆ 4.00 ಗಂಟೆಯವರೆಗೆ ಅಪ್ಲೋಡ್ ಮಾಡಬಹುದು.

ಸಹಿ/-
DIPR/CP/3154/Zen/2022-23 ಸದಸ್ಯ ಕಾರ್ಯದರ್ಶಿ, ಟೆಂಡರ್ ಆಹ್ವಾನ ಸಮಿತಿ

ಸಮಗ್ರ ಶಿಕ್ಷಣ-ಕರ್ನಾಟಕ

ಹೊಸ ಸಾರ್ವಜನಿಕ ಕಛೇರಿಗಳ ಪೂರಕ ಕಟ್ಟಡ, ನೃಪತುಂಗ ರಸ್ತೆ, ಕೆ.ಆರ್. ವೃತ್ತ, ಬೆಂಗಳೂರು-560 001.
ವೆಬ್‌ಸೈಟ್: www.schooleducation.kar.nic.in, ಇ-ಮೇಲ್: ssakarnataka@gmail.com

ಸಂಖ್ಯೆ:ಎಸ್.ಎಸ್.ಕೆ/ಕ್ಯೂ.ಎಂ.ಟಿ/ಕ.ಹ.ಸಾ/ಟೆಂಡರ್/2022-23 ದಿನಾಂಕ: 18.11.2022

ಇ-ಟೆಂಡರ್ ಪ್ರಕಟಣೆ
(ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ವಿಷಯ: ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ **"ಕಲಿಕಾ ಹಬ್ಬ"** ಪರಿಕರಗಳನ್ನು ಮುದ್ರಿಸಿ ಸರಬರಾಜು ಮಾಡಲುಟೆಂಡರ್‌ಕರೆಯುವ ಬಗ್ಗೆ. 2022-23ನೇ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ **"ಕಲಿಕಾ ಹಬ್ಬ"** ಪರಿಕರಗಳನ್ನುಮುದ್ರಿಸಿ 34 ಜಿಲ್ಲೆಗಳಿಗೆ ಸರಬರಾಜುಮಾಡಲುಅರ್ಹ ಬಿಡ್‌ದಾರರಿಂದ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಆಹ್ವಾನಿಸಿದೆ.

1)ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಹಾಗೂ **ಸಮಯ: 25.11.2022 ಸಂಜೆ 05:00 ಗಂಟೆಯವರೆಗೆ.** 2) ಪ್ರಿ ಬಿಡ್ ಸಭೆಯ **ದಿನಾಂಕ: 21.11.2022ರಂದು ಮಧ್ಯಾಹ್ನ 03:00 ಗಂಟೆಗೆ.** 3) ವಿವರಗಳಿಗಾಗಿ **http://eproc.karnataka.gov.in** ಗಮನಿಸುವುದು.

ಸಹಿ/-
ರಾಜ್ಯಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ -ಕರ್ನಾಟಕ

ವಾಸಾಸಂಇ/ವಾಪ್ರ/ಜಿಎ/3143/2022-23

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ರಾಯಚೂರು

ದೂರವಾಣಿ ಸಂಖ್ಯೆ : 08532-225778 & 234747

ಇ-ಪ್ರೊಕ್ಯುರ್‌ಮೆಂಟ್ ಅಲ್ಪಾವದಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ-1, 2, 3 & 4)

THESE WORKS ARE GENARAL & SC CONTRACTORS

1) ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ: ಲೋಇ/ರಾವಿ/ತಾಂಶಾ-4/ಟೆಂಪ್ರ/2022-23/4266 ದಿನಾಂಕಃ 14-11-2022. 2) ಕಾಮಗಾರಿ ಹೆಸರು: ರಾಯಚೂರು ಜಿಲ್ಲೆಯ ಒಟ್ಟು 7 ಕಾಮಗಾರಿಗಳು. ಸಿಂಧನೂರು ತಾಲೂಕು ವಿವಿದೆಡೆ ವಿವಿಧ ರಸ್ತೆ, ಕಟ್ಟಡ ಹಾಗೂ ಇನ್ನಿತರೆ ಕಾಮಗಾರಿಗಳ ನಿರ್ಮಾಣ. ಮತ್ತು ಅಭಿವೃದ್ಧಿ ಕಾಮಗಾರಿ. 3) ಕಾಮಗಾರಿಯ ಮೊತ್ತ: ಕನಿಷ್ಠ ರೂ. 1544865.52 ಗರಿಷ್ಠ ರೂ. 40076304.10. 4) ಮುಂಗಡ ಠೇವಣಿ ಮೊತ್ತ: ಕನಿಷ್ಠ ರೂ. 15500.00 ಗರಿಷ್ಠ ರೂ. 602000.00. 5) ಕಾಲಾವಧಿ (ಮಳೆಗಾಲ ಸೇರಿ): ಕನಿಷ್ಠ 4 (ನಾಲ್ಕು) ತಿಂಗಳು ಗರಿಷ್ಠ 6 (ಆರು) ತಿಂಗಳು 6) ಟೆಂಡರ್ ಸ್ವೀಕರಿಸುವ ಅತಿಂಮ ದಿನಾಂಕ: 23-11-2022 ಸಂಜೆ 4.00 ಗಂಟೆಯವರೆಗೆ. 7) ಟೆಂಡರ್ ತೆರೆಯುವ ದಿನಾಂಕ: 24-11-2022 ಸಂಜೆ 4.30 ಗಂಟೆಯವರೆಗೆ

ಹೆಚ್ಚಿನ ವಿವರಗಳು ವೆಬ್‌ಸೈಟ್ https://www.eproc. karnataka.gov.in ಮುಖಾಂತರ ನೋಡಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ ರಾಯಚೂರು.

ವಾ.ಸಾ.ಸಂ.ಇ/ರಾಯಚೂರು/416ಎಂ.ಸಿ.&ಎ/2022-23

ಕರ್ನಾಟಕ ಸರ್ಕಾರ

ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ

ಜಿಲ್ಲಾ ಆಡಳಿತ ಭವನ, ಹೊಡಪೇಟೆ ರಸ್ತೆ, ಕೊಪ್ಪಳ, ದೂ.ಸಂ.: 08539-225030

ಕ್ರ.ಸಂ	ವಿವರ	ಭಾವಚಿತ್ರ
1	ಮಗುವಿನ ಹೆಸರು : ತಾರಾ ವಯಸ್ಸು : 6 ವರ್ಷ ಲಿಂಗ : ಹೆಣ್ಣು ತೂಕ : 15 ಆರೋಗ್ಯದ ಸ್ಥಿತಿ : ಉತ್ತಮ ಮಗು ದೊರೆತ ಸ್ಥಳ : ಕೊಪ್ಪಳ ನಗರದ ದಿವಟರ್ ಸರ್ಕಲ್	
2	ಮಗುವಿನ ಹೆಸರು : ಲಕ್ಷ್ಮೀ ವಯಸ್ಸು : 7 ವರ್ಷ ಲಿಂಗ : ಹೆಣ್ಣು ತೂಕ : 16 ಆರೋಗ್ಯದ ಸ್ಥಿತಿ : ಉತ್ತಮ ಮಗು ದೊರೆತ ಸ್ಥಳ : ಕೊಪ್ಪಳ ನಗರದ ದಿವಟರ್ ಸರ್ಕಲ್	
3	ಮಗುವಿನ ಹೆಸರು : ಹನುಮವ್ವ ವಯಸ್ಸು : 10 ಲಿಂಗ : ಹೆಣ್ಣು ತೂಕ : 19 ಆರೋಗ್ಯದ ಸ್ಥಿತಿ : ಮಗು ದೊರೆತ ಸ್ಥಳ : ಕೊಪ್ಪಳ ನಗರದ ದಿವಟರ್ ಸರ್ಕಲ್	

ಈ ಮಗುವಿನ ಪಾಲಕರು ಅಥವಾ ಮಗುವಿನ ಪಾಲಕರ ಬಗ್ಗೆ ಮಾಹಿತಿಯುಳ್ಳ ಸಾರ್ವಜನಕರು ಅಥವಾ ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ, ಕೊಪ್ಪಳ ದೂ.ಸಂ- 08539-200755, ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ ದೂ.ಸಂ: 08539-225030.

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಕೊಪ್ಪಳ.

ಡಿಐಪಿಆರ್/ಕೊಪ್ಪಳ/441/ಎಂಸಿಎ/2022-23

NMDC Limited

(A Government of India Enterprise)
'Khanij Bhavan', 10-3-311/A, Castle Hills, Masab Tank, Hyderabad -500028
Corporate Identity Number (CIN) - L13100TG1958GOI001674

CONTRACTS DEPARTMENT/Engineering & Project Division
E-Tender Notice (Open Tender Enquiry for Domestic Bidding)

Tender Enquiry No: HO(Contracts)/INT. FINISH/Quarters/DNM/2022/901 dated 19-11-2022.

[MSTC Ref.No. : NMDC/HO/71/22-23/ET/597]

NMDC Limited, A "NAVARATNA" Public Sector Company under Ministry of Steel, Govt. of India, invites online bids from experienced domestic bidders for the work of **'Internal Finishing, Distempering and Providing Tiles of Vacated Quarters for the Year 2022-23 (Type-1D, II, A, C and Type-III), Donimalai'**

The detailed NITs and Bid documents scan be viewed and /or downloaded from **19-11-2022** to **19-12-2022** from following website links;

1. NMDC website – **http://tenders.nmdc.co.in/nmdctender**
2. Central Public Procurement portal – **http://www.eprocure.gov.in/epublish/app** and
3. MSTC portal - **https://www.mstcecommerce.com/eprochome/nmdc/buyer_login.jsp**

For accessing the bid document from MSTC portal, bidder has to register as 'New Vendor' at MSTC website link **https://www.mstcecommerce.co.in/eprochome/nmdc/buyer_login.jsp** and search Tender Event No.NMDC/HO/71/22-23/ET/597. For further help refer to **'vendor guide'** given in MSTC website.

The bidders are requested to submitt heir bids online through MSTC Limited e-procurement website. For further clarification, the following can be contacted: Chief General Manager (Contracts), NMDC Limited, Hyderabad, Fax No. 040-23534746, Tel No. 040-23532800, email: **contracts@nmdc.co.in**

For and on behalf of NMDC Ltd
Chief General Manager (Contracts)

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ

ಆರೋಗ್ಯ ಸೌಧ, 6ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು-560023
ದೂರವಾಣಿ: 080-23295626, ಇ-ಮೇಲ್: ddehospital-hfws@karnataka.gov.in

ಸಂಖ್ಯೆ: e-H/ECRP ICT Procurement/27/2021-22 (e-588231) ದಿನಾಂಕ: 17.11.2022

ಟೆಂಡರ್ ಪ್ರಕಟಣೆ

ಉಲ್ಲೇಖ: ಈ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: NRHM/2022-23/IND302 ECRP Phase II Date: 16.11.2022

ಮೇಲ್ಕಂಡ ಉಲ್ಲೇಖಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ **ಇ-ಆಸ್ಪತ್ರೆ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಅವಶ್ಯವಿರುವ ಐ.ಸಿ.ಟಿ ಸಲಕರಣೆಗಳನ್ನು ಖರೀದಿಸಲು** ಇ-ಟೆಂಡರಿಂಗ್ ವ್ಯವಸ್ಥೆಯಡಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮ 2000 ರಂತೆ ರಾಷ್ಟ್ರವ್ಯಾಪಿ ಟೆಂಡರ್ ಕರೆಯಲಾಗಿದೆ.

ತಾಂತ್ರಿಕ ವಿವರಣೆ, ಇ.ಎಂ.ಡಿ ಟೆಂಡರ್ ನಿಯಮಾವಳಿ ಹಾಗೂ ಇತರೆ ಮಾಹಿತಿಯನ್ನು ಇ-ಟೆಂಡರ್ ವ್ಯವಸ್ಥೆಯಡಿಯಲ್ಲಿ ವೆಬ್‌ಸೈಟ್ ಮುಖಾಂತರ **https://eproc.karnataka.gov.in** ನಲ್ಲಿ ಈ ಕೆಳಕಂಡಂತೆ ಟೆಂಡರ್‌ಗಳ ದಸ್ತಾವೇಜನ್ನು ಡೌನ್‌ಲೋಡ್ ಹಾಗೂ ಅಪ್‌ಲೋಡ್ ಮಾಡಬಹುದು. **ಟೆಂಡರ್ ಅಧಿಸೂಚನೆ ಸಂಖ್ಯೆ:** NRHM/2022-23/IND302 ECRP Phase II ಟೆಂಡರ್ ದಸ್ತಾವೇಜನ್ನು ಡೌನ್‌ಲೋಡ್ ಮಾಡುವ ದಿನಾಂಕ: **16.11.2022.** ಟೆಂಡರ್‌ಗಳ ದಸ್ತಾವೇಜನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ: **05.12.2022ರಂದು ಸಂಜೆ 5.00 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕೆಲಸದ ಅವಧಿಯಲ್ಲಿ ಪಡೆಯಬಹುದಾಗಿದೆ.

ಸಹಿ/-
DIPR/CP/3153/BCPL/2022-23 ಉಪ ನಿರ್ದೇಶಕರು (ಇ-ಆರೋಗ್ಯ)

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿಯಮಿತ (ಬೆಂಗಳೂರು ಡೇರಿ)

ಬಮೂಲ್
ಡಿ.ಆರ್.ಕಾಲೇಜು ಅಂಚೆ, ಡಾ: ಎಂ.ಹೆಚ್.ಮರೀಗೌಡರಸ್ತೆ, ಬೆಂಗಳೂರು-560029. ದೂರವಾಣಿ : 080-26096248
ಇ-ಮೇಲ್: bamulpurchase@gmail.com, ವೆಬ್‌ಸೈಟ್ : www.bamulnandini.coop.

ಐಎಫ್‌ಟಿ ಸಂಖ್ಯೆ:ಬಮೂಲ್/ಪಿಯುಆರ್/ಟೆಂಡರ್ ಇ-ಟೆಂಡರ್-285/2022-23 ದಿ: 14.11.2022

ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.(ಬಮೂಲ್), ಬೆಂಗಳೂರು ರವರು ಆಸಕ್ತಿಯುಳ್ಳ ಅರ್ಹ ತಯಾರಕರು/ ಸರಬರಾಜುದಾರರಿಂದ ಈ ಕೆಳಕಂಡ ಸಾಮಗ್ರಿಗಳ ಸರಬರಾಜಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಇ-ಟೆಂಡರ್ ಕರೆಯಲಾಗಿದೆ.

ಕ್ರ. ಸ.	ಸಾಮಗ್ರಿಯ ವಿವರ	ಪರಿಮಾಣ	ಅಂದಾಜು (ಲಕ್ಷಗಳಲ್ಲಿ)	ಟೆಂಡರ್ ಸಂಖ್ಯೆ
01	Supply of Cheese Rennet to Kanakapura Dairy	800000 Grams	90.96	**286(01)**
02	PP/Pet Strapping Tape Roll (Sealing PVC Tape 3-4kg roll for Packaging Purpose))	1,08,000 Kgs	127.44	**286(02)**
03	Supply, Installation , Commissioning & Testing of $10m^3$/hour capacity screw dehydrator, Make: Avalon/SNP / E Water mission India / AMCON (Sludge dewatering) to ETP Plant at Kanakapura Dairy.	01 No	24.00	**286(03)**
04	Supply of 5 kgs Capacity Printed Cotton Cloth Bags	50,000 Nos	7.5	**286(04)**
05	Supply of 3 Ply Corrugated Box to pack 450/500ml UHT Milk with partitions capacity 9/10 Litres to Kanakapura Dairy	20,00,000 Nos	480.00	**286(05)**

1	ಇ-ಟೆಂಡರ್ ದಾಖಲೆಗಳು ಲಭಿಸುವ ದಿನಾಂಕ ಮತ್ತು ಸಮಯ	17.11.2022 ರಿಂದ 16.12.2022 ಅಪರಾಹ್ನ 02.00 ಗಂಟೆವರೆಗೆ
2	ಪ್ರೀ-ಬಿಡ್ ಮೀಟಿಂಗ್ ಮತ್ತು ಟೆಂಡರ್ ಬಗ್ಗೆ ಸ್ಪಷ್ಟನೆ ದಿನಾಂಕ ಮತ್ತು ಸಮಯ	07.12.2022 ಬೆಳಿಗ್ಗೆ 11.00 ಗಂಟೆಗೆ ವರೆಗೆ
3	ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	16.12.2022 ಅಪರಾಹ್ನ 02.00 ಗಂಟೆವರೆಗೆ
4	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	17.12.2022 ಅಪರಾಹ್ನ 02.35 ಗಂಟೆಗೆ
5	ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	22.12.2022 ಬೆಳಿಗ್ಗೆ 11.30 ಗಂಟೆಗೆ
6	ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ತೆರೆಯುವ ಸ್ಥಳ: **ಬೆಂಗಳೂರು ಸಹಕಾರ ಹಾಲು ಒಕ್ಕೂಟ (ನಿ.) (ಬೆಂಗಳೂರು ಡೇರಿ) ಮಂಡಲಿ ಸಭಾಂಗಣ**	

ಟೆಂಡರ್‌ದಾರರು ಮೇಲೆ ತಿಳಿಸಿರುವ ಸೇವೆಗಳಿಗೆ ಪ್ರತ್ಯೇಕ ಟೆಂಡರ್ ಸಲ್ಲಿಸಬೇಕು. ಗುತ್ತಿಗೆ ನೀಡಿಕೆಗೆ ಅರ್ಹರಾಗಲು ಹೊಂದಿರಬೇಕಾದ ಅರ್ಹತಾ ಅಗತ್ಯತೆಯನ್ನು ವಿಭಾಗ VII ರಲ್ಲಿ ತಿಳಿಸಲಾಗಿದೆ. ಇ.ಎಂ.ಡಿ. ಬಾಬ್ತಿನ ಹಣವು ಟೆಂಡರ್ ಅವಧಿಯ 45 ದಿನಗಳ ವಾಯ್ದೆ ಮೀರಿದ್ದು, ಅಂದರೆ ಒಟ್ಟು 135 ದಿನಗಳ ಸಿಂಧುತ್ವದ ಅವಧಿಗೆ ಅನ್ವಯವಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕ ಇ-ಪಾವತಿಯ ವಿಧಾನಗಳು ಮತ್ತು ಟೆಂಡರ್ ದಾಖಲೆಗಳ ವಿವರವನ್ನು ವೆಬ್‌ಸೈಟ್ **www.eproc.karnataka.gov.in**ನಲ್ಲಿ ವಿಕ್ಷಿಸಬಹುದು. **Tender No: KMF/BAMUL/PUR/2022-23/286.**

ಸಹಿ/- ವ್ಯವಸ್ಥಾಪಕ ನಿರ್ದೇಶಕರು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ (ಬಮೂಲ್)

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ಯಾದಗಿರಿ ವಿಭಾಗ, ಯಾದಗಿರಿ

GSTIN:29BLR002252F1DR

ಸಂ.ಕಾನಿಅ/ಲೋಇ/ಯಾವಿ/ತಾಶಾ-1/ಇ-ಟೆಂಡರ್ ಪ್ರಕಟಣೆ/2022-23/4729, ದಿನಾಂಕ: 16.11.2022

-:: ಅಲ್ಪಾವಧಿ ಇ -ಟೆಂಡರ್ ಅಧಿಸೂಚನೆ ::-

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ-4 ರಂತೆ ಈ ವಿಭಾಗ ವ್ಯಾಪ್ತಿಯ 2022-23ನೇ ಸಾಲಿನ ಲೆಕ್ಕ ಶೀರ್ಷಿಕೆ ಕೆಕೆಆರ್‌ಡಿಬಿ ಯೋಜನೆ ಅಡಿಯಲ್ಲಿ ದ್ವಿ-ಲಕೋಟೆ ಪದ್ಧತಿಯಲ್ಲಿ e-procurement ಮುಖಾಂತರ 01 ಕಾವುಗಾರಿಗೆ ಟೆಂಡರ್ ಕರೆಯುಲಾಗಿದೆ. ಇಂಡೆಂಟ್ ಸಂಖ್ಯೆಃ KPWD/2022-23/EL/WORK_INDENT159808. 2) ಕಾಮಗಾರಿ ಅಂದಾಜು ಮೊತ್ತ: ರೂ: 300.00 ಲಕ್ಷ. 3) ಗುತ್ತಿಗೆದಾರರ ಅರ್ಹತೆ ವಿವರ: GST Registration, MSME Registration & Firm Registration 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ರೂ: 3,80,500.00. 5) ಪ್ರದರ್ಶನ : 19.11.2022 (ಮುಖ್ಯ ಇಂಜೀನೀಯರ್‌ರವರ ಕಛೇರಿ, ಸಂಪರ್ಕ ಮತ್ತು ಕಟ್ಟಡಗಳು (ಈ), ಲೋಕೋಪಯೋಗಿ ಭವನ, ಕಲಬುರಗಿ) 6) ಪ್ರೀ-ಬಿಡ್ ಮೀಟಿಂಗ್ ದಿನಾಂಕ: 23.11.2022 (11.30 ಗಂಟೆವರೆಗೆ). 7) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: 25.11.2022 (17.30 ಗಂಟೆವರೆಗೆ). 8) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ : 30.11.2022 (16.00 ಗಂಟೆವರೆಗೆ). 9) ಟೆಂಡರ/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02.12.2022 (11.30 ಗಂಟೆ ನಂತರ) 10) ಆರ್ಥಿಕ ಬಿಡ್ ತೆರೆಯುವ ದಿನಾಂಕ: 05.12.2022 (11.30 ಗಂಟೆ ನಂತರ). 11) ಸೂಚನೆ : ಜಿ.ಎಸ್.ಟಿ ಪ್ರತ್ಯಕ್ಷವಾಗಿ ನೀಡಲಾಗುವುದು. 12) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ. 13) ಅಂತರ್ಜಾಲ ತಾಣದ ವಿಳಾಸ : www.e-proc.karnataka.gov.in

ಸಹಿ/- ಕಾರ್ಯನಿರ್ವಾಹಕ ಇಂಜನಿಯರರು
ಲೋಕೋಪಾಯೋಗಿ ಇಲಾಖೆ, ವಿಭಾಗ ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/319/ಎಂ.ಸಿ.&ಎ/2022-23

ಕರ್ನಾಟಕ ಸರ್ಕಾರ

ಜಿಲ್ಲಾ ಪಂಚಾಯತ ಬಾಗಲಕೋಟೆ
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬಾಗಲಕೋಟೆ

ಜಿಲ್ಲಾ ಆಡಳಿತ ಭವನ, ಕೊಠಡಿ ಸಂಖ್ಯೆ:126, ನವನಗರ, ಬಾಗಲಕೋಟೆ
ದೂರವಾಣಿ:08354- 235042 ಇ-ಮೇಲ್: bgkeezpe@yahoo.com ಫ್ಯಾಕ್ಸ್: 08354-235043

ಸಂ: ಕಾನಿಇಂ/ಪಂರಾಇಂವಿ/ಬಿಜಿಕೆ/ಪಿಬಿ-3/ಟೆಂಡರ್/2022-23/3465 ದಿನಾಂಕ:17.11.2022

-: ಅಲ್ಪಾವಧಿ ಇ-ಪ್ರೋಕ್ಯೂರ್‌ಮೆಂಟ್ ಏಕ-ಲಕೋಟೆ ಮರು ಟೆಂಡರ್ ಪ್ರಕಟಣೆ:-ಕೆ.ಡಬ್ಲೂ-1 ಬಿಡ್ ಡಾಕ್ಯೂಮೆಂಟ್

ಕರ್ನಾಟಕ ಸರಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಅಧಿಕೃತ ಅರ್ಹ ಗುತ್ತಿಗೆದಾರರಿಂದ 2021-22ನೇ ಸಾಲಿನ ಲೆಕ್ಕಶೀರ್ಷಿಕೆ:-5054 ರಡಿ ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಗ್ರಾಮೀಣ ರಸ್ತೆ ಕಾಮಗಾರಿಗಳು ರೂ.25.00 ಕೋಟಿ ಅನುದಾನದಡಿ (ಆದೇಶ ಸಂಖ್ಯೆ:ಗ್ರಾ ಅಪ/56(15)-1/ಆರ್‌ಆರ್‌ಸಿ 2022 (ಇ-697183), ಬೆಂಗಳೂರು ದಿನಾಂಕ: 18.03.2022) ಬಾಗಲಕೋಟೆ ಜಿಲ್ಲೆಯ ಬೀಳಗಿ ಮತಕ್ಷೇತ್ರದ ಬಾಗಲಕೋಟೆ, ಬಾದಾಮಿ ಹಾಗೂ ಬೀಳಗಿ ತಾಲೂಕಿನ ಈ ಕೆಳಗಿನ ಕಾಮಗಾರಿಗೆ Standard Tender Document KW-2 ರ ನಿಬಂಧನೆಗೊಳಪಟ್ಟಂತೆ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಆದ್ಯಾದೇಶ 1999-2000ರ ಪ್ರಕಾರ ಆ್ಯಕ್ಟ್ 2000ರ ನಿಯಮದಂತೆ ಏಕ-ಲಕೋಟೆ ಪದ್ಧತಿಯನ್ವಯ ಐಟಂವಾರು ಗುತ್ತಿಗೆಯನ್ನು ಇ-ಪ್ರೋಕ್ಯೂರ್‌ಮೆಂಟ್ ಮೂಲಕ ಟರ್ನಕೀ ಆಧಾರದ ಮೇಲೆ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಸಾಮಾನ್ಯ ಗುತ್ತಿಗೆಯಲ್ಲಿ ಭಾಗವಹಿಸುವ ಕಾಮಗಾರಿಯ ಇಂಡೆಂಟ್ ನಂ:93395/Call-2 ಇದ್ದು, ಕಾಮಗಾರಿ ವಿವರ, ಅಂದಾಜು ಮೊತ್ತ, ಗುತ್ತಿಗೆದಾರರ ಅರ್ಹತೆ ವಿವರ, ಟೆಂಡರ್ ಮೊತ್ತ (ರೂ.50.00 ಲಕ್ಷ ಮಿತಿಗೊಳ ಪಟ್ಟು) ಟೆಂಡರ್ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ ಮೊತ್ತ ಎಲ್ಲ ವಿವರಗಳು ಇ-ಪೋರ್ಟಲ್‌ನಲ್ಲಿ ಇದ್ದಂತೆ.

ಇ-ಪ್ರೋಕ್ಯೂರ್‌ಮೆಂಟ್ ಮುಖಾಂತರ ಅರ್ಜಿ ಸಲ್ಲಿಸುವ ಹಾಗೂ ಶೆಡ್ಯೂಲ್-ಬಿಯನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: 28.11.2022 ರ ಸಾಯಂಕಾಲ 5.30 ಗಂಟೆವರೆಗೆ.

ಇ-ಪ್ರೋಕ್ಯೂರ್‌ಮೆಂಟ್‌ನಲ್ಲಿ ಆರ್ಥಿಕ ಬಿಡ್‌ನ್ನು ಸಾಧ್ಯವಾದಲ್ಲಿ ತೆರೆಯುವ ದಿನಾಂಕ ಮತ್ತು ಸಮಯ: 30.11.2022 ರಂದು ಮುಂಜಾನೆ 11.00 ಗಂಟೆಯ ನಂತರ.

ಸೂಚನೆ: ಹೆಚ್ಚಿನ ವಿವರಗಳಿಗಾಗಿ ಈ ಕೆಳಗೆ ಸಹಿ ಮಾಡಿದವರ ಕಛೇರಿಗೆ ಅಥವಾ ವೆಬ್‌ಸೈಟ್ http://www.eprocurment.karnataka.gov.in ಮುಖಾಂತರ ಸಂಪರ್ಕಿಸಬಹುದಾಗಿದೆ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು,
DIPR/BGK/RO-NO-600/MCA/2022-23 ಪಂಚಾಯತ ರಾಜ್ (ಇಂ) ವಿಭಾಗ, ಬಾಗಲಕೋಟೆ

₹236 ಕೋಟಿಗೂ ಅಧಿಕ ವಿದ್ಯುತ್ ಶುಲ್ಕ ಬಾಕಿ

ಬಿಬಿಎಂಪಿ, ಜಲಮಂಡಳಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಸ್ಕಾಂನ ಇಂದಿರಾ ನಗರ, ಕೋರಮಂಗಲ, ಶಿವಾಜಿನಗರ, ಮಲ್ಲೇಶ್ವರ ಮತ್ತು ವೈಟ್‌ಫೀಲ್ಡ್ ವಿಭಾಗಗಳಲ್ಲಿನ ಜಲಮಂಡಳಿ ಮತ್ತು ಬಿಬಿಎಂಪಿ ನೀರು ಸರಬರಾಜು ವಿಭಾಗಗಳು ₹236 ಕೋಟಿಗೂ ಅಧಿಕ ವಿದ್ಯುತ್ ಶುಲ್ಕ ಬಾಕಿ ಉಳಿಸಿಕೊಂಡಿವೆ. ಈ ಐದು ವಿಭಾಗಗಳು ಜಲಮಂಡಳಿ ಮತ್ತು ಬಿಬಿಎಂಪಿಗೆ ಬಿಲ್ ಪಾವತಿಸುವಂತೆ ಕೋರಿ ಪ್ರತ್ಯೇಕ ನೋಟಿಸ್ ಜಾರಿಗೊಳಿಸಿವೆ.

ವಿದ್ಯುತ್ ಬಿಲ್ ವಸೂಲಿಗೆ ಕ್ರಮಕೈಗೊಳ್ಳಲು ಬೆಸ್ಕಾಂ ಎಂಡಿ ಮಹಾಂತೇಶ ಬೀಳಗಿ ಇತ್ತೀಚೆಗೆ ನಡೆದ ಅಧಿಕಾರಿಗಳ ಸಭೆಯಲ್ಲಿ ಸೂಚನೆ ನೀಡಿದ್ದರು.

ಬೆಸ್ಕಾಂನ ಶಿವಾಜಿನಗರ ವಿಭಾಗಗಳ ವ್ಯಾಪ್ತಿಗೆ ಬರುವ ಪಿಳ್ಳಣ್ಣ ಗಾರ್ಡನ್, ಬಂಬೂ ಬಜಾರ್, ಕಾಕ್ಸ್ ಟೌನ್, ಬಾಣಸವಾಡಿ ಮತ್ತು ನಾಗವಾರ ಉಪವಿಭಾಗಗಳಿಗೆ ಜಲಮಂಡಳಿ ಮತ್ತು ಬಿಬಿಎಂಪಿ ನೀರು ಸರಬರಾಜು ವಿಭಾಗ ಕ್ರಮವಾಗಿ ₹27.54 ಕೋಟಿ ಮತ್ತು 90.20 ಕೋಟಿ ಬಾಕಿ ಉಳಿಸಿಕೊಂಡಿವೆ.

ಬೆಸ್ಕಾಂನ ಕೋರಮಂಗಲ ವಿಭಾಗದ ಆಸ್ಟಿನ್ ಟೌನ್, ಕೋರಮಂಗಲ, ಮುರುಗೇಶ್ ಪಾಳ್ಯ, ಮಡಿವಾಳ, ಎಚ್.ಎ.ಎಲ್ ಉಪ ವಿಭಾಗಗಳ ವ್ಯಾಪ್ತಿಗೆ ಒಳಪಡುವ 10 ವಾರ್ಡ್‌ಗಳಿಂದ ಜಲಮಂಡಳಿ ₹23.71 ಕೋಟಿ ವಿದ್ಯುತ್ ಶುಲ್ಕ ಬಾಕಿ ಇರಿಸಿಕೊಂಡಿದ್ದು, 19 ವಾರ್ಡ್‌ಗಳಿಂದ ಬಿಬಿಎಂಪಿ ಸುಮಾರು ₹22.20 ಕೋಟಿ ವಿದ್ಯುತ್ ಶುಲ್ಕ ಪಾವತಿಸಬೇಕಾಗಿದೆ.

ಮಲ್ಲೇಶ್ವರ ವಿಭಾಗಗಳ ವ್ಯಾಪ್ತಿಗೆ ಒಳಪಡುವ ಉಪ ವಿಭಾಗಗಳಿಗೆ ಜಲಮಂಡಳಿ, ಬಿಬಿಎಂಪಿ ಕ್ರಮವಾಗಿ ₹13.60 ಕೋಟಿ ಮತ್ತು ₹16.70 ಕೋಟಿಗಳನ್ನು ಬೆಸ್ಕಾಂಗೆ ಪಾವತಿಸಬೇಕಾಗಿದೆ. ಮಲ್ಲೇಶ್ವರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಎರಡೂ ಸಂಸ್ಥೆಗಳಿಗೆ ಬಿಲ್ ಪಾವತಿಸಲು ಕೋರಿ ನೋಟಿಸ್ ಜಾರಿಗೊಳಿಸಿದ್ದಾರೆ.

ಇಂದಿರಾನಗರ ವಿಭಾಗಕ್ಕೆ ಬಿಬಿಎಂಪಿ, ಜಲಮಂಡಳಿ, ಕಬ್ಬನ್ ಪಾರ್ಕ್, ತೋಟಗಾರಿಕೆ ಇಲಾಖೆ, ಅಂಚೆ ಕಚೇರಿ, ನ್ಯಾಷನಲ್ ಏರೋನಾಟಿಕ್ಸ್ ಲಿಮಿಟೆಡ್, ಎಲ್‌ಐಸಿ, ಬಿಎಸ್‌ಎನ್‌ಎಲ್, ಬಿಡಿಎ, ಬಿಎಂಆರ್‌ಸಿಎಲ್, ಡಿಆರ್‌ಡಿಒ, ಹೈಕೋರ್ಟ್ ವಸತಿಗೃಹ ಮುಂತಾದ ಸರ್ಕಾರಿ ಕಚೇರಿಗಳು ಒಟ್ಟು ₹36.25 ಕೋಟಿ ವಿದ್ಯುತ್ ಬಿಲ್ ಪಾವತಿಸಬೇಕಾಗಿದೆ ಎಂದು ಇಂದಿರಾನಗರ ಕಾರ್ಯನಿರ್ವಾಹಕ ಎಂಜಿನಿಯರ್ ನೀಡಿರುವ ನೋಟಿಸ್‌ನಲ್ಲಿ ವಿವರಿಸಲಾಗಿದೆ.

ಹಾಗೆಯೇ, ವೈಟ್ ಫೀಲ್ಡ್ ವಿಭಾಗದ ವ್ಯಾಪ್ತಿಗೆ ಬರುವ ಒಟ್ಟು 7 ವಾರ್ಡ್‌ಗಳಿಂದ ಬೆಸ್ಕಾಂಗೆ ಜಲಮಂಡಳಿ ಮತ್ತು ಬಿಬಿಎಂಪಿಯಿಂದ ಒಟ್ಟು ₹5.81 ಕೋಟಿ ವಿದ್ಯುತ್ ಶುಲ್ಕ ಬಾಕಿ ಇದೆ.

ಬೆಸ್ಕಾಂ ವಿದ್ಯುತ್ ಅದಾಲತ್

ಬೆಂಗಳೂರು: ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳ 87 ಹಳ್ಳಿಗಳಲ್ಲಿ ನ.19ರಂದು ವಿದ್ಯುತ್ ಅದಾಲತ್ ನಡೆಯಲಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿ ತಿಂಗಳ ಮೂರನೇ ಶನಿವಾರ ಬೆಸ್ಕಾಂ ವಿದ್ಯುತ್ ಅದಾಲತ್ ಆಯೋಜಿಸುತ್ತಿದೆ. ವಿದ್ಯುತ್ ಸಂಬಂಧಿತ ಸಮಸ್ಯೆಗಳಿಗೆ ಅಧಿಕಾರಿಗಳು ಸ್ಥಳದಲ್ಲೇ ಪರಿಹಾರ ಸೂಚಿಸುತ್ತಿದ್ದು, ಗ್ರಾಹಕರಿಗೆ ಅನುಕೂಲವಾಗುತ್ತಿದೆ. ಜೊತೆಗೆ ಬೆಸ್ಕಾಂ ಒದಗಿಸುತ್ತಿರುವ ಸೇವೆಗಳು ಮತ್ತು ಯೋಜನೆಗಳ ಕುರಿತು ಅದಾಲತ್‌ನಲ್ಲಿ ಗ್ರಾಹಕರಿಗೆ ಮಾಹಿತಿ ಒದಗಿಸಲಾಗುತ್ತಿದೆ.

ರೈಲ್ವೆ ಪ್ರಧಾನ ಮುಖ್ಯ ಎಂಜಿನಿಯರ್ ಬಂಧನ

ಬೆಂಗಳೂರು: ಗುತ್ತಿಗೆ ಮುಂದುವರಿಸಲು ಗುತ್ತಿಗೆದಾರರೊಬ್ಬರಿಂದ ₹ 75,000 ಲಂಚ ಪಡೆಯುತ್ತಿದ್ದ ಯಲಹಂಕ ರೈಲು ಗಾಲಿ ಕಾರ್ಖಾನೆ ಪ್ರಧಾನ ಮುಖ್ಯ ಎಂಜಿನಿಯರ್ ಜಿ.ಕೆ. ಜಲನ್ ಅವರನ್ನು ಸಿಬಿಐ ಅಧಿಕಾರಿಗಳು ಗುರುವಾರ ಬಂಧಿಸಿದ್ದಾರೆ. ಸಿವಿಲ್ ಕಾಮಗಾರಿಗಳ ಗುತ್ತಿಗೆದಾರರೊಬ್ಬರು ಯಲಹಂಕ ರೈಲು ಗಾಲಿ ಕಾರ್ಖಾನೆಯಲ್ಲಿ ಕಾಮಗಾರಿ ಗುತ್ತಿಗೆ ಪಡೆದಿದ್ದರು. ಗುತ್ತಿಗೆ ಮುಂದುವರಿಸಲು ₹ 1 ಲಕ್ಷ ಲಂಚ ನೀಡುವಂತೆ ಅಧಿಕಾರಿ ಬೇಡಿಕೆ ಇಟ್ಟಿದ್ದರು.

ಸುಧಾ, ಮಯೂರ ಓದಿರಿ


ಮಕ್ಕಳಲ್ಲಿ ಸಮಸ್ಯೆ: ಜಾಗೃತಿ ವಾಕಥಾನ್ ನಾಳೆ

ಬೆಂಗಳೂರು: ಕೋವಿಡ್ ಕಾಣಿಸಿಕೊಂಡ ಬಳಿಕ ಮಕ್ಕಳಲ್ಲಿ ಕಾಣಿಸಿಕೊಳ್ಳುತ್ತಿರುವ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸಲು ಇಲ್ಲಿನ ರೈನ್ ಬೋ ಮಕ್ಕಳ ಆಸ್ಪತ್ರೆಯು ಇದೇ 20ರಂದು ವಾಕಥಾನ್ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಆಸ್ಪತ್ರೆಯ ಮಾರತ್‌ಹಳ್ಳಿ ಘಟಕದ ಕ್ಲಿನಿಕಲ್ ನಿರ್ದೇಶಕ ಅರವಿಂದ್ ಶೆಣೈ, 'ಕಂಠೀರವ ಕ್ರೀಡಾಂಗಣದಲ್ಲಿ ಪ್ರಾರಂಭವಾಗುವ ವಾಕಥಾನ್‌ಗೆ ನಟಿ ಸಪ್ತಮಿ ಗೌಡ ಹಾಗೂ ಡಿಸಿಪಿ ಕಲಾ ಕೃಷ್ಣಸ್ವಾಮಿ ಚಾಲನೆ ನೀಡಲಿದ್ದಾರೆ. ಮಕ್ಕಳು ಜಾಗೃತಿ ಭಿತ್ತಿಪತ್ರಗಳನ್ನು ಹಿಡಿದು, ಕ್ರೀಡಾಂಗಣದ ಸುತ್ತ ಸಂಚರಿಸಲಿದ್ದಾರೆ. ಕೋವಿಡ್ ಕಾಣಿಸಿಕೊಂಡ ಬಳಿಕ ಮಕ್ಕಳ ದೈನಂದಿನ ಕಾರ್ಯಚಟುವಟಿಕೆಯಲ್ಲಿ ವ್ಯತ್ಯಾಸವಾಗಿತ್ತು. ಸೋಂಕಿನ ಭಯ ಹಾಗೂ ನಿರ್ಬಂಧಗಳಿಂದ ಮಕ್ಕಳಲ್ಲಿ ಮಾನಸಿಕ ಸಮಸ್ಯೆಗಳು ಕಾಣಿಸಿಕೊಂಡಿದ್ದವು. ಕೆಲವರಿಗೆ ಈ ಸಮಸ್ಯೆಗಳಿಂದ ಹೊರಬರಲು ಇನ್ನೂ ಸಾಧ್ಯವಾಗಿಲ್ಲ. ಆದ್ದರಿಂದ ಜಾಗೃತಿ ವಾಕಥಾನ್ ಹಮ್ಮಿಕೊಳ್ಳಲಾಗಿದೆ' ಎಂದರು.

ಆಸ್ಪತ್ರೆಯ ಬನ್ನೇರುಘಟ್ಟ ಘಟಕದ ನಿರ್ದೇಶಕ ಡಾ.ಪ್ರಕಾಶ್ ವೇಮಗಲ್, 'ಸ್ನೇಹಿತರು ಹಾಗೂ ಕುಟುಂಬದ ಸದಸ್ಯರ ಒಡನಾಟವು ಮಕ್ಕಳಲ್ಲಿ ಲವಲವಿಕೆ ಹೆಚ್ಚಿಸಲಿದೆ. ಆದರೆ, ಕೋವಿಡ್ ಕಾಯಿಲೆಯು ಸ್ನೇಹಿತರ ಒಡನಾಟಕ್ಕೆ ಅಡ್ಡಿಪಡಿಸಿತು. ಮಕ್ಕಳು ಈ ಮೊದಲಿನ ಜೀವನಶೈಲಿಗೆ ಮರಳಲು ಜಾಗೃತಿ ಮೂಡಿಸಬೇಕು' ಎಂದರು.

ಶಾಲೆಗಳ ಅಭಿವೃದ್ಧಿ: ದೊರೆಸ್ವಾಮಿ ಶ್ಲಾಘನೆ



ಬೆಂಗಳೂರು: ರಾಜ್ಯ ಸರ್ಕಾರ, ಸರ್ಕಾರಿ ಶಾಲೆಗಳ ಅಭಿವೃದ್ಧಿಗಾಗಿ ಕೈಗೊಂಡ ಕಾರ್ಯಕ್ರಮಗಳನ್ನು ಶಿಕ್ಷಣ ಸುಧಾರಣೆಯ ಸಲಹೆಗಾರ ಪ್ರೊ. ಎಂ. ಆರ್. ದೊರೆಸ್ವಾಮಿ ಶ್ಲಾಘಿಸಿದ್ದಾರೆ.

ಜ್ಞಾನಪೀಠ ಪುರಸ್ಕೃತರು ಓದಿದ ಶಾಲೆಗಳ ಅಭಿವೃದ್ಧಿ, ವಿವೇಕ ಕಾರ್ಯಕ್ರಮದಡಿ ಶಾಲಾ ಕೊಠಡಿಗಳ ನಿರ್ಮಾಣ, ಶುದ್ಧ ನೀರು ಸರಬರಾಜು ಸೇರಿ ಸಮಗ್ರ ಶಾಲಾಭಿವೃದ್ಧಿಯ ಕಾರ್ಯಕ್ರಮ ಇತರೆ ರಾಜ್ಯಗಳಿಗೂ ಅನುಕರಣೀಯ. ಇದಕ್ಕೆ ಕಾರಣರಾದ ಸಿ.ಎಂ, ಶಿಕ್ಷಣ ಸಚಿವ ಬಿ. ನಾಗೇಶ್ ಅವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

ಶಿಶು ಮಾರಾಟ: ನರ್ಸ್‌ಗೆ ನಿರೀಕ್ಷಣಾ ಜಾಮೀನು

ಬೆಂಗಳೂರು: ನವಜಾತ ಶಿಶು ಮಾರಾಟ ಮಾಡಲು ಮಧ್ಯಸ್ಥಿಕೆ ವಹಿಸಿದ ಆರೋಪದಲ್ಲಿ ಬಂಧನ ಭೀತಿ ಎದುರಿಸುತ್ತಿದ್ದ ಸರ್ಕಾರಿ ಆಸ್ಪತ್ರೆಯ ಶುಶ್ರೂಷಕಿಗೆ ಹೈಕೋರ್ಟ್ ಕಠಿಣ ಷರತ್ತುಗಳನ್ನು ವಿಧಿಸಿ ನಿರೀಕ್ಷಣಾ ಜಾಮೀನು ಮಂಜೂರು ಮಾಡಿದೆ.

ಈ ಸಂಬಂಧ ಕುಮಟಾದ ಸರ್ಕಾರಿ ಆಸ್ಪತ್ರೆಯ ಶುಶ್ರೂಷಕಿ ಅಶ್ವಿನಿ ಗಣಪತಿ ಹರಿಕಾಂತ್ರ (24) ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಶಿವಶಂಕರ್ ಅಮರಣ್ಣನವರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

ಕಾರವಾರದ ಸಿವಿಲ್ ಆಸ್ಪತ್ರೆಯಲ್ಲಿ 2022ರ ಸೆ. 5ರಂದು ಮಹಿಳೆಯೊಬ್ಬರು ಹೆಣ್ಣು ಮಗುವಿಗೆ ಜನ್ಮ ನೀಡಿದ್ದರು. 'ಮಗು ನೋಡಿಕೊಳ್ಳುವಂತಹವರು ಸಿಕ್ಕರೆ, ಮಾರಾಟ ಮಾಡಲು ಸಿದ್ಧ' ಎಂದು ಆಕೆ ಶುಶ್ರೂಷಕಿಗೆ ತಿಳಿಸಿದ್ದಾಗಿ ಆಪಾದಿಸಲಾಗಿತ್ತು.

‘ಹುಲಿ ಯೋಜನೆಗೆ ಅವಕಾಶ ನೀಡಲ್ಲ’

ಚಾಮರಾಜನಗರ: ‘ಹನೂರು ತಾಲ್ಲೂಕಿನ ಮಲೆ ಮಹದೇಶ್ವರ ವನ್ಯಧಾಮವನ್ನು ಹುಲಿ ಯೋಜನೆಗೆ ಸೇರ್ಪಡೆ ಮಾಡಲು ಯಾವುದೇ ಕಾರಣಕ್ಕೂ ಅವಕಾಶ ಕೊಡುವುದಿಲ್ಲ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಶುಕ್ರವಾರ ಹೇಳಿದರು.

ನಗರದಲ್ಲಿ ರೈತ ಮುಖಂಡರು ಮತ್ತು ಅಧಿಕಾರಿಗಳೊಂದಿಗೆ ನಡೆಸಿದ ಕುಂದುಕೊರತೆ ಸಭೆಯಲ್ಲಿ ಮಾತನಾಡಿದ ಅವರು, ‘ನನ್ನ ನಿಲುವು ಸ್ಪಷ್ಟವಿದೆ. ಹುಲಿ ಸಂರಕ್ಷಿತ ಪ್ರದೇಶ ಆಗುವುದಕ್ಕೆ ಅವಕಾಶ ಕೊಡುವುದಿಲ್ಲ. ಆ ಭಾಗದಲ್ಲಿ ಸಾವಿರಾರು ಜನ ಹಗಲು ರಾತ್ರಿ ಓಡಾಡುತ್ತಾರೆ. ಸಂರಕ್ಷಿತ ಪ್ರದೇಶವಾದರೆ ಎಲ್ಲರಿಗೂ ತೊಂದರೆಯಾಗುತ್ತದೆ’ ಎಂದು ಪ್ರತಿಪಾದಿಸಿದರು.

ಸ್ಥಳೀಯ ಶಾಸಕ ಆರ್.ನರೇಂದ್ರ ಅವರೂ ಯೋಜನೆಗೆ ವಿರೋಧ ವ್ಯಕ್ತಪಡಿಸಿದ್ದಾರೆ.

ಮಲ್ಲತ್ತಹಳ್ಳಿ ಕೆರೆ: ಪಾಲಿಕೆ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಗರದ ಮಲ್ಲತ್ತಹಳ್ಳಿ ಕೆರೆ ಪ್ರದೇಶದಲ್ಲಿ ಮನರಂಜನಾ ಪಾರ್ಕ್ ನಿರ್ಮಾಣದ ಉದ್ದೇಶಕ್ಕಾಗಿ ಒಳಚರಂಡಿ ನೀರು ಘಟಕದಿಂದ ಮಳೆನೀರು ಕಾಲುವೆ ದಿಕ್ಕನ್ನು ತಿರುಗಿಸಲಾಗಿದೆ’ ಎಂಬ ಆರೋಪವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಅಲ್ಲಗಳೆದಿದ್ದು, ಈ ಕುರಿತಂತೆ ಹೈಕೋರ್ಟ್‌ಗೆ ಸ್ಪಷ್ಟನೆ ನೀಡಿದೆ.

ನಗರದ ಕೆರೆಗಳ ಸಂರಕ್ಷಣೆ ಮತ್ತು ಪುನಶ್ಚೇತನ ಸಂಬಂಧ, ‘ಸಿಟಿಜನ್ ಆ್ಯಕ್ಷನ್ ಗ್ರೂಪ್’ ಮತ್ತು ಹೈಕೋರ್ಟ್ ವಕೀಲೆ ಗೀತಾ ಮಿಶ್ರಾ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಬಿಬಿಎಂಪಿ ಪರ ವಕೀಲರು ಈ ಕುರಿತಂತೆ ನ್ಯಾಯಪೀಠಕ್ಕೆ ಪ್ರಮಾಣಪತ್ರ ಸಲ್ಲಿಸಿ, ’ಮುಖ್ಯಮಂತ್ರಿ ನವ ನಗರೋತ್ಥಾನ ಯೋಜನೆಯಡಿ ಕೆರೆಯಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ’ ಎಂದು ತಿಳಿಸಿದರು.

ಪ್ರಮಾಣ ಪತ್ರದಲ್ಲೇನಿದೆ?: ‘ಮಲ್ಲತ್ತಹಳ್ಳಿ ಕೆರೆ ಪ್ರದೇಶದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳನ್ನು 2019ರ ಸೆಪ್ಟೆಂಬರ್ 20ರಂದು ಸರ್ಕಾರ ನೀಡಿರುವ ನಿರ್ದೇಶನಗಳ ಅನುಸಾರವೇ ಕೈಗೊಳ್ಳಲಾಗಿದೆ. ಆ ಆದೇಶದಲ್ಲಿ ಮುಖ್ಯಮಂತ್ರಿ ನವ ನಗರೋತ್ಥಾನ ಯೋಜನೆಯಡಿಯಲ್ಲಿ ಮಲ್ಲತ್ತಹಳ್ಳಿ ಕೆರೆ ಅಭಿವೃದ್ಧಿಯ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲಾಗಿದೆ. ಅದರ ಅನುಸಾರ ಕೆರೆ ಏರಿ ಮತ್ತು ಕಾಲುದಾರಿ ಅಭಿವೃದ್ಧಿ, ತಡೆಗೋಡೆ ನಿರ್ಮಾಣ, ಗಾಜಿನ ಮನೆ, ತೂಗುಸೇತುವೆ ನಿರ್ಮಾಣ, ಮಕ್ಕಳ ಆಟದ ರೈಲಿಗೆ ಸೇತುವೆ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ’ ಎಂದು ಪತ್ರದಲ್ಲಿ ವಿವರಿಸಲಾಗಿದೆ.

‘ಎಲ್ಲ ಕಾಮಗಾರಿಗಳಿಗೆ ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಅನುಮೋದನೆ ನೀಡಿದೆ. ಏತನ್ಮಧ್ಯೆ ತಡೆಗೋಡೆ ನಿರ್ಮಾಣಕ್ಕೆ ಹೈಕೋರ್ಟ್ ತಡೆ ನೀಡಿದೆ. ಮಲ್ಲತ್ತಹಳ್ಳಿ ಕೆರೆಯನ್ನು ಬಿಡಿಎ 2016ರಲ್ಲಿ ಬಿಬಿಎಂಪಿಗೆ ಹಸ್ತಾಂತರಿಸಿದೆ. ಆ ಸಂದರ್ಭದಲ್ಲಿ ನೀರು ಹರಿಡುವ ಪ್ರದೇಶ 42 ಎಕರೆಯಷ್ಟಿತ್ತು. ಇದೀಗ ಬಿಬಿಎಂಪಿಯು ಒತ್ತುವರಿ ತೆರವು ಮತ್ತು ಹೂಳೆತ್ತಲು ಕ್ರಮ ಕೈಗೊಂಡಿರುವ ಪರಿಣಾಮ ನೀರು ಹರಡುವ ಪ್ರಮಾಣ 44 ಎಕರೆಗೆ ಹೆಚ್ಚಿದೆ’ ಎಂದು ಪ್ರಮಾಣಪತ್ರದಲ್ಲಿ ತಿಳಿಸಿದೆ. ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ಅರ್ಜಿದಾರರಿಗೆ ಪ್ರತಿ ಆಕ್ಷೇಪಣೆ ಸಲ್ಲಿಸಲು ಒಂದು ವಾರ ಕಾಲಾವಕಾಶ ನೀಡಿ ವಿಚಾರಣೆಯನ್ನು ಇದೇ ನ. 24ಕ್ಕೆ ಮುಂದೂಡಿದೆ.

ಕಲಾಕೃತಿ ಮಾರಾಟ: ಆರು ಮಂದಿ ಸೆರೆ

ಬೆಂಗಳೂರು: ಹಲಸೂರು ಗೇಟ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಕಬ್ಬನ್‌ಪೇಟೆಯ ಬನ್ನಪ್ಪಪಾರ್ಕ್ ಬಳಿ ಆನೆದಂತದಿಂದ ಮಾಡಿದ ಕಲಾಕೃತಿಗಳ ಮಾರಾಟ ಮಾಡುತ್ತಿದ್ದ ಆರು ಆರೋಪಿಗಳನ್ನು ಬಂಧಿಸಲಾಗಿದೆ.

ಹರಿಯಾಣದ ಹಿಮ್ಮತ್‌ಸಿಂಗ್, ಪಂಜಾಬ್‌ನ ಪ್ರವೀಣ್ ಸಾಂಬಿಯಾಲ್, ಮೈಸೂರಿನ ಅಬ್ದುಲ್ ಖಯೂಮ್ ಹಾಗೂ ಮಹಮ್ಮದ್ ರಫೀಕ್, ಬೆಂಗಳೂರಿನ ಮೊಹಮ್ಮದ್ ಇಸ್ರಾರ್, ಅಮ್ಜದ್ ಪಾಷಾ ಬಂಧಿತ ಆರೋಪಿಗಳು.

‘ಹಣಗಳಿಸುವ ಉದ್ದೇಶದಿಂದ ಹೊರರಾಜ್ಯಗಳ ಆರೋಪಿಗಳ ಜೊತೆಗೆ ಸ್ಥಳೀಯರು ಸೇರಿಕೊಂಡು ಆನೆದಂತ ಕಲಾಕೃತಿಯ ಮಾರಾಟದ ದಂಧೆಗೆ ಇಳಿದಿದ್ದರು. ಮೊಘಲರ ಕಾಲದ ಚಿತ್ರಿಕೆಯುಳ್ಳ ಆನೆದಂತದಿಂದ ತಯಾರಿಸಿದ ವಸ್ತುಗಳನ್ನೂ ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪಾಕ್ ಪರ ಘೋಷಣೆ ಕೂಗಿದ ವಿದ್ಯಾರ್ಥಿಗಳು

ಬೆಂಗಳೂರು: ಕಾಲೇಜು ವಿದ್ಯಾರ್ಥಿಗಳು ಪಾಕಿಸ್ತಾನ್ ಜಿಂದಾಬಾದ್ ಎಂಬ ಘೋಷಣೆ ಕೂಗಿದ್ದು, ಆ ವಿಡಿಯೊ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ. ಮಾರತ್ತಳ್ಳಿಯ ಕಾಲೇಜೊಂದರ ವಿದ್ಯಾರ್ಥಿಗಳು ಗುರುವಾರ ಈ ಘೋಷಣೆ ಕೂಗಿದ್ದಾರೆ.

ಕಾಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿತ್ತು. ಆ ವೇಳೆ ಘೋಷಣೆ ಕೂಗಲಾಗಿದೆ. ತಮಾಷೆಗಾಗಿ ಈ ರೀತಿ ಮಾಡಿರುವುದಾಗಿ ವಿದ್ಯಾರ್ಥಿಗಳಾದ ರಿಯಾ, ಆರ್ಯನ್, ದಿನಕರ್ ಹೇಳಿಕೊಂಡಿದ್ದಾರೆ.

ವಿಡಿಯೊ ಗಮನಕ್ಕೆ ಬಂದಿದೆ. ದೂರು ದಾಖಲು ಮಾಡುವುದಾಗಿ ಪೊಲೀಸರು ತಿಳಿಸಿದ್ದಾರೆ.

ಅಧಿಕಾರಿಗಳ ಹೆಸರಿನಲ್ಲಿ ಹಣ ಸುಲಿಗೆ: ಅಧಿಕಾರಿಗಳ ಹೆಸರಿನಲ್ಲಿ ಹಣ ಸುಲಿಗೆ ಮಾಡುತ್ತಿದ್ದ ಏಳು ಮಂದಿ ಆರೋಪಿಗಳನ್ನು ಕೊಡಿಗೇಹಳ್ಳಿ ಪೊಲೀಸರು ಬಂಧಿಸಿದ್ದಾರೆ.

ಪ್ರಕಾಶ್‌ಮೂರ್ತಿ, ಪ್ರದೀಪ್, ದ್ರುವರಾಜ್, ರಮ್ಯಾ, ಸುಶ್ಮಿತಾ, ಜಯಲಕ್ಷ್ಮಿ, ಇಂದ್ರಾ ಬಂಧಿತರು.

ಭದ್ರಪ್ಪ ಲೇಔಟ್‌ನ ಮಾತಾಜಿ ಹೋಂ ಅಪ್ಲೈಯನ್ಸ್‌ಗೆ ಕಾರಿನಲ್ಲಿ ಬಂದಿದ್ದ ಆರೋಪಿಗಳು, ಮಾನವ ಹಕ್ಕುಗಳ ಆಯೋಗದ ಅಧಿಕಾರಿಗಳು ಎಂದು ಹೇಳಿಕೊಂಡಿದ್ದರು. ‘ಅಂಗಡಿಯಲ್ಲಿ ಗ್ಯಾಸ್ ಸಿಲಿಂಡರ್ ಮಾರಾಟ ಮಾಡುತ್ತಿದ್ದೀರಾ. ನಿಮ್ಮ ಮೇಲೆ ಪ್ರಕರಣ ದಾಖಲು ಮಾಡಲಾಗುವುದು’ ಎಂದು ಬೆದರಿಸಿ ಅವರಿಂದ ₹ 2 ಸಾವಿರ ಸುಲಿಗೆ ಮಾಡಿದ್ದರು. ಬಳಿಕ ರಾಜಲಕ್ಷ್ಮಿ ಫ್ಯಾನ್ಸಿ ಸ್ಟೋರ್‌ನ ನರೇಶ್ ಜಿ. ಪಟೇಲ್ ಹಾಗೂ ಬಾಲಾಜಿ ಹೋಂ ಅಪ್ಲೈಯನ್ಸ್‌ನ ಸುವಾಲಾಲ್ ಅವರಿಂದ ₹ 5 ಸಾವಿರ ಸುಲಿಗೆ ಮಾಡಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಂಧಿತರಿಂದ ₹ 2 ಸಾವಿರ ನಗದು ಹಾಗೂ ಕೃತ್ಯಕ್ಕೆ ಬಳಸಿದ ಕಾರನ್ನು ಜಪ್ತಿ ಮಾಡಲಾಗಿದೆ ಎಂದು ಮೂಲಗಳು ಹೇಳಿವೆ.

₹ 83.79 ಲಕ್ಷದ ವಸ್ತುಗಳ ಜಪ್ತಿ

ಬೆಂಗಳೂರು: ಉತ್ತರ ವಿಭಾಗದ ಸೋಲದೇವನಹಳ್ಳಿಯ, ರಾಜಗೋಪಾಲನಗರ ಪೊಲೀಸ್ ಠಾಣೆಗಳಲ್ಲಿ ಮನೆ ಕಳವು, ಸೇರಿದಂತೆ ವಿವಿಧ ಅಪರಾಧ ಕೃತ್ಯದಲ್ಲಿ ಭಾಗಿಯಾದ 8 ಆರೋಪಿಗಳನ್ನು ಬಂಧಿಸಿ, ₹ 83.79 ಲಕ್ಷದ ವಸ್ತು ಜಪ್ತಿ ಮಾಡಲಾಗಿದೆ. ಒಟ್ಟು 18 ಪ್ರಕರಣಗಳನ್ನು ಪತ್ತೆಹಚ್ಚಲಾಗಿದೆ.

‘1 ಕೆ.ಜಿ 250 ಗ್ರಾಂ ಚಿನ್ನಾಭರಣ, 550 ಗ್ರಾಂ ಬೆಳ್ಳಿ ಸಾಮಗ್ರಿ, ₹ 49 ಸಾವಿರ ನಗದು, ಒಂದು ಜೀಪು, ಒಂದು ಕಾರು, ಮೂರು ದ್ವಿಚಕ್ರ ವಾಹನ, ಮೂರು ಮೊಬೈಲ್‌ಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಅಂತರಾಷ್ಟ್ರೀಯ ಕ್ರೀಡಾಪಟು ಇಕ್ಕೇರಿ ಮೊಹಮ್ಮದ್ ಮುದಸಿರ್ ಅವರು ಒಲಿಂಪಿಕ್ಸ್ ಕ್ರೀಡಾಜ್ಯೋತಿಯನ್ನು ವಿದ್ಯಾರ್ಥಿಗೆ ನೀಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಸಂಸ್ಥೆಯ ಅಧ್ಯಕ್ಷ ಕೆ.ವಿ. ಮುನಿಸ್ವಾಮಿ, ಡಾ.ಸುರೇಶ್, ವಿ.ಎಂ.ರವಿ ಇದ್ದರು.

‘ವಿದ್ಯಾರ್ಥಿಗಳಲ್ಲಿ ಕ್ರೀಡಾಸಕ್ತಿ ಮೂಡಲಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ವಿದ್ಯಾರ್ಥಿಗಳು ಚಿಕ್ಕಂದಿನಿಂದಲೇ ಕ್ರೀಡೆಯ ಬಗ್ಗೆ ಹೆಚ್ಚು ಆಸಕ್ತಿ ಮೂಡಿಸಿಕೊಂಡು ಅಗಾಧವಾದ ಸಾಧನೆ ಮಾಡಿ ಸಂಸ್ಥೆಗೆ ಮತ್ತು ಪೋಷಕರಿಗೆ ಗೌರವ ತರಬೇಕು ಎಂದು ಅಂತರಾಷ್ಟ್ರೀಯ ಕ್ರೀಡಾಪಟು ಇಕ್ಕೇರಿ ಮೊಹಮ್ಮದ್ ಮುದಸಿರ್ ಅಭಿಪ್ರಾಯಪಟ್ಟರು.

ಕೆ.ಆರ್.ಪುರ ಸಮೀಪದ ಐಟಿಐನ ಅಂಬೇಡ್ಕರ್ ಸ್ಟೇಡಿಯಂನಲ್ಲಿ ಶ್ರೀ ವೆಂಕಟೇಶ್ವರ ಸಮೂಹ ಸಂಸ್ಥೆ ವತಿಯಿಂದ ಶಾಲೆ, ಪಿಯು ಮತ್ತು ಪದವಿ ಕಾಲೇಜು ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಂಡಿದ್ದ ವಾರ್ಷಿಕ ಕ್ರೀಡೆ ಉತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

‘ಚಿಕ್ಕಂದಿನಿಂದಲೇ ಹೆಚ್ಚಿನ ಆಸಕ್ತಿ ಇದ್ದದ್ದರಿಂದ ಹದಿನಾರನೆಯ ವಯಸ್ಸಿನಲ್ಲಿ ರಾಜ್ಯ ರಾಷ್ಟ್ರಮಟ್ಟದಲ್ಲಿ ಓಟದ ಸ್ಪರ್ಧೆಯಲ್ಲಿ ಭಾಗವಹಿಸಿ ಸಾಧನೆಯ ಬೆನ್ನುಹತ್ತಿದ್ದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಓಟದ ಸ್ಪರ್ಧೆಯಲ್ಲಿ ಭಾಗವಹಿಸಲು ಭಾರತದಿಂದ ಕೆಲವೇ ಜನರಲ್ಲಿ ಬೆಂಗಳೂರಿಗನಾದ ನಾನು ಒಬ್ಬನಾಗಿದ್ದೆ. ಕ್ರೀಡೆ ಸಾಧನೆಯನ್ನು ಮಾಡಲು ಬೆಳಿಗ್ಗೆ ನಾಲ್ಕು ಗಂಟೆಯಿಂದಲೇ ಕಸರತ್ತು ಆರಂಭಿಸುತ್ತಿದ್ದೆ’ ಎಂದು ಹೇಳಿದರು.

ಶ್ರೀ ವೆಂಕಟೇಶ್ವರ ಸಮೂಹ ಸಂಸ್ಥೆಯ ಅಧ್ಯಕ್ಷ ಕೆ.ವಿ.ಮುನಿಸ್ವಾಮಿ ಮಾತನಾಡಿದರು.

ಈ ಸಂದರ್ಭದಲ್ಲಿ ಬೆಂಗಳೂರು ನಗರ ಜಿಲ್ಲೆಯ ಅಥ್ಲೆಟಿಕ್ಸ್ ಅಸೋಸಿಯೇಷನ್ ಕಾರ್ಯನಿರ್ವಾಹಕ ಸದಸ್ಯ ಡಾ.ಸುರೇಶ್, ಶ್ರೀವೆಂಕಟೇಶ್ವರ ಸಮೂಹ ಸಂಸ್ಥೆಯ ನಿರ್ದೇಶಕ ವಿ.ಎಂ. ರವಿ, ಪುಟ್ಟ ರಾಜು, ರೇವತಿ ಭಟ್ ಇದ್ದರು.

ಶನಿವಾರ • ನವೆಂಬರ್ 19, 2022 ಪ್ರಜಾವಾಣಿ

ಸಂಕ್ಷಿಪ್ತ ಸುದ್ದಿ

ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ: ಫಾರೂಕ್ ಅಬ್ದುಲ್ಲಾ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅವರು ನ್ಯಾಷನಲ್ ಕಾನ್ಫರೆನ್ಸ್ (ಎನ್‌ಸಿ) ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಹೇಳಿದ್ದಾರೆ. ಹೊಸ ಪೀಳಿಗೆಯ ನಾಯಕರಿಗೆ ಪಕ್ಷದ ಅತ್ಯುನ್ನತ ಸ್ಥಾನ ನೀಡಲು ಇದು ಸಕಾಲ ಎಂದು ಅವರು ತಿಳಿಸಿದ್ದಾರೆ.

ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಪಕ್ಷದ ಅಧ್ಯಕ್ಷ ಸ್ಥಾನದ ಚುನಾವಣೆವರೆಗೆ ಅಥವಾ ಬೇರೊಬ್ಬರು ಜವಾಬ್ದಾರಿ ವಹಿಸಿಕೊಳ್ಳುವವರೆಗೂ ಅಧ್ಯಕ್ಷನಾಗಿ ಮುಂದುವರಿಯುತ್ತೇನೆ' ಎಂದು ಸ್ಪಷ್ಟಪಡಿಸಿದರು. ಈ ಮಧ್ಯೆ ಚುನಾವಣೆಯ ವೇಳಾಪಟ್ಟಿ ಪ್ರಕಟವಾಗಿದ್ದು, ಡಿಸೆಂಬರ್ 5ರಂದು ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ.

ವಿಚಾರಣೆಯಿಂದ ಹಿಂದೆ ಸರಿದ ಕೌಲ್

ನವದೆಹಲಿ: ಜಾರಿ ನಿರ್ದೇಶನಾಲಯದ (ಇ.ಡಿ) ನಿರ್ದೇಶಕರ ಅಧಿಕಾರ ಅವಧಿಯನ್ನು ಐದು ವರ್ಷಕ್ಕೆ ವಿಸ್ತರಣೆ ಮಾಡಿರುವುದು ಮತ್ತು ಇದಕ್ಕಾಗಿ ಕಾನೂನಿಗೆ ತಿದ್ದುಪಡಿ ತಂದಿರುವುದನ್ನು ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿಗಳ ವಿಚಾರಣೆಯಿಂದ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಎಸ್.ಕೆ. ಕೌಲ್ ಅವರು ಶುಕ್ರವಾರ ಹಿಂದೆ ಸರಿದಿದ್ದಾರೆ.

ಇ.ಡಿ. ನಿರ್ದೇಶಕ ಸಂಜಯ್ ಕುಮಾರ್ ಮಿಶ್ರಾ ಅಧಿಕಾರ ಅವಧಿಯನ್ನು ಮತ್ತೊಂದು ವರ್ಷ ವಿಸ್ತರಿಸಿ ಕೇಂದ್ರ ಸರ್ಕಾರ ಗುರುವಾರ ಆದೇಶಿಸಿತ್ತು.

ವಿಚಾರಣೆಯಿಂದ ಹಿಂದೆ ಸರಿಯುವ ನಿರ್ಧಾರ ಕೈಗೊಂಡಿರುವುದಕ್ಕೆ ಎಸ್.ಕೆ. ಕೌಲ್ ಅವರು ಯಾವುದೇ ಕಾರಣ ನೀಡಿಲ್ಲ. ಸಂಜಯ್ ಕುಮಾರ್ ಅವರ ಸೇವಾವಧಿಯನ್ನು ವಿಸ್ತರಿಸುವಂತಿಲ್ಲ ಎಂದು ಕಳೆದ ವರ್ಷ ಸುಪ್ರೀಂ ಕೋರ್ಟ್ ತಿಳಿಸಿತ್ತು.

ದಾಂಪತ್ಯ ಕಲಹ, ಜಾಮೀನು ಅರ್ಜಿ ನಿತ್ಯ ವಿಚಾರಣೆ'

ನವದೆಹಲಿ: ದಾಂಪತ್ಯ ಕಲಹ ಮತ್ತು ಜಾಮೀನಿಗೆ ಸಂಬಂಧಿಸಿದ ತಲಾ ಹತ್ತು ಅರ್ಜಿಗಳನ್ನು ಸುಪ್ರೀಂ ಕೋರ್ಟ್‌ನ ಎಲ್ಲಾ 13 ನ್ಯಾಯಪೀಠಗಳು ಪ್ರತಿದಿನ ವಿಚಾರಣೆ ನಡೆಸಲಿವೆ ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಶುಕ್ರವಾರ ತಿಳಿಸಿದ್ದಾರೆ.

ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳ ಸಭೆಯಲ್ಲಿ ಈ ತಿರ್ಮಾನ ಕೈಗೊಳ್ಳಲಾಗಿದೆ ಎಂದೂ ಅವರು ಹೇಳಿದ್ದಾರೆ. ಚಳಿಗಾಲದ ರಜೆಗಿಂತ ಮೊದಲು ಈ ವಿಷಯಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ವಿಲೇವಾರಿ ಮಾಡುವ ಉದ್ದೇಶದಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ. ಜಾಮೀನು ವಿಚಾರವು ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿರುವುದರಿಂದ ಅವುಗಳಿಗೆ ಪ್ರಾಮುಖ್ಯತೆ ನೀಡಲಾಗುವುದು ಎಂದಿದ್ದಾರೆ.

ಪ್ರತಿದಿನ ಈ ಪ್ರಕರಣಗಳ ವಿಚಾರಣೆ ನಡೆಸಿದ ಬಳಿಕ ನ್ಯಾಯಪೀಠಗಳು ಸಾಮಾನ್ಯ ಪ್ರಕರಣಗಳ ವಿಚಾರಣೆ ನಡೆಸಲಿವೆ ಎಂದೂ ಚಂದ್ರಚೂಡ್ ಅವರು ಸ್ಪಷ್ಟಪಡಿಸಿದ್ದಾರೆ.

ವೈವಾಹಿಕ ಪ್ರಕರಣಗಳನ್ನು ತಮ್ಮ ಇಚ್ಛೆಯ ಸ್ಥಳಗಳಿಗೆ ವರ್ಗಾಹಿಸಬೇಕೆಂದು ಕೋರಿ ಸಲ್ಲಿಕೆಯಾಗಿರುವ 3,000 ಅರ್ಜಿಗಳ ವಿಚಾರಣೆ ಈವರೆಗೆ ಬಾಕಿ ಉಳಿದಿವೆ ಎಂದು ಪೀಠ ಹೇಳಿದೆ.

ದತ್ತಾಂಶ ರಕ್ಷಣೆ ಮಸೂದೆ • ಕೇಂದ್ರ ಸರ್ಕಾರದ ಕರಡು ಪ್ರಸ್ತಾವದಲ್ಲಿ ಉಲ್ಲೇಖ

ನಿಯಮ ಉಲ್ಲಂಘನೆಗೆ ₹500 ಕೋಟಿ ದಂಡ

ನವದೆಹಲಿ (ಪಿಟಿಐ): ವೈಯಕ್ತಿಕ ದತ್ತಾಂಶ ರಕ್ಷಣೆ ಮಸೂದೆ 2022ರ ಅಡಿಯಲ್ಲಿನ ನಿಬಂಧನೆಗಳನ್ನು ಉಲ್ಲಂಘಿಸಿದರೆ ವಿಧಿಸುವ ದಂಡದ ಮೊತ್ತವನ್ನು ₹500 ಕೋಟಿಯವರೆಗೆ ಕೇಂದ್ರ ಸರ್ಕಾರ ಹೆಚ್ಚಿಸಿರುವುದನ್ನು ಕರಡು ಪ್ರಸ್ತಾವನೆಯಲ್ಲಿ ತಿಳಿಸಲಾಗಿದೆ.

2019ರಲ್ಲಿ ಹೊರಡಿಸಲಾದ ಕರಡು ವೈಯಕ್ತಿಕ ದತ್ತಾಂಶ ರಕ್ಷಣೆ ಮಸೂದೆಯಲ್ಲಿ ದಂಡದ ಮೊತ್ತವನ್ನು ₹15 ಕೋಟಿ ಅಥವಾ ಸಂಬಂಧಿಸಿದ ಕಂಪನಿಯ ಜಾಗತಿಕ ವಹಿವಾಟಿನ ಶೇ 4ರಷ್ಟನ್ನು ಪಾವತಿಸಬೇಕೆಂದು ನಿಗದಿಪಡಿಸಲಾಗಿತ್ತು. ಆದರೆ, ಈ ಮಸೂದೆಯನ್ನು ಸರ್ಕಾರ ಇದೇ ವರ್ಷದ ಆಗಸ್ಟ್‌ನಲ್ಲಿ ಹಿಂತೆಗೆದುಕೊಂಡಿತ್ತು. ಪ್ರಸ್ತಾವಿತ 2022ರ ಮಸೂದೆಯು, ದತ್ತಾಂಶ ರಕ್ಷಣೆ ಮಸೂದೆ ಬದಲಿಗೆ ಜಾರಿಗೆ ಬರಲಿದೆ. ಭಾರತದ ದತ್ತಾಂಶ ರಕ್ಷಣಾ ಮಂಡಳಿ ಸ್ಥಾಪಿಸುವ ಪ್ರಸ್ತಾವನೆಯನ್ನೂ ಈ ಉದ್ದೇಶಿತ ಕರಡು ಒಳಗೊಂಡಿದೆ. ಇದು ಮಸೂದೆಯ ನಿಬಂಧನೆಗಳ ಅನುಸಾರವೇ ಕಾರ್ಯನಿರ್ವಹಿಸಲಿದೆ.

ಎಲೆಕ್ಟ್ರಾನಿಕ್ ಮತ್ತು ಐ.ಟಿ ಸಚಿವಾಲಯವು ಈ ಕರಡು ಮಸೂದೆಯ ಪ್ರಸ್ತಾವನೆಯನ್ನು ಹೊರಡಿಸಿದೆ. ಇದಕ್ಕೆ ಅಭಿಪ್ರಾಯ ಮತ್ತು ಆಕ್ಷೇಪಣೆ ಸಲ್ಲಿಸಲು ಸಾರ್ವಜನಿಕರಿಗೆ ಡಿಸೆಂಬರ್ 17ರವರೆಗೆ ಅವಕಾಶ ಕಲ್ಪಿಸಿದೆ.

'ಈ ಮಸೂದೆಯ ಉದ್ದೇಶವು ಡಿಜಿಟಲ್ ವೈಯಕ್ತಿಕ ದತ್ತಾಂಶವನ್ನು ತಮ್ಮ ವೈಯಕ್ತಿಕ ದತ್ತಾಂಶವಾಗಿ ರಕ್ಷಿಸುವ ವ್ಯಕ್ತಿಗಳ ಹಕ್ಕನ್ನು ಎತ್ತಿಹಿಡಿಯುವುದಾಗಿದೆ. ಕಾನೂನುಬದ್ಧ ಉದ್ದೇಶಗಳಿಗಾಗಿ ಮತ್ತು ಇತರ ಸಂದರ್ಭೋಚಿತ ಉದ್ದೇಶಗಳಿಗಾಗಿ ವೈಯಕ್ತಿಕ ದತ್ತಾಂಶ ರಕ್ಷಿಸುವ ಪ್ರಕ್ರಿಯೆ ಅವಶ್ಯಕತೆ ಇದೆ' ಎಂದು ಕರಡು ಮಸೂದೆಯ ವಿವರಣಾತ್ಮಕ ಟಿಪ್ಪಣಿಯಲ್ಲಿ ಹೇಳಿದೆ.

ವೈಯಕ್ತಿಕ ಡಿಜಿಟಲ್ ದತ್ತಾಂಶ ರಕ್ಷಣೆ ಮಸೂದೆ ನಾಗರಿಕರ (ಡಿಜಿಟಲ್ ನಾಗರಿಕ್) ಹಕ್ಕುಗಳು ಮತ್ತು ಕರ್ತವ್ಯಗಳನ್ನು ರೂಪಿಸುವ ಶಾಸನವಾಗಿದೆ. ಒಂದೆಡೆ ಸಂಗ್ರಹಿಸಿದ ದತ್ತಾಂಶವನ್ನು ಕಾನೂನುಬದ್ಧವಾಗಿ ಬಳಸಲು ಕಟ್ಟುಪಾಡುಗಳನ್ನು ವಿಧಿಸಿದರೆ, ಇನ್ನೊಂದೆಡೆ ದತ್ತಾಂಶದ ವಿಶ್ಲೇಷಣಾತ್ಮಕ ಕಾಯುತ್ತದೆ' ವಿವರಣಾತ್ಮಕ ಟಿಪ್ಪಣಿ ಹೇಳಿದೆ.

ಸ್ತ್ರೀವಾಚಕಗಳು: ಈ ಮಸೂದೆಯಲ್ಲಿ ವ್ಯಕ್ತಿಗಳನ್ನು ಉಲ್ಲೇಖಿಸುವಾಗ 'ಅವಳು/ಅವಳ (she/her)' ಎಂಬ ಸ್ತ್ರೀವಾಚಕಗಳನ್ನು ಬಳಸಲಾಗಿದೆ. ದೇಶದ ಯಾವುದೇ ಕಾನೂನಿನಲ್ಲಿ ಎಲ್ಲರನ್ನೂ ಸಂಬೋಧಿಸಲು ಈ ರೀತಿಯ ಸ್ತ್ರೀವಾಚಕಗಳನ್ನು ಬಳಸಿದ್ದು ಇದೇ ಮೊದಲು.

'ಯಾವುದೇ ಲಿಂಗದ ವ್ಯಕ್ತಿಗಳನ್ನು ಉಲ್ಲೇಖಿಸುವಾಗ ಈ ಮಸೂದೆಯಲ್ಲಿ 'ಅವಳು/ಅವಳ' ಪದಗಳನ್ನು ಬಳಸಲಾಗುತ್ತದೆ' ಎಂದು ಕರಡು ಮಸೂದೆಯಲ್ಲಿ ವಿವರಿಸಲಾಗಿದೆ.

ವಿದೇಶಕ್ಕೆ ದತ್ತಾಂಶ ವರ್ಗಾವಣೆಗೆ ಅವಕಾಶ

ಮಸೂದೆಯ ಉಲ್ಲಂಘನೆಗಾಗಿ ದಂಡದ ಮೊತ್ತ ಹೆಚ್ಚಿಸುವ ಜೊತೆಗೆ ವೈಯಕ್ತಿಕ ದತ್ತಾಂಶವನ್ನು ಸಂಗ್ರಹಿಸಲು ಮತ್ತು ಅದನ್ನು ಕೆಲವು ದೇಶಗಳಿಗೆ ವರ್ಗಾಯಿಸಲು ಅನುವು ಮಾಡಿಕೊಡುವ ದತ್ತಾಂಶ ಗೌಪ್ಯತೆಯ ಹೊಸ ಕಾನೂನನ್ನು ಸರ್ಕಾರ ಶುಕ್ರವಾರ ಪ್ರಸ್ತಾಪಿಸಿದೆ. ಗೂಗಲ್, ಅಮೆಜಾನ್, ಫೇಸ್‌ಬುಕ್ ಮತ್ತು ಇನ್ನಿತರ ಜಾಗತಿಕ ಕಂಪನಿಗಳಿಗೆ ದತ್ತಾಂಶ ವಿನಿಮಯಕ್ಕೆ ಸಂಬಂಧಿಸಿದಂತೆ ಈ ಮೊದಲು ಇದ್ದ ಕಠಿಣ ಕಾನೂನಿಗೆ ಬದಲು ಡಿಪಿಡಿಪಿ ಮಸೂದೆ ಬರುತ್ತಿದೆ. ಪ್ರಸ್ತಾವಿತ ಈ ಹೊಸ ಮಸೂದೆ ಯಿಂದ ಈ ಜಾಗತಿಕ ಕಂಪನಿಗಳಿಗೆ ನಿರಾಳತೆ ನೀಡಿದೆ.

ಡಿಪಿಡಿಪಿ ಮಸೂದೆಯಿಂದ ರಾಷ್ಟ್ರೀಯ ಭದ್ರತೆ

ಪ್ರಸ್ತಾವಿತ ವೈಯಕ್ತಿಕ ಡಿಜಿಟಲ್ ದತ್ತಾಂಶ ರಕ್ಷಣೆ ಮಸೂದೆ-2022 ಏಕಕಾಲದಲ್ಲಿ ನಾಗರಿಕರ ದತ್ತಾಂಶ ರಕ್ಷಣೆ, ಸುಲಲಿತ ವ್ಯವಹಾರ, ಸಾರ್ವಜನಿಕ ಹಿತಾಸಕ್ತಿ ಮತ್ತು ರಾಷ್ಟ್ರೀಯ ಭದ್ರತೆಯ ಉದ್ದೇಶಗಳನ್ನು ಸಾಧಿಸುತ್ತದೆ ಎಂದು ಎಲೆಕ್ಟ್ರಾನಿಕ್ ಮತ್ತು ಐಟಿ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಶುಕ್ರವಾರ ಹೇಳಿದ್ದಾರೆ.


ಸರ್ಕಾರ ಹೊರಡಿಸಿರುವ ಕರಡು, ವೈಯಕ್ತಿಕ ದತ್ತಾಂಶವನ್ನು ನಿರ್ವಹಿಸುವ ಸಂಸ್ಥೆಗಳು ಈ ಪ್ರಕ್ರಿಯೆಯಲ್ಲಿ ಸುರಕ್ಷತೆ ಮತ್ತು ಭದ್ರತೆ ಕಾಯ್ದುಕೊಳ್ಳುವ ಜತೆಗೆ ಇದರಲ್ಲಿನ ಉತ್ತರದಾಯಿತ್ವವನ್ನು ಖಾತ್ರಿಪಡಿಸುತ್ತದೆ. ಅದೇ ಸಮಯದಲ್ಲಿ, ಸಾಮಾಜಿಕ ಮಾಧ್ಯಮ ಮತ್ತು ಇನ್ನಿತರ ಅಪ್ಲಿಕೇಶನ್‌ಗಳ ಕಂಪನಿಗಳೊಂದಿಗೆ ಪರಿಶೀಲನೆಯ ದತ್ತಾಂಶ ಮಾಹಿತಿ ಹಂಚಿಕೊಳ್ಳುವುದನ್ನು ಈ ಮಸೂದೆ ನಿರ್ಬಂಧಿಸುತ್ತದೆ ಎಂದು ಅವರು ತಿಳಿಸಿದರು.

ಸುದ್ದಿ 2 ನಿಮಿಷ

'ಆರ್‌ಎಸ್‌ಎಸ್ ಕಾರ್ಯಸೂಚಿ ಅನುಷ್ಠಾನಗೊಳಿಸುತ್ತಿಲ್ಲ'

ನವದೆಹಲಿ: 'ರಾಜ್ಯ ಸರ್ಕಾರಕ್ಕೆ ರಾಜಕೀಯವಾಗಿ ತೊಂದರೆ ಉಂಟುಮಾಡುವ ಸಂಘಟನೆಗೆ ಸೇರಿದ ಯಾವುದೇ ವ್ಯಕ್ತಿಯನ್ನು ನಾನು ನೇಮಕ ಮಾಡಿರುವ ಒಂದು ನಿದರ್ಶನ ತೋರಿಸಿದರೆ ರಾಜೀನಾಮೆ ನೀಡಲು ಸಿದ್ಧ' ಎಂದು ಕೇರಳ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಹೇಳಿದ್ದಾರೆ.

ಸುದ್ದಿ ಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ, 'ನಾನು ಆರ್‌ಎಸ್‌ಎಸ್ ಕಾರ್ಯಸೂಚಿಯನ್ನು ಅನುಷ್ಠಾನಗೊಳಿಸುತ್ತಿದ್ದೇನೆ ಎನ್ನುತ್ತಿದ್ದೀರಿ. ಆ ಸಂಘಟನೆಗೆ ಸೇರಿದ ಯಾರನ್ನಾದರೂ ನಾನು ವಿಶ್ವವಿದ್ಯಾಲಯಕ್ಕಾಗಲಿ, ಇತರೆಡೆಯಾಗಲಿ ನೇಮಕ ಮಾಡಿದ್ದರೆ ಆ ವ್ಯಕ್ತಿಯ ಹೆಸರು ಹೇಳಲಿ' ಎಂದೂ ಸವಾಲು ಹಾಕಿದ್ದಾರೆ.



ಸರ್ಕಾರದ ಕಾರ್ಯಚಟುವಟಿಕೆಗಳು ಕಾನೂನಿನ ಪ್ರಕಾರ ನಡೆಯುತ್ತಿವೆಯೇ ಎಂಬುದನ್ನು ನೋಡುವುದು ನನ್ನ ಕೆಲಸ ಎಂದಿರುವ ಅವರು, ಸಾಂವಿಧಾನಿಕ ಹುದ್ದೆಯನ್ನು ರಾಜ್ಯಪಾಲರು ರಾಜಕೀಯ ಉದ್ದೇಶಕ್ಕೆ ಬಳಸುತ್ತಿದ್ದಾರೆ ಎಂಬ ಆರೋಪವನ್ನು ತಳ್ಳಿಹಾಕಿದ್ದಾರೆ.

ಮುಖ್ಯಮಂತ್ರಿ ಪಿಣರಾಯಿ ವಿಜಯನ್ ನೇತೃತ್ವದ ಸರ್ಕಾರ ಮತ್ತು ರಾಜ್ಯಪಾಲರ ನಡುವಿನ ಸಂಘರ್ಷ ತಾರಕಕ್ಕೇರಿದ್ದು, ಈಚೆಗೆ ಎಲ್‌ಡಿಎಫ್ ನೇತೃತ್ವದಲ್ಲಿ ರಾಜಭವನಕ್ಕೆ ಪ್ರತಿಭಟನಾ ಮೆರವಣಿಗೆ ನಡೆದಿತ್ತು.

2 ಮಕ್ಕಳ ನಿಯಮ: ಅರ್ಜಿ ತಿರಸ್ಕೃತ

ನವದೆಹಲಿ: ದೇಶದಾದ್ಯಂತ ಜನಸಂಖ್ಯಾ ನಿಯಂತ್ರಣ ನೀತಿ ಮತ್ತು ಎರಡು ಮಕ್ಕಳ ನಿಯಮ ಜಾರಿಗೊಳಿಸಲು ಕೋರಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ (ಪಿಐಎಲ್) ವಿಚಾರಣೆಗೆ ಸುಪ್ರೀಂ ಕೋರ್ಟ್ ಶುಕ್ರವಾರ ನಿರಾಕರಿಸಿದೆ.

ನ್ಯಾಯಮೂರ್ತಿಗಳಾದ ಎಸ್.ಕೆ. ಕೌಲ್ ಮತ್ತು ಅಭಯ್ ಎಸ್. ಓಕಾ ಅವರಿದ್ದ ಪೀಠವು, ಇದನ್ನು ಕಾನೂನು ಆಯೋಗಕ್ಕೆ ಶಿಫಾರಸು ಮಾಡುವಂತೆ ವಕೀಲ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿತು.

'ಈ ಸಾಮಾಜಿಕ ಸಮಸ್ಯೆಯನ್ನು ಸರ್ಕಾರ ನೋಡಿಕೊಳ್ಳಲಿದೆ. ಆದಾಗ್ಯೂ, ದೇಶದಲ್ಲಿ ಜನಸಂಖ್ಯೆ ಬೆಳವಣಿಗೆ ಇಳಿಮುಖದಲ್ಲಿದೆ. ಅಷ್ಟಕ್ಕೂ ನ್ಯಾಯಾಲಯ ಹಸ್ತಕ್ಷೇಪ ಮಾಡುವಂತಹ ಸಮಸ್ಯೆ ಇದಲ್ಲ. ನಮಗೆ ಮಾಡಲು ಇದಕ್ಕಿಂತಲೂ ಅತ್ಯುತ್ತಮ ಕೆಲಸಗಳು ಬಾಕಿ ಇವೆ' ಎಂದು ಪೀಠ ಮೌಖಿಕವಾಗಿ ಹೇಳಿದೆ. 'ನಿಮಗೆ ಪ್ರಚಾರ ಬೇಕಾಗಿದೆ. ಪ್ರಚಾರ ಕೊಡುವುದು ನಮ್ಮ ಕೆಲಸವಲ್ಲ. ಈ ಅರ್ಜಿಯನ್ನು ನಾವು ಮುಂದುವರಿಸುವುದಿಲ್ಲ' ಎಂದು ಪೀಠವು, ಅರ್ಜಿದಾರರಿಗೆ ಖಡಕ್ಕಾಗಿ ಹೇಳಿತು.

ಕೇಂದ್ರ ಸರ್ಕಾರ ಪ್ರತಿನಿಧಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಜನಸಂಖ್ಯೆ ಏರಿಕೆ ನಿಯಂತ್ರಿಸಲು ನಾವು ಏನೆಲ್ಲಾ ಮಾಡಬಹುದು ಅದೆಲ್ಲವನ್ನೂ ಮಾಡುತ್ತಿದ್ದೇವೆ' ಎಂದು ಪೀಠಕ್ಕೆ ತಿಳಿಸಿದರು. ದೆಹಲಿ ಹೈಕೋರ್ಟ್ ತೀರ್ಪು ಅನ್ನೂ ಪಿಐಎಲ್‌ನಲ್ಲಿ ಪ್ರಶ್ನಿಸಿದ್ದ ಅಶ್ವಿನಿ ಕುಮಾರ್ ಉಪಾಧ್ಯಾಯ ಅವರ ವಾದವನ್ನು ಪೀಠವು ಪುರಸ್ಕರಿಸಲಿಲ್ಲ. ಈ ವಿಷಯದಲ್ಲಿ ಯಾವುದೇ ಆದೇಶ ಅಥವಾ ತೀರ್ಪನ್ನು ಹೊರಡಿಸುವುದಿಲ್ಲವೆಂದು ಪೀಠ ಹೇಳಿತು. ಆಗ ಅಶ್ವಿನಿ ಕುಮಾರ್ ಅರ್ಜಿ ಹಿಂಪಡೆದರು.

ರಾಹುಲ್, ತುಷಾರ್ 'ಐತಿಹಾಸಿಕ' ನಡಿಗೆ: ಕಾಂಗ್ರೆಸ್

ಶೆಗಾಂವ್ (ಮಹಾರಾಷ್ಟ್ರ) (ಪಿಟಿಐ): ಮಹಾತ್ಮ ಗಾಂಧಿ ಅವರ ಮರಿ ಮೊಮ್ಮಗ, ವಿಚಾರವಾದಿ ತುಷಾರ್ ಗಾಂಧಿ ಅವರು ಶುಕ್ರವಾರ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಇಲ್ಲಿ 'ಭಾರತ್ ಜೋಡೊ ಯಾತ್ರೆ'ಯಲ್ಲಿ ಹೆಜ್ಜೆ ಹಾಕಿದರು. ಇಬ್ಬರ ಈ ನಡಿಗೆಯನ್ನು 'ಐತಿಹಾಸಿಕ' ಎಂದು ಕಾಂಗ್ರೆಸ್ ಬಣ್ಣಿಸಿದೆ.

'ಜವಾಹರಲಾಲ್ ನೆಹರೂ ಅವರ ಮರಿ ಮೊಮ್ಮಗ ಹಾಗೂ ಮಹಾತ್ಮ ಗಾಂಧಿ ಅವರ ಮರಿ ಮೊಮ್ಮಗ ಭಾರತವನ್ನು ಒಗ್ಗೂಡಿಸುವ ಈ ನಡಿಗೆಯಲ್ಲಿ ಪಾಲ್ಗೊಂಡಿದ್ದು, ಇಬ್ಬರೂ ಹಿರಿಯ ನಾಯಕರ ಪರಂಪರೆಯ ಮುಂದುವರಿಸಿದ್ದಾರೆ' ಎಂದು ಪಕ್ಷ ಹೇಳಿದೆ.

'ಆಡಳಿತಾರೂಢರು ಪ್ರಜಾಪ್ರಭುತ್ವಕ್ಕೆ ಬೆದರಿಕೆ ಒಡ್ಡಬಹುದೇ ಹೊರತು ದಮನ ಮಾಡಲು ಸಾಧ್ಯವಿಲ್ಲ ಎಂದು ಈ ಇಬ್ಬರ ನಡಿಗೆಯು ಸಾರಿದೆ' ಎಂದು ಕಾಂಗ್ರೆಸ್ ಹೇಳಿದೆ.

ಯಾತ್ರೆಯಲ್ಲಿ ಪಾಲ್ಗೊಳ್ಳುವ ಕುರಿತು ತುಷಾರ್ ಗಾಂಧಿ ಅವರು ಗುರುವಾರ ಟ್ವೀಟ್ ಮಾಡಿದ್ದರು. 'ಶೆಗಾಂವ್ ನನ್ನ ಹುಟ್ಟೂರಾಗಿದೆ. ಆದ್ದರಿಂದ ನಾನು ಭಾರತ್ ಜೋಡೊ ಯಾತ್ರೆಯಲ್ಲಿ ಈ ಊರಿನಿಂದಲೇ ಪಾಲ್ಗೊಳ್ಳುವೆ' ಎಂದಿದ್ದರು. ನೆಹರೂ ಹಾಗೂ ಮಹಾತ್ಮ ಗಾಂಧಿ ಅವರಿಬ್ಬರೂ ಒಟ್ಟಿಗಿದ್ದ ಫೋಟೊವನ್ನೂ ಹಂಚಿಕೊಂಡಿದ್ದರು.

ಕಾರ್ಗಿಲ್ ಯುದ್ಧದ ಹೀರೊ ಎಂದೇ ಖ್ಯಾತರಾಗಿರುವ ನಾಯಕ್ ದೀಪ್‌ಚಂದ್ ಮತ್ತು ಬಾಲಿವುಡ್ ನಟಿ ಮೋನಾ ಅಂಬೇಗಾವ್ಕರ್ ಅವರು ಮಹಾರಾಷ್ಟ್ರದ ಬುಲ್ದಾನಾ ಜಿಲ್ಲೆಯಲ್ಲಿ ರಾಹುಲ್ ಗಾಂಧಿ ಅವರ ಜೊತೆ ಯಾತ್ರೆಯಲ್ಲಿ ಪಾಲ್ಗೊಂಡರು.

ಮಹಿಳೆಯರ ಹೆಜ್ಜೆ: 'ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ಜನ್ಮದಿನದ ಅಂಗವಾಗಿ ಶನಿವಾರ ರಾಹುಲ್ ಗಾಂಧಿ ಅವರೊಂದಿಗೆ ಕೇವಲ ಮಹಿಳೆಯರು ಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ತಿಳಿಸಿದ್ದಾರೆ.

'ಪಕ್ಷದ ಶಾಸಕಿಯರು, ಮಹಿಳಾ ಸಂಸದರು ಸೇರಿದಂತೆ ಸ್ಥಳೀಯ ಆಡಳಿತ ಸಂಸ್ಥೆಗಳ ಕಾಂಗ್ರೆಸ್‌ನ ಮಹಿಳಾ ಸದಸ್ಯರು, ಮಹಿಳಾ ಕಾರ್ಯಕರ್ತೆಯರು ಯಾತ್ರೆಯಲ್ಲಿ ಭಾಗವಹಿಸಲಿದ್ದಾರೆ' ಎಂದರು.

'ಭಾರತ್ ಜೋಡೊ ಯಾತ್ರೆ'ಗೆ ಬಾಂಬ್ ಬೆದರಿಕೆ

ಇಂದೋರ್: 'ಭಾರತ್ ಜೋಡೊ ಯಾತ್ರೆ'ಗೆ ವ್ಯಕ್ತಿಯೊಬ್ಬರು ಬಾಂಬ್ ಬೆದರಿಕೆ ಒಡ್ಡಿದ್ದಾರೆ. ಇಲ್ಲಿನ ಜೂಹಿ ಪ್ರದೇಶದಲ್ಲಿನ ಸಿಹಿತಿಂಡಿ ಅಂಗಡಿಯೊಂದರಲ್ಲಿ ಈ ಸಂಬಂಧ ಗುರುವಾರ ಸಂಜೆ ಪತ್ರವೊಂದು ದೊರೆತಿದೆ.

ಒಂದು ವೇಳೆ ಯಾತ್ರಾರ್ಥಿಗಳು ಇಲ್ಲಿನ ಖಾಲಸಾ ಕ್ರೀಡಾಂಗಣದಲ್ಲಿ ರಾತ್ರಿ ತಂಗಿದರೆ, ನಗರದಾದ್ಯಂತ ಬಾಂಬ್ ಸ್ಫೋಟಿಸುವುದಾಗಿ ಪತ್ರದಲ್ಲಿ ಬೆದರಿಕೆ ಒಡ್ಡಲಾಗಿದೆ. 'ಭಾರತ್ ಜೋಡೊ ಯಾತ್ರೆ'ಯು ನವೆಂಬರ್ 20ರಂದು ಮಧ್ಯಪ್ರದೇಶವನ್ನು ಪ್ರವೇಶಿಸಲಿದೆ.

ಐಪಿಸಿ ಸೆಕ್ಷನ್ 507 ಅಡಿಯಲ್ಲಿ (ಅನಾಮಧೇಯ ವ್ಯಕ್ತಿಯಿಂದ ಬೆದರಿಕೆ) ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಆರಂಭಿಸಿದ್ದಾರೆ.

'ಕುಚೇಷ್ಟೆಯಿಂದಲೂ ಪತ್ರ ಬರೆದಿರಬಹುದು' ಎಂದು ಪೊಲೀಸರು ಶಂಕಿಸಿದ್ದಾರೆ.

ಇಂದೋರ್‌ನ ಕಮಿಷನರ್ ಎಚ್.ಸಿ. ಮಿಶ್ರಾ ಪ್ರತಿಕ್ರಿಯಿಸಿ, 'ಪತ್ರದಲ್ಲಿ ಹಲವು ವಿಚಾರಗಳನ್ನು ಹೇಳಲಾಗಿದೆ. ಇದೊಂದು ಸೂಕ್ಷ್ಮ ವಿಷಯವಾಗಿದ್ದರಿಂದ ಎಲ್ಲವನ್ನೂ ಹೇಳಲು ಸಾಧ್ಯವಿಲ್ಲ. ಬಾಂಬ್ ಸ್ಫೋಟಿಸಿ ರಾಹುಲ್ ಗಾಂಧಿ ಅವರನ್ನು ಹತ್ಯೆ ಮಾಡುವ ಕುರಿತು ಪತ್ರದಲ್ಲಿ ಏನೂ ಹೇಳಲಾಗಿಲ್ಲ' ಎಂದರು.

'ಬೆದರಿಕೆ ಪತ್ರದ ಕುರಿತು ತನಿಖೆ ನಡೆಸಬೇಕು. ಜೊತೆಗೆ ಯಾತ್ರೆಗೆ ಇನ್ನೂ ಹೆಚ್ಚಿನ ಭದ್ರತೆ ಒದಗಿಸಬೇಕು' ಎಂದು ಮಧ್ಯಪ್ರದೇಶ ಕಾಂಗ್ರೆಸ್ ಘಟಕದ ಅಧ್ಯಕ್ಷ ನಿಲಾಬ್ ಶುಕ್ಲಾ ಆಗ್ರಹಿಸಿದ್ದಾರೆ.

ಮಹಾರಾಷ್ಟ್ರದಲ್ಲಿ ಮುಕ್ತಾಯಗೊಂಡ ಯಾತ್ರೆ

ಮಹಾರಾಷ್ಟ್ರದಲ್ಲಿ 12 ದಿನಗಳ 'ಭಾರತ್ ಜೋಡೊ ಯಾತ್ರೆ'ಯು ಪೂರ್ಣಗೊಂಡಿದೆ. ಈ ವೇಳೆ ಬುಲ್ಡಾನ ಜಿಲ್ಲೆಯ ಶೆಗಾಂವ್‌ನಲ್ಲಿ ರಾಹುಲ್ ಗಾಂಧಿ ಸಾರ್ವಜನಿಕ ರ‍್ಯಾಲಿಯನ್ನು ಉದ್ದೇಶಿಸಿ ಶುಕ್ರವಾರ ಮಾತನಾಡಿದರು.

'ತಮ್ಮ ಬೆಳೆಗೆ ಉತ್ತಮ ಬೆಲೆ ಸಿಗದೆ, ಬೆಲೆ ವಿಮೆ ಸೌಲಭ್ಯ ಇಲ್ಲದೆ ಮಹಾರಾಷ್ಟ್ರದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ' ಎಂದು ರಾಹುಲ್ ಗಾಂಧಿ ಹೇಳಿದರು. 'ಪ್ರಧಾನಿ ಮೋದಿ ಮತ್ತು ಇಲ್ಲಿನ ಮುಖ್ಯಮಂತ್ರಿ, ಜನರ ಕಷ್ಟಗಳನ್ನು ಪ್ರೀತಿಯಿಂದ ಕೇಳಿದರೆ, ಯಾವ ರೈತನು ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ' ಎಂದರು.



ಪ್ರತಿಭಟನೆ

ಆರ್ಥಿಕ ದುರ್ಬಲ ವರ್ಗಗಳಿಗೆ (ಇಡಬ್ಲ್ಯುಎಸ್) ಸರ್ಕಾರಿ ನೇಮಕಾತಿ ಮತ್ತು ಶಿಕ್ಷಣದಲ್ಲಿ ಶೇಕಡ 10 ರಷ್ಟು ಮೀಸಲಾತಿ ವಿರೋಧಿಸಿ ಸಾಮಾಜಿಕ ಮತ್ತು ರಾಜಕೀಯ ಕಾರ್ಯಕರ್ತರು ಪುದುಚೇರಿಯಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು. –ಪಿಟಿಐ ಚಿತ್ರ

ಶ್ರದ್ಧಾ ಕೊಲೆ: ಅಫ್ತಾಬ್ ಕಚೇರಿ ಪರಿಶೀಲನೆ

ನವದೆಹಲಿ: ಶ್ರದ್ಧಾ ವಾಲಕರ್ ಹತ್ಯೆಯ ತನಿಖೆ ನಡೆಸುತ್ತಿರುವ ದೆಹಲಿ ಪೊಲೀಸರ ತಂಡವು ಸಾಕ್ಷ್ಯಗಳನ್ನು ಸಂಗ್ರಹಿಸುವ ಸಲುವಾಗಿ ಆರೋಪಿ ಅಫ್ತಾಬ್ ಅಮೀನ್ ಪೂನಾವಾಲಾ ಕೆಲಸ ಮಾಡುತ್ತಿದ್ದ ಗುರುಗ್ರಾಮದಲ್ಲಿರುವ ಖಾಸಗಿ ಸಂಸ್ಥೆಯ ಕಚೇರಿಗೆ ಭೇಟಿ ನೀಡಿತ್ತು ಎಂದು ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದಾರೆ.

'ಶ್ರದ್ಧಾಳ ದೇಹದ ತುಂಡುಗಳು, ಕೊಲೆಗೆ ಬಳಸಿದ್ದ ಆಯುಧ ಅಥವಾ ಪ್ರಕರಣಕ್ಕೆ ಸಂಬಂಧಪಟ್ಟಂತೆ ತನಿಖೆಯಲ್ಲಿ ನಿರ್ಣಾಯಕವಾಗಬಹುದಾದ ಯಾವುದಾದರೂ ಸಾಕ್ಷ್ಯವನ್ನು ಆರೋಪಿ ಕಚೇರಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಎಸೆದಿದ್ದಾನೆಯೇ ಎಂಬುದನ್ನು ತಿಳಿಯಲು ಶೋಧ ನಡೆಸಲಾಯಿತು' ಎಂದೂ ಅಧಿಕಾರಿ ತಿಳಿಸಿದ್ದಾರೆ.

ಕಚೇರಿ ಸಮೀಪದಲ್ಲಿನ ಪೊದೆಯಲ್ಲಿ ಪತ್ತೆಯಾದ ಕೆಲವು ವಸ್ತುಗಳನ್ನು ಪೊಲೀಸರು ಪ್ಲಾಸ್ಟಿಕ್ ಬ್ಯಾಗ್‌ನಲ್ಲಿ ವಶಪಡಿಸಿಕೊಂಡಿದ್ದಾರೆ. ಆದರೆ, ಬ್ಯಾಗ್‌ನಲ್ಲಿರುವ ವಸ್ತುಗಳನ್ನು ಬಹಿರಂಗಪಡಿಸಿಲ್ಲ.

ಹಲವು ಸ್ಥಳಗಳಿಗೆ ಪ್ರಯಾಣಿಸಿದ್ದ ಜೋಡಿ: ಮುಂಬೈ ಅನ್ನು ತೊರೆದ ಬಳಿಕ ಶ್ರದ್ಧಾ ಮತ್ತು ಅಫ್ತಾಬ್ ಹಲವು ಸ್ಥಳಗಳಿಗೆ ಪ್ರಯಾಣಿಸಿದ್ದರು.

ಕೊಲೆಗೆ ಪ್ರಚೋದನೆ ನೀಡಲು ಆ ಪ್ರವಾಸಗಳಲ್ಲಿ ಏನಾದರೂ ಸಂಭವಿಸಿದೆಯೇ ಎಂದು ಖಚಿತಪಡಿಸಿಕೊಳ್ಳಲು ಪೊಲೀಸರು ಅಫ್ತಾಬ್‌ನೊಂದಿಗೆ ಈ ಸ್ಥಳಗಳಿಗೆ ಭೇಟಿ ನೀಡಲಿದ್ದಾರೆ. ಹಾಗಾಗಿ, ಅಫ್ತಾಬ್‌ನ ಪೊಲೀಸ್ ಕಸ್ಟಡಿ ಅವಧಿಯನ್ನು ಇನ್ನೂ ಐದು ದಿನಗಳ ಕಾಲ ದೆಹಲಿ ನ್ಯಾಯಾಲಯವು ವಿಸ್ತರಿಸಿದೆ.

ಶ್ರದ್ಧಾ ವಾಲಕರ್ ಮತ್ತು ಅಫ್ತಾಬ್‌ಅಮಿನ್ ಪೂನಾವಾಲಾ ಮುಂಬೈನಿಂದ ದೆಹಲಿಗೆ ಸ್ಥಳಾಂತರಗೊಂಡ ಬಳಿಕ ಅಫ್ತಾಬ್ ಖಾಸಗಿ ಸಂಸ್ಥೆಯೊಂದರಲ್ಲಿ ಕೆಲಸ ಮಾಡುತ್ತಿದ್ದ ಎನ್ನಲಾಗಿದೆ.

5 ದಿನದಲ್ಲಿ ಮಂಪರು ಪರೀಕ್ಷೆ

'ಶ್ರದ್ಧಾ ಹತ್ಯೆಯ ಅರೋಪಿ ಅಫ್ತಾಬ್ ಅಮಿನ್ ಪೂನಾವಾಲಾಗೆ ಐದು ದಿನಗಳೊಳಗೆ ಮಂಪರು ಪರೀಕ್ಷೆ ನಡೆಸಬೇಕು. ಆದರೆ, ಆತನಿಗೆ ಯಾವುದೇ ರೀತಿಯ ಚಿತ್ರಹಿಂಸೆ ನೀಡಬಾರದು' ಎಂದು ದೆಹಲಿ ನಗರ ಪೊಲೀಸರಿಗೆ ದೆಹಲಿ ಕೋರ್ಟ್ ನಿರ್ದೇಶನ ನೀಡಿದೆ.

ದೆಹಲಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ವಿಜಯಶ್ರೀ ರಾಥೋಡ್ ಅವರು, ದೆಹಲಿಯ ಉಪನಗರ ರೋಹಿಣಿಯ ವಿಧಿವಿಜ್ಞಾನ ಪ್ರಯೋಗಾಲಯದಲ್ಲಿ ಆರೋಪಿಯನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು ಎಂದು ತನಿಖಾಧಿಕಾರಿಗೆ (ಇಒ) ನಿರ್ದೇಶನ ನೀಡಿದ್ದಾರೆ.

ಸಾವರ್ಕರ್ ವಿಷಯ ಮಾತನಾಡಬಾರದಿತ್ತು: ಸಂಜಯ್ ರಾವುತ್

ಸಾವರ್ಕರ್ ವಿವಾದ: ಆಘಾಡಿಯಲ್ಲಿ ಬಿರುಕು?

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಂದುತ್ವವಾದಿ ಸಾವರ್ಕರ್ ವಿರುದ್ಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಮಾಡಿರುವ ಟೀಕೆಯು ಮಹಾರಾಷ್ಟ್ರದ 'ಮಹಾ ವಿಕಾಸ ಆಘಾಡಿ' ಮೈತ್ರಿಯಲ್ಲಿ ಬಿರುಕು ಮೂಡುವಂತೆ ಮಾಡಿದೆ. ಸಾವರ್ಕರ್ ವಿರುದ್ಧ ರಾಹುಲ್ ಗಾಂಧಿ ಅವರು ನಿರಂತರವಾಗಿ ಮಾಡುತ್ತಿರುವ ಟೀಕೆಗಳಿಂದ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾವು ಕಾಂಗ್ರೆಸ್ ಮೇಲೆ ಮುನಿಸಿಕೊಂಡಿದೆ.

'ಯಾವ ಕಠಿಣ ಕ್ರಮಗಳನ್ನು ಕೈಗೊಳ್ಳಲೂ ಹಿಂಜರಿಯುವುದಿಲ್ಲ. ಅಗತ್ಯ ಬಿದ್ದರೆ ಮೈತ್ರಿಯನ್ನೂ ಕಡಿದುಕೊಳ್ಳಬಹುದು' ಎಂದು ಶಿವಸೇನಾ (ಉದ್ಧವ್ ಠಾಕ್ರೆ ಬಣ) ನಾಯಕರು ಹೇಳುತ್ತಿದ್ದಾರೆ.

'ಸಾವರ್ಕರ್ ವಿರುದ್ಧ ರಾಹುಲ್ ಟೀಕೆ ಮಾಡಿದ್ದು ನಮಗೆ ಸಣ್ಣ ವಿಷಯವಲ್ಲ. ನಾವು ಸಾವರ್ಕರ್ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿದ್ದೇವೆ. ಸಾವರ್ಕರ್ ಕುರಿತು ಕಾಂಗ್ರೆಸ್ ಮಾತನಾಡಬಾರದಿತ್ತು' ಎಂದು ಸಂಸದ ಸಂಜಯ್ ರಾವುತ್ ಹೇಳಿದ್ದಾರೆ.

'ಬಹುಶಃ ನಾವು 'ಮಹಾ ವಿಕಾಸ ಆಘಾಡಿ' ಮೈತ್ರಿಯಲ್ಲಿ ಮುಂದುವರಿಯುವುದಿಲ್ಲ' ಎಂದೂ ಎಚ್ಚರಿಸಿದ್ದಾರೆ.

ಕಾಂಗ್ರೆಸ್ ಪಕ್ಷವು ರಾಹುಲ್ ಗಾಂಧಿ ಅವರು ಹೇಳಿಕೆಯನ್ನು ಬೆಂಬಲಿಸುತ್ತಿದೆ. 'ರಾಹುಲ್ ಅವರದು 'ಉದ್ದೇಶಪೂರ್ವಕವಾಗಿ ನೀಡಿದ ಹೇಳಿಕೆ'ಯಾಗಿರಲಿಲ್ಲ. ಬ್ರಿಟಿಷರ ವಿರುದ್ಧ ಹೋರಾಡಿದ ಬುಡಕಟ್ಟು ನಾಯಕ ಬಿರ್ಸಾ ಮುಂಡಾ ಅವರ ಕುರಿತು ಮಾತನಾಡುವಾಗ ಸಾವರ್ಕರ್ ವಿಷಯ ಪ್ರಸ್ತಾಪವಾಯಿತು. ರಾಹುಲ್ ಅವರು 'ಐತಿಹಾಸಿಕ ಸತ್ಯ'ವನ್ನು ಹೇಳಲು ಯತ್ನಿಸುತ್ತಿದ್ದರಷ್ಟೇ' ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

'ರಾಹುಲ್ ಅವರ ಹೇಳಿಕೆಯು ಶಿವಸೇನಾ ಮತ್ತು ಕಾಂಗ್ರೆಸ್ ನಡುವಿನ ಮೈತ್ರಿಯ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ. ಭಿನ್ನ ನಿಲುವನ್ನು ಗೌರವಿಸಲು ಇಬ್ಬರೂ ಒಪ್ಪಿಕೊಂಡಿದ್ದೇವೆ. ಸಂಜಯ್ ರಾವುತ್ ಅವರೊಂದಿಗೆ ಮಾತನಾಡಿದ್ದೇನೆ. 'ಐತಿಹಾಸಿಕ ವ್ಯಕ್ತಿ'ಗಳ ಕುರಿತ ಅಭಿಪ್ರಾಯವು ಮೈತ್ರಿಯ ಮೇಲೆ ಯಾವ ಪರಿಣಾಮವನ್ನೂ ಬೀರುವುದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ' ಎಂದರು.

ಸಾವರ್ಕರ್ ವಿಷಯ ಮಾತನಾಡುವ ಮೂಲಕ ಜೇನುಗೂಡಿಗೆ ಕೈ ಹಾಕಿ ದಂತಾಗಿದೆ ಎಂದು ಪಕ್ಷದ ಹಲವು ಮುಖಂಡರು ಅಭಿಪ್ರಾಯಪಟ್ಟಿದ್ದಾರೆ. ಯಾವುದೇ ವಿವಾದವಿಲ್ಲದೆ ಸಾಗುತ್ತಿದ್ದ 'ಭಾರತ್ ಜೋಡೊ ಯಾತ್ರೆ'ಯು ರಾಹುಲ್ ಗಾಂಧಿ ಅವರ ಈ ಹೇಳಿಕೆಯಿಂದಾಗಿ ವಿವಾದಕ್ಕೆ ಕಾರಣವಾಗಿದೆ.

ದಿನದ ಬೆಳವಣಿಗೆ

- 'ಕಾಂಗ್ರೆಸ್‌ನವರು ಭಾರತ ಜೋಡೊ ಯಾತ್ರೆ ಮಾಡುತ್ತಿದ್ದಾರೋ, ಭಾರತ ತೋಡೊ ಯಾತ್ರೆ ಮಾಡುತ್ತಿದ್ದಾರೋ? ನನಗೆ ಅಚ್ಚರಿಯಾಗುತ್ತಿದೆ. ಕಾಂಗ್ರೆಸ್‌ಗೆ ದೇಶವನ್ನು ಒಡೆಯುವುದು ಮಾತ್ರ ಗೊತ್ತಿದೆ, ಜೋಡಿಸುವುದು ಗೊತ್ತಿಲ್ಲ' ಎಂದು ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಹೇಳಿದ್ದಾರೆ
- ಸಾವರ್ಕರ್ ಅವರ ಹುಟ್ಟೂರಾದ ನಾಸಿಕ್‌ನ ಬಾಗೂರ್‌ನಲ್ಲಿ ರಾಹುಲ್ ಗಾಂಧಿ ವಿರುದ್ಧ ಶುಕ್ರವಾರ ಪ್ರತಿಭಟನೆ ನಡೆಸಲಾಗಿದೆ. 'ರಾಹುಲ್ ಗಾಂಧಿ ಅವರು ಕ್ಷಮೆ ಕೇಳಬೇಕು. ಅಲ್ಲಿಯವರೆಗೂ ಗಾಂಧಿ ಕುಟುಂಬದ ಯಾರೊಬ್ಬರನ್ನು ಬಾಗೂರಿಗೆ ಬರಲು ಬಿಡುವುದಿಲ್ಲ' ಎಂದು ಬಿಜೆಪಿಯ ಮಂಡಲ ಅಧ್ಯಕ್ಷ ಪ್ರಸಾದ್ ಆಡಕೆ ಹೇಳಿದ್ದಾರೆ
- ಪುಣೆಯಲ್ಲಿರುವ ಕಾಂಗ್ರೆಸ್ ಕಚೇರಿಗೆ ಬಿಜೆಪಿ ಕಾರ್ಯಕರ್ತರು ಮುತ್ತಿಗೆ ಹಾಕಿದರು. ರಾಹುಲ್ ಗಾಂಧಿ ಅವರ ಭಾವಚಿತ್ರಕ್ಕೆ ಮಸಿ ಬಳಿಯಲು ಯತ್ನಿಸಿದರು. ರಾಹುಲ್ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಕಚೇರಿಯ ಗೋಡೆಗಳ ಮೇಲೆ 'ಮಾಫಿವೀರ್ ನೆಹರೂ' (ಕ್ಷಮಾಪಣೆ ಶೂರ ನೆಹರೂ) ಎಂದು ಬರೆದಿದ್ದ ಭಿತ್ತಿಪತ್ರಗಳನ್ನು ಅಂಟಿಸಿದರು
- ರಾಹುಲ್ ಗಾಂಧಿ ಮೇಲೆ ಮಾನನಷ್ಟ ಮೊಕದ್ದಮೆ ದಾಖಲಾಗಿದೆ. ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಬಣದ ಶಿವಸೇನಾ ಕಾರ್ಯಕರ್ತೆ ವಂದನಾ ಡೊಂಗ್ರೆ ಅವರು ರಾಹುಲ್ ವಿರುದ್ಧ ಠಾಣೆಯ ಪೊಲೀಸರಿಗೆ ದೂರು ನೀಡಿದ್ದಾರೆ

'ಕಡತಗಳಿಲ್ಲದ ವಕೀಲ; ಬ್ಯಾಟ್ ಇಲ್ಲದ ಸಚಿನ್ ಇದ್ದಂತೆ'

ನವದೆಹಲಿ (ಪಿಟಿಐ): ಕಡತಗಳಿಲ್ಲದೆ ವಕೀಲನೊಬ್ಬ ವಾದ ಮಾಡುವುದು ಎಂದರೆ, ಬ್ಯಾಟ್ ಇಲ್ಲದೆ ಸಚಿನ್ ತೆಂಡೂಲ್ಕರ್ ಮೈದಾನಕ್ಕೆ ಇಳಿದಂತೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರು ಶುಕ್ರವಾರ ವಕೀಲರೊಬ್ಬರಿಗೆ ಹೇಳಿದರು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿ ಹಿಮಾ ಕೊಹ್ಲಿ ಅವರಿದ್ದ ಪೀಠದ ಮುಂದೆ ಕಡತಗಳಿಲ್ಲದೆ ವಾದ ಮಂಡಿಸಲು ಬಂದ ವಕೀಲರ ಕುರಿತು ಆಕ್ರೋಶ ವ್ಯಕ್ತಪಡಿಸಿದರು.

ಮುಖ್ಯಾಂಶಗಳು

- ಕಡತ ಇಲ್ಲದೆ ಬಂದಿದ್ದ ವಕೀಲ
- ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ತರಾಟೆ

'ಕಪ್ಪು ಕೋಟು ಧರಿಸಿಕೊಂಡು ಕಡತಗಳಿಲ್ಲದೇ ಬಂದಿದ್ದೀರಿ. ಇದು ಸರಿಯಲ್ಲ. ನಿಮ್ಮ ಬಳಿ ಯಾವಾಗಲೂ ನೀವು ವಾದಿಸುವ ಪ್ರಕರಣಗಳ ಕಡತಗಳನ್ನು ಇಟ್ಟುಕೊಳ್ಳಬೇಕು' ಎಂದು ಅವರು ಹೇಳಿದರು.

ಹಿಂದಿಯಲ್ಲಿ ವಾದ- ನ್ಯಾಯಾಲಯದ ಭಾಷೆ ಇಂಗ್ಲಿಷ್: ಸುಪ್ರೀಂ ಕೋರ್ಟ್‌ನಲ್ಲಿ ತಮ್ಮ ಪ್ರಕರಣದ ವಾದವನ್ನು ಹಿಂದಿಯಲ್ಲಿ ಮಂಡಿಸಲು ಮುಂದಾದ ವ್ಯಕ್ತಿಯೊಬ್ಬರಿಗೆ, 'ನ್ಯಾಯಾಲಯದ ಭಾಷೆ ಇಂಗ್ಲಿಷ್. ಒಂದು ವೇಳೆ ನಿಮಗೆ ಇಂಗ್ಲಿಷ್ ಬರದಿದ್ದರೆ ವಕೀಲರೊಬ್ಬರನ್ನು ಒದಗಿಸಲಾಗುವುದು' ಎಂದು ನ್ಯಾಯಾಲಯ ಶುಕ್ರವಾರ ಹೇಳಿದೆ.

ದೇಶದ ಹಲವು ನ್ಯಾಯಾಲಯಗಳಲ್ಲಿ ಅರ್ಜಿಯ ವಿಚಾರಣೆ ಆಗಿದೆ. ಆದರೆ, ಎಲ್ಲೂ ನನಗೆ ನ್ಯಾಯ ಸಿಕ್ಕಿಲ್ಲ ಎಂದು ಅರ್ಜಿದಾರರು ಹಿಂದಿಯಲ್ಲಿ ಹೇಳಿದರು.

ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಮತ್ತು ಹೃಷಿಕೇಶ್ ರಾಯ್ ಅವರಿದ್ದ ಪೀಠವು, 'ನ್ಯಾಯಾಲಯದ ಭಾಷೆ ಇಂಗ್ಲಿಷ್ ಆಗಿದೆ. ನಮಗೆ ನೀವು ಏನು ಹೇಳುತ್ತಿದ್ದೀರಿ ಎಂದು ಅರ್ಥವಾಗುತ್ತಿಲ್ಲ. ನೀವು ಒಪ್ಪುವುದಾದರೆ, ನಾವೇ ವಕೀಲರನ್ನು ಒದಗಿಸುತ್ತೇವೆ' ಎಂದಿತು. ಇದಕ್ಕೆ ಅರ್ಜಿದಾರರು ಒಪ್ಪಿದರು. ಹಿರಿಯ ಅರ್ಜಿದಾರರಿಗೆ ತಮ್ಮ ಪರವಾಗಿ ವಾದ ಮಂಡಿಸಲು ವಕೀಲರೊಬ್ಬರನ್ನು ಒಗದಿಸಿತು.

ಬೀದಿ ನಾಯಿ ಪೋಷಣೆ: ಸುಪ್ರೀಂ ಕೋರ್ಟ್ ತರಾಟೆ

ನವದೆಹಲಿ (ಪಿಟಿಐ): ತಾವು ಪೋಷಿಸುತ್ತಿರುವ 60ಕ್ಕೂ ಹೆಚ್ಚಿನ ಬೀದಿ ನಾಯಿಗಳಿಗೆ ರಕ್ಷಣೆ ನೀಡಬೇಕೆಂದು ಕೋರಿ ಮಹಿಳೆಯೊಬ್ಬರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂಕೋರ್ಟ್ ಶುಕ್ರವಾರ ವಜಾಗೊಳಿಸಿದೆ.

ಅರ್ಜಿಯ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಮತ್ತು ಎಂ.ಎಂ.ಸುಂದರೇಶ್ ಅವರನ್ನು ಒಳಗೊಂಡ ನ್ಯಾಯಪೀಠ, 'ಬೀದಿ ನಾಯಿಗಳನ್ನು ಸಾಕುವುದು ಎಂದರೆ ಅವುಗಳನ್ನು ಬೀದಿಗೆ ಕೊಂಡೊಯ್ದು, ಪರಸ್ಪರ ಕಚ್ಚಾಡಲು ಅವಕಾಶ ನೀಡುವುದು, ಸಾರ್ವಜನಿಕರಿಗೆ ತೊಂದರೆ ನೀಡುವುದು ಎಂದರ್ಥವಲ್ಲ' ಎಂದು ಹೇಳಿದೆ.

ಮಧ್ಯಪ್ರದೇಶ ಮೂಲದ ಸಮ್ರಿನ್ ಬಾನೊ ಎಂಬುವರು, ರಾಜ್ಯದಲ್ಲಿ ಬೀದಿ ನಾಯಿಗಳಿಗೆ ರಕ್ಷಣೆ ಇಲ್ಲ. ತಾವು ಪೋಷಿಸುತ್ತಿರುವ ನಾಯಿಗಳಿಗೆ ರಕ್ಷಣೆ ನೀಡಬೇಕು ಎಂದು ಕೋರಿ ಸುಪ್ರೀಂಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು.

'ಖರ್ಗೆ ಅವರಿಗೆ ದೂರವಾಣಿ ಕರೆ ಮಾಡಿ ಮಾತನಾಡಿದ್ದೇನೆ ಎನ್ನುವುದು ನಿರಾಧಾರ'

ಬಿಜೆಪಿ ಆಹ್ವಾನ ತಿರಸ್ಕರಿಸಿರುವೆ: ಕೆಸಿಆರ್ ಪುತ್ರಿ ಕವಿತಾ

ಹೈದರಾಬಾದ್ (ಪಿಟಿಐ): 'ಬಿಜೆಪಿಯ ಕೆಲವು ಸ್ನೇಹಿತರು ಅವರ ಪಕ್ಷ ಸೇರುವಂತೆ ನನ್ನನ್ನು ಸಂಪರ್ಕಿಸಿದ್ದರು. ಆದರೆ, ನಾನು ಅವರ ಆಹ್ವಾನವನ್ನು ನಯವಾಗಿ ತಿರಸ್ಕರಿಸಿದ್ದೆ' ಎಂದು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರ ಪುತ್ರಿ ಮತ್ತು ಟಿಆರ್‌ಎಸ್ ಶಾಸಕಿ ಕೆ.ಕವಿತಾ ಶುಕ್ರವಾರ ಹೇಳಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ನಾನು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ದೂರವಾಣಿ ಕರೆ ಮಾಡಿ ಮಾತನಾಡಿರುವುದಾಗಿ ನಿಜಾಮಾಬಾದ್ ಕ್ಷೇತ್ರದ ಬಿಜೆಪಿ ಸಂಸದ ಧರ್ಮಪುರಿ ಅರವಿಂದ್ ಅವರು ನೀಡಿರುವ ಹೇಳಿಕೆ ನಿರಾಧಾರ. ಇಂತಹ ಸುಳ್ಳು ಆರೋಪ ಮಾಡುವುದನ್ನು ಅವರು ನಿಲ್ಲಿಸಲಿ. ನಾನು ಯೋಗ್ಯ ರಾಜಕಾರಣಿ' ಎಂದು ಸ್ಪಷ್ಟನೆ ನೀಡಿದರು.

'ದೇಶದ ರಾಜಕಾರಣದಲ್ಲಿ ಬಹುಕಾಲ ಉಳಿಯಲು ನಾನು ಬಯಸಿರುವೆ. ನಾನು ಯಾರನ್ನೂ ಹೆಸರಿಸಲು ಹೋಗುವುದಿಲ್ಲ. ಬಿಜೆಪಿಯ ಸ್ನೇಹಿತರು, ಬಿಜೆಪಿಸ್ನೇಹಿ ಸಂಸ್ಥೆಗಳೂ ನನ್ನನ್ನು ಪಕ್ಷಕ್ಕೆ ಸೇರಿಸಿಕೊಳ್ಳಲು ಬಯಸಿ, 'ಶಿಂದೆ ಮಾದರಿ'ಯ ಪ್ರಸ್ತಾವವನ್ನು ನನ್ನ ಮುಂದಿಟ್ಟಿದ್ದು ನಿಜ' ಎಂದು ಅವರು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

'ತೆಲಂಗಾಣದ ಜನರು ತಮ್ಮದೇ ಪಕ್ಷಗಳು ಮತ್ತು ತಮ್ಮದೇ ಆದ ನಾಯಕರಿಗೆ ದ್ರೋಹ ಮಾಡುವುದಿಲ್ಲ. ನಾವು ರಾಜಕಾರಣಕ್ಕೆ ಹಿಂಬಾಗಿಲಿನಿಂದ ಬಂದವರಲ್ಲ, ನಮ್ಮ ಸ್ವಂತ ಬಲದ ಮೇಲೆ ನಾಯಕರಾದವರು. ನನ್ನ ಹೃದಯ ಪಕ್ಷಕ್ಕಾಗಿ ಮಿಡಿಯುತ್ತದೆ. ನಾಯಕ ಕೆಸಿಆರ್ ನನ್ನ ಗುರು. ಬಿಜೆಪಿಯವರು ಸುಳ್ಳು ಪ್ರಚಾರ ನಿಲ್ಲಿಸದಿದ್ದರೆ ಜನರೇ ಅವರಿಗೆ ತಕ್ಕ ಪಾಠ ಕಲಿಸಲಿದ್ದಾರೆ' ಎಂದು ಕವಿತಾ ಎಚ್ಚರಿಸಿದರು.

ಕಾರ್ಯಕರ್ತರ ಪ್ರತಿಭಟನೆ: ಕೆಸಿಆರ್ ಕುಟುಂಬಕ್ಕೆ ಅವಮಾನ ಮಾಡುವಂತೆ, ಕವಿತಾ ಅವರ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಬಿಜೆಪಿ ಸಂಸದ ಧರ್ಮಪುರಿ ಅರವಿಂದ್ ಅವರ ಮನೆ ಮೇಲೆ ಟಿಆರ್‌ಎಸ್ ಕಾರ್ಯಕರ್ತರು ಶುಕ್ರವಾರ ದಾಳಿ ನಡೆಸಿ, ದಾಂದಲೆ ಮಾಡಿದ್ದಾರೆ. ಸಂಸದರ ಪ್ರತಿಕೃತಿಯನ್ನೂ ದಹಿಸಿ ಪ್ರತಿಭಟಿಸಿದರು.

'ಟಿಆರ್‌ಎಸ್ ಪಕ್ಷದ ಹೆಸರನ್ನು ಬಿಆರ್‌ಎಸ್ (ಭಾರತ್ ರಾಷ್ಟ್ರ ಸಮಿತಿ) ಯಾಗಿ ಬದಲಿಸುವ ಸಮಾರಂಭದಲ್ಲಿ ತಮ್ಮನ್ನು ನಿರ್ಲಕ್ಷಿಸಿದ ಕಾರಣಕ್ಕೆ ಕವಿತಾ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ದೂರವಾಣಿ ಕರೆ ಮಾಡಿ, ರಾಷ್ಟ್ರೀಯ ಪಕ್ಷ ಸೇರುವ ಇಚ್ಛೆ ವ್ಯಕ್ತಪಡಿಸಿದ್ದಾರೆ' ಎಂದು ಸಂಸದ ಅರವಿಂದ್ ಟೀಕಿಸಿದ್ದರು.

ಬಿಜೆಪಿ ಖಂಡನೆ: ಟಿಆರ್‌ಎಸ್ ಕಾರ್ಯಕರ್ತರ ದಾಂದಲೆ ಖಂಡಿಸಿರುವ ತೆಲಂಗಾಣ ಬಿಜೆಪಿಯು, ಇದು ರಾಜ್ಯ ಸರ್ಕಾರ ಪ್ರೇರಿತ ದಾಂದಲೆ ಎಂದು ಆರೋಪಿಸಿದೆ.

'ಟಿಆರ್‌ಎಸ್ ಗೂಂಡಾಗಳು ನನ್ನ ನಿವಾಸದ ಮೇಲೆ ದಾಳಿ ನಡೆಸಿ, ಮನೆಯನ್ನು ಧ್ವಂಸಗೊಳಿಸಿದರು. ಗದ್ದಲ ಎಬ್ಬಿಸಿ, ನನ್ನ ತಾಯಿಯನ್ನು ಭಯಭೀತಗೊಳಿಸಿದರು' ಎಂದು ಸಂಸದ ಅರವಿಂದ್ ಟ್ವೀಟ್ ಮಾಡಿದ್ದಾರೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ತರುಣ್ ಚುಗ್, 'ಟಿಆರ್‌ಎಸ್ ಗೂಂಡಾಗಳು ಸಂಸದರ ಮನೆಯನ್ನು ದೋಚುವ ಲಜ್ಜೆಗೆಟ್ಟ ಗೂಂಡಾಗಿರಿಯನ್ನು ನಡೆಸಿದ್ದಾರೆ' ಎಂದು ಹೇಳಿಕೆಯಲ್ಲಿ ಟೀಕಿಸಿದ್ದಾರೆ.

ಇದಕ್ಕೆ ಟಿಆರ್‌ಎಸ್‌ನಿಂದ ತಕ್ಷಣದ ಪ್ರತಿಕ್ರಿಯೆ ವ್ಯಕ್ತವಾಗಿಲ್ಲ.

ಪ್ರಪಾತಕ್ಕೆ ಟಾಟಾ ಸುಮೊ ಉರುಳಿ 11 ಮಂದಿ ಸಾವು

ಡೆಹ್ರಾಡೂನ್/ಗೋಪೇಶ್ವರ (ಪಿಟಿಐ): ಉತ್ತರಾಖಂಡದ ಚಮೋಲಿ ಜಿಲ್ಲೆಯಲ್ಲಿ ಶುಕ್ರವಾರ ಪ್ರಯಾಣಿಕ ವಾಹನ ಪ್ರಪಾತಕ್ಕೆ ಉರುಳಿದ ಪರಿಣಾಮ 11 ಮಂದಿ ಮೃತಪಟ್ಟು, ಮೂವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

16 ಪ್ರಯಾಣಿಕರಿದ್ದ ಟಾಟಾ ಸುಮೊ ಸಂಜೆ 4 ಗಂಟೆ ಸುಮಾರಿಗೆ ಜಿಲ್ಲೆಯ ಜೋಶಿಮಠ್ ಪ್ರದೇಶದ ಉರ್ಗಾಮ್ ಬಳಿ ಪ್ರಪಾತಕ್ಕೆ ಬಿದ್ದಿದೆ. ವಾಹನದಲ್ಲಿದ್ದ ಇಬ್ಬರು ವಾಹನದಿಂದ ಜಿಗಿದಿದ್ದಾರೆ. ಪೊಲೀಸರು ಮತ್ತು ರಾಜ್ಯ ವಿಪತ್ತು ನಿರ್ವಹಣಾ ಪಡೆ (ಎಸ್‌ಡಿಆರ್‌ಎಫ್) ತಂಡ ಸ್ಥಳಕ್ಕೆ ಧಾವಿಸಿದ್ದು, ರಕ್ಷಣಾ ಕಾರ್ಯಾಚರಣೆ ನಡೆಯುತ್ತಿದೆ ಎಂದು ಚಮೋಲಿ ಎಸ್ಪಿ ಪ್ರಮೇಂದ್ರ ದೋಭಾಲ್ ಹೇಳಿದ್ದಾರೆ.

ವಾಹನದ ಮೇಲೆಯೂ ಪ್ರಯಾಣಿಕರು ಕುಳಿತಿದ್ದರು ಎಂದು ಹೇಳಲಾಗಿದೆ. ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಮೃತರ ಕುಟುಂಬಕ್ಕೆ ತಲಾ ₹ 2 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಶಿಕ್ಷಕರ ನೇಮಕಾತಿ: 13,363 ಅಭ್ಯರ್ಥಿಗಳ ಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವೀಧರ ಪ್ರಾಥಮಿಕ ಶಿಕ್ಷಕರ ನೇಮಕಾತಿಯ ತಾತ್ಕಾಲಿಕ ಪಟ್ಟಿಯನ್ನು ಶುಕ್ರವಾರ ಬಿಡುಗಡೆ ಮಾಡಿದ್ದು, 13,363 ಅಭ್ಯರ್ಥಿಗಳು ಸ್ಥಾನಪಡೆದಿದ್ದಾರೆ.

ಈ ವರ್ಷದ ಮಾರ್ಚ್‌ನಲ್ಲಿ 15 ಸಾವಿರ ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗಿತ್ತು. 68,849 ಅಭ್ಯರ್ಥಿಗಳು ಸಿಇಟಿ ಬರೆದಿದ್ದರು. ಅವರಲ್ಲಿ 51,098 ಅಭ್ಯರ್ಥಿಗಳು ಅರ್ಹತೆ ಪಡೆದಿದ್ದರು. 22,432 ಅಭ್ಯರ್ಥಿಗಳನ್ನು ದಾಖಲೆಗಳ ಪರಿಶೀಲನೆಗೆ ಆಯ್ಕೆ ಮಾಡಲಾಗಿತ್ತು. ಈಗ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳನ್ನು ಸಲ್ಲಿಸಲು ನ.23ರವರೆಗೆ ಅವಕಾಶ ಕಲ್ಪಿಸಲಾಗಿದೆ. ಆಯಾ ಜಿಲ್ಲೆಗಳ ಉಪ ನಿರ್ದೇಶಕರ ಕಚೇರಿಯಲ್ಲಿ ನ.19ರಿಂದ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಆಕ್ಷೇಪಣೆ ಪೂರ್ಣಗೊಂಡ ಒಂದು ತಿಂಗಳಲ್ಲಿ ನೇಮಕಾತಿ ಆದೇಶ ನೀಡಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಆಂಗ್ಲಭಾಷೆಯ 1,807 ಹುದ್ದೆಗಳಲ್ಲಿ 1,768, ಗಣಿತ ಮತ್ತು ವಿಜ್ಞಾನ ವಿಷಯದ 6,500ಕ್ಕೆ 5,450, ಸಮಾಜ ವಿಜ್ಞಾನದಲ್ಲಿ 4,693ಕ್ಕೆ 4,521 ಹಾಗೂ ಜೀವ ವಿಜ್ಞಾನದ 2 ಸಾವಿರದಲ್ಲಿ 1,624 ಅಭ್ಯರ್ಥಿಗಳು ಆಯ್ಕೆಯಾಗಿದ್ದಾರೆ. 1,637 ಹುದ್ದೆಗಳು ಖಾಲಿ ಉಳಿದಿವೆ. ಕಲ್ಯಾಣ ಕರ್ನಾಟಕದ 4,187 ಅಭ್ಯರ್ಥಿಗಳಿಗೆ ಅವಕಾಶ ಲಭಿಸಿದೆ.

ಪರೀಕ್ಷೆ ಬರೆದಿದ್ದ 10 ತೃತೀಯ ಲಿಂಗಿಗಳಲ್ಲಿ ಮೂವರು ಆಯ್ಕೆಯಾಗಿದ್ದಾರೆ. ಆಂಗ್ಲಭಾಷೆಯಲ್ಲಿ ಒಬ್ಬರು, ಸಮಾಜ ವಿಜ್ಞಾನದಲ್ಲಿ ಇಬ್ಬರು ಸ್ಥಾನ ಪಡೆದಿದ್ದಾರೆ. ಎಂಜಿನಿಯರಿಂಗ್ ಪದವಿ ಪಡೆದ 34 ಅಭ್ಯರ್ಥಿಗಳು ಗಣಿತ ಮತ್ತು ವಿಜ್ಞಾನ ಶಿಕ್ಷಕರ ಹುದ್ದೆಗಳಿಗೆ ಪರೀಕ್ಷೆ ಬರೆದಿದ್ದರು. ಅವರಲ್ಲಿ 19 ಮಂದಿ ಆಯ್ಕೆಯಾಗಿದ್ದಾರೆ. ಖಾಲಿ ಉಳಿದ ಹುದ್ದೆಗಳಿಗೆ ತಾತ್ಕಾಲಿಕವಾಗಿ ಅತಿಥಿ ಉಪನ್ಯಾಸಕರ ಸೇವೆ ಪಡೆಯಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಿತೀಶ್‌ಕುಮಾರ್ ಸಿಂಗ್, ಆಯುಕ್ತ ಆರ್.ವಿಶಾಲ್, ರಾಜ್ಯ ಯೋಜನಾ ನಿರ್ದೇಶಕಿ ಬಿ.ಬಿ.ಕಾವೇರಿ, ಜಂಟಿ ನಿರ್ದೇಶಕಿ ಪ್ರೇಮಾ ಇದ್ದರು.

ಪ್ರೌಢಶಾಲಾ ಶಿಕ್ಷಕರ ಹುದ್ದೆ ಶೀಘ್ರ ಭರ್ತಿ

ಪ್ರೌಢಶಾಲೆಗಳಲ್ಲಿ ಖಾಲಿ ಇರುವ 2,500 ಸಹ ಶಿಕ್ಷಕರ ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗಿದೆ. ಮಾರ್ಚ್ ಒಳಗೆ ಅಧಿಸೂಚನೆ ಹೊರಡಿಸಲಾಗುವುದು ಎಂದು ಸಚಿವ ನಾಗೇಶ್ ಹೇಳಿದರು.

ಪ್ರತಿ ವರ್ಷ ನಿವೃತ್ತರಾಗುವ ಶಿಕ್ಷಕರ ಪಟ್ಟಿಯಂತೆ ಆಯಾ ವರ್ಷದಲ್ಲೇ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಲು ಅನುಮತಿ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲಾಗಿದೆ. ಅನುಮತಿ ದೊರೆಯುವ ನಿರೀಕ್ಷೆ ಇದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಂಕ್ಷಿಪ್ತ ಸುದ್ದಿ

ಖಶೋಗ್ಗಿ ಹತ್ಯೆ: ರಾಜಕುಮಾರನಿಗೆ ಬೈಡನ್ ಶ್ರೀರಕ್ಷೆ?

ವಾಷಿಂಗ್ಟನ್ (ಎಪಿ): 'ವಾಷಿಂಗ್ಟನ್ ಪೋಸ್ಟ್' ಅಂಕಣಕಾರ, ಪತ್ರಕರ್ತ ಜಮಾಲ್ ಖಶೋಗ್ಗಿ ಹತ್ಯೆಯಲ್ಲಿ ಪಾತ್ರವಿರುವ ಆರೋಪ ಹೊತ್ತಿರುವ ಸೌದಿ ಅರೇಬಿಯಾದ ರಾಜಕುಮಾರನಿಗೆ ಕಾನೂನು ಕ್ರಮದಿಂದ ರಕ್ಷಣೆ ನೀಡುವ ನಿಟ್ಟಿನಲ್ಲಿ ಪರಿಶೀಲಿಸಬೇಕು ಎಂದು ಅಮೆರಿಕ ಅಧ್ಯಕ್ಷ ಜೋ ಬೈಡನ್ ಆಡಳಿತ ಹೇಳಿದೆ.

ಖಶೋಗ್ಗಿ ಅವರ ಹತ್ಯೆಯಲ್ಲಿ ಸೌದಿ ರಾಜಕುಮಾರ ಮೊಹಮ್ಮದ್ ಬಿನ್ ಸಲ್ಮಾನ್ ಅವರ ಕೈವಾಡ ಇತ್ತು ಎಂಬುದಾಗಿ ಬೈಡನ್ ಈ ಹಿಂದೆ ದೂರಿದ್ದರು. ಆದರೆ, ಈಗ ಬೈಡನ್ ಅವರ ಆಡಳಿತದ ನಿಲುವು ಬದಲಾಗಿದೆ.

ಮೊಹಮ್ಮದ್ ಬಿನ್ ಸಲ್ಮಾನ್ ಅವರಿಗೆ ಬಂಧನದಿಂದ ವಿನಾಯಿತಿ ಮತ್ತು ರಾಜತಾಂತ್ರಿಕ ರಕ್ಷಣೆ ನೀಡುವ ಬಗ್ಗೆ ಅಂತಿಮವಾಗಿ ನ್ಯಾಯಾಧೀಶರು ನಿರ್ಧರಿಸಲಿದ್ದಾರೆ ಎಂದು ವಿದೇಶಾಂಗ ಇಲಾಖೆ ಪ್ರತಿಕ್ರಿಯಿಸಿದೆ. ಆದರೆ, ಬೈಡನ್ ಆಡಳಿತದ ಈ ನಡೆ, ಮಾನವ ಹಕ್ಕುಗಳ ಕಾರ್ಯಕರ್ತರು ಮತ್ತು ಅಮೆರಿಕದ ಹಲವು ಸಂಸದರ ಕೋಪಕ್ಕೆ ಗುರಿಯಾಗುವ ಸಾಧ್ಯತೆಯೂ ಇದೆ.

ಖಶೋಗ್ಗಿ ಅವರ ಗೆಳತಿ ಹಾಗೂ ಖಶೋಗ್ಗಿ ಅವರು ಸ್ಥಾಪಿಸಿದ್ದ 'ಡೆಮಾಕ್ರಸಿ ಫಾರ್ ದಿ ಅರಬ್ ವರ್ಲ್ಡ್ ನೌ' ಎಂಬ ಗುಂಪು ಮೊಹಮ್ಮದ್ ಬಿನ್ ಸಲ್ಮಾನ್ ವಿರುದ್ಧ ಕಾನೂನು ಸಮರ ನಡೆಸುತ್ತಿದೆ.

ನೇಪಾಳ ಚುನಾವಣೆ: ವೀಕ್ಷಕರಾಗಿ ರಾಜೀವ್ ಕುಮಾರ್



ರಾಜೀವ್ ಕುಮಾರ್

ಕಠ್ಮಂಡು (ಪಿಟಿಐ): ನೇಪಾಳದಲ್ಲಿ ಭಾನುವಾರ ನಡೆಯುವ ಸಾರ್ವತ್ರಿಕ ಚುನಾವಣೆಗೆ ಅಂತರರಾಷ್ಟ್ರೀಯ ವೀಕ್ಷಕರ ತಂಡದ ನೇತೃತ್ವವನ್ನು ಭಾರತದ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ವಹಿಸಿದ್ದಾರೆ.

ಇಲ್ಲಿನ ತ್ರಿಭುವನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಶುಕ್ರವಾರ ಬಂದಿಳಿದ ರಾಜೀವ್ ಕುಮಾರ್ ನೇತೃತ್ವದ ತಂಡವನ್ನು ನೇಪಾಳ ಚುನಾವಣಾ ಆಯೋಗದ ಜಂಟಿ ಕಾರ್ಯದರ್ಶಿ ಶಾಲಿಗ್ರಾಮ್ ಶರ್ಮಾ ಪೌಡೆಲ್ ಅವರು ಸ್ವಾಗತಿಸಿದರು.

ಭಾರತ ಚುನಾವಣಾ ಆಯೋಗದ ಇಬ್ಬರು ಅಧಿಕಾರಿಗಳು ಸೇರಿ ಈ ತಂಡದಲ್ಲಿ ನಾಲ್ವರು ಸದಸ್ಯರಿದ್ದಾರೆ. ಸಂಸತ್‌ನ 275 ಸ್ಥಾನಗಳು ಮತ್ತು ಏಳು ಪ್ರಾಂತ್ಯದ ವಿಧಾನಸಭೆಗಳ 550 ಸ್ಥಾನಗಳಿಗೆ ಇದೇ 20 ರಂದು ಮತದಾನ ನಡೆಯಲಿದೆ.

ಗಾಜಾ: ಅಗ್ನಿ ಅವಘಡ– 21 ಸಾವು

ಗಾಜಾ ಪಟ್ಟಿ (ಎಪಿ): ಗಾಜಾ ಪಟ್ಟಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಹುಟ್ಟುಹಬ್ಬದ ಸಂಭ್ರಮಾಚರಣೆ ವೇಳೆ ಸಂಭವಿಸಿದ ಅಗ್ನಿ ಅವಘಡದಲ್ಲಿ ಒಂದೇ ಕುಟುಂಬದ 21 ಜನರು ಮೃತಪಟ್ಟಿದ್ದಾರೆ ಎಂದು ಸಂಬಂಧಿಕರೊಬ್ಬರು ಶುಕ್ರವಾರ ತಿಳಿಸಿದ್ದಾರೆ.

ಗುರುವಾರ ರಾತ್ರಿ ಕಾರ್ಯಕ್ರಮ ನಡೆಯುತ್ತಿದ್ದ ಸ್ಥಳದಲ್ಲಿ ಕಾಣಿಸಿಕೊಂಡ ಬೆಂಕಿ ಸ್ವಲ್ಪ ಸಮಯದಲ್ಲೇ ಬಹುಮಹಡಿ ಕಟ್ಟಡವನ್ನೆಲ್ಲ ಆವರಿಸಿ ಭಾರಿ ಸಾವುನೋವಿಗೆ ಕಾರಣವಾಗಿದೆ. ಪಾರ್ಟಿ ನಡೆಯುತ್ತಿದ್ದ ಅಪಾರ್ಟ್‌ಮೆಂಟ್‌ನೊಳಗೆ ಗ್ಯಾಸೋಲಿನ್ ಶೇಖರಿಸಿಟ್ಟದ್ದೇ ಬೆಂಕಿಯ ಕೆನ್ನಾಲಿಗೆ ವ್ಯಾಪಿಸಲು ಕಾರಣ ಎನ್ನಲಾಗುತ್ತಿದೆ. ಅಗ್ನಿ ಅವಘಡಕ್ಕೆ ನಿಖರ ಕಾರಣವೇನು ಎಂಬ ಬಗ್ಗೆ ತನಿಖೆ ನಡೆಯುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಇಮ್ರಾನ್ ಮೇಲೆ ಮತ್ತೊಂದು ಹತ್ಯೆ ಪ್ರಯತ್ನ ಸಾಧ್ಯತೆ'

ಇಸ್ಲಮಾಬಾದ್ (ಪಿಟಿಐ): 'ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಮೇಲೆ ಮತ್ತೊಂದು ಹತ್ಯೆ ಪ್ರಯತ್ನ ನಡೆಯಬಹುದು. ಈ ಬೆದರಿಕೆ ಕುರಿತು ಗಮನಹರಿಸಬೇಕಾದುದು ಸರ್ಕಾರದ ಜವಾಬ್ದಾರಿ' ಎಂದು ಇಸ್ಲಮಾಬಾದ್ ಹೈಕೋರ್ಟ್ ಶುಕ್ರವಾರ ಹೇಳಿದೆ.

ಇಮ್ರಾನ್ ಖಾನ್ ಅವರ ಪಾಕಿಸ್ತಾನ್ ತೆಹ್ರೀಕ್– ಇ– ಇನ್ಸಾಫ್ ಪಕ್ಷದಿಂದ ನಡೆಸಲಾಗುತ್ತಿರುವ ಪ್ರತಿಭಟನೆಯಿಂದ ರಸ್ತೆಗಳು ಮುಚ್ಚಿವೆ. ಇದರಿಂದ ತೊಂದರೆ ಆಗುತ್ತಿದೆ ಎಂದು ವ್ಯಾಪಾರಸ್ಥರು ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ವೇಳೆ ಮುಖ್ಯ ನ್ಯಾಯಮೂರ್ತಿ ಆಮೀರ್ ಫಾರೂಕ್ ಅವರು ಈ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಗುಪ್ತಚರ ವರದಿಯನ್ನು ಆಧರಿಸಿ ಮುಖ್ಯ ನ್ಯಾಯಮೂರ್ತಿ ಅವರು ಹೀಗೆ ಹೇಳಿದ್ದಾರೆ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.

ಅಪಘಾತ– ಒಂದೇ ಕುಟುಂಬದ 20 ಮಂದಿ ಸಾವು

ಕರಾಚಿ (ಪಿಟಿಐ): ಪ್ರವಾಹ ಪೀಡಿತ ಸಿಂಧ್ ಪ್ರಾಂತ್ಯದಲ್ಲಿ ವ್ಯಾನ್‌ವೊಂದು ನೀರು ತುಂಬಿದ್ದ ಆಳವಾದ ಕಂದಕಕ್ಕೆ ಗುರುವಾರ ರಾತ್ರಿ ಉರುಳಿ ಬಿದ್ದ ಪರಿಣಾಮ 12 ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಕನಿಷ್ಠ 20 ಮಂದಿ ಮೃತಪಟ್ಟಿದ್ದಾರೆ.

'ಅಫ್ಗಾನಿಸ್ತಾನ: ಬದಲಾದ ಪರಿಸ್ಥಿತಿ– ಯೋಜನೆ ಅನುಷ್ಠಾನಕ್ಕೆ ಹಿನ್ನಡೆ'

ವಿಶ್ವಸಂಸ್ಥೆ (ಪಿಟಿಐ): ಅಫ್ಗಾನಿಸ್ತಾನದಲ್ಲಿ ಈ ಹಿಂದೆ ಭಾರತವು ಹಲವು ಅಭಿವೃದ್ಧಿ ಯೋಜನೆಗಳನ್ನು ಆರಂಭಿಸಿದ್ದು, ರಾಜಕೀಯ ಪರಿಸ್ಥಿತಿ ಬದಲಾಗಿರುವುದರಿಂದ ಇವುಗಳು ನಿಧಾನಗತಿಯಲ್ಲಿ ಸಾಗಿವೆ ಎಂದು ಭಾರತ ಹೇಳಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಸಭೆಯಲ್ಲಿ ಮಾತನಾಡಿದ ವಿಶ್ವಸಂಸ್ಥೆಯಲ್ಲಿನ ಭಾರತದ ಕಾಯಂ ಪ್ರತಿನಿಧಿ ಆರ್. ಮಧುಸೂದನ್, 'ಅಫ್ಗಾನಿಸ್ತಾನವನ್ನು ಸ್ವಾವಲಂಬಿ ದೇಶವನ್ನಾಗಿಸುವ ದೃಷ್ಟಿಯಿಂದ ಅಲ್ಲಿನ ಎಲ್ಲಾ 34 ಪ್ರಾಂತ್ಯಗಳ ಜನ ಕೇಂದ್ರಿತ ಯೋಜನೆಗಳಲ್ಲಿ ಭಾರತದ ಅಭಿವೃದ್ಧಿ ಪಾಲುದಾರಿಕೆ ಇತ್ತು ಮತ್ತು ಅಲ್ಲಿಗೆ ಪ್ರಾದೇಶಿಕ ಸಂಪರ್ಕವನ್ನು ಹೆಚ್ಚಿಸಲು ವಾಯುಮಾರ್ಗದ ಮೂಲಕ ಸರಕು ಸಾಗಣೆಗಾಗಿ ಕಾರಿಡಾರ್ ಮತ್ತು ಚಬಾಹರ್ ಬಂದರನ್ನು ಕಾರ್ಯಗತಗೊಳಿಸಿತ್ತು' ಎಂದಿದ್ದಾರೆ.

'ಆಡಳಿತವು ತಾಲಿಬಾನ್ ಕೈವಶವಾಗಿರುವುದು ಸೇರಿದಂತೆ ಹಲವು ಕಾರಣಗಳಿಂದ ಯೋಜನೆಗಳು ನಿಧಾನಗತಿಯಲ್ಲಿ ಸಾಗಿದರೂ ಅಫ್ಗಾನಿಸ್ತಾನದ ಜನರಿಗೆ ಸಹಾಯ ಮಾಡುವ ಭಾರತದ ಬದ್ಧತೆ ಅಚಲವಾಗಿದೆ' ಎಂದೂ ಹೇಳಿದ್ದಾರೆ.

'ಅಫ್ಗಾನಿಸ್ತಾನದ ಭದ್ರತಾ ಪರಿಸ್ಥಿತಿಯ ಮೇಲೆ ಭಾರತವು ನಿಗಾ ಇಟ್ಟಿದೆ' ಎಂದೂ ಅವರು ತಿಳಿಸಿದ್ದಾರೆ.

ಜೆಡಿಎಸ್ ಪಂಚರತ್ನ ಸಮಾವೇಶದಲ್ಲಿ ಎಚ್‌.ಡಿ. ಕುಮಾರಸ್ವಾಮಿ ವಾಗ್ದಾಳಿ • ಸಿದ್ದರಾಮಯ್ಯ ವಿರುದ್ಧವೂ ಆಕ್ರೋಶ

ಬಿಜೆಪಿ ವೀರಶೈವರ ಪಕ್ಷವಲ್ಲ; ಮೋದಿ, ಶಾ ಪಕ್ಷ

ಪ್ರಜಾವಾಣಿ ವಾರ್ತೆ



ಮುಳಬಾಗಿಲಿನಲ್ಲಿ ಶುಕ್ರವಾರ ನಡೆದ ಜೆಡಿಎಸ್ ಪಂಚರತ್ನ ರಥಯಾತ್ರೆ ಸಮಾವೇಶದಲ್ಲಿ ಎಚ್‌.ಡಿ. ದೇವೇಗೌಡ, ಎಂಎಲ್‌ಸಿ ಕೆ.ಎ. ತಿಪ್ಪೇಸ್ವಾಮಿ, ಎಚ್‌.ಡಿ. ಕುಮಾರಸ್ವಾಮಿ, ಅಭ್ಯರ್ಥಿ ರಾಮೇಗೌಡ ಮತ್ತು ನಿಖಿಲ್ ಕುಮಾರಸ್ವಾಮಿ ಇದ್ದರು

ಮುಳಬಾಗಿಲು (ಕೋಲಾರ): 'ವೀರಶೈವ ಸಮುದಾಯದವರಿಗೆ ಬಿಜೆಪಿ ಈಗ ತಮ್ಮ ಪಕ್ಷವಾಗಿ ಉಳಿದಿಲ್ಲ. ಇದು ಅಮಿತ್ ಶಾ, ಮೋದಿ ಪಕ್ಷವಾಗಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಶುಕ್ರವಾರ ಟೀಕಾಪ್ರಹಾರ ನಡೆಸಿದರು.

ಇಲ್ಲಿ ಆಯೋಜಿಸಿದ್ದ ಜೆಡಿಎಸ್ ಪಂಚರತ್ನ ರಥಯಾತ್ರೆ ಸಮಾವೇಶದಲ್ಲಿ ಮಾತನಾಡಿದ ಅವರು, 'ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಆಡಳಿತ ನಡೆಯುತ್ತಿರುವುದು ರಾಜ್ಯದಲ್ಲಿ ಅಲ್ಲ; ಬದಲಾಗಿ ದೆಹಲಿಯಿಂದ ಬರುವ ಲಕೋಟೆ ಮೇಲೆ' ಎಂದು ಟೀಕಿಸಿದರು.

'ಕಷ್ಟಪಟ್ಟು ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಅವರನ್ನು ಅರ್ಧದಲ್ಲೇ ಮನೆಗೆ ಕಳುಹಿಸಿದರು. ಬಿಜೆಪಿ ವೀರಶೈವರಿಗೆ ನೀಡಿದ ನ್ಯಾಯ ಇದೇನಾ? ಬಸವರಾಜ ಬೊಮ್ಮಾಯಿ ಅವರನ್ನು ಸಿ.ಎಂ ಮಾಡಿದರು. ಅವರು ಸಿ.ಎಂ ಎಂಬುದೇ ಹಲವರಿಗೆ ಗೊತ್ತಿಲ್ಲ' ಎಂದು ವ್ಯಂಗ್ಯವಾಡಿದರು.

'ರಾಜ್ಯದ ಸಂಪತ್ತು ಲೂಟಿ ಮಾಡುತ್ತಿರುವ, ಅಹಂಕಾರದಿಂದ ಮೆರೆಯುತ್ತಿರುವ ರಾಷ್ಟ್ರೀಯ ಪಕ್ಷಗಳು ಬೇಕೋ? ಜನರ ಭಾವನೆಗಳಿಗೆ ಸ್ಪಂದಿಸುವ ಪ್ರಾದೇಶಿಕ ಪಕ್ಷ ಬೇಕೋ ಎಂಬುದನ್ನು ಜನರೇ ತೀರ್ಮಾನಿಸಬೇಕು' ಎಂದರು.

50 ನಿಮಿಷಗಳ ತಮ್ಮ ಭಾಷಣದಲ್ಲಿ ಪದೇ ಪದೇ ಸಿದ್ದರಾಮಯ್ಯ ಹೆಸರು ಹೇಳಿ ವಾಗ್ದಾಳಿ ನಡೆಸಿದ ಅವರು. ಶಾಸಕ ಕೆ.ಆರ್. ರಮೇಶ್ ಕುಮಾರ್ ವಿರುದ್ಧವೂ ಆಕ್ರೋಶ ವ್ಯಕ್ತಪಡಿಸಿದರು. ನಡುವೆ ರಾಜ್ಯ ಬಿಜೆಪಿ ಸರ್ಕಾರವನ್ನೂ ತರಾಟೆಗೆ ತೆಗೆದುಕೊಂಡರು.

'ಸಿದ್ದರಾಮಯ್ಯ ಹಾಗೂ ರಮೇಶ್ ಕುಮಾರ್ ಅವರು ಕೋಲಾರ ಜಿಲ್ಲೆಗೆ ಬೆಂಗಳೂರಿನ ಕೊಳಚೆ ನೀರು ನೀಡಿ ಜನರಿಗೆ ವಂಚಿಸಿದ್ದಾರೆ. ಕೋಲಾರದ ಟೊಮೆಟೊವನ್ನು ಯಾರೂ ಖರೀದಿಸುತ್ತಿಲ್ಲ. ಇದು ಕಾಂಗ್ರೆಸ್ ಪಕ್ಷದವರ ಕೊಡುಗೆ' ಎಂದು ಹೇಳಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ, '2023ರಲ್ಲಿ ವಿಧಾನಸೌಧದ ಎದುರು ಕೆಂಪೇಗೌಡ ಪ್ರತಿಮೆ ಸ್ಥಾಪಿಸುತ್ತೇವೆ. ರಾಮನಗರದಲ್ಲಿ ಕೆಂಪೇಗೌಡ ವಿಶ್ವವಿದ್ಯಾಲಯ ನಿರ್ಮಿಸುತ್ತೇವೆ. ಕುವೆಂಪು, ಅಂಬೇಡ್ಕರ್, ಟಿಪ್ಪು ವಿಶ್ವವಿದ್ಯಾಲಯವನ್ನೂ ಸ್ಥಾಪಿಸುತ್ತೇವೆ. ದೇವೇಗೌಡರು ಅಧಿಕಾರ ನಡೆಸಿದ ಜಾಗದಲ್ಲಿ ಕುಮಾರಸ್ವಾಮಿ ಇರಬೇಕು. ಅದುವೇ ನಮ್ಮ ಸಂಕಲ್ಪ' ಎಂದರು.

'ಕಾವೇರಿ ನೀರು; ರಾಜ್ಯಕ್ಕೆ ಅನ್ಯಾಯ'

'ಕಾವೇರಿ ನದಿ ನೀರು ಹಂಚಿಕೆ ವಿಚಾರದಲ್ಲಿ ಎರಡೂ ರಾಷ್ಟ್ರೀಯ ಪಕ್ಷಗಳಿಂದ ರಾಜ್ಯಕ್ಕೆ ಅನ್ಯಾಯವಾಗಿದೆ. ರಾಜ್ಯದ ಅಭಿವೃದ್ಧಿಗೆ ಮಾರಕವಾಗಿದ್ದು, ನೆಲ, ಜಲ ವಿವಾದ ಬಗೆಹರಿಸಲು ವಿಫಲವಾಗಿವೆ' ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ವಾಗ್ದಾಳಿ ನಡೆಸಿದರು.

'ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಪ್ರಧಾನಿಯಾಗಿದ್ದ ಅಟಲ್ ಬಿಹಾರಿ ವಾಜಪೇಯಿ, ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ಪ್ರಧಾನಿ ಆಗಿದ್ದ ಮನಮೋಹನ್ ಸಿಂಗ್ ಅವರು ತಮಿಳುನಾಡು ಜೊತೆಗೆ ಕೈಜೋಡಿಸಿದ್ದರು. ಈಗಿನ ಪ್ರಧಾನಿ ನರೇಂದ್ರ ಮೋದಿ ಕೂಡಾ ಎಐಎಡಿಎಂಕೆ ಒತ್ತಡಕ್ಕೆ ಮಣಿದು ಕಾವೇರಿ ನದಿ ನೀರನ್ನು ತಮಿಳುನಾಡಿನಲ್ಲಿ 3 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಭತ್ತ ನಾಟಿಗೆ ಬಳಸಲು ಅವಕಾಶ ಕಲ್ಪಿಸಿರುವುದು ಎಷ್ಟರ ಮಟ್ಟಿಗೆ ಸರಿ' ಎಂದು ಪ್ರಶ್ನಿಸಿದರು.

ವಾಸ್ತವ್ಯ: ಕುಮಾರಸ್ವಾಮಿ ಅವರು ಊರುಕುಂಟೆ ನಿಟ್ಟೂರಿನಲ್ಲಿ ಗ್ರಾಮ ವಾಸ್ತವ್ಯ ಮಾಡಿದರು.

'ಪಟ್ಟಿ ಸಿದ್ಧ: ಈಗ ಬಿಡುಗಡೆಗೆ ಪಕ್ಷದ ಜ್ಯೋತಿಷಿಯ ತಕರಾರಿದೆ'

ಮೈಸೂರು: '2023ರ ವಿಧಾನಸಭೆ ಚುನಾವಣೆಗೆ ಜೆಡಿಎಸ್‌ನಿಂದ ಸ್ಪರ್ಧಿಸುವ 100 ಅಭ್ಯರ್ಥಿಗಳ ಪಟ್ಟಿ ಸಿದ್ಧವಿದೆ. ಆದರೆ, ಪಕ್ಷದ ಜ್ಯೋತಿಷಿ ಎಚ್.ಡಿ.ರೇವಣ್ಣ ಅವರು ಘೋಷಣೆಗೆ ದಿನ ಪ್ರಶಸ್ತವಾಗಿಲ್ಲವೆಂದು ತಕರಾರು ತೆಗೆದಿದ್ದಾರೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ಶುಕ್ರವಾರ ಚಾಮುಂಡಿಬೆಟ್ಟದಲ್ಲಿ ದೇವಿ ದರ್ಶನದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಬೆಂಗಳೂರಿನಲ್ಲಿ ರಾಷ್ಟ್ರೀಯ ಅಧ್ಯಕ್ಷರೊಂದಿಗೆ ಚರ್ಚಿಸಿ, ಪಟ್ಟಿ ಬಿಡುಗಡೆ ಕುರಿತು ನಿರ್ಧರಿಸಲಾಗುವುದು. ಎಚ್.ಡಿ.ದೇವೇಗೌಡರೇ ಪಟ್ಟಿ ಬಿಡುಗಡೆ ಮಾಡುವರು' ಎಂದರು.

'ಕಳೆದ ಬಾರಿ ಕುಮಾರಪರ್ವವನ್ನು ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಆರಂಭಿಸಲಾಗಿತ್ತು. ಈ ಬಾರಿಯೂ ಪ್ರಚಾರ ಅಲ್ಲಿಂದಲೇ ಶುರುವಾಗಲಿದೆ. ಮಾರ್ಚ್‌ನಲ್ಲಿ ಅಲ್ಲಿಯೇ ಪಂಚರತ್ನ ರಥಯಾತ್ರೆ ಸಮಾರೋಪ ನಡೆಯಲಿದೆ. 123 ಕ್ಷೇತ್ರಗಳಲ್ಲಿ ಗೆಲ್ಲುವುದೇ ಪಕ್ಷದ ಗುರಿ' ಎಂದು ತಿಳಿಸಿದರು.

ಮೊದಲ ಖಾಸಗಿ ರಾಕೆಟ್ ಉಡಾವಣೆ ಯಶಸ್ವಿ

ಒಂದನೇ ಪುಟದಿಂದ...

ಇಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ನಡೆದ ಉಡ್ಡಯನ ಕಾರ್ಯಾಚರಣೆಯಲ್ಲಿ ಇಸ್ರೊ ಅಧ್ಯಕ್ಷ ಸೋಮನಾಥ್, ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಮತ್ತು ಭಾರತೀಯ ರಾಷ್ಟ್ರೀಯ ಬಾಹ್ಯಾಕಾಶ ಉತ್ತೇಜನ ಕೇಂದ್ರದ (ಇನ್‌ಸ್ಪೇಸ್) ಅಧ್ಯಕ್ಷ ಪವನ್ ಗೋಯೆಂಕಾ ಇದ್ದರು.

ಸರ್ಕಾರಿ ಸ್ವಾಮ್ಯದ ಸಂಸ್ಥೆಯಾದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಮಾತ್ರವೇ ಈವರೆಗೆ ಉಡ್ಡಯನ ಕಾರ್ಯಾಚರಣೆಗಳನ್ನು ನಡೆಸುತ್ತಿತ್ತು. ಖಾಸಗಿ ಕಂಪನಿಗಳು ಸಹ ತಮ್ಮ ಉಪಗ್ರಹಗಳನ್ನು ಕಕ್ಷೆಗೆ ಸೇರಿಸಲು ಇಸ್ರೊ ರಾಕೆಟ್‌ಗಳನ್ನು ಬಳಸಿಕೊಳ್ಳಬೇಕಿತ್ತು. ಈಗ ಸ್ಕೈರೂಟ್‌ನಂತಹ ಖಾಸಗಿ ಕಂಪನಿಗಳಿಗೆ ಅಂತಹ ಸೇವೆ ನೀಡಲು ಅವಕಾಶ ದೊರೆತಿದೆ.

'ಭಾರತದ ಖಾಸಗಿ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಇದು ಐತಿಹಾಸಿಕ ಕ್ಷಣ ಮತ್ತು ಮಹತ್ವದ ಮೈಲುಗಲ್ಲು' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

> ಇದು ದೇಶದ ಬಾಹ್ಯಾಕಾಶ ಸಂಶೋಧನಾ ಕ್ಷೇತ್ರದಲ್ಲಿ ಹೊಸ ಆರಂಭ. ಹೀಗಾಗಿಯೇ ಈ ಕಾರ್ಯಾಚರಣೆಗೆ 'ಪ್ರಾರಂಭ' ಎಂದು ಹೆಸರಿಡಲಾಗಿತ್ತು.
>
> **ಪವನ್ ಚಂದನ್,** ಸ್ಕೈರೂಟ್‌ಏರೋಸ್ಪೇಸ್ ಸಹಸಂಸ್ಥಾಪಕ

ಮೂರು ಉಪಗ್ರಹಗಳು ಕಕ್ಷೆಗೆ...

ಭಾರತದ ಖಾಸಗಿ ಕಂಪನಿಗಳ ಎರಡು ಉಪಗ್ರಹಗಳು ಮತ್ತು ಒಂದು ವಿದೇಶಿ ಉಪಗ್ರಹವನ್ನು 'ವಿಕ್ರಮ್‌-ಎಸ್' ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ.

ತಮಿಳುನಾಡಿನ 'ಸ್ಪೇಸ್‌ಕಿಡ್ಸ್' ಮತ್ತು ಆಂಧ್ರ ಪ್ರದೇಶದ ಸ್ಪೇಸ್‌ಟೆಕ್ ನವೋದ್ಯಮಗಳ ಉಪಗ್ರಹಗಳು ಹಾಗೂ ಅಮೆರಿಕದ ಬಝ್ಸೂಮ್ಕ್ಯು ಸ್ಪೇಸ್ ಸೆಂಟರ್‌ನ ಒಂದು ಉಪಗ್ರಹವನ್ನು ವಿಕ್ರಮ್‌-ಎಸ್ ಗಮ್ಯ ಸೇರಿಸಿದೆ.

ವಿಕ್ರಮ್‌-ಎಸ್ ರಾಕೆಟ್‌ನ ಹಲವು ಬಿಡಿಭಾಗಗಳನ್ನು 3ಡಿ-ಮುದ್ರಣ ತಂತ್ರಜ್ಞಾನ ಬಳಸಿ ತಯಾರಿಸಲಾಗಿತ್ತು. ಈ ತಂತ್ರಜ್ಞಾನದ ಬಳಕೆಯ ಸಾಧ್ಯತೆಗಳನ್ನು ಇದು ತೋರಿಸಿದೆ ಎಂದು ಸ್ಕೈರೂಟ್ ಏರೋಸ್ಪೇಸ್ ಹೇಳಿದೆ.

ಕ್ಷಯರೋಗ ಪತ್ತೆಗೆ ಕೋವಿಡ್ ಅಡ್ಡಿ

ನವದೆಹಲಿ (ಪಿಟಿಐ): ಕೋವಿಡ್‌ನಿಂದಾಗಿ 2020ರಲ್ಲಿ ಭಾರತವೂ ಸೇರಿದಂತೆ ಅತಿ ಹೆಚ್ಚು ಕ್ಷಯರೋಗಿಗಳಿರುವ 45 ದೇಶಗಳಲ್ಲಿ 15 ಲಕ್ಷಕ್ಕೂ ಹೆಚ್ಚು ಮಂದಿಯ ಕ್ಷಯರೋಗ ಪತ್ತೆಯಲ್ಲಿ ವಿಳಂಬವಾಗಿದೆ ಅಥವಾ ರೋಗಪತ್ತೆ ಮಾಡಿಸಿಕೊಳ್ಳಲು ಸಾಧ್ಯವಾಗಿಲ್ಲ ಎಂದು ಅಧ್ಯಯನವೊಂದು ಹೇಳಿದೆ. ಭಾರತದಲ್ಲಿ ಈ ಸಂಖ್ಯೆ 5 ಲಕ್ಷದಷ್ಟಿದೆ.

ಬಿಎಂಸಿ ಮೆಡಿಸಿನ್ ಎಂಬ ನಿಯತಕಾಲಿಕದಲ್ಲಿ ಅಧ್ಯಯನ ವರದಿ ಪ್ರಕಟವಾಗಿದೆ. ಲಂಡನ್ ಸ್ಕೂಲ್ ಆಫ್ ಹೈಜೀನ್ ಮತ್ತು ಟ್ರಾಪಿಕಲ್ ಮೆಡಿಸಿನ್‌ನ (ಎಲ್‌ಎಸ್‌ಎಚ್‌ಟಿಎಂ) ಅಧ್ಯಯನಕಾರರು ಈ ವರದಿಯನ್ನು ಸಿದ್ಧಪಡಿಸಿದ್ದಾರೆ.



ಸಾಂದರ್ಭಿಕ ಚಿತ್ರ

ಭಾರತದಲ್ಲಿ

15 ವರ್ಷದೊಳಗಿನ **50,454** ಮಕ್ಕಳು, 15–64 ವರ್ಷದೊಳಗಿನ **4.2** ಲಕ್ಷಕ್ಕೂ ಹೆಚ್ಚಿನ ನಾಗರಿಕರು ಮತ್ತು 65 ವರ್ಷ ಮೇಲ್ಪಟ್ಟ **52,970** ಹಿರಿಯ ನಾಗರಿಕರಿಗೆ ಕೋವಿಡ್‌ನಿಂದಾಗಿ ಕ್ಷಯರೋಗ ಪತ್ತೆ ವಿಳಂಬ ಆಗಿದೆ ಅಥವಾ ಪತ್ತೆ ಆಗಿಲ್ಲ.

11.2 ಲಕ್ಷ ಜನರಿಗೆ ಸಮಸ್ಯೆ

11.2 ಲಕ್ಷಕ್ಕೂ ಹೆಚ್ಚು ಜನರಲ್ಲಿ ಕ್ಷಯರೋಗ ಪತ್ತೆ ವಿಳಂಬ ಆಗಿದೆ ಅಥವಾ ಪತ್ತೆಯೇ ಆಗಿಲ್ಲ

15-64 ವಯಸ್ಸಿನವರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ

ಅಧ್ಯಯನಕಾರರು ಗಮನಿಸಿದ ಅಂಶಗಳು

- ಜಗತ್ತಿನಾದ್ಯಂತ ಸೋಂಕು ರೋಗಗಳ ಪೈಕಿ ಕ್ಷಯರೋಗದಿಂದಾಗಿ ಎರಡನೇ ಅತಿ ಹೆಚ್ಚು ಸಾವಿನ ಪ್ರಕರಣಗಳು ವರದಿಯಾಗುತ್ತಿವೆ. ಇಂಥ ರೋಗದ ಪತ್ತೆ ಪ್ರಮಾಣವು ಕಡಿಮೆಯಾಗಿದೆ.
- ಕೋವಿಡ್ ಕಾರಣದಿಂದಾಗಿ ಕ್ಷಯರೋಗಿಗಳಿಗೆ ಚಿಕಿತ್ಸೆ ದೊರೆತಿಲ್ಲ. ಜೊತೆಗೆ ಕ್ಷಯರೋಗವು ಹೆಚ್ಚು ಹೆಚ್ಚು ಜನರಿಗೆ ತಗಲುತ್ತಿದೆ. ಇದು ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ದೂರಗಾಮಿ ಪರಿಣಾಮವನ್ನು ಬೀರಬಹುದಾಗಿದೆ.
- ಮೊದಲೇ ಕ್ಷಯರೋಗದಿಂದ ತತ್ತರಿಸಿದ್ದ ಈ 45 ದೇಶಗಳಲ್ಲಿ ಕೋವಿಡ್‌ನಿಂದ ಮತ್ತೂ ಹೆಚ್ಚಿನ ತೊಂದರೆಯಾಗಿದೆ.

ಹಿರಿಯ ನಾಗರಿಕರಿಗೂ ತೊಂದರೆ

2.3 ಲಕ್ಷ ಜನರಲ್ಲಿ ಕ್ಷಯರೋಗ ಪತ್ತೆ ವಿಳಂಬ ಆಗಿದೆ ಅಥವಾ ಪತ್ತೆಯೇ ಆಗಿಲ್ಲ

65 ವರ್ಷ ಮತ್ತು ಅದಕ್ಕೂ ಅಧಿಕ ವಯಸ್ಸಿನವರನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ

(45 ದೇಶಗಳಲ್ಲಿ ಪೈಕಿ ಮುಕ್ಕಾಲು ಪಾಲು ದೇಶಗಳಲ್ಲಿ 15ರಿಂದ 64 ವರ್ಷದ ಒಳಗಿನವರಿಗೆ ತೊಂದರೆಯಾಗಿದೆ)

5.1 ಲಕ್ಷ ಮಹಿಳೆಯರು | **8.6** ಲಕ್ಷ ಪುರುಷರು

(45 ದೇಶಗಳಲ್ಲಿ ಒಟ್ಟು ಕ್ಷಯರೋಗ ಪತ್ತೆಯಾಗದ ಅಥವಾ ವಿಳಂಬವಾದವರಲ್ಲಿನ ಮಹಿಳೆಯರು ಮತ್ತು ಪುರುಷರ ಸಂಖ್ಯೆ)

ಹೆಚ್ಚು ತೊಂದರೆ ಅನುಭವಿಸಿದ ಮಕ್ಕಳು

45 ದೇಶಗಳ ಪೈಕಿ ಅರ್ಧದಷ್ಟು ದೇಶಗಳಲ್ಲಿ ಮಕ್ಕಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ. ಈ ಸಂಖ್ಯೆಯು ರೋಗಪತ್ತೆ ಆಗದ ಅಥವಾ ರೋಗಪತ್ತೆಯಲ್ಲಿ ವಿಳಂಬವಾದ ವಯಸ್ಕರ ಸಂಖ್ಯೆಗಿಂತ ಹೆಚ್ಚಾಗಿದೆ. ಮಕ್ಕಳ ಮೇಲೆ ಈ ಪರಿಣಾಮಗಳನ್ನು ತಡೆಯುವ ದೃಷ್ಟಿಯಿಂದ, ಶಾಲಾ ಮಟ್ಟದಲ್ಲಿ ಹಲವು ಕ್ರಮಗಳನ್ನು ಅಲ್ಲಿನ ಸ್ಥಳೀಯ ಸರ್ಕಾರಗಳು ಕೈಗೊಳ್ಳಬೇಕು ಎಂದು ಅಧ್ಯಯನಕಾರರು ಸಲಹೆ ನೀಡಿದ್ದಾರೆ.

2 ಲಕ್ಷ (ಅಂದಾಜು) ಮಕ್ಕಳಲ್ಲಿ ಕ್ಷಯರೋಗ ಪತ್ತೆ ವಿಳಂಬ ಆಗಿದೆ ಅಥವಾ ಪತ್ತೆಯೇ ಆಗಿಲ್ಲ

15 ವರ್ಷಕ್ಕಿಂತ ಕೆಳಗಿನ ಮಕ್ಕಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ

ಲೈಂಗಿಕ ದೌರ್ಜನ್ಯ: ಅಪರಾಧಿಗೆ ಮರಣ ದಂಡನೆ ಶಿಕ್ಷೆ

ಪ್ರಜಾವಾಣಿ ವಾರ್ತೆ

ಕೋರ್ಟ್ ಸುದ್ದಿ

ಮುಖ್ಯಾಂಶಗಳು

- ಒಂದು ವರ್ಷದ ಮಗುವಿನ ಮೇಲೆ ದೌರ್ಜನ್ಯ: ಕೊಲೆ
- ಮಗುವಿನ ಮೇಲೆ ಸಿಮೆಂಟ್ ಮೌಲ್ಡ್ ಎತ್ತಿಹಾಕಿದ್ದ

ಬೆಂಗಳೂರು: ಒಂದು ವರ್ಷದ ಮಗು ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಕೊಲೆ ಮಾಡಿದ ಅಪರಾಧಿ ಯಶವಂತಪುರದ ನಿವಾಸಿ ಮೂರ್ತಿ ಅಲಿಯಾಸ್ ಹಲ್ಲುಜ್ಜನಿಗೆ (25) ಇಲ್ಲಿನ ತ್ವರಿತಗತಿಯ ವಿಶೇಷ ನ್ಯಾಯಾಲಯವು (ಎಫ್‌ಟಿಎಸ್‌ಸಿ) ಶುಕ್ರವಾರ ಮರಣ ದಂಡನೆ ವಿಧಿಸಿದೆ.

ಅಪರಾಧಿಗೆ ಕಲಂ 202 ಭಾರತೀಯ ದಂಡ ಸಂಹಿತೆ ಅಡಿ ಅಪರಾಧಕ್ಕೆ ಮರಣ ದಂಡನೆ, ಕಲಂ 377 ಅಡಿ ಅಪರಾಧಕ್ಕೆ ಮತ್ತು ಕಲಂ 5, 6 ಪೋಕ್ಸೊ ಕಾಯ್ದೆ ಅಡಿ ಅಪರಾಧಕ್ಕೆ ಜೀವಾವಧಿ ಶಿಕ್ಷೆ, ₹ 50 ಸಾವಿರ ದಂಡ ವಿಧಿಸಿ ನ್ಯಾಯಾಧೀಶೆ ಕೆ.ಎನ್.ರೂಪಾ ಅವರು ಆದೇಶಿಸಿದ್ದಾರೆ.

ನೊಂದ ಮೃತ ಬಾಲಕ ಕುಟುಂಬಕ್ಕೆ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದಿಂದ (ಡಿಎಲ್‌ಎಸ್‌ಎ) ₹ 5 ಲಕ್ಷ ಪರಿಹಾರ ನೀಡುವಂತೆಯೂ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

ಘಟನೆ ನಡೆದ ಮರು ದಿನವೇ ರಾಜಗೋಪಾಲನಗರ ಠಾಣೆಯ ಪೊಲೀಸರು ಅಪರಾಧಿಯನ್ನು ಬಂಧಿಸಿದ್ದರು. ಆಗ ಅಪರಾಧಿಗೆ 18 ವರ್ಷವಾಗಿತ್ತು.

ಅಪರಾಧಿ ಮೂರ್ತಿ ಹಾಗೂ ಕೊಲೆಯಾದ ಮಗುವಿನ ತಂದೆಯ ಪರಿಚಯಸ್ಥ. 2015ರ ಸೆ.12ರಂದು ಮಧ್ಯಾಹ್ನ 2 ಗಂಟೆಯ ಸಮಯದಲ್ಲಿ ಉಲ್ಲಾಸ್ ಚಿತ್ರಮಂದಿರದ ಬಳಿ ಮಗುವಿನ ತಂದೆಗೆ ಮೂರ್ತಿ ಸಿಕ್ಕಿದ್ದ. ಆತನನ್ನು ತನ್ನ ಮನೆಗೆ ಕರೆದುಕೊಂಡು ಬಂದಿದ್ದರು. ಬಳಿಕ ಮಗುವಿಗೆ ತಿಂಡಿ ಕೊಡಿಸಲು ಮೂವರು ರಾಜಗೋಪಾಲನಗರದ ಮುಖ್ಯರಸ್ತೆಗೆ ತೆರಳಿದ್ದರು. ತಿಂಡಿ ತರುವವರೆಗೆ ಮಗುವನ್ನು ನೋಡಿಕೊಳ್ಳುವಂತೆ ಮೂರ್ತಿಗೆ ತಿಳಿಸಿದ್ದ ತಂದೆ, ರಸ್ತೆಯ ಪಕ್ಕದಲ್ಲೇ ನಿಲ್ಲಿಸಿದ್ದರು. ತಿಂಡಿ ತರುವಷ್ಟರಲ್ಲಿ ಮಗು ಹಾಗೂ ಅಪರಾಧಿ ಸ್ಥಳದಲ್ಲಿ ಇರಲಿಲ್ಲ.

'ಆಟೊದಲ್ಲಿ ಗೊರಗುಂಟೆಪಾಳ್ಯದ ಏರ್ ಫೋರ್ಸ್‌ನ ಮುಖ್ಯ ಎಂಜಿನಿಯರ್ ಕಚೇರಿಯ ನಿರ್ಜನ ಪ್ರದೇಶಕ್ಕೆ ಮಗುವನ್ನು ಕರೆದೊಯ್ದು ಬಾಯಿ ಮುಚ್ಚಿ ಸಂಭೋಗ ನಡೆಸಿದ್ದ. ಮಗು ಅಳಲು ಆರಂಭಿಸಿದ ಮೇಲೆ ಯಾರಾದರೂ ಹಿಡಿದು ಪೊಲೀಸರಿಗೆ ಒಪ್ಪಿಸುತ್ತಾರೆ ಎನ್ನುವ ಭಯದಿಂದ ಸ್ಥಳದಲ್ಲಿ ಬಿದ್ದಿದ್ದ ಕಾಗದಗಳನ್ನೆಲ್ಲ ಗುಡ್ಡೆ ಹಾಕಿ ಬೆಂಕಿ ಹಚ್ಚಿದ್ದ. ಸಿಮೆಂಟ್ ಮೌಲ್ಡ್ ಅನ್ನು ಮಗುವಿನ ಮೇಲೆ ಎತ್ತಿಹಾಕಿ ಕೊಲೆ ಮಾಡಿದ್ದ' ಎಂದು ಸರ್ಕಾರಿ ವಕೀಲರಾದ ಪಿ.ಕೃಷ್ಣವೇಣಿ ತಿಳಿಸಿದ್ದಾರೆ. ರಾಜಗೋಪಾಲನಗರದ ಅಂದಿನ ಇನ್‌ಸ್ಪೆಕ್ಟರ್ ಮಹಾನಂದ್ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದರು.

'ಚಿಲುಮೆ' ಬೆನ್ನುಬಿದ್ದ ಖಾಕಿ

ಒಂದನೇ ಪುಟದಿಂದ

ತನಿಖೆ ಚುರುಕು: ಬೂತ್‌ಮಟ್ಟದ ಅಧಿಕಾರಿಗಳ (ಬಿಎಲ್‌ಒ) ನಕಲಿ ಗುರುತಿನ ಚೀಟಿ ಸೃಷ್ಟಿಸಿಕೊಂಡು ಮತದಾರರ ವೈಯಕ್ತಿಕ ಮಾಹಿತಿ ಸಂಗ್ರಹಿಸಿದ್ದ ಆರೋಪಕ್ಕೆ ಸಂಬಂಧಿಸಿದಂತೆ 'ಚಿಲುಮೆ' ಸಂಸ್ಥೆಯ ನಾಲ್ವರನ್ನು ಶುಕ್ರವಾರ ಬೆಳಿಗ್ಗೆ ಪೊಲೀಸರು ವಶಕ್ಕೆ ಪಡೆದಿದ್ದರು. ವಿಚಾರಣೆ ಬಳಿಕ ಮತಗಟ್ಟೆ ಅಧಿಕಾರಿಗಳು ಎಂದು ಹೇಳಿಕೊಂಡಿದ್ದ ರೇಣುಕಾಪ್ರಸಾದ್ ಹಾಗೂ ಧರ್ಮೇಶ್ ಅವರನ್ನು ಬಂಧಿಸಲಾಗಿದೆ.

ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ ಗೌಡ ನೇತೃತ್ವದ ತಂಡ ಶುಕ್ರವಾರ ಬೆಳಿಗ್ಗೆಯಿಂದ ನಾಲ್ಕು ಕಡೆಗಳಲ್ಲಿ ಶೋಧ ಆರಂಭಿಸಿತು. 'ಚಿಲುಮೆ'ಯ ಹಣಕಾಸು ವಿಭಾಗದ ಮುಖ್ಯಸ್ಥ ಸುಧಾಕರ್, 'ಕೇಸ್ ವರ್ಕರ್' ರಕ್ಷಿತ್, ಮತಗಟ್ಟೆ ಅಧಿಕಾರಿಗಳು ಎಂದು ಹೇಳಿಕೊಂಡಿದ್ದ ರೇಣುಕಾ ಪ್ರಸಾದ್ ಹಾಗೂ ಧರ್ಮೇಶ್ ಎಂಬುವವರನ್ನು ವಶಕ್ಕೆ ಪಡೆಯಲಾಗಿತ್ತು. ಸಂಸ್ಥೆಯ ಮುಖ್ಯಸ್ಥ ಕೃಷ್ಣಪ್ಪ ರವಿಕುಮಾರ್, ನಿರ್ದೇಶಕ ಕೆ.ಎಂ. ಲೋಕೇಶ್ ತಲೆ ಮರೆಸಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

ಮಲ್ಲೇಶ್ವರದ 17ನೇ ಅಡ್ಡರಸ್ತೆಯ ಕಚೇರಿಯಲ್ಲಿದ್ದ ಕಂಪ್ಯೂಟರ್ ಸೇರಿದಂತೆ ಹಲವು ದಾಖಲೆ ವಶಕ್ಕೆ ಪಡೆಯಲಾಗಿದೆ. ಎಫ್‌ಐಆರ್ ದಾಖಲಾದ ಮೇಲೆ ಕಂಪ್ಯೂಟರ್‌ನಲ್ಲಿ ಸಂಗ್ರಹಿಸಿದ್ದ ಎಲ್ಲ ಮಾಹಿತಿ ಅಳಿಸಿ ಹಾಕಲಾಗಿದ್ದು, ಜಪ್ತಿ ಮಾಡಿರುವ ಪರಿಕರಗಳನ್ನು ಸೈಬರ್ ಪೊಲೀಸರಿಗೆ ಹಸ್ತಾಂತರಿಸಲಾಗಿದೆ.



'ಕೃಷ್ಣಪ್ಪ ರವಿಕುಮಾರ್ ಈ ಪ್ರಕರಣದ ಸೂತ್ರಧಾರಿಯಾಗಿದ್ದು, ರೇಣುಕಾ ಪ್ರಸಾದ್, ಧರ್ಮೇಶ್ ಆತನ ಸಂಪರ್ಕದಲ್ಲಿದ್ದರು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮಹದೇವಪುರ, ಮಲ್ಲೇಶ್ವರ, ಚಿಕ್ಕಪೇಟೆ ಹಾಗೂ ಬಸವನಗುಡಿಯಲ್ಲಿ ಚಿಲುಮೆಗೆ ಸೇರಿದ ಕಚೇರಿಗಳಿದ್ದು, ಎಫ್‌ಐಆರ್ ದಾಖಲಾದ ಕೂಡಲೇ ನಾಲ್ಕೂ ಕಚೇರಿಗಳಿಗೂ ಸಂಸ್ಥೆಯವರೇ ಬೀಗ ಹಾಕಿದ್ದರು. ಮಲ್ಲೇಶ್ವರದಲ್ಲಿನ ಕಚೇರಿಯ ಬೀಗವನ್ನು ಶುಕ್ರವಾರ ಒಡೆದ ಪೊಲೀಸರು, ಶೋಧ ನಡೆಸಿದರು.

ಮತ್ತೊಂದೆಡೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಬೂತ್‌ಮಟ್ಟದ ಅಧಿಕಾರಿಗಳು ಹಾಗೂ ಚುನಾವಣೆ ಶಾಖೆಯ ಸಿಬ್ಬಂದಿಯನ್ನು ಪ್ರತ್ಯೇಕ ಪೊಲೀಸ್ ತಂಡಗಳು ವಿಚಾರಣೆ ನಡೆಸಿವೆ.

'ತನಿಖೆಯ ಬಳಿಕ ಸತ್ಯಾಂಶ ಹೊರಬರಲಿದೆ. ಸಂಸ್ಥೆಯ ನಿರ್ದೇಶಕರು ಕಚೇರಿ ಖಾಲಿ ಮಾಡಿದ್ದಾರೆ. ತನಿಖಾಧಿಕಾರಿಗಳು ಚಿಲುಮೆ ಕಚೇರಿಗೆ ಭೇಟಿ ನೀಡಿದ್ದಾರೆ. ಕಚೇರಿ ಕಾವಲಿಗೆ ಪೊಲೀಸ್ ಸಿಬ್ಬಂದಿ ಸಹ ನಿಯೋಜಿಸಲಾಗಿದೆ' ಎಂದು ನಗರ ಪೊಲೀಸ್ ಆಯುಕ್ತ ಪ್ರತಾಪ್ ರೆಡ್ಡಿ ಸುದ್ದಿಗಾರರಿಗೆ ತಿಳಿಸಿದರು.

ಪ್ರಾದೇಶಿಕ ಆಯುಕ್ತರಿಂದ ತನಿಖೆಗೆ ಆದೇಶ

'ಮತದಾರರ ಪಟ್ಟಿ ಪರಿಷ್ಕರಣೆ ಹೆಸರಿನಲ್ಲಿ ಅಕ್ರಮ ನಡೆದಿದೆ ಎಂಬ ದೂರುಗಳ ಕುರಿತು ಬೆಂಗಳೂರು ಪ್ರಾದೇಶಿಕ ಆಯುಕ್ತರಿಂದ ಸಮಗ್ರ ತನಿಖೆಗೆ ಆದೇಶಿಸಲಾಗಿದೆ' ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ 'ಪ್ರಜಾವಾಣಿ'ಗೆ ತಿಳಿಸಿದರು.

'ಮತದಾರರ ಜಾಗೃತಿ ಕಾರ್ಯಕ್ರಮ ಮತ್ತು ಪಟ್ಟಿ ಪರಿಷ್ಕರಣೆ ಕುರಿತು ಜಿಲ್ಲಾ ಚುನಾವಣಾಧಿಕಾರಿ ಹಂತದಲ್ಲಿ ತೀರ್ಮಾನ ಕೈಗೊಳ್ಳಲಾಗಿದೆ. ದೂರಿನಲ್ಲಿರುವ ಆರೋಪಗಳ ಕುರಿತು ಸಮಗ್ರವಾಗಿ ತನಿಖೆ ನಡೆಸಿ, ಆದಷ್ಟು ಬೇಗ ವರದಿ ನೀಡುವಂತೆ ಪ್ರಾದೇಶಿಕ ಆಯುಕ್ತರಿಗೆ ಸೂಚಿಸಲಾಗಿದೆ. ಯಾರೇ ತಪ್ಪು ಮಾಡಿರುವುದು ಕಂಡುಬಂದರೂ ಕಠಿಣ ಕ್ರಮ ಜರುಗಿಸಲಾಗುವುದು' ಎಂದರು.

> ಬಿಜೆಪಿಯು ಖಾಸಗಿ ಕಂಪನಿಯ ಮೂಲಕ ಮತದಾರರ ದತ್ತಾಂಶ ಸಂಗ್ರಹಿಸುತ್ತಿದೆ. ಸರ್ಕಾರಿ ನೌಕರರ ಹೆಸರಿನಲ್ಲೇ ಮನೆಗಳಿಗೆ ಭೇಟಿ ಕೊಟ್ಟಿರುವ ಮಾಹಿತಿ ಇದೆ. ಇದು ಸಂಶಯ ಮೂಡಿಸುತ್ತದೆ
>
> **ಎಚ್‌.ಡಿ. ಕುಮಾರಸ್ವಾಮಿ,** ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ಮುಖ್ಯಾಂಶಗಳು

- ಕಂಪ್ಯೂಟರ್‌ನಲ್ಲಿದ್ದ ಮಾಹಿತಿ ಅಳಿಸಿ ಹಾಕಿರುವ ಚಿಲುಮೆ ಸಂಸ್ಥೆ
- ಎಫ್‌ಐಆರ್ ದಾಖಲಾದ ಕೂಡಲೇ ನಾಲ್ಕು ಕಚೇರಿಗಳಿಗೆ ಬೀಗ
- ಮಲ್ಲೇಶ್ವರ ಕಚೇರಿಯ ಬೀಗ ಒಡೆದು ಪೊಲೀಸರ ಶೋಧ

ಮತಪಟ್ಟಿ: ಕೈಬಿಟ್ಟದ್ದು 6.69 ಲಕ್ಷ, ಸೇರ್ಪಡೆ 3.07 ಲಕ್ಷ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ವಿಧಾನಸಭೆ ಕ್ಷೇತ್ರಗಳ ಮತದಾರರ ಕರಡು ಪಟ್ಟಿಯನ್ನು ನ.9ರಂದು ಪ್ರಕಟಿಸಲಾಗಿದೆ. ಒಟ್ಟು 6.69 ಲಕ್ಷ ಮತದಾರರನ್ನು ಪಟ್ಟಿಯಿಂದ ಬಿಟ್ಟಿದ್ದು, 3.07 ಲಕ್ಷ ಮತದಾರರ ಸೇರಿಸಲಾಗಿದೆ.

ವಿಧಾನಸಭೆ ಕ್ಷೇತ್ರ	ಪಟ್ಟಿಯಿಂದ ಬಿಟ್ಟವರ ಸಂಖ್ಯೆ	ಸೇರ್ಪಡೆ ಸಂಖ್ಯೆ
ಯಲಹಂಕ	21,968	15,821
ಕೆ.ಆರ್.ಪುರ	39,763	14,170
ಬ್ಯಾಟರಾಯನಪುರ	30,757	23,591
ಯಶವಂತಪುರ	35,829	31,950
ರಾಜರಾಜೇಶ್ವರಿನಗರ	33,009	16,717
ದಾಸರಹಳ್ಳಿ	35,086	10,908
ಮಹಾಲಕ್ಷ್ಮಿಲೇಔಟ್	20,404	6,160
ಮಲ್ಲೇಶ್ವರ	11,788	4,148
ಹೆಬ್ಬಾಳ	20,039	12,361
ಪುಲಕೇಶಿನಗರ	22,196	5,764
ಸರ್ವಜ್ಞನಗರ	28,691	13,907
ಸಿ.ವಿ. ರಾಮನ್‌ನಗರ	21,457	4,805
ಶಿವಾಜಿನಗರ	14,679	5,210
ಶಾಂತಿನಗರ	20,386	5,324
ಗಾಂಧಿನಗರ	16,465	4,476
ರಾಜಾಜಿನಗರ	12,757	4,528
ಗೋವಿಂದರಾಜನಗರ	20,067	5,310
ವಿಜಯನಗರ	28,562	7,408
ಚಾಮರಾಜಪೇಟೆ	19,304	7,760
ಚಿಕ್ಕಪೇಟೆ	16,231	4,343
ಬಸವನಗುಡಿ	18,838	2,836
ಪದ್ಮನಾಭನಗರ	17,435	5,903
ಬಿಟಿಎಂ ಲೇಔಟ್	16,141	5,594
ಜಯನಗರ	13,061	4,245
ಮಹದೇವಪುರ	33,376	25,535
ಬೊಮ್ಮನಹಳ್ಳಿ	31,157	15,018
ಬೆಂಗಳೂರು ದಕ್ಷಿಣ	45,927	35,258
ಆನೇಕಲ್	24,279	8,485
ಒಟ್ಟು	6,69,652	3,07,535

ಆಯೋಗವೇ ಶಾಮೀಲಾಗಿರುವ ಅನುಮಾನ: ಡಿಕೆಶಿ



ಡಿ.ಕೆ. ಶಿವಕುಮಾರ್

ರಾಜ್ಯ ಮುಖ್ಯ ಚುನಾವಣಾಧಿಕಾರಿಗೆ ಮಾಹಿತಿ ನೀಡಿದ ಬಳಿಕವೇ ಚಿಲುಮೆ ಸಂಸ್ಥೆಗೆ ಮತದಾರರ ಜಾಗೃತಿ ಅಭಿಯಾನ ನಡೆಸಲು ಆದೇಶ ನೀಡಲಾಗಿತ್ತು. ಅಕ್ರಮ ನಡೆಸಿದ ಸಂಸ್ಥೆಯ ವಿರುದ್ಧ ಚುನಾವಣಾ ಆಯೋಗ ಏಕೆ ಕ್ರಮ ಕೈಗೊಂಡಿಲ್ಲ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮತದಾರರ ಮಾಹಿತಿ ಕಳವು ಪ್ರಕರಣದ ಸೂತ್ರಧಾರರಾಗಿರುವ ಸಂಸ್ಥೆಯ ನಿರ್ದೇಶಕ ರವಿಕುಮಾರ್ ವಿರುದ್ಧ ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಮತಗಟ್ಟೆ ಹಂತದಲ್ಲಿ ಸಮೀಕ್ಷೆಯಲ್ಲಿ ಭಾಗಿಯಾಗಿದ್ದ ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಅಕ್ರಮದಲ್ಲಿ ಭಾಗಿಯಾದ ಎಲ್ಲರನ್ನೂ 24 ಗಂಟೆಯೊಳಗೆ ಬಂಧಿಸಬೇಕು. ಇಲ್ಲವಾದಲ್ಲಿ ಚುನಾವಣಾ ಆಯೋಗವೇ ಅಕ್ರಮದಲ್ಲಿ ಭಾಗಿಯಾದ ಅನುಮಾನ ಬರುತ್ತದೆ' ಎಂದು ಹೇಳಿದರು.

ಮತದಾರರ ಜಾಗೃತಿ ಹೆಸರಿನಲ್ಲಿ ಮಾಹಿತಿ ಕಳವು ಮಾಡಿರುವುದರ ಜತೆಗೆ ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಸಾವಿರಾರು ಮಂದಿಯ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಟ್ಟಿರುವ ದೂರುಗಳು ಕೇಳಿಬರುತ್ತಿವೆ. ಈ ತಂಡದಲ್ಲಿದ್ದ ಕೆಲವರು ರಾಜಕಾರಣಿಗಳನ್ನು ಸಂಪರ್ಕಿಸಿ ಚುನಾವಣೆಯಲ್ಲಿ ಗೆಲ್ಲಿಸುವ ಆಮಿಷವೊಡ್ಡಿ, ಕೋಟ್ಯಂತರ ರೂಪಾಯಿಗೆ ಬೇಡಿಕೆ ಇಟ್ಟಿರುವ ಮಾಹಿತಿ ಇದೆ. ಈ ಎಲ್ಲ ಆರೋಪಗಳ ಬಗ್ಗೆಯೂ ಸಮಗ್ರ ತನಿಖೆ ನಡೆಸಬೇಕು ಎಂದು ಅವರು ಒತ್ತಾಯಿಸಿದರು.



❦ ಸುಭಾಷಿತ ❦

ಕಣ್ಣಿನಲ್ಲಿ ನೋಡಿದ್ದೇ ಪರಮ ಸತ್ಯವಲ್ಲ; ಹೃದಯದಿಂದ ನೋಡತಕ್ಕಂಥ ಮತ್ತೊಂದು ಶಕ್ತಿ ಮಾನವನಲ್ಲಿದೆ.

-ಕುವೆಂಪು

ಎಸಿಬಿ ಅಧಿಕಾರಿಗಳು, ಸಿಬ್ಬಂದಿಯ ಸ್ಥಳ ನಿಯುಕ್ತಿಗೆ ವಿಳಂಬ ಸಲ್ಲದು

ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಯ ಅಡಿ ತನಿಖೆ ನಡೆಸುವ ಅಧಿಕಾರವನ್ನು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ಪುನಃ ನೀಡಿ, ಭ್ರಷ್ಟಾಚಾರ ನಿಗ್ರಹ ದಳವನ್ನು (ಎಸಿಬಿ) ರದ್ದುಗೊಳಿಸಿ ಹೈಕೋರ್ಟ್ ಆದೇಶ ನೀಡಿ ಮೂರು ತಿಂಗಳು ಕಳೆದಿದೆ. ಎಸಿಬಿಯನ್ನು ಅಸ್ತಿತ್ವಕ್ಕೆ ತರಲು ಹೊರಡಿಸಿದ್ದ ಎಲ್ಲ ಅಧಿಸೂಚನೆಗಳನ್ನು ರದ್ದುಗೊಳಿಸಿದ್ದ ನ್ಯಾಯಪೀಠ, ಎಸಿಬಿಯಲ್ಲಿ ಬಾಕಿ ಇರುವ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ಹಸ್ತಾಂತರಿಸುವಂತೆ ಆದೇಶದಲ್ಲಿ ಹೇಳಿದೆ. ಅಳೆದು- ತೂಗಿ ಲೆಕ್ಕಾಚಾರ ಹಾಕುವುದರಲ್ಲಿ ನಿರತವಾಗಿದ್ದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಡಿಪಿಎಆರ್), ಎಸಿಬಿಯಲ್ಲಿರುವ ಎಲ್ಲ ಪ್ರಕರಣಗಳನ್ನು ಲೋಕಾಯುಕ್ತಕ್ಕೆ ಹಸ್ತಾಂತರಿಸಲು ಸೆಪ್ಟೆಂಬರ್ 31ರಂದು ಆದೇಶ ಹೊರಡಿಸಿತ್ತು. ಹೈಕೋರ್ಟ್ ಆದೇಶ ಪ್ರಕಟವಾದ ದಿನದಿಂದಲೇ ಎಸಿಬಿಯಲ್ಲಿನ ಅಧಿಕಾರಿಗಳು ಮತ್ತು ಸಿಬ್ಬಂದಿ ತನಿಖೆಗೆ ಸಂಬಂಧಿಸಿದ ಕೆಲಸಗಳನ್ನು ಸ್ಥಗಿತಗೊಳಿಸಿದ್ದರು. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ, ಎಸ್‌ಪಿ, ಡಿವೈಎಸ್ಪಿ, ಇನ್‌ಸ್ಪೆಕ್ಟರ್ ಸೇರಿದಂತೆ 122 ಪೊಲೀಸ್ ಅಧಿಕಾರಿಗಳು ಹಾಗೂ 200 ಸಿಬ್ಬಂದಿ ಎಸಿಬಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಅವರಲ್ಲಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸೇರಿದಂತೆ ಕೆಲವು ಅಧಿಕಾರಿಗಳನ್ನು ಬೇರೆ ಹುದ್ದೆಗಳಿಗೆ ವರ್ಗಾವಣೆ ಮಾಡಲಾಗಿದೆ. ಬೆರಳೆಣಿಕೆಯಷ್ಟು ಅಧಿಕಾರಿಗಳು ಮತ್ತು 100 ಮಂದಿ ಕಾನ್‌ಸ್ಟೆಬಲ್‌ಗಳನ್ನು ಲೋಕಾಯುಕ್ತ ಪೊಲೀಸ್ ವಿಭಾಗಕ್ಕೆ ವರ್ಗಾಯಿಸಲಾಗಿದೆ. ಆದರೆ, ನೂರಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ಮತ್ತು ನೂರು ಮಂದಿ ಕಾನ್‌ಸ್ಟೆಬಲ್‌ಗಳನ್ನು ಮೂರು ತಿಂಗಳಿನಿಂದ ಎಸಿಬಿಯಲ್ಲೇ ಇರಿಸಲಾಗಿದೆ. ಈ ಅಧಿಕಾರಿಗಳು ಮತ್ತು ಸಿಬ್ಬಂದಿ ಅಸ್ತಿತ್ವ ಕಳೆದುಕೊಂಡಿರುವ ಸಂಸ್ಥೆಯ ಕಚೇರಿಗೆ ಬಂದು, ಹಾಜರಿ ಪುಸ್ತಕಕ್ಕೆ ಸಹಿ ಹಾಕಿ ಸಂಜೆ ವಾಪಸ್ ಹೋಗುವುದಕ್ಕೆ ಸೀಮಿತವಾಗಿದ್ದಾರೆ.



ಸಲ್ಲದ ನೆವಗಳನ್ನು ಹೇಳಿಕೊಂಡು ಅಧಿಕಾರಿಗಳು, ಸಿಬ್ಬಂದಿಗೆ ಹುದ್ದೆ ತೋರಿಸದೇ ಕಾಲಹರಣ ಮಾಡುವ ಕೆಟ್ಟ ಪ್ರವೃತ್ತಿಯನ್ನು ಕೈಬಿಡಬೇಕು

ಎಸಿಬಿಯಲ್ಲಿದ್ದ ಎಲ್ಲ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಲೋಕಾಯುಕ್ತಕ್ಕೆ ನೀಡುವಂತೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರು ಸರ್ಕಾರದ ಮುಂದೆ ಬೇಡಿಕೆ ಇಟ್ಟಿದ್ದರು. ಆದರೆ, ರಾಜ್ಯದಲ್ಲಿ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯ ಕೊರತೆ ಇದೆ ಎಂಬ ಕಾರಣ ನೀಡಿದ್ದ ರಾಜ್ಯ ಪೊಲೀಸ್ ಮಹಾನಿರ್ದೇಶಕರು, ಎಸಿಬಿಯ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಲೋಕಾಯುಕ್ತ ಪೊಲೀಸ್ ವಿಭಾಗದಲ್ಲಿ ವಿಲೀನಗೊಳಿಸುವ ಬೇಡಿಕೆಯನ್ನು ವಿರೋಧಿಸಿದ್ದರು. ಎಸಿಬಿಯಲ್ಲಿನ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿ ಹಂಚಿಕೆ ಕುರಿತು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ನೇತೃತ್ವದಲ್ಲಿ ಲೋಕಾಯುಕ್ತ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಹಲವು ಸುತ್ತಿನ ಚರ್ಚೆ ನಡೆಸಿದ್ದರು. ಪೊಲೀಸ್ ಇಲಾಖೆಯ ಇತರ ಘಟಕಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿ ಕೊರತೆ ನೀಗಲು ಎಸಿಬಿಯಲ್ಲಿನ ಪೊಲೀಸ್ ಸಿಬ್ಬಂದಿಯನ್ನು ಬಳಸಿಕೊಳ್ಳುವ ಪೊಲೀಸ್ ಮಹಾನಿರ್ದೇಶಕರ ಪ್ರಸ್ತಾವವನ್ನು ಉನ್ನತಮಟ್ಟದ ಸಮಿತಿ ಒಪ್ಪಿಕೊಂಡಿತ್ತು. ಆದರೆ, ಆ ಬಳಿಕವೂ ನೂರಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ಮತ್ತು 100 ಮಂದಿ ಕಾನ್‌ಸ್ಟೆಬಲ್‌ಗಳನ್ನು ಎಸಿಬಿಯಿಂದ ವರ್ಗಾವಣೆ ಮಾಡುವ ಪ್ರಕ್ರಿಯೆ ಈವರೆಗೂ ನಡೆದಿಲ್ಲ. ವಿಶ್ವಸಂಸ್ಥೆಯ ಮಾನದಂಡಕ್ಕೆ ಹೋಲಿಸಿದರೆ ರಾಜ್ಯದಲ್ಲಿ ಜನಸಂಖ್ಯೆ ಮತ್ತು ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಯ ಅನುಪಾತ ಕಡಿಮೆಯೇ ಇದೆ. ರಾಜ್ಯದ ಹಲವು ಪೊಲೀಸ್ ಠಾಣೆಗಳು, ವಿಶೇಷ ಘಟಕಗಳಲ್ಲಿ ಅಧಿಕಾರಿಗಳು ಮತ್ತು ಸಿಬ್ಬಂದಿಯ ಕೊರತೆ ಇದೆ. ಪೊಲೀಸ್ ಪಡೆಯ ಕೊರತೆಯ ಕಾರಣದಿಂದಾಗಿ ಕೆಲವೆಡೆ ಅಪರಾಧ ನಿಯಂತ್ರಣ ಸವಾಲಾಗಿ ಪರಿಣಮಿಸಿದೆ. ಇಂತಹ ಸಂದರ್ಭದಲ್ಲಿ 200ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ಅಸ್ತಿತ್ವ ಕಳೆದುಕೊಂಡ ತನಿಖಾ ಸಂಸ್ಥೆಯಲ್ಲಿ ಮೂರು ತಿಂಗಳಿನಿಂದ ಮುಂದುವರಿಸಿರುವುದು ಜನಪರವಾದ ನಡೆಯಲ್ಲ. ಈ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಪ್ರತೀ ತಿಂಗಳು ವೇತನ ಮತ್ತು ಭತ್ಯೆಗಳನ್ನು ನೀಡಲು ಜನರ ತೆರಿಗೆಯ ಹಣದಲ್ಲಿ ಕೋಟ್ಯಂತರ ರೂಪಾಯಿ ವ್ಯಯಿಸಲಾಗುತ್ತಿದೆ. ಆದರೆ, ಎಸಿಬಿಯಲ್ಲಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಯ ಸ್ಥಳ ನಿಯುಕ್ತಿಗೆ ಸಂಬಂಧಿಸಿದಂತೆ ನಿರ್ಧಾರ ಕೈಗೊಳ್ಳುವಲ್ಲಿ ಸರ್ಕಾರ ಅನುಸರಿಸುತ್ತಿರುವ ವಿಳಂಬ ಧೋರಣೆಯು ಪೊಲೀಸ್ ಸಿಬ್ಬಂದಿಯ ನೇಮಕ ಹಾಗೂ ವೇತನ, ಭತ್ಯೆ ಪಾವತಿಯ ಉದ್ದೇಶವನ್ನೇ ವಿಫಲಗೊಳಿಸುವಂತಿದೆ.

ಎಸಿಬಿಯಲ್ಲಿ ಕೆಲಸವಿಲ್ಲದೇ ಖಾಲಿ ಕುಳಿತಿರುವ ಪೊಲೀಸ್ ಅಧಿಕಾರಿಗಳು ಮತ್ತು ಸಿಬ್ಬಂದಿಯನ್ನು ಬೇರೆ ಹುದ್ದೆಗಳಿಗೆ ವರ್ಗಾವಣೆ ಮಾಡಲು ಯಾವ ಅಡ್ಡಿಯೂ ಇಲ್ಲ. ಎಸಿಬಿಯನ್ನು ರದ್ದುಗೊಳಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಕೆಯಾಗಿದ್ದ ಮೇಲ್ಮನವಿಗಳೂ ತಿರಸ್ಕೃತಗೊಂಡಿವೆ. ಈಗ ಎಸಿಬಿಯಲ್ಲಿ ಲಭ್ಯವಿರುವ ಪೊಲೀಸರನ್ನು ಲೋಕಾಯುಕ್ತವೂ ಸೇರಿದಂತೆ ಅಗತ್ಯ ಇರುವ ಘಟಕಗಳಿಗೆ ತ್ವರಿತವಾಗಿ ವರ್ಗಾವಣೆ ಮಾಡುವ ಮೂಲಕ, ಪೊಲೀಸರ ಸೇವೆಯನ್ನು ಸದ್ಬಳಕೆ ಮಾಡಿಕೊಳ್ಳಬೇಕಾದ ಹೊಣೆಗಾರಿಕೆ ರಾಜ್ಯ ಸರ್ಕಾರದ ಮೇಲಿದೆ. ಸಲ್ಲದ ನೆವಗಳನ್ನು ಹೇಳಿಕೊಂಡು ಅಧಿಕಾರಿಗಳು, ಸಿಬ್ಬಂದಿಗೆ ಹುದ್ದೆ ತೋರಿಸದೇ ಕಾಲಹರಣ ಮಾಡುವ ಕೆಟ್ಟ ಪ್ರವೃತ್ತಿಯನ್ನು ಕೈಬಿಡಬೇಕು. ಜನರ ತೆರಿಗೆಯ ಪಾಲಿನಲ್ಲಿ ವೇತನ, ಭತ್ಯೆಗಳನ್ನು ಪಡೆಯುವ ಪ್ರತಿಯೊಬ್ಬ ಅಧಿಕಾರಿ, ಸಿಬ್ಬಂದಿಯ ಸೇವೆಯನ್ನು ಮರಳಿ ಜನರಿಗಾಗಿ ಒದಗಿಸುವ ಬದ್ಧತೆಯನ್ನು ಕಾರ್ಯಾಂಗದ ನೇತೃತ್ವ ವಹಿಸಿರುವವರು ಪ್ರದರ್ಶಿಸಬೇಕು.

ದಿನದ ಟ್ವೀಟ್

ಉದಾರೀಕರಣದ ಅಗತ್ಯ



ಬಾಹ್ಯಾಕಾಶ ವಲಯದಲ್ಲಿ ಉದಾರೀಕರಣದ ಅಗತ್ಯವನ್ನು ನಾವು 2018ರಲ್ಲಿ ಒತ್ತಿ ಹೇಳಿದಾಗ ಅದು ಸಾಧ್ಯವಾಗುತ್ತದೆ ಎಂದು ಯಾರೂ ನಂಬಿರಲಿಲ್ಲ. ಆದರೆ, ಇಂದು ಸ್ಕೈರೂಟ್ ಏರೋಸ್ಪೇಸ್ ಎಂಬ ನವೋದ್ಯಮವು ತನ್ನ ಮೊದಲ ರಾಕೆಟ್ಟನ್ನು ಯಶಸ್ವಿಯಾಗಿ ಉಡಾವಣೆ ಮಾಡಿದೆ. ಕೋವಿಡ್ ನಡುವೆಯೂ ಬಾಹ್ಯಾಕಾಶ ಕ್ಷೇತ್ರದಲ್ಲಿ ಸುಧಾರಣೆಗಳನ್ನು ತಂದ ಶ್ರೇಯಸ್ಸು ಮೋದಿ ನೇತೃತ್ವದ ಸರ್ಕಾರಕ್ಕೆ ಸಲ್ಲುತ್ತದೆ.

ನಿತಿನ್ ಪೈ, ನಿರ್ದೇಶಕ, ತಕ್ಷಶಿಲಾ ಸಂಸ್ಥೆ

ಕಿಡಿನುಡಿ



ಮತದಾರರ ಪಟ್ಟಿ ಪರಿಷ್ಕರಣೆಯ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ವಿರುದ್ಧವೇ ನಾವು ದೂರು ನೀಡಿದ್ದೆವು. ಮುಖ್ಯಮಂತ್ರಿಗಳು ₹ 20,000 ಸಂಬಳದ ಬಡಪಾಯಿ ಏಜೆಂಟನನ್ನು ಬಲಿಪಶು ಮಾಡಿ ತಾವು ಪಾರಾಗುವ ಸಂಚು ನಡೆಸಿದ್ದಾರೆ.

ಸಿದ್ದರಾಮಯ್ಯ, ವಿಧಾನಸಭೆಯ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಬುಧವಾರ, 19-11-1997

• ದೆಹಲಿ: ಯಮುನಾ ನದಿಗೆ ಬಸ್ ಉರುಳಿ 30 ಶಾಲಾ ಮಕ್ಕಳ ಸಾವು

ನವದೆಹಲಿ, ನವೆಂಬರ್ 18- ಶಾಲಾ ಬಸ್ಸೊಂದು ಸೇತುವೆ ದಾಟುತ್ತಿದ್ದಾಗ ಆಯ ತಪ್ಪಿ ನದಿಗೆ ಉರುಳಿದ್ದರಿಂದ ಸುಮಾರು 30 ಮಕ್ಕಳು ನೀರುಪಾಲಾದ ದುರಂತ ಇಂದು ಬೆಳಿಗ್ಗೆ ರಾಜಧಾನಿಯಲ್ಲಿ ಸಂಭವಿಸಿದೆ.

120ಕ್ಕೂ ಹೆಚ್ಚು ಶಾಲಾ ಮಕ್ಕಳನ್ನು ಹೊತ್ತು ಸಾಗುತ್ತಿದ್ದ ಬಸ್ ವಜೀರಾಬಾದ್ ಸೇತುವೆ ದಾಟುವಾಗ ಆಯ ತಪ್ಪಿ ಯಮುನಾ ನದಿಗೆ ಉರುಳಿತು. ಎತ್ತರದ ಸೇತುವೆಯ ಮೇಲಿನಿಂದ ಬಸ್ ತಲೆಕೆಳಗಾಗಿ ನೀರಿಗೆ ಅಪ್ಪಳಿಸಿದ ರಭಸಕ್ಕೆ 30 ಪುಟ್ಟ ಮಕ್ಕಳು ಬಲಿಯಾದರು. ಕನಿಷ್ಠ 70 ಮಕ್ಕಳು ಗಾಯಗೊಂಡಿದ್ದಾರೆ.

• ರಂಗಕ್ಕೆ ಬೆಂಬಲ ವಾಪಸು: ಕಾಂಗ್ರೆಸ್‌ನಲ್ಲಿ ಒಮ್ಮತ

ನವದೆಹಲಿ, ನವೆಂಬರ್ 18- ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯಗಳ ಕಾಂಗ್ರೆಸ್ ಸಂಸತ್ ಸದಸ್ಯರೆಲ್ಲ, ಸಂಯುಕ್ತ ರಂಗ ಸರ್ಕಾರಕ್ಕೆ ನೀಡಿರುವ ಬೆಂಬಲವನ್ನು ಹಿಂತೆಗೆದುಕೊಳ್ಳಬೇಕು, ರಾಜೀವ್ ಹತ್ಯೆ ಪ್ರಕರಣದಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು ಎಂದು ಪಕ್ಷದ ವರಿಷ್ಠರಿಗೆ ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಇಂದು ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಐ.ಕೆ. ಗುಜ್ರಾಲ್ ನೇತೃತ್ವದ ಸಂಯುಕ್ತ ರಂಗದ ಏಳು ತಿಂಗಳ ಸರ್ಕಾರವು ತೀವ್ರ ಬಿಕ್ಕಟ್ಟಿಗೆ ಸಿಕ್ಕಿದೆ. ಅದರ ಅಸ್ಥಿರತೆಯ ಶಂಕೆ ಹೆಚ್ಚಾಗುತ್ತಿದ್ದು, ಅದರ ಉಳಿವಿನ ಸ್ಥಿತಿ ಡೋಲಾಯಮಾನವಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 19-11-1972

• ಪಾಕ್‌ನಿಂದ ಆಧಾರರಹಿತ ಆಪಾದನೆ: ಭಾರತದ ನಿರಾಕರಣೆ

ದೆಹಲಿ, ನವೆಂಬರ್ 18- ಭಾರತ-ಪಾಕಿಸ್ತಾನದ ಗಡಿಯುದ್ದಕ್ಕೂ ಭಾರತವು ಬೇಕೆಂದೇ ಉದ್ವೇಗ, ಬಿಕ್ಕಟ್ಟುಗಳನ್ನು ಹೆಚ್ಚಿಸುತ್ತಿದೆಯೆಂಬ ಹಾಗೂ ಭಾರತದ ಪಡೆಗಳು ಕಳೆದ ಕೆಲವು ದಿನಗಳಲ್ಲಿ ಅನೇಕ ಬಾರಿ ಗಡಿಯನ್ನು ಉಲ್ಲಂಘಿಸಿವೆ ಎಂಬ ಪಾಕಿಸ್ತಾನದ ಆಪಾದನೆ ನಿರಾಧಾರ ಹಾಗೂ ಕಿಡಿಗೇಡಿತನದ್ದೆಂದು ಅಧಿಕೃತ ವಲಯಗಳು ಇಂದು ಇಲ್ಲಿ ತಿಳಿಸಿದವು.

ಕಾಶ್ಮೀರದ ಹಾಜಿರ್ ಕ್ಷೇತ್ರದಲ್ಲಿ ಭಾರತದ ಪಡೆಗಳು ಅನೇಕ ಬಾರಿ ಗಡಿ ಉಲ್ಲಂಘಿಸಿವೆ ಎಂದೂ ಕಳೆದ ಗುರುವಾರ ಪಂಜಾಬಿನಲ್ಲಿನ ಸುಲೇಮಾನ್‌ಕಿ ಕ್ಷೇತ್ರದಲ್ಲಿನ ಪಾಕಿಸ್ತಾನಿ ನೆಲೆಗಳ ಮೇಲೆ ಭಾರತದ ಪಡೆಗಳು ಗುಂಡು ಹಾರಿಸಿದವೆಂದೂ ಪಾಕಿಸ್ತಾನ ಸರ್ಕಾರದ ವಕ್ತಾರರು ಆಪಾದಿಸಿದ್ದಾರೆಂದು ಇಸ್ಲಾಮಾಬಾದ್‌ನಿಂದ ಯು.ಪಿ.ಐ ವರದಿ ಮಾಡಿತ್ತು.

ಸಮಗ್ರ ದೃಷ್ಟಿಕೋನವಿಲ್ಲದೆ ನಿರ್ಮಿಸುವ ಪ್ರತಿಮೆಗಳಿಂದ ಆಗುವ ಆಭಾಸಗಳಿಗೆ ಯಾರು ಹೊಣೆ?

ಪ್ರತಿಮಾ ನಾಟಕ ಮತ್ತು ಸೌಂದರ್ಯಪ್ರಜ್ಞೆ



ವಿಶ್ಲೇಷಣೆ

ಎಂ.ಎಸ್. ಶ್ರೀರಾಮ್

ಪ್ರಧಾನಿ ನರೇಂದ್ರ ಮೋದಿ ಅವರು ನಾಡಪ್ರಭು ಕೆಂಪೇಗೌಡರ ಭವ್ಯ ಪ್ರತಿಮೆಯನ್ನು ಬೆಂಗಳೂರಿನ ವಿಮಾನ ನಿಲ್ದಾಣದ ಬಳಿ ಇತ್ತೀಚೆಗೆ ಅನಾವರಣಗೊಳಿಸಿದರು. ಎತ್ತರಕ್ಕೆ ನಿಂತಿರುವ ಬೃಹತ್ ಪ್ರತಿಮೆ ಸುಂದರವಾಗಿಯೂ ಭವ್ಯವಾಗಿಯೂ ನಮಗೆ ಕಾಣುತ್ತದೆ. ಪಕ್ಕದಲ್ಲಿ ಕುಬ್ಜವಾಗಿ ಕಾಣುವ ವಿಮಾನ ನಿಲ್ದಾಣದ ಕಟ್ಟಡವಿದೆ. ಸೌಂದರ್ಯಶಾಸ್ತ್ರದ ದೃಷ್ಟಿಯಿಂದ, ಪ್ರತಿಮೆಯ ಎತ್ತರಕ್ಕೂ ವಿಮಾನ ನಿಲ್ದಾಣದ ಎತ್ತರಕ್ಕೂ ಸಮತೋಲನ ಇಲ್ಲವಾದ್ದರಿಂದ ಅದು ಪ್ರಮಾಣ ತಪ್ಪಿರುವಂತೆ ಕಾಣಿಸುತ್ತದೆ. ನಮ್ಮ ನಗರವನ್ನು ನಾವು ಸುಂದರವಾಗಿಸುವ ಭರದಲ್ಲಿ ಪ್ರತಿಮೆಯ ಗಾತ್ರದ ಬಗೆಗಷ್ಟೇ ಗಮನಹರಿಸಿ, ಒಟ್ಟಾರೆ ಸೌಂದರ್ಯವನ್ನು ಗಣನೆಗೆ ತೆಗೆದುಕೊಳ್ಳದೇ ಇರುವುದು ದುರಂತ. ಇಂತಹ ನಡೆ ನಮ್ಮ ಪರಂಪರೆಗೂ ಗೌರವವನ್ನು ನೀಡುವುದಿಲ್ಲ.

ಕ್ಯುಬೆಕ್ ನಗರವನ್ನು 'ಹೆರಿಟೇಜ್ ನಗರ'ವೆಂದು ಅಲ್ಲಿನ ಸ್ಥಳೀಯ ಸರ್ಕಾರ ಘೋಷಿಸಿದೆ. ಹೀಗಾಗಿ, ಆ ನಗರದಲ್ಲಿರುವ ಮೆಕ್‌ಡೊನಾಲ್ಡ್ಸ್ ಸರಣಿಯ ಮಳಿಗೆ ತನ್ನ ಅಸ್ತಿತ್ವವನ್ನು ಘೋಷಿಸುವ ಬಂಗಾರದ ಕಮಾನನ್ನು (ಗೋಲ್ಡನ್ ಆರ್ಚ್) ಬಿಟ್ಟುಕೊಟ್ಟು, ಆ ನಗರದ ಸಂಸ್ಕೃತಿಗೆ ತಕ್ಕಂತಹ ಸಣ್ಣ ನಾಮಫಲಕವನ್ನು ಹಾಕಿಕೊಂಡಿದೆ. ಜೈಪುರದ ಹವಾಮಹಲಿನ ಆಜುಬಾಜಿನಲ್ಲೂ ಪರಂಪರೆಗೆ ತಕ್ಕಂತೆ ಅಲ್ಲಿನ ಅಂಗಡಿಗಳೆಲ್ಲಾ ಹೊರ ಆವರಣದಲ್ಲಿ, ಜೈಪುರ ನಗರದ ಬಣ್ಣವೆಂದೇ ಪರಿಗಣಿಸುವ ಲಘು ರೋಜಾ ಬಣ್ಣದ ಗೋಡೆ ಮತ್ತು ನಿಯಮಿತವಾದ ವಿಸ್ತೀರ್ಣದ ಫಲಕಗಳನ್ನೇ ಹಾಕಬೇಕು.

ಒಂದು ವ್ಯಾಪಾರದ ಸಂಕೇತವಾಗಲೀ ಬಣ್ಣಗಳಾಗಲೀ ನಗರದ ಸೌಂದರ್ಯದ ಮೇಲೆ ಸವಾರಿ ಮಾಡುವುದು ಸರಿಯಲ್ಲ. ವ್ಯಾಪಾರ ವ್ಯವಹಾರಗಳು ನಗರದ ಸೌಂದರ್ಯದಲ್ಲಿ ಅಡಕವಾಗಿರಬೇಕೇ ವಿನಾ ನಗರವೇ ಒಂದು ವ್ಯಾಪಾರದ ಜಾಹೀರಾತಿನಲ್ಲಿ ಮುಳುಗಬಾರದು.

ಬೆಂಗಳೂರಿನ ಜಯನಗರದಲ್ಲಿ ಐದು ರಸ್ತೆಗಳು ಸೇರುವೆಡೆ ಇರುವ ಪಾದಚಾರಿ ಮೇಲ್ಸೇತುವೆಗೆ 'ದ.ರಾ. ಬೇಂದ್ರೆ ಮೇಲ್ಸೇತುವೆ' ಎಂದು ಹೆಸರಿಡಲಾಗಿದೆ. ಆ ಟ್ರಾಫಿಕ್ ಜಂಕ್ಷನ್ನಿನ ಒಂದು ಬದಿಯಲ್ಲಿ ಬೇಂದ್ರೆಯವರ ಒಂದು ಸಣ್ಣ ಪ್ರತಿಮೆಯಿದೆ. ಗಾತ್ರ ಮತ್ತು ಬಣ್ಣದ ಕಾರಣದಿಂದ ಅದು ಯಾರಿಗೂ ಕಾಣದಂತೆ ನಗಣ್ಯವಾಗಿದೆ. ಮೇಲ್ಸೇತುವೆಯ ಎರಡೂ ಬದಿಗಳಲ್ಲಿ ಜಾಹೀರಾತಿನ ಫಲಕಗಳ ಗಾತ್ರ ಎಷ್ಟಿದೆಯೆಂದರೆ, ಈಗ ಅದನ್ನು ಬೇಂದ್ರೆ ಮೇಲ್ಸೇತುವೆ ಎನ್ನಬೇಕೋ ಯಾವುದೋ ಆಭರಣ ವ್ಯಾಪಾರಿಯ ಮೇಲ್ಸೇತುವೆ ಎಂದು ಕರೆಯಬೇಕೋ ತಿಳಿಯದಾಗಿದೆ.

ಆ ಸ್ಥಳವನ್ನು ಆಕ್ರಮಿಸಿಕೊಳ್ಳುವ ಹಕ್ಕನ್ನು ಆಭರಣ ವ್ಯಾಪಾರಿಗೇ ಬಿಟ್ಟುಕೊಟ್ಟು, ಅದರ ದೇಖರೇಖಿಯ ಉಸ್ತುವಾರಿಯನ್ನು ವಹಿಸುವುದರಲ್ಲಿ ತಪ್ಪೇನೂ ಇಲ್ಲ. ಆದರೆ ಹಾಗೆ ಮಾಡಿದಾಗ ಬೇಂದ್ರೆಯವರನ್ನು ಅಲ್ಲಿಗೆ ಎಳೆದು ತರಬೇಕಿತ್ತೇ ಎನ್ನುವುದು ಪ್ರಶ್ನೆ. ವ್ಯಾಪಾರವೂ ಆಗಬೇಕು, ಸಾಹಿತ್ಯ, ಸಂಸ್ಕೃತಿಯೂ ಉಳಿಯಬೇಕು ಎನ್ನುವುದು ದ್ವಂದ್ವ ನಿಲುವು. ಹಿಂದೆ ಸೌತ್ ಎಂಡ್ ಸರ್ಕಲ್ ಎಂದು ಕರೆಯುತ್ತಿದ್ದ ಜಾಗವನ್ನು ತೀನಂಶ್ರೀ ವೃತ್ತ ಎಂದು ಮರುನಾಮಕರಣ ಮಾಡಿ ವರ್ಷಗಳೇ ಆದವು. ಆದರೂ ಈಗಲೂ ಮೆಟ್ರೊ ನಿಲ್ದಾಣದ ಹೆಸರಾಗಲಿ, ಬಸ್ಸಿನ ಫಲಕಗಳಲ್ಲಾಗಲಿ, ಜನಮನದಲ್ಲಾಗಲಿ ಹೊಸ ಹೆಸರು ಸ್ಥಾಯಿಯಾಗಿಲ್ಲ. ತೀನಂಶ್ರೀ ಅವರ ಎದೆಮಟ್ಟದ ಸಣ್ಣ ಪುತ್ಥಳಿಯನ್ನು ಆ ಸ್ಥಳದಲ್ಲಿರುವ ಗ್ರಂಥಾಲಯದ ಆಚೆಬದಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ದಟ್ಟ ಮರದ ನೆರಳಿರುವ ಆ ಜಾಗದಲ್ಲಿ ಪುತ್ಥಳಿ ಎದ್ದು ಕಾಣುತ್ತಿರಲಿಲ್ಲ. ಕಾಲಕ್ರಮೇಣ, ಡಾ. ರಾಜ್‌ಕುಮಾರ್ ಅವರ ಬಂಗಾರದ ಬಣ್ಣದ ದೊಡ್ಡ ಪುತ್ಥಳಿಯನ್ನು ಮತ್ತೊಂದು ಬದಿಯಲ್ಲಿ ಪ್ರತಿಷ್ಠಾಪಿಸಲಾಯಿತು. ಸ್ವಲ್ಪ ಈಚೆಬದಿಯಲ್ಲಿ ದಿವಂಗತ ಎಚ್.ಎನ್.ಅನಂತಕುಮಾರ್ ಅವರ ಉತ್ಸಾಹದಿಂದ 'ಅಂಬರ ಚುಂಬನ' ಎಂಬ ಆಧುನಿಕ ಗಡಿಯಾರವನ್ನು ಅಳವಡಿಸಲಾಯಿತು. ಅದಕ್ಕೂ ರಾಜ್‌ಕುಮಾರ್ ಅವರ ಪುತ್ಥಳಿಗೂ ಅದರ ಹಿಂದಿರುವ ಮಕ್ಕಳ ಉದ್ಯಾನಕ್ಕೂ ಯಾವುದೇ ರೀತಿಯ ತಿಮ್ಯಾಟಿಕ್ ಸಂಬಂಧವಿಲ್ಲ. ಈ ಎಲ್ಲದರ ಮೇಲೆ ಮೆಟ್ರೊದ ಮೇಲ್ಸೇತುವೆಯೂ ತನ್ನ ಯಾನವನ್ನು ಮುಂದುವರಿಸಿದೆ.

ಈ ವೃತ್ತದ ಸೌಂದರ್ಯನಾಶ ಇಷ್ಟಕ್ಕೇ ಸಾಕು ಎಂದುಕೊಳ್ಳುವ ವೇಳೆಗೆ ತೀನಂಶ್ರೀ ಅವರ ಪುತ್ಥಳಿಯ ಮುಂದೆ 'ದಕ್ಷಿಣ ಕೇಸರಿ' ಎನ್ನುವ ದೊಡ್ಡ ಗಾತ್ರದ ಒಂದು ಸಿಂಹದ ಪುತ್ಥಳಿಯನ್ನೂ ಪ್ರತಿಷ್ಠಾಪಿಸಲಾಗಿದೆ. ಈಗ ತೀನಂಶ್ರೀ ಅವರನ್ನು ನಾವು ಈ ಸಿಂಹದ ಹಿಂಭಾಗದ ಕತ್ತಲಿನಲ್ಲಿ ಹುಡುಕಿ ನೋಡಬೇಕಾಗಿದೆ. ಈ ದಕ್ಷಿಣ ಕೇಸರಿ ಸಿಂಹ ನಮ್ಮ ಸಂಸ್ಕೃತಿಗೆ ಮಹತ್ವದ್ದೇನನ್ನೋ ನೀಡಿರಲೇಬೇಕು. ಇಲ್ಲವಾದರೆ ಇದೇ ಸಿಂಹದ ಮತ್ತೊಂದು ಪುತ್ಥಳಿ ಆರ್ಮುಗಂ ವೃತ್ತದ ಹೊರಬದಿಯಲ್ಲೂ ಇರುತ್ತಿರಲಿಲ್ಲ. ಆರ್ಮುಗಂ ಅವರಿಗೂ ಈ ಪುತ್ಥಳಿಗೂ ಏನು ಸಂಬಂಧವೋ ತಿಳಿಯದಾಗಿದೆ.

ಕೆ.ಎಸ್.ನರಸಿಂಹಸ್ವಾಮಿ ಅವರ ಎದೆಮಟ್ಟದ ಪುತ್ಥಳಿಯನ್ನು ಒಂದು ವಿಚಿತ್ರ ಸ್ಥಳದಲ್ಲಿ- ಎಂ.ಎನ್. ಕೃಷ್ಣರಾವ್ ಪಾರ್ಕಿನ ಬಳಿಯಿರುವ ಕೆನರಾ ಬ್ಯಾಂಕಿನ ಅಧ್ಯಕ್ಷರ ಮನೆ ಬದಿಯಲ್ಲಿ ಪ್ರತಿಷ್ಠಾಪಿಸಲಾಗಿದೆ. ಇಂತಹ ಯೋಚನೆ ಯಾರಿಗೆ ಬಂತು, ನರಸಿಂಹಸ್ವಾಮಿಯವರ ಹೆಸರಿನ ರಸ್ತೆ ಮತ್ತೆಲ್ಲೋ ಇರುವಾಗ ಈ ಪುತ್ಥಳಿ ಇಲ್ಲೇಕೆ, ಉದ್ಯಾನದಲ್ಲಿ ಕೃಷ್ಣರಾಯರ ಪುತ್ಥಳಿ ಯಾಕೆ ಇರಬಾರದಿತ್ತು ಎಂಬಂಥ ಪ್ರಶ್ನೆಗಳನ್ನು ನಾವು ಕೇಳಬೇಕು. ಇಂತಹ ಯಾವ ಯೋಚನೆಗಳನ್ನೂ ಮಾಡದೇ ಇದ್ದಾಗ ಆಗುವ ಸೌಂದರ್ಯ ನಾಶ ನಮಗೆ ಇಲ್ಲಿ ಎದ್ದು ಕಾಣುತ್ತದೆ. ಒಂದು ರೀತಿಯಲ್ಲಿ ತುಸು ಸಮರ್ಪಕವಾದ ಜಾಗದಲ್ಲಿರುವ ಪುತ್ಥಳಿಯೆಂದರೆ, ಬಹುಶಃ ಎಚ್. ನರಸಿಂಹಯ್ಯನವರದ್ದು ಅನಿಸುತ್ತದೆ. ನ್ಯಾಷನಲ್ ಕಾಲೇಜಿನೊಂದಿಗೆ ದಶಕಗಳ ಕಾಲದ ಒಡನಾಟವಷ್ಟೇ ಅಲ್ಲ, ಅಲ್ಲಿಯೇ ವಾಸ್ತವ್ಯವಿದ್ದ ಎಚ್.ಎನ್. ಅವರ ಪುತ್ಥಳಿ ಆ ಜಾಗದಲ್ಲಿರುವುದು ಸಮರ್ಪಕವೇ. ಆದರೆ ಅದು ಯಾರಿಗೂ ಕಾಣದಂತೆ ಒಂದು ಮೂಲೆಯಲ್ಲಿದೆ. ನಗರವನ್ನು ಕಟ್ಟುವವರು ರಸ್ತೆಗಳಿಗೆ, ಉದ್ಯಾನಗಳಿಗೆ, ಕಟ್ಟಡಗಳಿಗೆ ನಾಮಕರಣ ಮಾಡುವಾಗ, ಹಿರಿಯರನ್ನು, ಸಂಸ್ಕೃತಿಯನ್ನು, ಚರಿತ್ರೆಯನ್ನು ಗೌರವಿಸುವಾಗ ಅದೊಂದು ಪರಿಪಾಟ ಎಂದಾಗದೆ ಸಮಗ್ರ ದೃಷ್ಟಿಕೋನವನ್ನು ಇಟ್ಟುಕೊಂಡರೆ, ನಮ್ಮ ಸಂಸ್ಕೃತಿಯನ್ನು ಸಂಭ್ರಮಿಸುತ್ತಲೇ ಒಂದು ಸುಂದರ ಹಾಗೂ ಆಧುನಿಕ ನಗರವನ್ನು ಕಟ್ಟಲು ಸಾಧ್ಯ. ಅದಿಲ್ಲದೆ, ಬಂಗಾರದ ಬಣ್ಣ ಚೆನ್ನಾಗಿರುತ್ತದೆ, ದೊಡ್ಡ ಗಾತ್ರದ ಪ್ರತಿಮೆ ಚೆಂದ, ಸಿಕ್ಕ ಜಾಗದಲ್ಲಿ ಇದನ್ನು ಸ್ಥಾಪಿಸಿಬಿಡೋಣ ಎನ್ನುತ್ತಾ ಹೊರಟರೆ ಆಗುವ ಆಭಾಸಗಳನ್ನು ನಾವೀಗ ಕಾಣುತ್ತಿದ್ದೇವೆ.



ಹೈದರಾಬಾದಿನ ಟ್ಯಾಂಕ್ ಬಂಡ್ ಮೇಲಿನ ರಸ್ತೆಯಲ್ಲಿ ಅಖಂಡ ಆಂಧ್ರಪ್ರದೇಶಕ್ಕೆ ಕೊಡುಗೆಗಳನ್ನು ನೀಡಿದವರ ಪುತ್ಥಳಿಗಳನ್ನು ನಿರ್ಮಿಸಲಾಗಿದೆ. ಸರಿಯಾದ ಅನುಪಾತ, ಒಂದು ರೀತಿಯ ಸಮಾನತೆ, ಅವರ ಚಾರಿತ್ರಿಕ ಮಹತ್ವವನ್ನು ವಿವರಿಸುವ ಫಲಕ- ಎಲ್ಲವೂ ಒಂದು ಹದವನ್ನು ಮೈಗೂಡಿಸಿಕೊಂಡಿವೆ. ಆಂಧ್ರಪ್ರದೇಶ ಇಬ್ಭಾಗವಾದಾಗ ತೆಲಂಗಾಣದ ಕೆಲ ಮಂದಿ ಇದನ್ನೂ ಆಂಧ್ರ ಮತ್ತು ತೆಲಂಗಾಣಕ್ಕೆ ಕೊಡುಗೆ ನೀಡಿದವರನ್ನಾಗಿ ವಿಭಜಿಸಲು ನೋಡಿದರು. ಆದರೆ ಅದೃಷ್ಟವಶಾತ್ ಆ ಪ್ರಯತ್ನ ಅಲ್ಲಿಗೇ ನಿಂತಿದೆ. ನಗರವು ತನ್ನ ಸೌಂದರ್ಯವನ್ನು ಕಾಪಾಡಿಕೊಂಡಿದೆ. ವಿಭಜಿತ ಆಂಧ್ರದ ವಿಶಾಖಪಟ್ಟಣದಲ್ಲಿ ಬೀಚ್ ರೋಡಿನ ಮೇಲೆ ಹೀಗೇ ಪುತ್ಥಳಿಗಳನ್ನು ಸ್ಥಾಪಿಸಿದ್ದಾರೆ. ಅವು ಒಂದೊಂದೂ ಒಂದೊಂದು ಅಳತೆಯಲ್ಲಿ, ಕೆಲವು ನಿಂತು, ಕೆಲವು ಕುಳಿತು, ಕೆಲವು ಇಡೀ ದೇಹದೊಂದಿಗೆ, ಕೆಲವು ಎದೆಮಟ್ಟದಲ್ಲಿ ಇರುವುದರಿಂದ ವಿಕಾರವಾಗಿ ಕಾಣಿಸುತ್ತವೆ. ಸಂಸ್ಕೃತಿಯನ್ನು ಹೇಗೆ ಸಂಭ್ರಮಿಸಬಹುದು ಮತ್ತು ಹೇಗೆ ಹದಗೆಡಿಸಬಹುದು ಎನ್ನುವುದಕ್ಕೆ ಹೈದರಾಬಾದ್, ವಿಶಾಖಪಟ್ಟಣದ ನಮೂನೆಗಳನ್ನು ನೋಡಬಹುದು.

ಬೆಂಗಳೂರನ್ನು ಸುಂದರವಾಗಿಸಲು ಬೇಕಾದದ್ದು ದೊಡ್ಡ ಬಜೆಟ್‌ನಲ್ಲಿ ನಿರ್ಮಿಸುವ ಭಾರಿ ಪ್ರತಿಮೆಗಳಲ್ಲ. ಬದಲಿಗೆ ಸರಿಯಾದ ಪರಿಮಾಣದ, ಸೌಂದರ್ಯ ಶಾಸ್ತ್ರಕ್ಕೆ ಹೊಂದುವ, ನಮ್ಮ ಸಾಹಿತ್ಯ, ಸಂಸ್ಕೃತಿಯನ್ನು ಸಂಭ್ರಮಿಸುವ, ಗೌರವಿಸುವ ಪ್ರತೀಕಗಳು. ಅವು ನಮ್ಮ ಕೈವಶ ಆಗಬಹುದೇ? ಯಾರಾದರೂ ದಕ್ಷಿಣ ಕೇಸರಿಯ ಸಿಂಹಗಳಿಗೇ ಒಂದು ಉದ್ಯಾನವನ್ನು ಮಾಡಿ ತೀನಂಶ್ರೀ ಅವರ ಪುತ್ಥಳಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸಬಹುದೇ? ಬೇಂದ್ರೆಯವರ ಮೇಲ್ಸೇತುವೆಯು ಆಭರಣ ವ್ಯಾಪಾರಮಯವಾಗದೇ ಬೇಂದ್ರೆಮಯ ಆಗಬಹುದೇ?- ಈ ಪ್ರಶ್ನೆಗಳನ್ನೂ ನಾವು ಕೇಳಬೇಕಾಗಿದೆ.

ಹೆಚ್ಚಿನ ಕವಿಗಳು ತಮ್ಮ ಬಡತನವನ್ನು ಸಂಭ್ರಮಿಸುತ್ತಲೇ ಗೌರವವನ್ನು ಕಾಪಾಡಿಕೊಳ್ಳುತ್ತ ಬದುಕನ್ನು ಸವೆಸಿದವರು. ಅವರ ಮರಣದ ನಂತರ ಆ ನೆನಪುಗಳನ್ನು ಮಾರಾಟ ಮಾಡದೇ, ಗೌಣಗೊಳಿಸದೇ ಇರುವುದು ಅಸಾಧ್ಯವೇ? ಏನಿಲ್ಲವೆಂದರೂ ಮೃತರನ್ನು ಅವರಪಾಡಿಗೆ ಬಿಟ್ಟುಬಿಟ್ಟರೂ ಸಾಕು. ಒಂದು ಸಿಂಹದ ಹಿಂಬದಿಯಲ್ಲಿ ಗೌಣವಾಗುವ ಪುತ್ಥಳಿಯಾಗಿಸಿಕೊಳ್ಳುವ ಕರ್ಮ ಯಾರಿಗೂ ಬರದಿರಲಿ.

ಚುರುಮುರಿ



ಪದ್ದಮ್ಮಳ ಪ್ರಶ್ನೆ

• ಎಲ್.ಎನ್.ಪ್ರಸಾದ್

'ರೀ, ಈ ಶೃಂಗಸಭೇಲಿ ಏನೇನ್ ಚರ್ಚೆ ಮಾಡ್ತಾರೆ?' ಪದ್ದಮ್ಮ ಪೇಪರ್ ಹಿಡಿದು ಕೇಳಿದರು.

'ಒಪ್ಪತ್ತು ಊಟ ಇಲ್ದಿರೋ ದೇಶಗಳ ಬಗ್ಗೆ ತಿಂದು ಕರಗದಷ್ಟಿರೋ ಇಪ್ಪತ್ತು ದೇಶಗಳು ಚರ್ಚೆ ಮಾಡ್ತಾವೆ' ಎಂದ ಪರ್ಮೇಶಿ.

'ಆಮೇಲೆ?'

'ಅರ್ಧ ಪ್ರಪಂಚವೇ ಚೀನಾ ಸಾಲಕ್ಕೆ ದಿವಾಳಿ ಆಗಿದ್ರೂ ಆರ್ಥಿಕ ಪರಿಸ್ಥಿತಿ ರೂಪಿಸ್ಕೊಳ್ಳೋ ಬಗ್ಗೆ ಚರ್ಚಿಸೋದು. ಆಮೇಲೆ ಜಾಗತಿಕ ತಾಪಮಾನ, ಭೂಮಿ ಬಿಸಿ ತಗ್ಗಿಸೋದ್ರ ಬಗ್ಗೆ ಚರ್ಚಿಸೋದು'.

'ಅಲ್ರೀ, ಇವನ್ನೆಲ್ಲಾ ಬರೀ ಗಂಡಸರು ಕೂತ್ಕೊಂಡು ಪರಿಣಾಮಕಾರಿಯಾಗಿ ಜಾರಿಗೆ ತರಕ್ಕಾಗುತ್ತಾ? ಹೆಣ್ಣು ಮಕ್ಕಳಿಗೆ ಇರೋ ಅನುಭವ ಇವರಿಗೆಲ್ಲ ಎಲ್ಲಿಂದ ಬರ್ಬೇಕು?'

'ಇದೇನೇ ಜಾಗತಿಕ ನಾಯಕರನ್ನೆಲ್ಲಾ ಹೀಗೆ ಕಂಡೆಮ್ ಮಾಡ್ತಿದೀಯ?'

'ಕಂಡೆಮ್ ಅಲ್ಲರೀ, ಇವೆಲ್ಲಾ ಮ್ಯಾನೇಜ್ ಮಾಡೋದೇ ಹೆಣ್ಣು ಮಕ್ಕಳು. ಮನೇಲಿ ಊಟ ಹಾಕೋ ನಾವೇ ಅನ್ನಪೂರ್ಣೇಶ್ವರಿಯರು. ಎಲ್ಲ ಸಂಬಂಧಗಳೂ ನೆಟ್ಟಗಿರಬೇಕು ಅಂದ್ರೆ ಮೊದ್ಲು ನಾವು ನೆಟ್ಟಗಿರಬೇಕು. ನಾವು ಚಿನ್ನ, ಪ್ಲಾಟಿನಂ ಹಾಕ್ಕೊಂಡಿದ್ರೆ ತಾನೇ ಮನೆ ಆರ್ಥಿಕವಾಗಿ ಗಟ್ಟಿಯಾಗಿರೋದು? ಮನೇಲಿ ಬಿಸಿ ಗಾಳಿ ಇಲ್ಲ ಅಂದ್ರೆ ಊರು, ದೇಶ, ಪ್ರಪಂಚದಲ್ಲೂ ಬಿಸಿ ಗಾಳಿ ಕಮ್ಮಿಯಾಗುತ್ತೆ. ಹೀಗೆ ಒಂದೊಂದು ಮನೇಲೂ ಗಂಡಸರು ಹೆಂಡ್ತೀರ ಜೊತೆ ಒಡಂಬಡಿಕೆ ಮಾಡ್ಕೊಂಡ್ರೆ ಯಾವ ಸಮಸ್ಯೆನೂ ಇರೋದಿಲ್ಲ'.

'ಹಾಗಾದ್ರೆ ಈ ಶೃಂಗಸಭೆ ಪ್ರಯೋಜನಕ್ಕಿಲ್ಲ ಅಂತೀಯಾ?'

'20 ಜನಕ್ಕೆ ಇಟಲಿಯೋರು, ಯೂರೋಪಿಯನ್ ಯೂನಿಯನ್ನೋರು ಇಬ್ರೇ ಮಹಿಳೆಯರು ಇರೋದು, ಇದು ನ್ಯಾಯನಾ? ಮಹಿಳೆಯರಿಗೆ ಅರ್ಧದಷ್ಟು ಪ್ರಾತಿನಿಧ್ಯ ಇರಬೇಕಲ್ವಾ?'

'ಈಗ ಇಲ್ವಲ್ಲ, ಅದಕ್ಕೇನು ಮಾಡೋದು?'

'ಕನಿಷ್ಠ ಅವರ ಹೆಂಡ್ತೀರನ್ನಾದರೂ ಕೂರಿಸಿ ಒಂದು ಸಮಾನಾಂತರ ಸಭೆ ಮಾಡ್ಬೇಕಲ್ವಾ?'

'ಅಯ್ಯೋ ಅದು ಆವಾಗ ಶೃಂಗಸಭೆ ಆಗಲ್ವೇ, ಮನೆವಾರ್ತೆ ಸಭೆ ಆಗುತ್ತೆ' ಎಂದು ತಲೆಚಚ್ಚಿಕೊಂಡ ಪರ್ಮೇಶಿ.

ಸಂಗತ

ಶೌಚ ವ್ಯವಸ್ಥೆ: ಮುಗಿಯದ ಸವಾಲು

ಮಾನವತ್ಯಾಜ್ಯದ ಅವೈಜ್ಞಾನಿಕ ವಿಲೇವಾರಿಯಿಂದ ನೆಲದಡಿಯ ನೀರು ಕಲುಷಿತಗೊಂಡಿದ್ದು ಸಮಸ್ಯೆ ಗಂಭೀರ ಸ್ವರೂಪ ತಾಳುತ್ತಿದೆ

• ಗುರುರಾಜ್ ಎಸ್. ದಾವಣಗೆರೆ

ಶಾಲೆಯೊಂದರ ವಿಜ್ಞಾನ ಚರ್ಚಾ ಸ್ಪರ್ಧೆಯ ಉದ್ಘಾಟನೆಗೆಂದು ಬೆಂಗಳೂರಿನ ಉತ್ತರ ಭಾಗದ ಹಳ್ಳಿಯೊಂದಕ್ಕೆ ಹೋದಾಗ, ಶಾಲೆಯ ಆವರಣ ಪ್ರವೇಶಿಸುತ್ತಿದ್ದಂತೆಯೇ ಶೌಚ ಗುಂಡಿಯ ವಾಸನೆ ರಪ್ಪೆಂದು ಮೂಗಿಗೆ ರಾಚಿತು. 'ಏನಿದು ವಾಸನೆ?' ಎಂದು ಮುಖ್ಯ ಶಿಕ್ಷಕರನ್ನು ಕೇಳಿದಾಗ 'ಸರ್, ಶಾಲೆಯಲ್ಲೇನೂ ಸಮಸ್ಯೆ ಇಲ್ಲ. ಇಲ್ಲೇ ಪಕ್ಕದಲ್ಲಿ ಸಾಮೂಹಿಕ ಶೌಚಾಲಯ ಕಟ್ಟಿದ್ದಾರೆ, ಅಲ್ಲಿ ನೀರಿನ ವ್ಯವಸ್ಥೆ ಇಲ್ಲ, ಅದಕ್ಕೇ ಈ ವಾಸನೆ, ಗಾಳಿ ಬಂದಾಗ ಮಾತ್ರ ವಾಸನೆ ಬರುತ್ತೆ, ಇಲ್ಲದಿದ್ರೆ ಇಲ್ಲ' ಎಂದರು. 'ಶಾಲೆಯ ಶೌಚಾಲಯಕ್ಕೆ ನೀರಿನ ವ್ಯವಸ್ಥೆ ಎಲ್ಲಿಂದ' ಎಂದದ್ದಕ್ಕೆ, ಎದುರಿಗೇ ಇದ್ದ ಬೋರ್‌ವೆಲ್ ಕಡೆ ಕೈ ತೋರಿಸಿದರು. 'ಅದರಲ್ಲಿ ನೀರು ಇದೆಯಾ' ಎಂದು ಕೇಳಿದ್ದಕ್ಕೆ, 'ಇದೆ, ಆದ್ರೆ ಕುಡಿಯಲು ಚೆನ್ನಾಗಿಲ್ಲ, ಶೌಚಾಲಯಗಳಿಗೆ ಬಳಸುತ್ತೇವೆ' ಎಂದರು.


ಸಮಸ್ಯೆ ಇರುವುದೇ ಇಲ್ಲಿ. ಅಸಮರ್ಪಕ ಶೌಚ ನೈರ್ಮಲ್ಯ ವ್ಯವಸ್ಥೆಯಿಂದಾಗಿ ಅಂತರ್ಜಲ ಕಲುಷಿತಗೊಳ್ಳುತ್ತಿರುವುದು ವಿಶ್ವದಾದ್ಯಂತ ವರದಿಯಾಗಿದೆ. ಮಾನವತ್ಯಾಜ್ಯದ ಅವೈಜ್ಞಾನಿಕ ವಿಲೇವಾರಿಯಿಂದ ನೆಲದಡಿಯ ನೀರು ಕಲುಷಿತಗೊಂಡಿದ್ದು ಸಮಸ್ಯೆ ಗಂಭೀರ ಸ್ವರೂಪ ತಾಳುತ್ತಿದೆ.

ವಿಶ್ವದ ಜನಸಂಖ್ಯೆ 800 ಕೋಟಿ ತಲುಪಿದೆ ಎಂಬ ಸುದ್ದಿ ಹೊರಬಿದ್ದ ಬೆನ್ನಲ್ಲೇ 360 ಕೋಟಿ ಜನರಿಗೆ ಸುರಕ್ಷಿತ ಶೌಚ ನೈರ್ಮಲ್ಯ ವ್ಯವಸ್ಥೆ ಇಲ್ಲ ಎಂಬ ವರದಿಯು ಆಳುವ ಸರ್ಕಾರಗಳನ್ನು ಹೈರಾಣ ಮಾಡಿಹಾಕಿದೆ. ಈ ನಡುವೆ ಮತ್ತೊಂದು ವಿಶ್ವ ಶೌಚಾಲಯ ದಿನಾಚರಣೆ (ನ. 19) ಬಂದಿದೆ. ಮನುಷ್ಯ ತ್ಯಾಜ್ಯದಿಂದ ಆಗುತ್ತಿರುವ ಅಂತರ್ಜಲ ಮಾಲಿನ್ಯ ಬರಿಗಣ್ಣಿಗೆ ಕಾಣಿಸುವುದಿಲ್ಲ, ಅದು ಹೇಗೆ ಅಲ್ಲಿಗೆ ಸೇರುತ್ತಿದೆ ಮತ್ತು ಕಲುಷಿತಗೊಳಿಸುತ್ತಿದೆ ಎಂಬುದನ್ನು ಎತ್ತಿ ತೋರಿಸುವುದೇ ದಿನಾಚರಣೆಯ ಮುಖ್ಯ ಉದ್ದೇಶ. ಆದ್ದರಿಂದ ಈ ಬಾರಿಯ 'ವರ್ಲ್ಡ್ ಟಾಯ್ಲೆಟ್ ಡೇ' ಅಭಿಯಾನದ ಧ್ಯೇಯವಾಕ್ಯ 'ಮೇಕಿಂಗ್ ದ ಇನ್‌ವಿಸಿಬಲ್, ವಿಸಿಬಲ್'.

ಒಂಬತ್ತು ವರ್ಷಗಳಿಂದ ವಿಶ್ವ ಶೌಚಾಲಯ ದಿನಾಚರಣೆ ನಡೆಯುತ್ತಿದೆ. ಮನುಷ್ಯನ ಆರೋಗ್ಯ ಸೂಚಕ ಅಂಶಗಳಲ್ಲಿ ಸರಿಯಾದ ನೈರ್ಮಲ್ಯ ವ್ಯವಸ್ಥೆಯೂ ಒಂದು ಎಂದು ಹೇಳುವ 6ನೆಯ ಸುಸ್ಥಿರ ಅಭಿವೃದ್ಧಿ ಗುರಿಯು, ಸುರಕ್ಷಿತ ಶೌಚಾಲಯ ನೈರ್ಮಲ್ಯ ವ್ಯವಸ್ಥೆಯ ಅಗತ್ಯವನ್ನು ವಿಶ್ವಮಟ್ಟದ ಎಲ್ಲ ವೇದಿಕೆಗಳಲ್ಲೂ 7 ವರ್ಷಗಳಿಂದ ಪುನರುಚ್ಚರಿಸುತ್ತಾ ಬಂದಿದೆ. 2030ರ ವೇಳೆಗೆ ಶೌಚಾಲಯಗಳಿಂದ ನೀರಿನ ಮೂಲಗಳ ಮಾಲಿನ್ಯವನ್ನು ಸಂಪೂರ್ಣ ತಡೆಯಬೇಕಿದೆ.

ಸರ್ವರಿಗೂ ಸಮರ್ಪಕ ಶೌಚಾಲಯ- ನೈರ್ಮಲ್ಯ ವ್ಯವಸ್ಥೆ ಕಲ್ಪಿಸಲು ಇನ್ನು ಎಂಟೇ ವರ್ಷ ಬಾಕಿ ಇದೆ. ಡಿಸೆಂಬರ್ 7- 8ರಂದು ಪ್ಯಾರಿಸ್‌ನಲ್ಲಿ ನಡೆಯಲಿರುವ ವಿಶ್ವಸಂಸ್ಥೆಯ ಶೃಂಗಸಭೆಯಲ್ಲಿ ಶೌಚ ನೈರ್ಮಲ್ಯ ವ್ಯವಸ್ಥೆಯಿಂದ ಅಂತರ್ಜಲ ರಕ್ಷಿಸುವ ಕುರಿತು ಮುಖ್ಯ ಚರ್ಚೆ ನಡೆಯಲಿದೆ.

ವಿಶ್ವದ ಶುದ್ಧ ನೀರಿನ ಅತಿದೊಡ್ಡ ಮೂಲ, ಅಂತರ್ಜಲ. ಕುಡಿಯಲು, ವ್ಯವಸಾಯ, ಉದ್ಯಮ, ಗೃಹ ಬಳಕೆಗೆ ಅವ್ಯಾಹತವಾಗಿ ಇದು ಬಳಕೆಯಾದರೂ ಬರಿದಾಗದ ಅಕ್ಷಯ ಪಾತ್ರೆಯಂತೆ ಕೊಡುತ್ತಲೇ ಇದೆ. ಒಂದು ದಿನ ಇದೂ ಮುಗಿದು ಹೋಗುತ್ತದೆ. ಜನಸಂಖ್ಯೆ ಹೆಚ್ಚಿ, ಬೇಡಿಕೆ ಮಿತಿಮೀರಿದರೆ ಮನುಕುಲದ ಉಳಿವಿಗೆ ಇರುವುದು ಅಂತರ್ಜಲವೊಂದೇ ಎಂಬುದು ತಜ್ಞರ ಮಾತು. ಏಕೆಂದರೆ ಭೂಮಿಯ ಮೇಲಿನ ಬಹುಪಾಲು ನೀರಿನ ತಾಣಗಳು ಈಗಾಗಲೇ ಮಿತಿಮೀರಿ ಮಲಿನಗೊಂಡಿವೆ. ವಿಶ್ವದಾದ್ಯಂತ ಇಂದಿಗೂ 67 ಕೋಟಿ ಜನ ಬಯಲು ಶೌಚಾಲಯವನ್ನೇ ಅವಲಂಬಿಸಿದ್ದಾರೆ. ನಮ್ಮಲ್ಲಿ 30 ಕೋಟಿ ಮಹಿಳೆಯರಿಗೆ ಸಮರ್ಪಕ ಶೌಚಾಲಯ, ಸ್ನಾನದ ಮನೆಯ ವ್ಯವಸ್ಥೆ ಇಲ್ಲ.



ಎರಡು ವರ್ಷಗಳ ಹಿಂದೆ ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯ ವರದಿ ಪ್ರಕಟವಾದಾಗ, ನೈರ್ಮಲ್ಯ ವ್ಯವಸ್ಥೆ ಕಲ್ಪಿಸುವ ಗುರಿಯ ದಾರಿಯಲ್ಲೇ ನಾವಿಲ್ಲ ಎಂದಿದ್ದ ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಆ್ಯಂಟೋನಿಯೊ ಗುಟೆರಸ್, ಗುರಿ ಸಾಧನೆಗೆ ಘೋಷಣೆಯಷ್ಟೇ ಸಾಲದು, ನೈಜ ಕಾಳಜಿ ಇರಬೇಕು ಎಂದಿದ್ದರು. ವಿಶ್ವ ಶೌಚಾಲಯ ದಿನದ ಆಚರಣೆಯ ಜವಾಬ್ದಾರಿ ಹೊತ್ತಿರುವ ವಿಶ್ವಸಂಸ್ಥೆಯ ನೀರಿನ ವಿಭಾಗವು ಸಾರ್ವಜನಿಕ ಆರೋಗ್ಯ, ಆತ್ಮಗೌರವ ಮತ್ತು ವೈಯಕ್ತಿಕ ಸುರಕ್ಷೆ ಕಡೆ ಎಲ್ಲರೂ ದುಡಿಯಬೇಕು ಮತ್ತು ಜನರನ್ನು ಕಾಯಿಲೆಗೀಡು ಮಾಡುವ ಮಾನವತ್ಯಾಜ್ಯವು ನೀರು, ಮಣ್ಣಿಗೆ ಸೇರದಂತೆ ತಡೆಯಲು ಎಲ್ಲರೂ ಶ್ರಮಿಸಬೇಕು ಎಂದಿದೆ.

ನಮ್ಮಲ್ಲಿ 2014ರ ಅಕ್ಟೋಬರ್ 2ರಂದು ಸ್ವಚ್ಛ ಭಾರತ ಮಿಷನ್ ಜಾರಿಗೆ ಬಂದಿತು. ಹತ್ತು ಕೋಟಿ ಗ್ರಾಮೀಣ ಶೌಚಾಲಯ ನಿರ್ಮಾಣದ ಗುರಿ ಅದಕ್ಕಿತ್ತು. ಐದು ವರ್ಷಗಳ ನಂತರ ಗಾಂಧೀಜಿಯ 150ನೇ ಜನ್ಮದಿನದಂದು ನಮ್ಮ ದೇಶ 'ಬಹಿರ್ದೆಸೆ ಮುಕ್ತ' ಎಂದು ಘೋಷಿಸಲಾಗಿತ್ತು. ಈಗ ಜಲ ಜೀವನ್ ಮಿಷನ್ ಅಭಿಯಾನದಡಿ 10 ಕೋಟಿ ಗ್ರಾಮೀಣ ಮನೆಗಳಿಗೆ ನಲ್ಲಿ ಸಂಪರ್ಕ ಕಲ್ಪಿಸಲಾಗಿದೆ. ಬಾಕಿ ಇರುವ ಕೆಲಸ ಮುಗಿಸಲು ಎರಡನೇ ಹಂತದ ಯೋಜನೆ ಪ್ರಾರಂಭವಾಗಿದೆ.

ವಾಚಕರ ವಾಣಿ

ಸಮೀಕರಣದ ಅಪಮೌಲ್ಯ ಸಲ್ಲ

'ರಾಜ್ಯದಲ್ಲಿರುವ ಪ್ರತಿಮೆಗಳ ಪೈಕಿ ನನ್ನ ಮುತ್ತಾತ ಕಿಟೆಲ್ ಅವರ ಪ್ರತಿಮೆಗಳ ಕೈಯಲ್ಲಿ ಮಾತ್ರ ಪುಸ್ತಕ ನೋಡಿದೆ, ಉಳಿದಂತೆ ಪ್ರತಿಮಾರೂಪದ ರಾಜರ ಕೈಯಲ್ಲಿ ಕತ್ತಿ ರಾರಾಜಿಸುತ್ತಿರುತ್ತದೆ' ಎಂದು ರೆವರೆಂಡ್ ಫರ್ಡಿನಾಂಡ್ ಕಿಟೆಲ್ ಅವರ ಮರಿ ಮೊಮ್ಮಗ ಇತ್ತೀಚೆಗೆ ಬೆಂಗಳೂರಿನಲ್ಲಿ ಹೇಳಿರುವುದನ್ನು ವೈ.ಗ.ಜಗದೀಶ್ ತಮ್ಮ ಲೇಖನದಲ್ಲಿ (ಪ್ರ.ವಾ., ನ. 16). ಪ್ರಸ್ತಾಪಿಸಿದ್ದಾರೆ. ಆದರೆ ರಾಜರ ಕೈಯಲ್ಲಿ ಖಡ್ಗ ಹಿಡಿದ ಭಂಗಿಯ ಪ್ರತಿಮೆಗಳೇ ಏಕೆ ಸಿಗುತ್ತವೆ ಎಂಬುದಕ್ಕೆ ಅವರು ಸ್ವಲ್ಪ ಅರ್ಥ ವಿವರಣೆ ನೀಡಿದ್ದರೆ ಒಳ್ಳೆಯದಿತ್ತು.

ಕ್ಷಾತ್ರ ಸಂಪ್ರದಾಯದ ಪ್ರಕಾರ ಖಡ್ಗವು ಶೂರತ್ವದ ಸಂಕೇತ. ಕ್ಷತ್ರಿಯರಿಗೆ ಮದುವೆ ಮಾಡುವಾಗಲೂ ಕತ್ತಿಯನ್ನು ಸೊಂಟಕ್ಕೆ ಸಿಕ್ಕಿಸಿರುತ್ತಾರೆ. 'ಸಾಮ್ರಾಜ್ಯದ ರಕ್ಷಣೆ, ಶತ್ರು ಸಂಹಾರ, ಸಂಸ್ಕೃತಿಯ ಉಳಿವು ನಿನ್ನ ಪ್ರಥಮ ಆದ್ಯತೆ ಆಗಬೇಕು. ಹೆಂಡತಿ ಜೊತೆಗಿರುವಾಗಲೂ ಸುಖ ಲೋಲುಪತೆಯಲ್ಲಿ ರಾಜನಾದವ ಮೈ ಮರೆಯಬಾರದು' ಎಂಬುದು ಆ ಸಂಪ್ರದಾಯದ ಹಿಂದಿರುವ ನೀತಿ. ಈ ರೀತಿಯ ವಸ್ತುನಿಷ್ಠ ವಿಶ್ಲೇಷಣೆ ಇದ್ದಾಗ ಕತ್ತಿ ಹಾಗೂ ಲೇಖನಿ ಸಮತೂಕ ಪಡೆಯುತ್ತವೆ. ಸಮೀಕರಣದ ಅಪಮೌಲ್ಯ ಆಗುವುದಿಲ್ಲ.

ಆರ್.ವೆಂಕಟರಾಜು, ಬೆಂಗಳೂರು

ಚುನಾವಣಾ ಕಾರ್ಯ: ಒತ್ತಡ ತಪ್ಪಲಿ

ಮತದಾರರ ಪಟ್ಟಿ ಪರಿಷ್ಕರಣೆ ಕಾರ್ಯಕ್ಕೆ ಶಾಲಾ ಶಿಕ್ಷಕರು, ಆಶಾ, ಅಂಗನವಾಡಿ ಕಾರ್ಯಕರ್ತೆಯರ ಬದಲಿಗೆ ಚುನಾವಣಾ ಆಯೋಗವು ಶಾಶ್ವತ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳಬೇಕು ಎಂಬ ಶೋಭಾ ಎಸ್.ವಿ. ಅವರ ಆಶಯ (ವಾ.ವಾ., ನ. 18) ಬಹುತೇಕರದ್ದಾಗಿದೆ. ಈ ಕಾರ್ಯಕ್ಕೆ ಅತಿ ಹೆಚ್ಚು ಸಂಖ್ಯೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರೇ ನೇಮಕವಾಗಿದ್ದು, ಮಾತೃ ಇಲಾಖೆಯ ಕರ್ತವ್ಯ ಹಾಗೂ ಮತಗಟ್ಟೆ ಅಧಿಕಾರಿ ಕರ್ತವ್ಯದ ನಡುವೆ ಅವರು ತೀವ್ರ ಮಾನಸಿಕ ಒತ್ತಡಕ್ಕೆ ಗುರಿಯಾಗುತ್ತಿದ್ದಾರೆ.

ವರ್ಷಕ್ಕೆ ನಾಲ್ಕು ತಿಂಗಳುಗಳ ಕಾಲ ಮತದಾರರ ಪಟ್ಟಿಯ ಪರಿಷ್ಕರಣೆ ಕಾರ್ಯ ನಡೆಯುತ್ತದೆ. ಗುಣಮಟ್ಟದ ಶಿಕ್ಷಣ ಮತ್ತು ದೋಷಮುಕ್ತ ಮತದಾರರ ಪಟ್ಟಿಯ ನಿರ್ವಹಣೆಯನ್ನು ಏಕಕಾಲದಲ್ಲಿ ಶಿಕ್ಷಕರು ಹೇಗೆ ನಿಭಾಯಿಸಲು ಸಾಧ್ಯ? ಈಗಂತೂ ಶಿಕ್ಷಣ ಇಲಾಖೆಯ ತಾಲ್ಲೂಕು ಮತ್ತು ಜಿಲ್ಲಾ ಹಂತದ ಅಧಿಕಾರಿಗಳವರೆಗೂ ಈ ಕೆಲಸದ ಒತ್ತಡ ವಿಸ್ತರಿಸಿದೆ. ಕೆಲವು ಶಾಲೆಗಳಲ್ಲಿ ಶಿಕ್ಷಕರು ಮತ್ತು ಮುಖ್ಯಸ್ಥರ ನಡುವಿನ ಮನಸ್ತಾಪಕ್ಕೂ ಕಾರಣವಾಗಿ ಆ ಮೂಲಕ ಮಕ್ಕಳ ಕಲಿಕೆಯ ಮೇಲೆ ನೇರ ಪರಿಣಾಮ ಬೀರಿದೆ. ಆಯೋಗವು ಈ ಸಮಸ್ಯೆಗೆ ಪರಿಹಾರ ಕಲ್ಪಿಸಲಿ. ಇದರೊಂದಿಗೆ ಕಲಿಕಾ ಪ್ರಕ್ರಿಯೆಯ ಮೇಲಿನ ಒತ್ತಡ ಕೊನೆಯಾಗಲಿ.

ಮೆಹಬೂಬ್ ಮಠದ, ಕೊಪ್ಪಳ

ನಿಲ್ದಾಣ ವಿವಾದ: ಉದಾಸೀನವೇ ಮದ್ದು

ಮೈಸೂರಿನ ಗುಂಬಜ್ ಮಾದರಿಯ ಬಸ್ ನಿಲ್ದಾಣದ ವಿನ್ಯಾಸಕ್ಕೆ ಸಂಬಂಧಿಸಿದ ವಿವಾದ ಇತ್ಯರ್ಥಕ್ಕೆ ತಜ್ಞರನ್ನು ಕಳುಹಿಸಿ ವರದಿ ತರಿಸಿಕೊಂಡು ಸಮಸ್ಯೆ ಬಗೆಹರಿಸುವುದಾಗಿ ಮುಖ್ಯಮಂತ್ರಿ ಹೇಳಿದ್ದಾರೆ! ಇದು ಎಷ್ಟೊಂದು ಹಾಸ್ಯಾಸ್ಪದ! ತಜ್ಞರಿಂದ ವರದಿ ತರಿಸಿಕೊಳ್ಳುವಷ್ಟು ದೊಡ್ಡ ಸಮಸ್ಯೆಯೇ ಅದು?

ಬಸ್‌ಗಳಿಗಾಗಿ ಕಾಯುವ ಜನರಿಗೆ ಮಳೆ, ಬಿಸಿಲಿನಿಂದ ರಕ್ಷಣೆ ನೀಡುವ ಸಲುವಾಗಿ ನಿಲ್ದಾಣಗಳನ್ನು ನಿರ್ಮಿಸಲಾಗುತ್ತದೆ. ಹೀಗಿರುವಾಗ ಜನರ ತೆರಿಗೆ ಹಣವನ್ನು ಬೇಕಾಬಿಟ್ಟಿ ಖರ್ಚು ಮಾಡಿ ಅದನ್ನು ಸಿಂಗಾರ ಮಾಡುವಂತಹದ್ದು ಏನೂ ಇಲ್ಲ. ಸಂಸದರು ಮತ್ತು ಶಾಸಕರು ಒಂದೇ ಪಕ್ಷದವರಾಗಿದ್ದು, ಚುನಾವಣಾ ಸಮಯವಾದ್ದರಿಂದ ಪ್ರಚಾರ ಗಿಟ್ಟಿಸಿಕೊಳ್ಳುವ ಪ್ರಯತ್ನ ಇದಾಗಿದೆ. ಸಾರ್ವಜನಿಕರು ಈ ಬಗ್ಗೆ ತಲೆ ಕೆಡಿಸಿಕೊಳ್ಳದೆ ತಮ್ಮ ಪಾಡಿಗೆ ತಾವಿದ್ದರೆ ಇದರ ಗಾಳಿಯು ಮೈಸೂರು ಬಿಟ್ಟು ಹೊರಗೆ ಬರುವುದಿಲ್ಲ.

ರಾಜು ಬಿ. ಲಕ್ಕಂಪುರ, ಜಗಳೂರು

ನೌಕರರಿಂದ ಧನಸಂಗ್ರಹ: ಶಾಶ್ವತ ಪರಿಹಾರವೇ?

'ಗೋಶಾಲೆಯಲ್ಲಿ ಹಸುಗಳನ್ನು ಪೋಷಿಸುವ ಸರ್ಕಾರದ ಮಹತ್ವಾಕಾಂಕ್ಷಿ 'ಪುಣ್ಯಕೋಟಿ ದತ್ತು ಯೋಜನೆ'ಗೆ ನೌಕರರ ವೇತನದಿಂದ ದೇಣಿಗೆ ಕಡಿತಗೊಳಿಸಲು ರಾಜ್ಯ ಸರ್ಕಾರ ಮುಂದಾಗಿರುವುದು ಮೇಲ್ನೋಟಕ್ಕೆ ಪುಣ್ಯ ಕಾರ್ಯದಂತೆ ಕಂಡರೂ ವಾಸ್ತವದಲ್ಲಿ ನ್ಯಾಯಸಮ್ಮತವಾದುದಲ್ಲ. ಏಕೆಂದರೆ ಇದು ಸರ್ಕಾರದ ಸ್ವಯಂಕೃತಾಪರಾಧ. ಅಂದರೆ ಇಂದು ಉದ್ಭವಿಸಿರುವ ಗೋವುಗಳ ಸಮಸ್ಯೆಯು ಸರ್ಕಾರ ಜಾರಿಗೊಳಿಸಿದ 'ಗೋಹತ್ಯಾ ನಿಷೇಧ' ಕಾಯ್ದೆಯ ಪರಿಣಾಮವೇ ಆಗಿದೆ. ಮೊದಲು ರೈತರೇ ಗೋವುಗಳನ್ನು ಕೃಷಿ ಕೆಲಸಗಳಿಗಾಗಿ ಮತ್ತು ಹೈನುಗಾರಿಕೆ ಉದ್ದೇಶದಿಂದ ಸಾಕಿಕೊಳ್ಳುತ್ತಿದ್ದರು. ವಯಸ್ಸಾದ ದನಗಳನ್ನು, ಹಾಲು ಕೊಡದ ಹಸುಗಳನ್ನು ಮಾರಿಬಿಡುತ್ತಿದ್ದರು. ಹೀಗಾಗಿ ಪಶುಪಾಲನೆ ಒಂದು ಸಮಸ್ಯೆಯೇ ಆಗಿರಲಿಲ್ಲ. ಆದರೆ ರಾಜಕೀಯ ಲಾಭದ ದೃಷ್ಟಿಯಿಂದ ಬಿಜೆಪಿ ನೇತೃತ್ವದ ಸರ್ಕಾರ ಗೋಹತ್ಯೆಯನ್ನು ನಿಷೇಧಿಸಿತು. ತತ್ಫಲವಾಗಿ ರೈತರು ತಮ್ಮ ಆರ್ಥಿಕ ದುಃಸ್ಥಿತಿಯ ಕಾರಣವಾಗಿ ರಾಸುಗಳನ್ನು ಮಾರಾಟ ಮಾಡಲೂ ಆಗದೆ, ಸಾಕಲೂ ಆಗದೆ ಬೀದಿಗೆ ಬಿಟ್ಟರು. ಅವು ರಾತ್ರಿಯ ವೇಳೆ ಹೊಲ, ಗದ್ದೆಗಳಿಗೆ ನುಗ್ಗಿ ಬೆಳೆಗಳನ್ನು ನಾಶ ಮಾಡತೊಡಗಿದವು. ಹಗಲುಹೊತ್ತು ಜನರು ಅವುಗಳನ್ನು ಓಡಿಸುತ್ತಿದ್ದರಾದ್ದರಿಂದ ತಮ್ಮ ಹೊಟ್ಟೆ ತುಂಬಿಸಿಕೊಳ್ಳಲು ರಾತ್ರಿ ಲಗ್ಗೆಯಿಡತೊಡಗಿದವು. ಕೆಲವು ಆಹಾರವಿಲ್ಲದೆ ಅಲ್ಲಲ್ಲೆ ಬಿದ್ದು ಸಾಯುತ್ತಿವೆ. ಮತ್ತೆ ಕೆಲವು ರೋಗರುಜಿನಗಳಿಗೆ ತುತ್ತಾಗಿ ಆರೈಕೆಯಿಲ್ಲದೆ ಪ್ರಾಣಬಿಡುತ್ತಿವೆ. ಪಟ್ಟಣ, ನಗರ ಪ್ರದೇಶಗಳಲ್ಲಿ ಅಪಘಾತಕ್ಕೆ ಒಳಗಾಗುತ್ತಿವೆ.

ಸರ್ಕಾರದ ಕೃಪಾಕಟಾಕ್ಷದಲ್ಲಿ ಕಾಟಾಚಾರಕ್ಕೆ ನಡೆಸುತ್ತಿದ್ದ, ದುರ್ಬಳಕೆ ಮಾಡಿಕೊಳ್ಳುತ್ತಿದ್ದ ಗೋಶಾಲೆಗಳಿಗೆ ಈಗ ಈ ದನಗಳನ್ನು ಪೋಷಿಸುವುದು ಸಾಧ್ಯವಾಗುತ್ತಿಲ್ಲ. ಇದಕ್ಕೆ ಪರಿಹಾರವಾಗಿ ನೌಕರರ ಜೇಬಿಗೆ ಕೈಹಾಕಿರುವುದು ಯಾವ ನ್ಯಾಯ? ಅಷ್ಟೇ ಅಲ್ಲ, ಇದು ಶಾಶ್ವತ ಪರಿಹಾರವಾದೀತೆ? ಈ ಧನಸಂಗ್ರಹದಿಂದ ಕೊಂಡ ಮೇವು ಖಾಲಿಯಾದ ಮೇಲೆ ಏನು ಮಾಡುವುದು? ಆಗ ಪುಣ್ಯಕೋಟಿ ತೆರಿಗೆ-ಸೆಸ್ ವಿಧಿಸಬೇಕಾಗುತ್ತದೆ! ಇದರ ಬದಲಿಗೆ ಗೋಹತ್ಯಾ ನಿಷೇಧ ಕಾನೂನನ್ನು ವಾಪಸ್ ಪಡೆದರೆ ಈ ಸಮಸ್ಯೆ ತನಗೆ ತಾನೇ ಪರಿಹಾರವಾಗುತ್ತದೆ. ದನದ ಮಾಂಸದ ರಫ್ತಿನಲ್ಲಿ ಈಗಾಗಲೇ ಜಗತ್ತಿನಲ್ಲಿ ಪ್ರಥಮ ಸ್ಥಾನದಲ್ಲಿರುವ ಭಾರತ ತನ್ನ ವರಮಾನವನ್ನೂ ಕಾಪಾಡಿಕೊಳ್ಳಬಹುದು.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿಶೇಷ ಉಪಕರಣ ಅಭಿವೃದ್ಧಿ: ಮೊಬೈಲ್‌ನಲ್ಲೇ ವಿವರ ಲಭ್ಯ

ನಾಲ್ಕು ಹನಿ ಹಾಲಿನಿಂದ ಕಾಯಿಲೆ ಪತ್ತೆ!


'ಫೌನ್‌ಟೆಕ್ ಸೊಲ್ಯೂಷನ್ಸ್' ವ್ಯವಸ್ಥಾಪಕ ಅಫರಿತ್ ಉಪಕರಣವನ್ನು ಪ್ರದರ್ಶಿಸಿದರು – ಪ್ರಜಾವಾಣಿ ಚಿತ್ರಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಸುಗಳಲ್ಲಿ ಕಾಣಿಸಿಕೊಳ್ಳುವ ಕೆಚ್ಚಲು ಬಾವು ಕಾಯಿಲೆಯನ್ನು ನಾಲ್ಕು ಹನಿ ಹಾಲಿನಿಂದ ಪತ್ತೆ ಮಾಡಬಹುದಾಗಿದೆ.

'ಫೌನ್‌ಟೆಕ್ ಸೊಲ್ಯೂಷನ್ಸ್' ನವೋದ್ಯಮವು ಕಾಯಿಲೆಗಳ ಪತ್ತೆಗೆ ವಿಶೇಷ ಉಪಕರಣವನ್ನು ಅಭಿವೃದ್ಧಿಪಡಿಸಿದೆ. ವೈದ್ಯರ ನೆರವು ಇಲ್ಲದೆಯೇ ಮೊಬೈಲ್‌ನಲ್ಲೇ ಕಾಯಿಲೆಯ ವಿವರಗಳನ್ನು ಪಡೆಯಬಹುದಾಗಿದೆ. ಈ ಕಾರ್ಯಕ್ಕೆ 'ಸೆಂಟರ್ ಫಾರ್ ಸೆಲ್ಯುಲಾರ್ ಆ್ಯಂಡ್ ಮಾಲೆಕ್ಯುಲಾರ್ ಪ್ಲಾಟ್‌ಫಾರ್ಮ್' (ಸಿ-ಸಿಎಎಂಪಿ) ನೆರವು ನೀಡಿದೆ.

'ಬೆಂಗಳೂರು ಟೆಕ್ ಸಮಿಟ್'ನಲ್ಲಿ ಈ ಉಪಕರಣವನ್ನು ಪ್ರದರ್ಶಿಸಲಾಗಿದೆ. ಇದು ಆ್ಯಪ್ ಆಧಾರಿತ ಉಪಕರಣವಾಗಿದೆ. ಬ್ಲೂಟೂಥ್ ಮೂಲಕ ಮೊಬೈಲ್ ಮತ್ತು ಉಪಕರಣಕ್ಕೆ ಸಂಪರ್ಕ ಪಡೆಯಬಹುದು. ಉಪಕರಣದಲ್ಲಿ ನಾಲ್ಕು ಹನಿ ಹಾಲು ಹಾಕಿದರೆ ಕೆಲವೇ ನಿಮಿಷಗಳಲ್ಲಿ ಕಾಯಿಲೆಯ ಬಗ್ಗೆ ವಿವರಗಳು ದೊರೆಯಲಿವೆ. ಇದು ಚಿಕ್ಕದಾಗಿರುವುದರಿಂದ ಸುಲಭವಾಗಿ ಎಲ್ಲೆಡೆ ಕೊಂಡೊಯ್ಯಬಹುದಾಗಿದೆ.

'ದೇಶದಲ್ಲಿ ಮೊದಲ ಬಾರಿ ಇಂತಹ ಉಪಕರಣವನ್ನು ಅಭಿವೃದ್ಧಿಪಡಿಸಲಾಗಿದೆ. ಇದರಿಂದ ಹಾಲಿನ ಗುಣಮಟ್ಟ ಕಾಪಾಡಲು ಸಹಕಾರಿಯಾಗಲಿದೆ. ಜತೆಗೆ, ರೈತರಿಗೂ ತಮ್ಮ ರಾಸುಗಳ ಆರೋಗ್ಯದ ಮೇಲೆ ನಿರಂತರವಾಗಿ ನಿಗಾವಹಿಸಲು ಅನುಕೂಲವಾಗಲಿದೆ. ಮೊಬೈಲ್ ಆ್ಯಪ್‌ನಲ್ಲಿ ರಾಸುಗಳಲ್ಲಿನ ಕಾಯಿಲೆ ವಿವರಗಳು ಲಭ್ಯವಾಗಲಿವೆ. ಸದ್ಯಕ್ಕೆ ಕೆಚ್ಚಲು ಬಾವು ಕಾಯಿಲೆ ಬಗ್ಗೆ ಸಂಶೋಧನೆ ಮಾಡಲಾಗಿದೆ. ಇತರ ಕಾಯಿಲೆಗಳು ಮತ್ತು ಜಾನುವಾರುಗಳ ಆರೋಗ್ಯ ಕಾಪಾಡುವ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆ' ಎಂದು ಫೌನ್‌ಟೆಕ್‌ನ ವ್ಯವಸ್ಥಾಪಕ ಅಫರಿತ್ ವಿವರಿಸಿದರು.

ಸುಲಭವಾಗಿ ಸರಕು ಸಾಗಿಸುವ ಯಂತ್ರ: ಕಚೇರಿಯಲ್ಲೇ ಕುಳಿತು ನೆಟ್‌ವರ್ಕ್ ಮೂಲಕ ಸರಕು ಸಾಗಿಸುವ ಯಂತ್ರವನ್ನು 'ಇನ್ನೊಮೈಂಡ್ಸ್' ಅಭಿವೃದ್ಧಿಪಡಿಸಿದೆ. ಇದು ಉಗ್ರಾಣಗಳಲ್ಲಿ ಹೆಚ್ಚು ಉಪಯುಕ್ತ ಎಂದು ಕಂಪನಿ ತಿಳಿಸಿದೆ.

ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್ಸಿ) ಸಹಯೋಗದಲ್ಲಿ ಈ ಯಂತ್ರವನ್ನು ಅಭಿವೃದ್ಧಿಪಡಿಸಲಾಗಿದೆ. ಇದು 100 ಕೆಜಿಯಷ್ಟು ಸರಕು ಸಾಗಿಸುವ ಸಾಮರ್ಥ್ಯವನ್ನು ಹೊಂದಿದೆ.

5 ವರ್ಷದಲ್ಲಿ ಬೆಂಗಳೂರು 'ಆರ್ಥಿಕ ರಾಜಧಾನಿ'

ಸರಸ್ವತಿಯ ನಗರಿಯಾಗಿದ್ದ ಬೆಂಗಳೂರು ಈಗ ಲಕ್ಷ್ಮಿಯ ನಗರಿ: ಬೊಮ್ಮಾಯಿ


ಬೆಂಗಳೂರು ಟೆಕ್ ಶೃಂಗಸಭೆ 2022ರ ಕೊನೆಯ ದಿನ ಭಾರಿ ಸಂಖ್ಯೆಯಲ್ಲಿ ಜನ ಭೇಟಿಕೊಟ್ಟರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಹಿಂದೆ ಮಹಾಸರಸ್ವತಿಯ (ಜ್ಞಾನದ) ನಗರಿಯಾಗಿತ್ತು, ಈಗ ಮಹಾಲಕ್ಷ್ಮಿಯ (ಆರ್ಥಿಕ) ನಗರಿಯಾಗಿದೆ. ಮುಂದಿನ 5 ವರ್ಷಗಳಲ್ಲಿ ದೇಶದ ಆರ್ಥಿಕ ರಾಜಧಾನಿಯಾಗಲಿದ್ದು, ಮುಂಬೈಯನ್ನು ಹಿಂದಿಕ್ಕಲಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಮೂರು ದಿನಗಳ ಬೆಂಗಳೂರು ಟೆಕ್ ಸಮಿಟ್ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ಬೆಂಗಳೂರಿನ ಯಶೋಗಾಥೆಗೆ ಈ ನಗರದಲ್ಲಿರುವ ಪ್ರತಿಯೊಬ್ಬ ಉದ್ಯಮಶೀಲ ವ್ಯಕ್ತಿಯ ಕೊಡುಗೆ ಇದೆ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿರುವವರು ಈ ಪರಿವರ್ತನೆಗೆ ಕಾರಣರಾಗಿದ್ದಾರೆ ಎಂದು ಶ್ಲಾಘಿಸಿದರು.

'ನಮ್ಮಲ್ಲಿ ತಯಾರಾಗುವ ಪ್ರತಿಯೊಂದು ಉತ್ಪನ್ನವೂ ಚಿನ್ನದ ಗುಣಮಟ್ಟವನ್ನು ಹೊಂದಿದೆ. ಇದರ ಹಿಂದೆ ಉದ್ಯಮಿಗಳು ಮತ್ತು ಕೌಶಲಯುತ ಸಿಬ್ಬಂದಿಯ ಶ್ರದ್ಧೆ ಮತ್ತು ಕಠಿಣ ಪರಿಶ್ರಮವಿದೆ. ಕರ್ನಾಟಕ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ನಂ1 ಸ್ಥಾನ ತಲುಪಲು ಕಠಿಣ ಪರಿಶ್ರಮ ಹಾಕಿದೆ. ಆ ಸ್ಥಾನವನ್ನು ಉಳಿಸಿಕೊಂಡು ಹೋಗಲು ಇನ್ನೂ ಹೆಚ್ಚಿನ ಕಠಿಣ ಪರಿಶ್ರಮ ಹಾಕಬೇಕು. ಈ ಪಟ್ಟವನ್ನು ಉಳಿಸಿಕೊಂಡು ಹೋಗುತ್ತೇವೆ' ಎಂದು ಬೊಮ್ಮಾಯಿ ತಿಳಿಸಿದರು.

'ಕರ್ನಾಟಕ ವಿದೇಶಿ ಬಂಡವಾಳ ಹೂಡಿಕೆ ಹಾಗೂ ನವೋದ್ಯಮಗಳಲ್ಲಿ ಉತ್ತಮ ಸ್ಥಾನದಲ್ಲಿದೆ. ಬೆಂಗಳೂರು ಬಿಟ್ಟು ರಾಜ್ಯದ ಇತರ ನಗರಗಳೂ ಅಭಿವೃದ್ಧಿಯಾಗಬೇಕು. ಕೃಷಿ, ತಂತ್ರಜ್ಞಾನ, ಆರ್ಥಿಕತೆ ಹೀಗೆ ಎಲ್ಲ ರಂಗಗಳಲ್ಲಿಯೂ ಕರ್ನಾಟಕ ಹಾಗೂ ಬೆಂಗಳೂರು ಅತ್ಯುತ್ತಮ ಶ್ರೇಯಾಂಕ ಹೊಂದಿದೆ. ಇದರಿಂದಾಗಿ ನಮ್ಮ ಜವಾಬ್ದಾರಿಯೂ ಹೆಚ್ಚಿದೆ' ಎಂದು ಹೇಳಿದರು.

'2047 ಕ್ಕೆ ಅಭಿವೃದ್ಧಿ ಹೊಂದಿದ ದೇಶದ ಗುರಿ'

'ನವೋದ್ಯಮ ಮತ್ತು ಇತರ ಉದ್ಯಮಗಳು ದೇಶದ ಆರ್ಥಿಕತೆಗೆ ಬೂಸ್ಟರ್ ಡೋಸ್ ಆಗಿ ಪರಿಣಮಿಸಿವೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದರು.

ಆರ್ಥಿಕ ಹಿಂಜರಿಕೆ ಮತ್ತು ಹಣದುಬ್ಬರವನ್ನು ನಿಯಂತ್ರಣಕ್ಕೆ ತರುವಲ್ಲಿ ಭಾರತ ಯಶಸ್ವಿಯಾಗಿದೆ. ವಿಶ್ವದ ಅಭಿವೃದ್ಧಿ ಹೊಂದಿದ ದೇಶಗಳೇ ಆರ್ಥಿಕವಾಗಿ ಏದುಸಿರು ಬಿಡುತ್ತಿರುವಾಗ ಭಾರತವು ಉತ್ತಮ ಸ್ಥಿತಿಯಲ್ಲಿದೆ ಎಂದು ಅವರು ವಿವರಿಸಿದರು.

ಯೂನಿಕಾರ್ನ್, ಡೆಕಾಕಾರ್ನ್‌ಗಳಿಗೆ ಪುರಸ್ಕಾರ

ಬೆಂಗಳೂರಿನಲ್ಲಿರುವ ಯೂನಿಕಾರ್ನ್ ನವೋದ್ಯಮಗಳಾದ ನೋ ಬ್ರೋಕರ್, ಅಮಗಿ ಮೀಡಿಯಾ ಲ್ಯಾಬ್ಸ್, ಓಪನ್ ಫೈನಾನ್ಶಿಯಲ್ ಟೆಕ್ನಾಲಜೀಸ್, ಲೀಡ್ ಸ್ಕ್ವೇರ್ಡ್, ಡೀಲ್ ಶೇರ್, ಅಕೋ ಜನರಲ್ ಇನ್ಶೂರೆನ್ಸ್, ಮೆನ್ಸಾ ಬ್ರಾಂಡ್ಸ್ ಮತ್ತು ಲೈವ್ ಸ್ಪೇಸ್ ಕಂಪನಿಗಳಿಗೆ ಯೂನಿಕಾರ್ನ್ ಪ್ರಶಸ್ತಿ, 10 ಶತಕೋಟಿ ಡಾಲರ್ ಮೌಲ್ಯದ ಡೆಕಾಕಾರ್ನ್ ಕಂಪನಿಗಳಾದ ಫ್ಲಿಪ್‌ಕಾರ್ಟ್, ಬೈಜೂಸ್ ಮತ್ತು ಸ್ವಿಗ್ಗಿ ಕಂಪನಿಗಳಿಗೂ ಪ್ರಶಸ್ತಿ ನೀಡಿ ಗೌರವಿಸಲಾಯಿತು.

'ತಂದೆಯೇ ನನ್ನ ಹೀರೊ'


ಸುನೀಲ್ ಶೆಟ್ಟಿ

ಬೆಂಗಳೂರು: 'ನನ್ನ ಮೊದಲ ಸಿನಿಮಾವನ್ನು ನೋಡಿ ವಿಮರ್ಶಕರು ಇವನು ಇಡ್ಲಿ– ವಡೆ ಮಾರಲು ಲಾಯಕ್ಕು, ಹೋಟೇಲ್‌ನಲ್ಲಿ ಕ್ಲೀನ್ ಮಾಡಲು ಹೋಗಬಹುದು ಎಂದೆಲ್ಲಾ ವ್ಯಂಗ್ಯವಾಗಿ ಬರೆದಿದ್ದರು. ಈ ಟೀಕೆಗಳಿಂದ ಬೇಸರಗೊಂಡಿದ್ದೆ. ಆದರೆ, ಆ ಸಿನಿಮಾ ಹಿಟ್ ಆಗಿತ್ತು. ಮುಂದೆ ಆ ಟೀಕೆಗಳನ್ನೇ ಯಶಸ್ಸಿನ ಮೆಟ್ಟಿಲಾಗಿಸಿಕೊಂಡೆ'.

ಬೆಂಗಳೂರು ಟೆಕ್ ಸಮಿಟ್‌ನಲ್ಲಿ ಈ ರೀತಿ ತಮ್ಮ ಸಿನಿಮಾ ಮತ್ತು ಉದ್ಯಮ ಕ್ಷೇತ್ರದ ಬೆಳವಣಿಗೆಯನ್ನು ವಿವರಿಸಿದ್ದು ಬಾಲಿವುಡ್‌ನ ನಟ ಸುನೀಲ್ ಶೆಟ್ಟಿ.

'ಸಿನಿಮಾದಲ್ಲಿ ನಟಿಸುವಾಗ ನನ್ನ ಪ್ಲಸ್ ಮತ್ತು ಮೈನಸ್ ಅಂಶಗಳು ಯಾವುದು ಎಂಬುದನ್ನು ಪರಾಮರ್ಶಿಸಿಕೊಳ್ಳುತ್ತಿದ್ದೆ. ಅವುಗಳನ್ನು ಸರಿಪಡಿಸಿಕೊಳ್ಳುತ್ತಿದ್ದೆ. ನನ್ನ ಯಾವುದೇ ಸಿನಿಮಾ ಸೋಲು ಕಂಡಾಗ ಮಾಧ್ಯಮಗಳು ಇವನ ಕಥೆ ಮುಗಿದು ಹೋಯಿತು ಎಂದು ಬರೆದು ಬಿಡುತ್ತಿದ್ದವು. ಆಗ ಅವರು ನನ್ನನ್ನು ನೋಡುವ ರೀತಿಯೇ ಬೇರೆ ಆಗಿರುತ್ತಿತ್ತು. ಆದರೆ, ನಂಬಿದ ದೇವರು ನನ್ನ ಕೈಬಿಡಲಿಲ್ಲ. ಮಾನಸಿಕವಾಗಿ ಕುಗ್ಗಲೂ ಇಲ್ಲ' ಎಂದರು.

'ನಾನು ಚಿಕ್ಕವನಿದ್ದಾಗ ನಮ್ಮ ತಂದೆ ಮೂಲ್ಕಿಯಿಂದ ಮುಂಬೈಗೆ ನಮ್ಮನ್ನೆಲ್ಲ ಕರೆದುಕೊಂಡು ಹೋದರು. ಆಗ ಬಡತನವಿತ್ತು. ಅವರು ಹೋಟೆಲ್‌ನಲ್ಲಿ ಟೇಬಲ್ ಕ್ಲೀನ್ ಮಾಡುವ ಕೆಲಸ ಮಾಡುತ್ತಿದ್ದರು. ಗೋಣಿ ಚೀಲವೇ ಅವರಿಗೆ ಹಾಸಿಗೆ ಮತ್ತು ಹೊದಿಕೆ ಆಗಿತ್ತು. ಈ ರೀತಿ ಹಲವು ಕಡೆ ಕಷ್ಟಪಟ್ಟು ಕೆಲಸ ಮಾಡಿ ನಮ್ಮನ್ನು ಬೆಳೆಸಿದರು. ಅವರು ಕೆಲಸ ಮಾಡಿದ ಹೋಟೆಲ್‌ಗಳನ್ನು ನಾನು ಖರೀದಿಸಿದೆ. ನನ್ನ ತಂದೆಯೇ ನನ್ನ ಪಾಲಿನ ಹೀರೊ' ಎಂದು ಅವರು ಹೇಳಿದರು.

'ನನಗೆ ನನ್ನ ವೃತ್ತಿಯ ಬಗ್ಗೆ ಬಹಳ ಶ್ರದ್ಧೆ ಮತ್ತು ಪ್ರೀತಿ ಇತ್ತು. ಬೇರೆಯವರು ಹೇಳುವುದನ್ನು ಗಮನವಿಟ್ಟು ಆಲಿಸುವ ಪರಿಪಾಟ ಹೊಂದಿದ್ದೆ. ಇದರಿಂದ ಜೀವನದಲ್ಲಿ ಸಾಕಷ್ಟು ಪಾಠಗಳನ್ನು ಕಲಿತೆ' ಎಂದು ಸುನೀಲ್ ಶೆಟ್ಟಿ ತಿಳಿಸಿದರು.

ವಿಶ್ವಕ್ಕೆ ಭಾರತದ 'ಸಾಫ್ಟ್ ಪವರ್'

ಬೆಂಗಳೂರು: ಹತ್ತು ವರ್ಷಗಳ ಹಿಂದೆ ಮೂರ್ನಾಲ್ಕು ವರ್ಷ ಹಳೆಯ ತಂತ್ರಜ್ಞಾನವನ್ನು ಪಡೆಯುತ್ತಿದ್ದ ಭಾರತ, ಇಂದು ವಿಶ್ವಕ್ಕೇ ಆಧುನಿಕ ಸೌಲಭ್ಯ ಒದಗಿಸುತ್ತಿರುವ 'ಸಾಫ್ಟ್ ಪವರ್' ಆಗಿ ಹೊರಹೊಮ್ಮಿದೆ.

ಆ್ಯನಿಮೇಷನ್, ವಿಷುಯಲ್ ಎಫೆಕ್ಟ್ಸ್, ಗೇಮಿಂಗ್ ಮತ್ತು ಕಾಮಿಕ್ಸ್ (ಎವಿಜಿಸಿ) ವಲಯದಲ್ಲಿ ಭಾರತ ಇಂದು ಮುಂಚೂಣಿಯಲ್ಲಿದ್ದು, ಬೆಂಗಳೂರು ಮೂಲದ ಸಂಸ್ಥೆಗಳು ಎಲ್ಲ ದೇಶಗಳಿಗೂ ಈ ತಂತ್ರಜ್ಞಾನವನ್ನು ಒದಗಿಸುತ್ತಿದೆ ಎಂದು ಬೆಂಗಳೂರು ಟೆಕ್ ಸಮಿಟ್‌ನಲ್ಲಿ ನಡೆದ 'ಎವಿಸಿಜಿ – ಸಾಫ್ಟ್ ಪವರ್– ದ ಇಂಡಿಯ ಸ್ಟೋರಿ' ಗೋಷ್ಠಿಯಲ್ಲಿ ತಜ್ಞರು ವಿವರ ನೀಡಿದರು.

'ಹಾಲಿವುಡ್ ಸೇರಿದಂತೆ ವಿಶ್ವದ ಅನೇಕ ರಾಷ್ಟ್ರಗಳ ಸಿನಿಮಾದಲ್ಲಿ ಬೆಂಗಳೂರಿನ ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದೆ. ದೇಶದ ಹಲವು ಚಿತ್ರಗಳು ಇಲ್ಲೇ ತಯಾರಾಗುತ್ತಿವೆ' ಎಂದು ಟೆಕ್ನಿಕಲರ್ ಇಂಡಿಯಾದ ಅಧ್ಯಕ್ಷ ಬಿರೇನ್ ಘೋಷ್ ಹೇಳಿದರು.

'ಎವಿಜಿಸಿ ಹೊಸ ನೀತಿ ಮುಂದಿನ ತಿಂಗಳು ಬಿಡುಗಡೆಯಾಗಲಿದೆ. 8ನೇ ತರಗತಿಯ ವಿದ್ಯಾರ್ಥಿಗಳೂ ಹೊಸ ತಂತ್ರಜ್ಞಾನ ಕಲಿಯುವ ಅವಕಾಶ ಕಲ್ಪಿಸಲಾಗುತ್ತಿದೆ' ಎಂದರು.

'ಈ ಹಿಂದೆ ಕೆಲವು ವರ್ಷಗಳ ನಂತರ ಹೊಸ ತಂತ್ರಜ್ಞಾನ ಭಾರತಕ್ಕೆ ಬರುತ್ತಿತ್ತು. ಇದೀಗ ನಾವು ವಿಶ್ವಕ್ಕೆ ತಂತ್ರಜ್ಞಾನ ನೀಡುತ್ತಿದ್ದೇವೆ. 2ಡಿ, 3ಡಿ ಎಲ್ಲ ಮುಗಿದ ಮೇಲೆ ಇದೀಗ 'ಫಿಸಿಟಲ್' ಆಧುನಿಕ ತಂತ್ರಜ್ಞಾನವಾಗಿದೆ. ನಾವು ಧರಿಸುವ ಕನ್ನಡಕದಿಂದ ಮನರಂಜನೆಯ ಎಲ್ಲ ಮಜಲುಗಳನ್ನು ಅನುಭವಿಸಬಹುದು. ನಾವೇ ಸ್ಪೈಡರ್‌ಮ್ಯಾನ್, ಸೂಪರ್ ಮಾನ್ ಆಗಿ ಹೋರಾಡಬಹುದು' ಎಂದು ಹೊಲೊಸೂಟ್ ಸಂಸ್ಥಾಪಕ ಹರ್ಷವರ್ಧನ್ ಕಿಕ್ಕೇರಿ ಹೇಳಿದರು.



ದೇವತಾಸ್ತ್ರೀಯರಿಂದ ವಿನೋದಾವಳಿ

ಶಿವ-ಪಾರ್ವತಿಯರು ಸಿಂಹಾಸನದ ಮೇಲೆ ಕುಳಿತ ಮೇಲೆ ದೇವತಾಸ್ತ್ರೀಯರೆಲ್ಲ ವಿನೋದದ ಮಾತಾಡಿ, ನವದಂಪತಿ ಮುಖ ರಂಗೇರುವಂತೆ ಮಾಡುತ್ತಾರೆ. ಮೊದಲಿಗೆ ಮಾತನಾಡಿದ ಬ್ರಹ್ಮನ ಪತ್ನಿ ಸರಸ್ವತಿ 'ಮಹಾದೇವ, ನಿನ್ನ ಪ್ರಾಣಪ್ರಿಯಳಾದ ಸತಿದೇವಿಯು ಮತ್ತೆ ನಿನಗೆ ಲಭಿಸಿರುವಳು. ನಿನ್ನ ಹಿಂದಿನ ವಿರಹತಾಪವನ್ನು ಬಿಡು' ಎಂದಳು. ನಂತರ ವಿಷ್ಣುವಲ್ಲಭೆ ಲಕ್ಷ್ಮಿಯು 'ಪರಮೇಶ್ವರ, ಲಜ್ಜೆಯನ್ನು ಬಿಟ್ಟು, ಗಿರಿಜೆಯನ್ನು ನಿನ್ನ ಎದೆಯಲ್ಲಿ ಆಲಂಗಿಸು; ಇವಳಿಲ್ಲದಿದ್ದರೆ ನಿನ್ನ ಪ್ರಾಣವೇ ಉಳಿಯಲಾರದು' ಎಂದರೆ, ಸತ್ಯವಾನ್ ಸಾವಿತ್ರಿಯು 'ಶಂಕರ, ವ್ಯಥೆಯನ್ನು ಬಿಡು. ಗಿರಿಜೆಗೆ ಭೋಜನವನ್ನು ಮಾಡಿಸಿ, ನೀನೂ ಭೋಜನ ಮಾಡು. ಆಮೇಲೆ ಆಚಮನಮಾಡಿ ಪಾರ್ವತಿಗೆ ಪ್ರೀತಿಯಿಂದ ಪಚ್ಚಕರ್ಪೂರಮಿಶ್ರಿತವಾದ ತಾಂಬೂಲವನ್ನು ಕೊಡು' ಎನ್ನುತ್ತಾಳೆ, ನಗುತ್ತಾ.

ಕಶ್ಯಪಬ್ರಹ್ಮನ ಪತ್ನಿ ಅದಿತಿ 'ಮಹೇಶ್ವರ, ಭೋಜನವಾದಮೇಲೆ ಗಿರಿಜೆಗೆ ಮುಖಶುದ್ಧಿಗಾಗಿ ಪ್ರೀತಿಯಿಂದ ಜಲವನ್ನು ಕೊಡು' ಎಂದರೆ, ಇಂದ್ರನ ಪತ್ನಿ ಶಚಿದೇವಿ, 'ಪಾರ್ವತಿಯನ್ನು ಚೆನ್ನಾಗಿ ನೋಡಿಕೋ' ಎಂದು ಶಿವನನ್ನು ಹುರಿದುಂಬಿಸುತ್ತಾಳೆ. ಅರುಂಧತಿ, 'ಶಂಕರ, ಮೇನಾದೇವಿ-ಹಿಮವಂತರು ಗಿರಿಜೆಯನ್ನು ನಿನಗೆ ಕೊಡಲು ಇಷ್ಟವಿರಲಿಲ್ಲ. ನಾನು ಪ್ರಯತ್ನಪಟ್ಟು ನಿನಗೆ ಕೊಡಿಸಿರುವೆ. ಇವಳನ್ನು ಚೆನ್ನಾಗಿ ನೋಡಿಕೊ' ಎಂದಳು.

ಗೌತಮಮುನಿಯ ಪತ್ನಿ ಅಹಲ್ಯೆ, 'ಶಂಕರ, ನೀನು ವೃದ್ಧಾವಸ್ಥೆಯನ್ನು ಬಿಟ್ಟು ನವತರುಣನಾಗು. ಅದರಿಂದ ಮಗಳ ಹಿತದಲ್ಲಿಯೇ ಆಸಕ್ತಳಾದ ಮೇನಾದೇವಿಗೆ ಸಂತೋಷವಾಗುವುದು' ಎಂದರೆ, ಜಲಂಧರನ ಪತ್ನಿ ತುಳಸಿದೇವಿ 'ಶಂಕರ, ಮೊದಲು ನೀನು ವೈರಾಗ್ಯದಿಂದ ಗಿರಿಜೆಯನ್ನು ಪರಿತ್ಯಜಿಸಿದೆ. ಮನ್ಮಥನನ್ನು ಸುಟ್ಟುಹಾಕಿದೆ. ಆದರೆ ಈಗ ಮತ್ತೆ ಗಿರಿಜೆಯನ್ನೇ ಮದುವೆಯಾಗಲು ವಸಿಷ್ಠನನ್ನು ಕಳುಹಿದೆ ಏಕೆ?' ಎಂದು ಮಾರ್ಮಿಕವಾಗಿ ಪ್ರಶ್ನಿಸುತ್ತಾಳೆ.

ಬೃಹಸ್ಪತಿಯ ಮಗಳು ಮತ್ತು ಅಗ್ನಿಯ ಪತ್ನಿಯಾದ ಸ್ವಾಹಾದೇವಿ 'ಮಹಾದೇವ, ಈಗ ನೀನು ಸ್ತ್ರೀಯರು ಹೇಳಿದಂತೆ ಕೇಳಬೇಕು. ಅವರಿಗೆ ಅಧಿಕಾರವು ಹೆಚ್ಚಾಗಿರುತ್ತೆ. ಸಾಧ್ವಿಯಾದವಳು ತನ್ನ ಪತಿಯನ್ನಲ್ಲದೇ ಈಶ್ವರಮಾರ್ಗವನ್ನೂ ರಕ್ಷಿಸುತ್ತಾಳೆ' ಎಂದು ಶಿವನಿಗೆ ಕಿವಿಮಾತು ಹೇಳಿದರೆ, ಅದೃಷ್ಟದ ಭಾಗ್ಯದೇವತೆ ಜಂಭಲನ ಪತ್ನಿ ವಸುಂಧರೆ, 'ಶಂಭು, ಭಾವಜ್ಞನಾದ ನೀನು ಸ್ತ್ರೀಯರ ಭಾವವನ್ನು ಚೆನ್ನಾಗಿ ತಿಳಿದಿರುವೆ' ಎಂದು ಹೇಳುತ್ತಾಳೆ.

ಸೂರ್ಯನ ಪತ್ನಿ ಹಾಗೂ ಯಮ, ಅಶ್ವಿನಿ ದೇವತೆ, ರೇವಂತನ ತಾಯಿ ಸಂಜ್ಞಾದೇವಿ, 'ಎಲೈ ಗೆಳತಿಯರೇ, ನಿಮ್ಮ ಮಾತುಗಳು ಇನ್ನು ಸಾಕು' ಎಂದು ಸೂಚಿಸುತ್ತಾಳೆ.

ಕೊನೆಯಲ್ಲಿ ದೇವತಾಸ್ತ್ರೀಯರ ಮಾತಿಗೆ ಉತ್ತರಿಸಿದ ಮಹಾಶಿವ, 'ಎಲೈ ದೇವತಾಸ್ತ್ರೀಯರೇ, ನೀವೆಲ್ಲರೂ ಜಗನ್ಮಾತೆಯರು, ಮಹಾಪತಿವ್ರತೆಯರು. ನೀವೂ ಸಾಮಾನ್ಯ ಹುಡುಗಿಯರಂತೆ ಮಾತಾಡುವುದು ಸರಿಯೇ' ಎಂದಾಗ ದೇವತಾಸ್ತ್ರೀಯರು ಲಜ್ಜೆಗೊಳ್ಳುತ್ತಾರೆ. ನಂತರ ಶಿವನು ಮೃಷ್ಟಾನ್ನ ಭೋಜನ ಮತ್ತು ಆಚಮನವನ್ನು ಮಾಡಿ, ಸಂತೋಷದಿಂದ ಗಿರಿಜೆಯೊಡನೆ ಕರ್ಪೂರಮಿಶ್ರಿತವಾದ ತಾಂಬೂಲವನ್ನು ಸೇವಿಸಿದ.

ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ಐವತ್ತನೆಯ ಅಧ್ಯಾಯ ಮುಗಿಯಿತು.

ಒಂಬತ್ತು ಒಡಂಬಡಿಕೆಗೆ ಅಂಕಿತ

ಬೆಂಗಳೂರು: 'ನವೋದ್ಯಮಗಳ ಬೆಳವಣಿಗೆಗೆ ಇಂಬು ನೀಡುವ ನಿಟ್ಟಿನಲ್ಲಿ ಮತ್ತಷ್ಟು ರಚನಾತ್ಮಕ ನೆರವು ನೀಡುವ ಉದ್ದೇಶದ ಬೂಸ್ಟರ್ ಕಿಟ್ ಉಪಕ್ರಮಕ್ಕೆ ಐಟಿ-ಬಿಟಿ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು ಬೆಂಗಳೂರು ತಂತ್ರಜ್ಞಾನ ಸಮಾವೇಶದ ಕೊನೆಯ ದಿನವಾದ ಶುಕ್ರವಾರ ಚಾಲನೆ ನೀಡಿದರು. ಒಟ್ಟು ಒಂಬತ್ತು ಸಂಸ್ಥೆಗಳ ಜತೆಗೆ 'ಕರ್ನಾಟಕ ಇನ್ನೋವೇಶನ್ ಮತ್ತು ಟೆಕ್ನಾಲಜಿ ಸೊಸೈಟಿ' (ಕಿಟ್ಸ್) ವ್ಯವಸ್ಥಾಪಕ ನಿರ್ದೇಶಕಿ ಮೀನಾ ನಾಗರಾಜ ಸರ್ಕಾರದ ಪರವಾಗಿ ಸಹಿ ಹಾಕಿದರು.

ಗೂಗಲ್, ಪೇಟಿಎಂ, ಎಚ್‌ಡಿಎಫ್‌ಸಿ, ರೇಜರ್ ಪೇ, ಮೈಕ್ರೋಸಾಫ್ಟ್, ಗೆಯ್ನ್, ದಯಾನಂದ ಸಾಗರ್ ಉದ್ಯಮಶೀಲತಾ ಮತ್ತು ವಾಣಿಜ್ಯ ಪರಿಪೋಷಣಾ ಕೇಂದ್ರ, ಎಡಬ್ಲ್ಯುಎಸ್ ಮತ್ತು ಸ್ಟ್ರಾಂಗ್‌ಹರ್ ವೆಂಚರ್ಸ್ ಜತೆ ಸಹಿ ಹಾಕಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಸಚಿವರು, 'ಕರ್ನಾಟಕ ನವೋದ್ಯಮ ಕೋಶದಲ್ಲಿ ನೋಂದಣಿ ಮಾಡಿಕೊಂಡಿರುವ ನವೋದ್ಯಮಗಳಿಗೆ ಇನ್ನು ಮುಂದೆ ಎಚ್‌ಡಿಎಫ್‌ಸಿ, ಪೇಟಿಎಂ ಮತ್ತು ರೇಜರ್‌ಪೇ ಸಂಸ್ಥೆಗಳ ಮೂಲಕ ಬ್ಯಾಂಕಿಂಗ್ ಹಾಗೂ ಫಿನ್-ಟೆಕ್ ಸೇವೆಗಳು ಸಿಗಲಿವೆ' ಎಂದರು.

ಬಿಯಾಂಡ್ ಬೆಂಗಳೂರು: ಮೈಸೂರು, ಹುಬ್ಬಳ್ಳಿ, ಮಂಗಳೂರು ಕ್ಲಸ್ಟರ್

12 ತಿಂಗಳಲ್ಲಿ 25ಕ್ಕೂ ಹೆಚ್ಚು ಕಂಪನಿ ಕಾರ್ಯಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು, ಹುಬ್ಬಳ್ಳಿ, ಮಂಗಳೂರು ಕ್ಲಸ್ಟರ್‌ಗಳಲ್ಲಿ 12 ತಿಂಗಳಲ್ಲಿ 25ಕ್ಕೂ ಹೆಚ್ಚು ಕಂಪನಿಗಳು ಪ್ರಾರಂಭವಾಗಿದ್ದು, ಬೆಂಗಳೂರಿನ ಹೊರಗೆ ಐಟಿ ಹಾಗೂ ಇತರೆ ಕಂಪನಿಗಳ ಆಸಕ್ತಿ ವೃದ್ಧಿಯಾಗುತ್ತಿದೆ ಎಂದು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್‌ನ ಅಧ್ಯಕ್ಷ ಬಿ.ವಿ. ನಾಯ್ಡು ಹೇಳಿದರು.


ಬೆಂಗಳೂರು ಟೆಕ್ ಸಮಿಟ್‌ನಲ್ಲಿ ಶುಕ್ರವಾರ ಆಯೋಜಿಸಿದ್ದ 'ಬಿಯಾಂಡ್ ಬೆಂಗಳೂರು ಟ್ರ್ಯಾಕ್: ಸಕ್ಸಸ್ ಆ್ಯಂಡ್ ರೋಡ್ ಮ್ಯಾಪ್ ಬಿಯಾಂಡ್ ಬೆಂಗಳೂರು' ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಬೆಂಗಳೂರು ಹೊರತಾಗಿಯೂ ಕಂಪನಿಗಳು ಹೆಚ್ಚಿನ ಆಸಕ್ತಿ ತೋರುತ್ತಿವೆ. ಮೈಸೂರು, ಹುಬ್ಬಳ್ಳಿ, ಮಂಗಳೂರು ಕ್ಲಸ್ಟರ್‌ಗಳಲ್ಲಿ 40ಕ್ಕೂ ಹೆಚ್ಚು ಕಂಪನಿಗಳು ಕಾರ್ಯಾರಂಭ ಮಾಡುವ ಸಾಲಿನಲ್ಲಿವೆ. ಮೈಸೂರು– ಸೈಬರ್ ಸೆಕ್ಯುರಿಟಿ, ಇಎಸ್‌ಡಿಎಂ; ಹುಬ್ಬಳ್ಳಿ–ಧಾರವಾಡ–ಬೆಳಗಾವಿ– ಅಗ್ರಿಟೆಕ್, ಇಎಸ್‌ಡಿಎಂ, ಎಐ ಹಾಗೂ ಮಂಗಳೂರು ಕ್ಲಸ್ಟರ್ ಫಿನ್‌ಟೆಕ್, ಹೆಲ್ತ್‌ಟೆಕ್ ತಾಣಗಳಾಗಲಿವೆ' ಎಂದರು.

'ಈ ಮೂರು ಕ್ಲಸ್ಟರ್‌ಗಳಿಂದ ಮುಂದಿನ ಐದು ವರ್ಷಗಳಲ್ಲಿ ₹5 ಶತಕೋಟಿ ಹಾಗೂ 10 ವರ್ಷಗಳಲ್ಲಿ ₹10 ಶತಕೋಟಿ ವಹಿವಾಟು ಆಗಲಿದೆ. ಸುಮಾರು 10 ಲಕ್ಷ ಉದ್ಯೋಗ ಲಭಿಸಲಿವೆ. ಐಬಿಎಂ ಸಂಸ್ಥೆ ಮೈಸೂರಿನಲ್ಲಿ ತನ್ನ ಕಾರ್ಯಾಚರಣೆ ಆರಂಭಿಸಿದೆ. ಇದೇ ರೀತಿ ಹಲವು ಐಟಿ ಕಂಪನಿಗಳು ತಮ್ಮ ಹಬ್‌ಗಳನ್ನು ಬೆಂಗಳೂರಿನಲ್ಲಿಟ್ಟುಕೊಂಡು ಸ್ಪೋಕ್‌ಗಳನ್ನು (ಘಟಕ) ಕ್ಲಸ್ಟರ್‌ಗಳಲ್ಲಿ ಸ್ಥಾಪಿಸಿದರೆ ಬೆಳವಣಿಗೆ ಸಾಧ್ಯ' ಎಂದರು.

'ಮೈಸೂರಿನಲ್ಲಿರುವ ಲಹರಿ- ಕಾಮನ್ ಇನ್‌ಫ್ರಾಸ್ಟ್ರಕ್ಚರ್ ಫೆಸಿಲಿಟಿಯನ್ನು ಎಲೆಕ್ಟ್ರಾನಿಕ್ಸ್ ಮ್ಯಾನುಫ್ಯಾಕ್ಚರಿಂಗ್ ಕ್ಲಸ್ಟರ್ಸ್ (ಇಎಂಸಿ) ಯೋಜನೆಯಡಿ ಒದಗಿಸಿದ್ದು, ಇದು ದೇಶದಲ್ಲೇ ಪ್ರಥಮವಾಗಿದೆ. ಆರ್ ಆ್ಯಂಡ್ ಡಿ ನೀಡಿ ಪ್ರಕಟವಾಗಿದ್ದು, ಇದನ್ನು ಹುಬ್ಬಳ್ಳಿಯ ಕೆಎಲ್‌ಇ ಟೆಕ್ ರಚಿಸಿದೆ' ಎಂದು ಮಾಹಿತಿ ನೀಡಿದರು.

'ಸೆಮಿಕಂಡಕ್ಟರ್ ವಲಯದಲ್ಲಿ ಅತಿ ಹೆಚ್ಚಿನ ಪ್ರಗತಿ ನಿರೀಕ್ಷಿಸಲಾಗಿದ್ದು, ಈ ಬಗ್ಗೆ ಮುಂದಿನ ದಿನಗಳಲ್ಲಿ ಬೆಂಗಳೂರು ಹೊರತಾಗಿ ಮೈಸೂರು, ಹುಬ್ಬಳ್ಳಿಯಲ್ಲೂ ಇಂಡಿಯ ಎಲೆಕ್ಟ್ರಾನಿಕ್ಸ್ ಆ್ಯಂಡ್ ಸೆಮಿಕಂಡಕ್ಟರ್ ಅಸೋಸಿಯೇಷನ್ (ಐಇಎಸ್‌ಎ) ಸಮ್ಮೇಳನವನ್ನು ಆಯೋಜಿಸಬೇಕು' ಎಂದು ನಾಯ್ಡು ಅವರು ಐಇಎಸ್‌ಎ ಅಧ್ಯಕ್ಷ ರಾಜೀವ್ ಖುಷು ಅವರಿಗೆ ಸಲಹೆ ನೀಡಿದರು.


ಟೆಕ್ ಸಮಿಟ್‌ನಲ್ಲಿ ಮಳಿಗೆಯೊಂದರ ದೃಶ್ಯ

ಪದಬಂಧ 5143

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಮೊದಲಸಲ ನೋಡಿದ ಮಾತ್ರದಿಂದಲೇ ಉಂಟಾಗುವ ಪ್ರೀತಿ (4)
4. ಭೋಜನ ಸಮಾರಂಭಕ್ಕೆ ಬೇಕಾಗುವ ಸಾಧನಸಾಮಗ್ರಿ (4)
6. ಚಾರ ಕೊನೆಗಿದ್ದು ಮಾಡಿದ ಆಲೋಚನೆ (3)
7. ನೆಲೆಗೊಳಿಸುವವನು ತಿರುಗಿದ್ದಾನಲ್ಲಾ! (3)
8. ಪ್ರಜ್ವಲಿಸುತ್ತಿರುವ ಬೆಂಕಿಯಿದು (3)
10. ಕೈಯಲ್ಲಿರುವ ಹಣ (3)
12. ಬೇಡುವವ ಇಲ್ಲಿದ್ದಾನೆ (3)
13. ಪ್ರೀತಿ ಹೀಗೆ ಬಂದಿದೆ (3)
14. ಹುಚ್ಚನಿಲ್ಲಿ ಉಲ್ಟಾ ನಿಂತಿದ್ದಾನೆ (4)
16. ತಿರುಗಿದಾಗಲೇ ಸಿಕ್ಕಿರುವ ಬಿಡುವು! (4)

ಮೇಲಿಂದ ಕೆಳಕ್ಕೆ

1. ಆತುರಾತುರವಾಗಿ ಬಂದು ನಿಂತಿರುವ ಜಾಣ! (3)
2. ತಿಕ್ಕಲ ಹಿಡಿದಿರುವ ಎಳ್ಳು (2)
3. ಇನ್ಶೂರೆನ್ಸ್ ಅನ್ನು ಕನ್ನಡೀಕರಿಸಿರಿ (2)
5. ಆ ಸಂಸ್ಥಾನದಲ್ಲಿ ಕಟ್ಟಿಸಿರುವ ನಿವಾಸ (4)
6. ವಿಷಯ ತಿಳಿದಾಗ ಆದ ದುಃಖ (3)
7. ತಿರುಗಿಸಿ ನೋಡಿದರೂ ಇದು ಚಿನ್ನ (3)
9. ಯತಿಗೆ ಸಿಕ್ಕಿರುವ ಸೋಡಿ (4)
11. ಸಂಪಾದಿಸುವುದನ್ನು ಹೀಗೆ ಹೇಳಿ (3)
13. ನೆನಪು ಮಾಡಿಕೊಂಡು ತೋರಿದ ಬಿನ್ನಾಣ (3)
14. ಮೈಮೇಲೆ ಹೊದಿಕೆ ಬಟ್ಟೆಗಳಿಲ್ಲದಿರುವವನು (2)
15. ಅಮಲು ಹೀಗೆ ಬಂದಿದೆ (2)

5142ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ವಕ್ರದೃಷ್ಟಿ 4.ನಾಣ್ಣುಡಿ 5.ಏಮಾರು 6.ಕದನ 8.ವ್ಯವಕಲನ 10.ಗುಲಾಬಿ 12.ಮರಣ 13.ಜರಡಿ 15.ಅಹವಾಲು

ಮೇಲಿಂದ ಕೆಳಕ್ಕೆ:
1.ತಕ್ರ 2.ಗಿಣ್ಣು 3.ವರ್ತಕ 4.ನಾರು 5.ಏಕೀಕರಣ 7.ನವ್ಯ 9.ನಗು 11.ಬಿಸಿಲು 12.ಮಡಿ 14.ರಶ್ಮಿ 16.ವಾಕ್ಯ

ಸುಡೊಕು 5529


	7			9	8		6	
1		9	6			5		3
	6		5		2		9	
9		2				3		6
	4			5			7	
8		7	2		4	1		9
		6	4		5		2	
				2		7		4
		4	1		9		3	

5528 ಸುಡೊಕು

6	4	2	9	5	7	1	8	3
8	9	5	1	3	6	2	4	7
7	1	3	2	8	4	6	5	9
3	2	6	5	4	9	7	1	8
9	8	7	6	1	2	4	3	5
1	5	4	3	7	8	9	6	2
5	7	9	8	6	1	3	2	4
2	6	8	4	9	3	5	7	1
4	3	1	7	2	5	8	9	6

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ನವೆಂಬರ್ 19, 2022

ಶ್ರೀಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಕಾರ್ತಿಕ ಕೃಷ್ಣದಶಮಿ ಗಂ. 10-30 ನಕ್ಷತ್ರ: ಉತ್ತರಫಲ್ಗುನಿ ಗಂ. 24-14 ಯೋಗ: ವಿಷ್ಕಂಭ ಗಂ. 24-24, ಕರಣ: ವಿಷ್ಟಿ ಗಂ. 10-30, ವೃಶ್ಚಿಕ ಮಾಸದ 02 ನೇ ದಿನ.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-35 ಸೂರ್ಯಾಸ್ತ : 05-57
ಮುಸ್ಲಿಂ ದಿನಾಂಕ : 23 ರಬಿಯುಸ್ಸಾನಿ
ಅದೃಷ್ಟ ಸಂಖ್ಯೆ : 1, 12

ಮೇಷ: ಸಹೋದ್ಯೋಗಿಯೊಬ್ಬರ ಸಲಹೆ ಅತಿ ಸೂಕ್ತವಾದುದು ಎನಿಸಿ ಅದರಂತೆ ನಡೆದು ವ್ಯವಹಾರದಲ್ಲಿ ಲಾಭವನ್ನು ಹೊಂದುವಿರಿ. ಬೆಂಕಿಯಿಂದ ಅನಾಹುತಗಳು ಸಂಭವಿಸುವ ಲಕ್ಷಣಗಳಿರುವುದರಿಂದ ಜಾಗ್ರತರಾಗಿರಿ.

ವೃಷಭ: ಉದ್ಯೋಗಕ್ಕೆ ಸಂಬಂಧಿಸಿದ ಹೊಸ ಜನರ ಸಂಪರ್ಕವು ಉತ್ತಮ ಧನಲಾಭವನ್ನು ತರಲಿದೆ. ಚರ್ಮದ ವಸ್ತುಗಳ ತಯಾರಿ ಅಥವಾ ಮಾರಾಟದಿಂದ ಲಾಭ ಬರಲಿದೆ. ಗುಣಾತ್ಮಕ ಕಾರ್ಯಗಳಿಗೆ ಮಹತ್ವ ನೀಡಿ.

ಮಿಥುನ: ತೆಗೆದುಕೊಂಡಿರುವ ನಿರ್ಧಾರ ಸರಿಯಾದುದೆಂದು ಈ ದಿನ ನಿಮಗೆ ಮನವರಿಕೆಯಾಗುವುದು. ಅಚ್ಚರಿಯ ಸುದ್ದಿಯೊಂದನ್ನು ಕೇಳಲಿರುವಿರಿ. ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳಬೇಡಿ.

ಕರ್ಕಾಟಕ: ಗಣಿತದಲ್ಲಿ ಅಥವಾ ಸಂಗೀತದಲ್ಲಿ ಪರಿಣತಿ ಹೊಂದಿರುವವರಿಗೆ ಉತ್ತಮ ಅವಕಾಶಗಳು ಅರಸಿ ಬರಲಿದೆ. ಧ್ಯಾನ, ಯೋಗದಿಂದ ಮಾನಸಿಕ ಒತ್ತಡ ಕಡಿಮೆಯಾಗುವುದು. ಕುಲದೇವರ ಸೇವೆಯಿಂದ ಫಲ ಲಭಿಸಲಿದೆ.

ಸಿಂಹ: ಹಳೆಯ ವಾಹನ ಮಾರಾಟದ ವಿಷಯವನ್ನು ಕೈಬಿಡುವುದು ಉತ್ತಮ. ಬೆನ್ನು ನೋವು ಹೋಗಲಾಡಿಸಿಕೊಳ್ಳುವ ಸಲುವಾಗಿ ಚಿಕಿತ್ಸೆ ತೆಗೆದುಕೊಳ್ಳುವುದು ಅನಿವಾರ್ಯ. ಬಿಳಿ ಅಥವಾ ಕೆಂಪು ಬಣ್ಣ ಶುಭ ತರಲಿದೆ.

ಕನ್ಯಾ: ತಾಂತ್ರಿಕ ಕ್ಷೇತ್ರದಲ್ಲಿರುವವರು ಉದ್ಯೋಗದಲ್ಲಿ ದಂಡ ಕಟ್ಟುವ ಸ್ಥಿತಿ ಈ ದಿನ ಎದುರಾಗಬಹುದು ಜಾಗ್ರತೆಯಿಂದ ಕೆಲಸ ಮಾಡಿ. ಕಾರ್ಯಸಾಧನೆಗಾಗಿ ವಾಮಮಾರ್ಗ ಬಳಸಬೇಡಿ.

ತುಲಾ: ಸರಕು ಸಾಗಾಣೆದಾರರಿಗೆ ಆದಾಯದಲ್ಲಿ ಗಣನೀಯ ಹೆಚ್ಚಳ ಕಂಡುಬಂದರೂ, ಕಾರ್ಯದ ಒತ್ತಡದಿಂದ ವೃತ್ತಿಯಲ್ಲಿ ನಿರಾಶೆಯಾಗುವುದು. ಮಕ್ಕಳ ವಿಷಯದಲ್ಲಿ ಅಸಡ್ಡೆ ತೋರಿಸಬಾರದು ಎಂಬುವುದು ಅರಿವಾಗಲಿದೆ.

ವೃಶ್ಚಿಕ: ಸಂಬಂಧಿಕರಿಗೆ ಅಥವಾ ಆಪ್ತ ಸ್ನೇಹಿತನಿಗಾಗಿ ಸಮಯ ಮತ್ತು ಹಣವನ್ನು ಖರ್ಚು ಮಾಡುವ ಪರಿಸ್ಥಿತಿ ಬರುವುದು. ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಶ್ರಮಕ್ಕೆ ತಕ್ಕಷ್ಟು ಆದಾಯ ಲಭಿಸಲಿದೆ.


ಧನು: ಮಾತಿನ ಬುದ್ಧಿವಂತಿಕೆ, ಮಾತಿನ ಚತುರತೆಯಿಂದ ಇತರರನ್ನು ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ಆದರೆ ನಿಮ್ಮ ತೀಕ್ಷ್ಣವಾದ ಮಾತುಗಳು ಬೇರೆಯವರ ದುಃಖಕ್ಕೆ ಕಾರಣವಾಗದಂತೆ ಗಮನಿಸಿ. ಬರಬೇಕಿದ್ದ ಹಣ ಹಿಂತುರುಗಲಿದೆ.

ಮಕರ: ಜೀವನದಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಳ್ಳುವ ಅನಿವಾರ್ಯತೆ ಈ ದಿನ ಕಂಡುಬರಲಿದೆ. ಅದರ ಪರಿಣಾಮವಾಗಿ ಮಿಶ್ರಫಲ ಅನುಭವಕ್ಕೆ ಬರುವುದು. ಸಂತಾನದ ಶುಭ ಸುದ್ದಿ ಕೇಳಿ ಸಂತಸ ಪಡುವಿರಿ.

ಕುಂಭ: ಉದ್ಯೋಗದಲ್ಲಿನ ಬದಲಾವಣೆಯನ್ನು ಬಯಸಿದ ನಿಮಗೆ ಹೆಚ್ಚಿನ ಆದಾಯ ದೊರೆಯುವ ಕೆಲಸ ಸಿಗಲಿದೆ, ಆದರೆ ಕಾರ್ಯದ ಸಮಯ, ಒತ್ತಡಗಳು ನಿಮ್ಮ ಸುಖ-ಶಾಂತಿಯನ್ನು ಕಡಿಮೆ ಮಾಡಬಹುದು.

ಮೀನ: ದಾಂಪತ್ಯ ಜೀವನದಲ್ಲಿ ತಾಳ್ಮೆ, ಸಮಾಧಾನದಿಂದ ಮುಂದುವರಿದು ಸಂಸಾರದಲ್ಲಿ ಉತ್ತಮ ಹೊಂದಾಣಿಕೆಯನ್ನು ಕಾಣುವಿರಿ. ಭತ್ತ ಬೆಳೆಗಾರರಿಗೆ ಉತ್ತಮ ಫಸಲು ದೊರೆತು ಸಂತಸ. ಪರಿಹಾರ ಧನ ಕೈ ಸೇರಲಿದೆ.

ಷೇರುಪೇಟೆ ವಹಿವಾಟು 87



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,343
ಇಂದಿನ ಅಂತ್ಯ	18,307
▼	36
ದಿನದ ಕನಿಷ್ಠ	18,210

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹545
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹545

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1550 (1540)
ಸೋಯಾ (ರಿಫೈನ್ಡ್)	₹1330 (1330)
ಸೂರ್ಯಕಾಂತಿ (ರಿಫೈನ್ಡ್)	₹1480 (1510)
ಪಾಮೋಲಿನ್	₹937 (942)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹420-660
ದ್ವಿತಳಿ (ಬಿ.ವಿ) ₹300-829

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹146
ಆರ್‌ಎಸ್‌ಎಸ್-5 ₹138
ಗುಡ್ ಲಾಟ್ ₹131

ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದಪ್ಪ	₹1800-2600
ಮಧ್ಯಮ	₹1000-1800
ಸಣ್ಣ	₹500-1000

ಸರ್ಕಾರಿ ಬ್ಯಾಂಕ್‌ಗಳ ಸಿಇಒ ಅವಧಿ ಗರಿಷ್ಠ 10 ವರ್ಷಕ್ಕೆ ಏರಿಕೆ



ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಮತ್ತು ವ್ಯವಸ್ಥಾಪಕ ನಿರ್ದೇಶಕರ ಸೇವಾ ಅವಧಿಯನ್ನು ಗರಿಷ್ಠ 10 ವರ್ಷಗಳವರೆಗೆ ಹೆಚ್ಚಿಸಲಾಗಿದೆ.

ಕೇಂದ್ರ ಸರ್ಕಾರವು ನವೆಂಬರ್ 17ರಂದು ಹೊರಡಿಸಿರುವ ಅಧಿಸೂಚನೆಯ ಪ್ರಕಾರ, ನೇಮಕಾತಿ ಅವಧಿಯನ್ನು 5 ವರ್ಷಗಳಿಂದ 10 ವರ್ಷಗಳವರೆಗೆ ವಿಸ್ತರಿಸಲಾಗಿದೆ. ಇದು 60 ವರ್ಷಗಳ ನಿವೃತ್ತಿ ವಯಸ್ಸಿನ ಮಿತಿಗೆ ಒಳಪಟ್ಟಿದೆ.

ಈ ಮೊದಲು ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಸಿಇಒ ಅವಧಿಯು ಗರಿಷ್ಠ 5 ವರ್ಷ ಅಥವಾ 60 ವರ್ಷ ವಯಸ್ಸು; ಇವುಗಳಲ್ಲಿ ಯಾವುದು ಮೊದಲೋ ಅದು ಅನ್ವಯವಾಗುವಂತೆ ಇತ್ತು.

ಎಲ್ಲ ಕೇಂದ್ರೋದ್ಯಮಗಳ ಪೂರ್ಣಾವಧಿ ನಿರ್ದೇಶಕರಿಗೂ ಇದು ಅನ್ವಯ ಆಗುತ್ತದೆ. ಉತ್ತಮ ಪ್ರತಿಭೆಗಳನ್ನು ಬ್ಯಾಂಕಿಂಗ್ ವಲಯದಲ್ಲಿ ಉಳಿಸಿಕೊಳ್ಳಲು ಈ ನಿರ್ಧಾರವು ಸರ್ಕಾರಕ್ಕೆ ನೆರವಾಗಲಿದೆ.

ವ್ಯವಸ್ಥಾಪಕ ನಿರ್ದೇಶಕರು ಸೇರಿದಂತೆ ಪೂರ್ಣಾವಧಿ ನಿರ್ದೇಶಕರು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಆರಂಭಿಕವಾಗಿ ಐದು ವರ್ಷಗಳನ್ನು ಮೀರದಂತೆ ಅಧಿಕಾರದಲ್ಲಿ ಇರಬಹುದು. ಆ ಬಳಿಕ ಕೇಂದ್ರ ಸರ್ಕಾರವು ಭಾರತೀಯ ರಿಸರ್ವ್ ಬ್ಯಾಂಕ್‌ನ ಸಲಹೆಯ ಮೇರೆಗೆ ಮತ್ತೆ ಗರಿಷ್ಠ ಐದು ವರ್ಷಗಳ ಅವಧಿಗೆ ಮರು ನೇಮಕ ಮಾಡಬಹುದು ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

45ರಿಂದ 50 ವರ್ಷ ವಯಸ್ಸಿನಲ್ಲಿ ಇರುವಾಗಲೇ ಸರ್ಕಾರಿ ಸ್ವಾಮ್ಯದ ಬ್ಯಾಂಕ್‌ಗಳ ಆಡಳಿತ ಮಂಡಳಿಯಲ್ಲಿ ಪೂರ್ಣಾವಧಿ ನಿರ್ದೇಶಕರಾದವರಿಗೆ ಈ ತಿದ್ದುಪಡಿಯಿಂದ ಹೆಚ್ಚಿನ ಪ್ರಯೋಜನ ಸಿಗಲಿದೆ.

ಬೆಂಗಳೂರಿನಲ್ಲಿ ಶುರುವಾಗಿದೆ ಪರೀಕ್ಷಾರ್ಥ ಬಳಕೆ • ಸಚಿವ ಪೀಯೂಷ್ ಗೋಯಲ್ ಹೇಳಿಕೆ

ಸಣ್ಣ ವ್ಯಾಪಾರಿಗಳಿಗೆ ಅನುಕೂಲ 'ಒಎನ್‌ಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಎನ್‌ಡಿಸಿ ವೇದಿಕೆಯು ಇ-ವಾಣಿಜ್ಯ ವಹಿವಾಟುಗಳು ಎಲ್ಲರಿಗೂ ಲಭ್ಯವಾಗುವಂತೆ ಮಾಡಲಿದೆ ಎಂದು ಕೇಂದ್ರ ವಾಣಿಜ್ಯ ಸಚಿವ ಪೀಯೂಷ್ ಗೋಯಲ್ ಹೇಳಿದರು.

ಬೆಂಗಳೂರಿನಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಣ್ಣ ವ್ಯಾಪಾರಿಗಳಿಗೆ ತಮ್ಮಲ್ಲಿನ ಉತ್ಪನ್ನಗಳನ್ನು ದೇಶದ ಯಾವುದೇ ಭಾಗದಲ್ಲಿ ಮಾರಾಟ ಮಾಡುವ ಅವಕಾಶವನ್ನು ಈ ವೇದಿಕೆಯು ನೀಡಲಿದೆ. ಹಲವು ಇ-ವಾಣಿಜ್ಯ ವೇದಿಕೆಗಳನ್ನು ಇದು ಒಂದೇ ಸೂರಿನ ಅಡಿ ತರಲಿದೆ. ಗ್ರಾಹಕರು ಯಾವುದೇ ವೇದಿಕೆಯ ಮೂಲಕ ಉತ್ಪನ್ನಗಳನ್ನು ತರಿಸಿಕೊಳ್ಳಬಹುದು' ಎಂದು ಹೇಳಿದರು.



ಪೀಯೂಷ್ ಗೋಯಲ್

ಬೆಂಗಳೂರಿನ ಒಎನ್‌ಡಿಸಿ (ಓಪನ್ ನೆಟ್‌ವರ್ಕ್ ಫಾರ್ ಡಿಜಿಟಲ್ ಕಾಮರ್ಸ್) ಪರೀಕ್ಷಾರ್ಥವಾಗಿ ಆರಂಭವಾಗಿದ್ದು, ಕೆಲವು ಉತ್ಪನ್ನಗಳನ್ನು ಮಾತ್ರ ತರಿಸಿಕೊಳ್ಳಲು ಸಾಧ್ಯವಿದೆ. 'ಬೆಂಗಳೂರಿನಲ್ಲಿ ನಡೆದಿರುವ ಪರೀಕ್ಷಾರ್ಥ ಬಳಕೆಯ ವೇಳೆ ಗ್ರಾಹಕರಿಂದ ಒಳ್ಳೆಯ ಪ್ರತಿಕ್ರಿಯೆ ಲಭ್ಯವಾಗಿದೆ' ಎಂದರು.

ಈಗ ಒಎನ್‌ಡಿಸಿ ವೇದಿಕೆ ಬಳಕೆ ಮಾಡುತ್ತಿರುವವರಿಗೆ ಯಾವುದೇ ಶುಲ್ಕ ವಿಧಿಸುತ್ತಿಲ್ಲ. ದೇಶದ ಪಾವತಿ ವ್ಯವಸ್ಥೆಯಲ್ಲಿ ಏಕೀಕೃತ ಪಾವತಿ ವ್ಯವಸ್ಥೆಯು (ಯುಪಿಐ) ಯಾವ ಬಗೆಯ ಬದಲಾವಣೆಗಳನ್ನು ತಂದಿತೋ ಅದೇ ಬಗೆಯ ಬದಲಾವಣೆಗಳನ್ನು ಇ-ವಾಣಿಜ್ಯ ವಲಯದಲ್ಲಿ ತರುವ ಸಾಮರ್ಥ್ಯವನ್ನು ಒಎನ್‌ಡಿಸಿ ಹೊಂದಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ವ್ಯವಸ್ಥೆಯ ಕೆಲವು ಪ್ರಯೋಜನಗಳು

ಬೆಂಗಳೂರು: 'ಈಗಿರುವ ವ್ಯವಸ್ಥೆಯಲ್ಲಿ ಗ್ರಾಹಕರು ನಿರ್ದಿಷ್ಟ ಇ-ವಾಣಿಜ್ಯ ವೇದಿಕೆಯ ಮೂಲಕ, ಆ ವೇದಿಕೆಯ ಜೊತೆ ಒಪ್ಪಂದ ಹೊಂದಿರುವ ವರ್ತಕರಲ್ಲಿನ ಉತ್ಪನ್ನಗಳನ್ನು ಮಾತ್ರ ಖರೀದಿಸಲು ಸಾಧ್ಯ. ಅಲ್ಲದೆ, ಆ ವೇದಿಕೆಯು ಗ್ರಾಹಕನಿಗೆ ಹೆಚ್ಚು ಉತ್ತಮವಾದ, ಹೆಚ್ಚು ಸೂಕ್ತವಾದ ಉತ್ಪನ್ನವನ್ನು ತೋರಿಸುತ್ತದೆ ಎನ್ನಲಾಗದು. ಅದರ ಬದಲಿಗೆ, ಆ ವೇದಿಕೆಯು ತಾನು ಬಯಸಿದ ಉತ್ಪನ್ನಗಳನ್ನು ಮಾತ್ರ ಗ್ರಾಹಕರಿಗೆ ತೋರಿಸುತ್ತದೆ' ಎಂದು ಪೀಯೂಷ್ ಗೋಯಲ್ ವಿವರಿಸಿದರು.

'ಆದರೆ, ಒಎನ್‌ಡಿಸಿ ಎಲ್ಲ ಇ-ವಾಣಿಜ್ಯ ವೇದಿಕೆಗಳನ್ನೂ ತನ್ನ ಜೊತೆ ಸೇರಿಸಿಕೊಳ್ಳಲು ಪ್ರಯತ್ನಿಸುತ್ತದೆ. ಒಎನ್‌ಡಿಸಿ ಜಾಲ ಪೂರ್ಣಗೊಂಡ ನಂತರದಲ್ಲಿ ಗ್ರಾಹಕರಿಗೆ ಬೇರೆ ಬೇರೆ ಇ-ವಾಣಿಜ್ಯ ವೇದಿಕೆಗಳಲ್ಲಿನ ಉತ್ಪನ್ನಗಳು ಒಂದೇ ಕಡೆ ಲಭ್ಯವಾಗಲಿವೆ. ಉತ್ಪನ್ನಗಳು ಅತ್ಯಂತ ಸ್ಪರ್ಧಾತ್ಮಕ ದರದಲ್ಲಿ ಕೂಡ ಸಿಗಲಿವೆ' ಎಂದರು.

ಈಗಿನ ಹಲವು ಇ-ವಾಣಿಜ್ಯ ವೇದಿಕೆಗಳಲ್ಲಿ ಇಂಗ್ಲಿಷ್ ಮೂಲಕವೇ ವ್ಯವಹರಿಸಬೇಕು. ಆದರೆ ಒಎನ್‌ಡಿಸಿ ಪ್ರಾದೇಶಿಕ ಭಾಷೆಗಳಲ್ಲಿಯೂ ವ್ಯವಹರಿಸುವ ಅವಕಾಶ ಕಲ್ಪಿಸಬಲ್ಲದು ಎಂದು ಒಎನ್‌ಡಿಸಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಟಿ. ಕೋಶಿ ತಿಳಿಸಿದರು.

ಜೊಮಾಟೊ ತೊರೆದ ಮೋಹಿತ್ ಗುಪ್ತ

ನವದೆಹಲಿ (ಪಿಟಿಐ): ಜೊಮಾಟೊ ಕಂಪನಿಯ ಸಹ ಸಂಸ್ಥಾಪಕ ಮೋಹಿತ್ ಗುಪ್ತ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಗುಪ್ತ ಅವರು ನಾಲ್ಕೂವರೆ ವರ್ಷಗಳ ಹಿಂದೆ ಜೊಮಾಟೊ ಸೇರಿದ್ದರು. ಅವರಿಗೆ 2020ರಲ್ಲಿ ಸಹ ಸಂಸ್ಥಾಪಕ ಸ್ಥಾನಮಾನ ನೀಡಲಾಗಿತ್ತು. ಗುಪ್ತ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುವ ವಿಚಾರವನ್ನು ಜೊಮಾಟೊ ಷೇರುಪೇಟೆಗೆ ಸ್ವಯಂಪ್ರೇರಿತವಾಗಿ ತಿಳಿಸಿದೆ.

ಜೆಟ್ ಏರ್‌ವೇಸ್‌ನಿಂದ ವೇತನ ಕಡಿತ

ನವದೆಹಲಿ/ಮುಂಬೈ (ಪಿಟಿಐ): ಜೆಟ್ ಏರ್‌ವೇಸ್ ಕಂಪನಿಯು ಕೆಲವು ಸಿಬ್ಬಂದಿಯ ವೇತನ ಕಡಿತ ಮಾಡಲಿದೆ, ಹಲವು ನೌಕರರಿಗೆ ವೇತನ ರಹಿತ ರಜೆ ನೀಡಲಿದೆ.

ಈ ಕ್ರಮಗಳು ಡಿಸೆಂಬರ್ 1ರಿಂದ ಜಾರಿಗೆ ಬರಲಿವೆ. ಕಂಪನಿಯನ್ನು ಬಿಡ್ ಮೂಲಕ ತನ್ನದಾಗಿಸಿಕೊಂಡಿರುವ ಜಲನ್-ಕಲ್‌ರಾಕ್ ಒಕ್ಕೂಟವು (ಜೆಕೆಸಿ) 'ಅಲ್ಪಾವಧಿಯಲ್ಲಿ ಕಠಿಣ ತೀರ್ಮಾನಗಳನ್ನು ಕೈಗೊಳ್ಳಬೇಕಾಗಬಹುದು' ಎಂದು ಹೇಳಿದ ಕೆಲವೇ ತಾಸುಗಳಲ್ಲಿ ಈ ತೀರ್ಮಾನ ಹೊರಬಿದ್ದಿದೆ.



ಜೆಟ್ ಏರ್‌ವೇಸ್ ಕಂಪನಿಯು 2019ರಲ್ಲಿ ವಿಮಾನಯಾನ ಸೇವೆ ಸ್ಥಗಿತಗೊಳಿಸಿತ್ತು. ಕಂಪನಿಯು ಇನ್ನೂ ತನ್ನ ಸೇವೆಗಳನ್ನು ಪುನರಾರಂಭ ಮಾಡಿಲ್ಲ.

ವೇತನ ಕಡಿತವು ಒಟ್ಟು ವೇತನದ ಶೇ 50ರವರೆಗೆ ಇರಲಿದೆ. ಸಿಇಒ ಮತ್ತು ಸಿಎಫ್‌ಒ ಹುದ್ದೆಯಲ್ಲಿರುವವ ವೇತನ ಕಡಿತ ಗರಿಷ್ಠ ಪ್ರಮಾಣದಲ್ಲಿರಲಿದೆ.

ಕಂಪನಿಯ ಮೂರನೆಯ ಒಂದರಷ್ಟು ನೌಕರರಿಗೆ ವೇತನ ಕಡಿತ ಅನ್ವಯವಾಗಲಿದೆ. ಕಂಪನಿಯ ಶೇ 10ಕ್ಕಿಂತ ಕಡಿಮೆ ಪ್ರಮಾಣದ ನೌಕರರನ್ನು ವೇತನ ರಹಿತ ರಜೆ ಮೇಲೆ ಕಳುಹಿಸಲಾಗುತ್ತದೆ ಎಂದು ಸಿಇಒ ಸಂಜೀವ್ ಕಪೂರ್ ತಿಳಿಸಿದ್ದಾರೆ.

'ಮಾಲೀಕತ್ವದ ಹಸ್ತಾಂತರ ಪ್ರಕ್ರಿಯೆಯು ವಿಳಂಬವಾಗುತ್ತಿದೆ. ಹೀಗಾಗಿ ಕೆಲವು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಯಿತು' ಎಂದು ಅವರು ಹೇಳಿದ್ದಾರೆ. ಕಂಪನಿಯಲ್ಲಿ ಅಂದಾಜು 250 ಸಿಬ್ಬಂದಿ ಇದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-38000
ಹಳತು	48000-55000
ಚಿತ್ರದುರ್ಗ	
ಆಪಿ	45419-45859
ಬೆಟ್ಟೆ	35829-36299
ಕೆಂಪುಗೋಟು	29109-29510
ರಾಶಿ	44939-45369
ಹೊಸನಗರ	
ಬಿಳಿಗೋಟು	10899-22899
ಚಾಲಿ	31199-33199
ಕೆಂಪುಗೋಟು	26899-38809
ರಾಶಿ	45509-48170
ಕುಮಟ	
ಚಿಪ್ಪು	27509-33089
ಕೋಕ	16699-30009
ಹಳೆಚಾಲಿ	35999-40219
ಹೊಸಚಾಲಿ	30019-33199
ಪುತ್ತೂರು	
ಕೋಕ	11000-26000
ಹೊಸತು	32000-38000
ಶಿವಮೊಗ್ಗ	
ಬೆಟ್ಟೆ	47299-52200
ಗೊಬರಲು	18000-35716
ಹೊಸತು	45082-46599
ರಾಶಿ	45059-47619
ಸರಕು	56619-77130
ಸಿದ್ದಾಪುರ	
ಬಿಳಿಗೋಟು	27699-33899
ಚಾಲಿ	35809-39499
ಕೋಕ	26599-32119
ಕೆಂಪುಗೋಟು	28089-28089
ರಾಶಿ	42699-46559
ತಟ್ಟಿಬೆಟ್ಟೆ	38109-45609
ಶಿರಸಿ	
ಬೆಟ್ಟೆ	23009-34676
ಬಿಳಿಗೋಟು	23009-34676
ಚಾಲಿ	31599-40608
ರಾಶಿ	43269-46699
ಯಲ್ಲಾಪುರ	
ಬಿಳಿಗೋಟು	24899-34000
ಚಾಲಿ	35051-40070
ಕೋಕ	16099-30799
ಕೆಂಪುಗೋಟು	25019-34603
ರಾಶಿ	45119-50869
ತಟ್ಟಿಬೆಟ್ಟೆ	36712-44690
ಮುದ್ರೆಮನೆ ಕಾಫಿ (50ಕೆ.ಜಿಗೆ)	
ಎಪಿ	13200
ಎಸಿ	6720
ಆರ್‌ಪಿ	8500
ಆರ್‌ಸಿ	4530

ಬೆಂಗಳೂರು–ವಿಶಾಖಪಟ್ಟಣ ಮಧ್ಯೆ ಡಿ. 10ರಿಂದ ಆಕಾಸಾ ಏರ್ ಸೇವೆ

ಮುಂಬೈ (ಪಿಟಿಐ): ಆಕಾಸಾ ಏರ್ ವಿಮಾನಯಾನ ಕಂಪನಿಯು ಬೆಂಗಳೂರಿನಿಂದ ವಿಶಾಖಪಟ್ಟಣಕ್ಕೆ ಡಿಸೆಂಬರ್ 10ರಿಂದ ವಿಮಾನ ಸೇವೆ ಆರಂಭಿಸುವುದಾಗಿ ಶುಕ್ರವಾರ ಹೇಳಿದೆ.

ಆಗಸ್ಟ್ 7ರಂದು ಕಾರ್ಯಾಚರಣೆ ಆರಂಭಿಸಿದ ಕಂಪನಿಯ ನೆಟ್‌ವರ್ಕ್ ವ್ಯಾಪ್ತಿಗೆ ಹತ್ತನೇ ನಗರ ಸೇರ್ಪಡೆ ಆಗಿದೆ. ಇದರಲ್ಲಿ 8 ನಗರಗಳು ಬೆಂಗಳೂರಿನೊಂದಿಗೆ ಸಂಪರ್ಕ ಹೊಂದಿವೆ ಎಂದು ಕಂಪನಿ ಮಾಹಿತಿ ನೀಡಿದೆ.

ಈ ಹೊಸ ಮಾರ್ಗದಲ್ಲಿ ನಿತ್ಯವೂ ಎರಡು ವಿಮಾನ ಸೇವೆ ಲಭ್ಯವಾಗಲಿದೆ. ಮೊದಲ ಸೇವೆಯು ಡಿಸೆಂಬರ್ 10ರಿಂದ ಮತ್ತು ಎರಡನೇ ಸೇವೆಯು ಡಿಸೆಂಬರ್ 12ರಿಂದ ಆರಂಭ ಆಗಲಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಬೇಡಿಕೆ ಹೆಚ್ಚಾಗುತ್ತಿರುವುದರಿಂದ ಬೆಂಗಳೂರು-ಅಹಮದಾಬಾದ್ ಮಧ್ಯೆ ಡಿಸೆಂಬರ್ 17ರಿಂದ ವಿಮಾನ ಸಂಚಾರವನ್ನು ಹೆಚ್ಚಿಸಲಾಗುವುದು ಎಂದು ಹೇಳಿದೆ.

ಟ್ವಿಟರ್ ಭವಿಷ್ಯದ ಬಗ್ಗೆ ತಲೆಕೆಡಿಸಿಕೊಂಡಿಲ್ಲ: ಇಲಾನ್ ಮಸ್ಕ್

ನ್ಯೂಯಾರ್ಕ್ (ಪಿಟಿಐ): 'ಉತ್ತಮ ಕೆಲಸಗಾರರು ಕಂಪನಿಯಲ್ಲಿ ಉಳಿದುಕೊಂಡಿದ್ದಾರೆ. ಹೀಗಾಗಿ ಟ್ವಿಟರ್‌ನ ಭವಿಷ್ಯದ ಬಗ್ಗೆ ತಲೆಕೆಡಿಸಿಕೊಂಡಿಲ್ಲ' ಎಂದು ನೂರಾರು ಜನರು ಕಂಪನಿ ಬಿಡುತ್ತಿರುವ ಬಗ್ಗೆ ಇಲಾನ್ ಮಸ್ಕ್ ಪ್ರತಿಕ್ರಿಯೆ ನೀಡಿದ್ದಾರೆ.

ಹೊಸ ಟ್ವಿಟರ್ ರೂಪಿಸಲು (ಟ್ವಿಟರ್ 2.0) ದೀರ್ಘಾವಧಿಯವರೆಗೆ ಕೆಲಸ ಮಾಡಲು ಒಪ್ಪಿಗೆ ನೀಡುವಂತೆ ಇಲ್ಲವೇ ಕಂಪನಿ ತೊರೆಯುವಂತೆ ಮಸ್ಕ್ ಅವರು ಉದ್ಯೋಗಿಗಳಿಗೆ ಸೂಚನೆ ನೀಡಿದ್ದಾರೆ. ಅಲ್ಲದೆ ಸೋಮವಾರದವರೆಗೂ ಕಚೇರಿಯು ಮುಚ್ಚಿರಲಿದೆ ಎಂದೂ ಇ-ಮೇಲ್‌ನಲ್ಲಿ ತಿಳಿಸಿದ್ದಾರೆ. ಆ ಬಳಿಕ ನೂರಾರು ನೌಕರರು ಕಂಪನಿ ತೊರೆಯಲು ಆರಂಭಿಸಿದ್ದಾರೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ.

ಟ್ವಿಟರ್ ಬಳಕೆದಾರರಿಗೆ ಸಂಬಂಧಿಸಿದಂತೆ ಮತ್ತೊಂದು ಸಾರ್ವಕಾಲಿಕ ಗರಿಷ್ಠ ಸಂಖ್ಯೆಯನ್ನು ತಲುಪಿದ್ದೇವೆ ಎಂದು ಟ್ವೀಟ್ ಮಾಡಿದ್ದಾರೆ.

ಮಾರ್ಚ್ ಒಳಗೆ 3,700 ಮಾರಾಟ ಮಳಿಗೆ: ಮಾರುತಿ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾ ಕಂಪನಿಯು ಪ್ರಸಕ್ತ ಹಣಕಾಸು ವರ್ಷದ ಅಂತ್ಯದ ವೇಳೆಗೆ ಒಟ್ಟು 3,700 ಮಾರಾಟ ಮಳಿಗೆಗಳನ್ನು ಹೊಂದುವ ನಿರೀಕ್ಷೆಯನ್ನು ಇಟ್ಟುಕೊಂಡಿದೆ ಎಂದು ಕಂಪನಿಯ ಹಿರಿಯ ಕಾರ್ಯನಿರ್ವಾಹಕ ಅಧಿಕಾರಿ ಶಶಾಂಕ್ ಶ್ರೀವಾಸ್ತವ ತಿಳಿಸಿದ್ದಾರೆ.

ಬೇಡಿಕೆ ಹೆಚ್ಚುತ್ತಿರುವುದರಿಂದ ಮಾನೇಸರದಲ್ಲಿ ಇರುವ ಘಟಕದ ತಯಾರಿಕಾ ಸಾಮರ್ಥ್ಯ ಹೆಚ್ಚಿಸಲು ಮುಂದಾಗಿದೆ. ಹೀಗಾಗಿ ಕಂಪನಿಯು ಈ ನಿರೀಕ್ಷೆ ಇಟ್ಟುಕೊಂಡಿದೆ ಎಂದು ಅವರು ಹೇಳಿದ್ದಾರೆ.

ಕಂಪನಿಯು ಹೈದರಾಬಾದ್‌ನಲ್ಲಿ 3,500ನೇ ಮಳಿಗೆಯನ್ನು ಆರಂಭಿಸಿದೆ. ಕಂಪನಿಯು ದೇಶದಾದ್ಯಂತ ಸದ್ಯ 2,250 ನಗರಗಳು ಮತ್ತು ಪಟ್ಟಣಗಳಲ್ಲಿ ವಹಿವಾಟು ನಡೆಸುತ್ತಿದೆ.

ಮುಂಬೈ ಧಾರಣೆ

ಶೇಂಗಾ

18–11-2022

ಜಾವಾ 70/80(ಹೊಸ)	11100-11150
ಜಾವಾ 80/90(ಹೊಸ)	10600-10650
ದಪ್ಪ ಮಧ್ಯಪ್ರದೇಶ(ಹೊಸ)	9400-9500
ದಪ್ಪ ಗುಜರಾತ್(ಹೊಸ)	9950-10050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1560 (1550)
ಒಂದು ವಾರದ ಡೆಲಿವರಿ	1555 (1545)
ಸೋಯಾ ಕಚ್ಚಾ	1310 (1310)
ಪಾಮ್ ವಾರದ ಡೆಲಿವರಿ	935 (940)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
52,650 (52,650)
ಬೆಳ್ಳಿ ಕೆ.ಜಿ 61,250 (61,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪೋರ್ಚುಗಲ್‌ಗೆ ಭರ್ಜರಿ ಜಯ

ಅಭ್ಯಾಸ ಪಂದ್ಯ: ಮಿಂಚಿದ ಬ್ರೂನೊ ಫರ್ನಾಂಡಿಸ್; ನೈಜೀರಿಯಾಕ್ಕೆ ಸೋಲು

ಲಿಸ್ಬನ್, ಪೋರ್ಚುಗಲ್: ಬ್ರೂನೊ ಫರ್ನಾಂಡಿಸ್ ಗಳಿಸಿದ ಎರಡು ಗೋಲುಗಳು ಪೋರ್ಚುಗಲ್ ತಂಡಕ್ಕೆ ಭರ್ಜರಿ ಜಯ ತಂದುಕೊಟ್ಟವು.

ಗುರುವಾರ ಇಲ್ಲಿ ನಡೆದ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಅಭ್ಯಾಸ ಪಂದ್ಯದಲ್ಲಿ ಪೋರ್ಚುಗಲ್ ತಂಡವು 4–0ಯಿಂದ ನೈಜೀರಿಯಾ ತಂಡಕ್ಕೆ ಸೋಲುಣಿಸಿತು.

ಪೋರ್ಚುಗಲ್ ತಂಡದ ತಾರಾ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಈ ಪಂದ್ಯದಲ್ಲಿ ಹೊಟ್ಟೆನೋವಿನ ಕಾರಣ ಆಡಲಿಲ್ಲ. ಆದರೆ ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್‌ನ ಅವರ ಸಹ ಆಟಗಾರ ಫರ್ನಾಂಡಿಸ್ ಇಲ್ಲಿ ಮಿಂಚಿದರು.

ಅಲ್ವಾಲೇಡ್ ಕ್ರೀಡಾಂಗಣದಲ್ಲಿ ನಡೆದ ಹಣಾಹಣಿಯ ಒಂಬತ್ತನೇ ನಿಮಿಷದಲ್ಲಿ ಫರ್ನಾಂಡಿಸ್ ಮೊದಲ ಗೋಲು ದಾಖಲಿಸಿದರು. 35ನೇ ನಿಮಿಷದಲ್ಲಿ ಪೆನಾಲ್ಟಿ ಅವಕಾಶದಲ್ಲಿ ಕಾಲ್ಚಳಕ ತೋರಿದ ಫರ್ನಾಂಡಿಸ್ ಮುನ್ನಡೆಯನ್ನು ಹೆಚ್ಚಿಸಿದರು.



ಪೋರ್ಚುಗಲ್ ತಂಡದ ಬ್ರೂನೊ ಫರ್ನಾಂಡಿಸ್ (ಎಡ), ಅಂಟೋನಿಯಾ ಸಿಲ್ವಾ (ಬಲ) ಮತ್ತು ನೈಜೀರಿಯಾದ ಜೊ ಆರಿಬೊ ನಡುವೆ ಚೆಂಡಿಗಾಗಿ ಪೈಪೋಟಿ– ಎಎಫ್‌ಪಿ ಚಿತ್ರ

ಇದೇ ಮೊದಲ ಬಾರಿ ಅಂತರ-ರಾಷ್ಟ್ರೀಯ ಪಂದ್ಯದ ಕಣಕ್ಕಿಳಿದಿದ್ದ ಗೊನ್ಸಾಲೊ ರಾಮೋಸ್, ದ್ವಿತೀಯಾ-ರ್ಧದಲ್ಲಿ ಪೋರ್ಚುಗಲ್ ತಂಡಕ್ಕಾಗಿ ಕಾಲ್ಚಳಕ ತೋರಿದರು. ಮುನ್ನಡೆ 3–0ಗೆ ಹೆಚ್ಚಿತು. ಜೋವಾ ಮರಿಯಾ ತಂಡದ ನಾಲ್ಕನೇ ಗೋಲು ಗಳಿಸಿ ಪೋರ್ಚುಗಲ್ ಜಯ ಖಚಿತಪಡಿಸಿದರು. ತನ್ನ ಕೊನೆಯ ಅಭ್ಯಾಸ ಪಂದ್ಯವಾಡಿದ ತಂಡವು ಶುಕ್ರವಾರ ದೋಹಾಕ್ಕೆ ಬಂದಿಳಿಯಿತು.

ಸ್ಪೇನ್ ಜಯಭೇರಿ: ಮತ್ತೊಂದು ಅಭ್ಯಾಸ ಪಂದ್ಯದಲ್ಲಿ ಸ್ಪೇನ್ 3–1ರಿಂದ ಜೋರ್ಡನ್ ಎದುರು ಗೆದ್ದಿತು. ವಿಜೇತ ತಂಡಕ್ಕಾಗಿ ಅನ್ಸು ಫಾಟಿ ಮತ್ತು ಗ್ಯಾವಿ ಕ್ರಮವಾಗಿ 13 ಮತ್ತು 56ನೇ ನಿಮಿಷಗಳಲ್ಲಿ ಮೋಡಿ ಮಾಡಿದರು. ನಿಕೊ ವಿಲಿಯಮ್ಸ್ 84ನೇ ನಿಮಿಷದಲ್ಲಿ ತಂಡದ ಮತ್ತೊಂದು ಗೋಲು ದಾಖಲಿಸಿದರು.

ಇನ್ನುಳಿದ ಪಂದ್ಯಗಳಲ್ಲಿ ಮೊರಕ್ಕೊ 3–0ಯಿಂದ ಜಾರ್ಜಿಯಾ ಎದುರು, ಘಾನಾ 2–0ಯಿಂದ ಸ್ವಿಟ್ಜರ್ಲೆಂಡ್ ವಿರುದ್ಧ, ಕೆನಡಾ 2–1ರಿಂದ ಜಪಾನ್ ಎದುರು ಗೆಲುವಿನ ನಗೆ ಬೀರಿದವು.

ಯಶಸ್ವಿ ಆಯೋಜನೆ; ಕತಾರ್ ವಿಶ್ವಾಸ

ದೋಹಾ (ರಾಯಿಟರ್ಸ್): ಫಿಫಾ ವಿಶ್ವಕಪ್ ಆಯೋಜನೆಯ ಹಾದಿಯಲ್ಲಿ ಸಾಕಷ್ಟು ವಿವಾದಗಳು ಕೇಳಿಬಂದರೂ, ಟೂರ್ನಿಯು ಯಶಸ್ವಿಯಾಗಲಿದೆ ಎಂಬ ವಿಶ್ವಾಸದಲ್ಲಿ ಆತಿಥೇಯ ಕತಾರ್ ದೇಶದ ಪ್ರಜೆಗಳು ಇದ್ದಾರೆ.

ಇತ್ತೀಚಿನ ಅಂಕಿ–ಅಂಶಗಳ ಪ್ರಕಾರ ಕತಾರ್‌ನ ಒಟ್ಟು ಜನಸಂಖ್ಯೆ ಸುಮಾರು 30 ಲಕ್ಷ. ಅದರಲ್ಲಿ ಕತಾರ್ ಮೂಲದವರ ಸಂಖ್ಯೆ 3.50 ಲಕ್ಷ ಮಾತ್ರ. ಅಂದರೆ ವಿಶ್ವಕಪ್ ಟೂರ್ನಿಗೆ ನಿರ್ಮಿಸಿರುವ ಎಂಟು ಕ್ರೀಡಾಂಗಣಗ-ಳಲ್ಲಿ ಹಿಡಿಯುವಷ್ಟು ಪ್ರಜೆಗಳು ಮಾತ್ರ ಕತಾರ್‌ನಲ್ಲಿ ಇದ್ದಾರೆ!

ಇಲ್ಲಿನ ಒಟ್ಟು ಜನಸಂಖ್ಯೆಯಲ್ಲಿ ಶೇ 88 ರಷ್ಟು ಮಂದಿ ವಿದೇಶದಿಂದ ಬಂದು ನೆಲೆಸಿದವರಾಗಿದ್ದಾರೆ. ಭಾರತದ ಸುಮಾರು 7.5 ಲಕ್ಷ ಮಂದಿ ಇಲ್ಲಿದ್ದಾರೆ. ಜನಸಂಖ್ಯೆ ಮತ್ತು ಭೌಗೋಳಿಕತೆಯ-ನ್ನು ನೋಡುವಾಗ, ವಿಶ್ವಕಪ್‌ಗೆ ಆತಿಥ್ಯ ವಹಿಸುವ ಅತ್ಯಂತ ಪುಟ್ಟ ರಾಷ್ಟ್ರ ಎಂಬ ಗೌರವ ಕತಾರ್‌ಗೆ ದೊರೆಯಲಿದೆ.



ನೆದರ್ಲೆಂಡ್ಸ್ ತಂಡದ ಆಟಗಾರರು ಅಭ್ಯಾಸ ನಡೆಸಿದರು –ಎಎಫ್‌ಪಿ ಚಿತ್ರ

ಯಾವುದೇ ರೀತಿಯ ಕಪ್ಪು ಚುಕ್ಕೆ ಬರದ ರೀತಿಯಲ್ಲಿ ಟೂರ್ನಿಯನ್ನು ಯಶಸ್ವಿಯಾಗಿ ಆಯೋಜಿಸಲು ಸ್ಥಳೀಯ ಸಂಘಟಕರು ತಯಾರಿ ನಡೆಸಿದ್ದಾರೆ. ಈ ಟೂರ್ನಿಯ ಮೂಲಕ ಜಾಗತಿಕವಾಗಿ ಗುರುತಿಸಿಕೊಳ್ಳುವುದು ಕತಾರ್‌ನ ಗುರಿ ಎಂದು ವಿಶ್ಲೇಷಿಸಲಾಗುತ್ತಿದೆ.

‘ಕಾರ್ಮಿಕರ ಹಕ್ಕುಗಳು ಮತ್ತು ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ನಕಾರಾತ್ಮಕ ವರದಿಗಳೇ ಹೆಚ್ಚು ಬಂದಿವೆ. ಟೂರ್ನಿಯನ್ನು ಯಶಸ್ವಿಯಾಗಿ ನಡೆಸುವುದೇ ಟೀಕಾಕಾರರ ಬಾಯಿ ಮುಚ್ಚಿಸಲು ಕತಾರ್ ಮುಂದಿರುವ ಏಕೈಕ ಹಾದಿ’ ಎಂದು ಇಲ್ಲಿನ ಹಮದ್ ಬಿನ್ ಖಲೀಫಾ ವಿಶ್ವವಿದ್ಯಾಲ-ಯದ ಪ್ರಾಧ್ಯಾಪಕ ಮಾರ್ಕ್ ಓವೆನ್ ಹೇಳುತ್ತಾರೆ.

‘ಮಧ್ಯಪ್ರಾಚ್ಯದಲ್ಲಿ ಕತಾರ್‌ಅನ್ನು ಪ್ರಮುಖ ಕ್ರೀಡಾ ಹಬ್ ಆಗಿ ಬಿಂಬಿಸುವುದು ಕೂಡಾ ವಿಶ್ವಕಪ್ ಆತಿಥ್ಯದ ಹಿಂದಿರುವ ಮತ್ತೊಂದು ಉದ್ದೇಶ’ ಎಂದು ಅವರು ಅಭಿಪ್ರಾ-ಯಪಟ್ಟಿದ್ದಾರೆ. ‘ವಿಶ್ವಕಪ್ ಟೂರ್ನಿಯ ಯಶಸ್ಸು ಕತಾರ್ ದೊರೆ ಶೈಖ್ ತಮೀಮ್ ಬಿನ್ ಹಮದ್ ಅಲ್ ಥಾನಿ ಅವರಿಗೆ ಜಾಗತಿಕ ಮಟ್ಟದಲ್ಲಿ ಹೆಸರು ತಂದುಕೊಡಲಿದೆ‘ ಎಂಬುದು ಲೇಖಕ ಅಲೆನ್ ಫ್ರಮ್‌ಹೆಜ್ ಅವರ ಮಾತು.

ಆಲ್ಕೋಹಾಲ್‌ಯುಕ್ತ ಬಿಯರ್ ನಿಷೇಧ

ದೋಹಾ (ಎಪಿ): ವಿಶ್ವಕಪ್ ಟೂರ್ನಿಯ ಪಂದ್ಯಗಳು ನಡೆಯಲಿರುವ ಎಲ್ಲ ಎಂಟು ಕ್ರೀಡಾಂಗಣಗಳಲ್ಲಿ ಆಲ್ಕೋಹಾಲ್‌ಯುಕ್ತ ಬಿಯರ್ ಮಾರಾಟ ನಿಷೇಧಿಸಲಾಗಿದೆ. ಟೂರ್ನಿಯ ಆರಂಭಕ್ಕೆ ಕೆಲವೇ ಗಂಟೆಗಳು ಇರುವಾಗ ಸಂಘಟಕರು ಈ ತೀರ್ಮಾನ ತೆಗೆದುಕೊಂಡಿದ್ದಾರೆ. ಎಲ್ಲ 64 ಪಂದ್ಯಗಳು ನಡೆಯುವ ಸಂದರ್ಭದಲ್ಲಿ ಆಲ್ಕೋಹಾಲ್ ರಹಿತ ಬಿಯರ್ ಮಾರಾಟಕ್ಕೆ ಅವಕಾಶ ಇದೆ.

‘ಆತಿಥೇಯ ದೇಶದ ಸಂಘಟಕರು ಮತ್ತು ಫಿಫಾ ನಡುವಿನ ಮಾತುಕತೆಯ ಬಳಿಕ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಫಿಫಾ ಫ್ಯಾನ್ ಫೆಸ್ಟಿವಲ್ ನಡೆಯುವ ತಾಣಗಳು, ಫುಟ್‌ಬಾಲ್ ಪ್ರೇಮಿಗಳಿಗಾಗಿ ಗುರುತಿಸಿರುವ ಪರವಾನಗಿ ಹೊಂದಿರುವ ಇತರ ತಾಣಗಳಲ್ಲಿ ಆಲ್ಕೋಹಾಲ್‌ಯುಕ್ತ ಬಿಯರ್ ಮಾರಾಟ ಮಾಡಬಹುದು. ಆದರೆ ಪಂದ್ಯಗಳು ನಡೆಯುವ ಅವಧಿಯಲ್ಲಿ ಕ್ರೀಡಾಂಗಣದ-ಲ್ಲಿ ಮಾರಾಟ ಮಾಡುವಂತಿಲ್ಲ’ ಎಂದು ಫಿಫಾ ಪ್ರಕಟಣೆ ತಿಳಿಸಿದೆ.

ಆಟಗಾರನ ಕಾಲಿಗೆ ಮುತ್ತು; ಆಕ್ರೋಶ

ತಿರುವನಂತಪುರ (ಪಿಟಿಐ): ಕೇರಳದ ಫುಟ್‌ಬಾಲ್ ವೀಕ್ಷಕ ವಿವರಣೆಕಾರ-ರೊಬ್ಬರು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ತಂಡ ಕೇರಳ ಬ್ಲಾಸ್ಟರ್ಸ್ ಆಟಗಾರನ ಕಾಲಿಗೆ ಮುತ್ತು ನೀಡಿದ್ದಕ್ಕೆ ಸಾಮಾಜಿಕ ಮಾಧ್ಯಮಗಳಲ್ಲಿ ಹಲವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ವೀಕ್ಷಕ ವಿವರಣೆಕಾರ ಶೈಜು ದಾಮೋದರನ್ ಸಂದರ್ಶನವೊಂ-ದರ ವೇಳೆ ಕೇರಳ ತಂಡದಲ್ಲಿರುವ ಉಕ್ರೇನ್ ಆಟಗಾರ ಇವಾನ್ ಕಲಿಯುಗ್ನಿ ಅವರ ಎಡಗಾಲನ್ನು ಚುಂಬಿಸಿದ್ದರು. ಮಾತ್ರವಲ್ಲ, ‘ಇದು ಇಡೀ ಕೇರಳದ ಮುತ್ತು’ ಎಂದಿದ್ದರು. ಇದರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

ಹುಚ್ಚು ಅಭಿಮಾನದಲ್ಲಿ ಕೊಟ್ಟ ಮುತ್ತಿಗೆ ಇಡೀ ಕೇರಳವನ್ನು ಎಳೆದು ತಂದಿರುವುದು ಕೆಂಗಣ್ಣಿಗೆ ಗುರಿಯಾಗಿದೆ. ದಾಮೋದರನ್ ಅವರು ಕೇರಳದ ಜನರ ಕ್ಷಮೆಯಾಚಿಸಬೇಕು ಎಂದು ಹಲವರು ಆಗ್ರಹಿಸಿದ್ದಾರೆ.

ಇವಾನ್ ಅವರು ಗೋವಾ ಎಫ್‌ಸಿ ವಿರುದ್ಧ ನಡೆದ ಪಂದ್ಯದಲ್ಲಿ ಗೋಲು ಗಳಿಸಿ ಕೇರಳ ತಂಡದ ಜಯಕ್ಕೆ ಕೊಡುಗೆ ನೀಡಿದ್ದರು.

ವಿಶ್ವ ಯೂತ್ ಬಾಕ್ಸಿಂಗ್: ಕ್ವಾರ್ಟರ್‌ಫೈನಲ್‌ಗೆ ರಿಧಮ್

ನವದೆಹಲಿ (ಪಿಟಿಐ): ಅಮೋಘ ಆಟವಾಡಿದ ಭಾರತದ ರಿಧಮ್ ಅವರು ಸ್ಪೇನ್‌ನ ಲಾ ನೂಸಿಯಾದಲ್ಲಿ ನಡೆಯುತ್ತಿರುವ ವಿಶ್ವ ಯೂತ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಎಂಟರಘಟ್ಟ ತಲುಪಿದರು. ಭಾರತದ ಇತರ ನಾಲ್ವರು ಬಾಕ್ಸರ್‌ಗಳು ಪ್ರೀಕ್ವಾ-ರ್ಟರ್‌ಫೈನಲ್ ತಲುಪಿದರು.

92+ ಕೆಜಿ ವಿಭಾಗದಲ್ಲಿ ಸ್ಪರ್ಧಿಸಿರುವ ರಿಧಮ್ ಪ್ರೀಕ್ವಾರ್ಟ-ರ್‌ಫೈನಲ್ ಬೌಟ್‌ನಲ್ಲಿ ಲಾತ್ವಿಯಾದ ಮಿಕ್ಸ್ ಬೆರ್ಜಿನ್ಸ್ ಎದುರು ಆಕ್ರಮಣಕಾರಿ ನಡೆಗಳ ಮೂಲಕ ಗಮನಸೆಳೆದರು. ಅವರ ಸತತ ಪಂಚ್‌ಗಳಿಗೆ ಲಾತ್ವಿಯಾ ಆಟಗಾರ ತತ್ತರಿಸಿದರು. ಆರ್‌ಎಸ್‌ಸಿ (ರೆಫರಿಯಿಂದ ಸ್ಪರ್ಧೆ ಸ್ಥಗಿತ) ಆಧಾರದಲ್ಲಿ ರಿಧಮ್ ಗೆಲುವಿನ ನಗೆ ಬೀರಿದರು.

ಜಾದೂಮಣಿ ಸಿಂಗ್ ಮಂದೆಂಗಬಮ್ (51 ಕೆಜಿ), ಭರತ್ ಜೂನ್ (92 ಕೆಜಿ) 32ರ ಘಟ್ಟದ ಬೌಟ್‌ಗಳಲ್ಲಿ ಗೆದ್ದು ಪ್ರೀಕ್ವಾರ್ಟರ್‌ಫೈ-ನಲ್ ತಲುಪಿದರು. ಜಾದೂಮಣಿ 5–0ಯಿಂದ ಅಜರ್‌ಬೈಜಾನ್‌ನ ಅಮಿನ್ ಮಮ್ಮದ್‌ಜದಾ ಎದುರು, ಭರತ್ ಇದೇ ಅಂತರದಲ್ಲಿ ಸ್ಪೇನ್‌ನ ರುಬೆನ್ ಇಬಾನೆಜ್ ಅವರನ್ನು ಸೋಲಿಸಿದರು.

ವಂಶಜ್ (63.5 ಕೆಜಿ) ಮತ್ತು ಅಮನ್ ರಾಥೋಡ್ (67 ಕೆಜಿ) ಕೂಡ 16ರ ಘಟ್ಟಕ್ಕೆ ಲಗ್ಗೆಯಿಟ್ಟರು.

ಕೂಚ್ ಬಿಹಾರ್: ಒಂದು ಪಂದ್ಯ ಗೆದ್ದಿರುವ ಹಿಮಾಚಲ

ಕರ್ನಾಟಕಕ್ಕೆ ಮೊದಲ ಜಯದ ತವಕ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಕೂಚ್ ಬಿಹಾರ್ ಟ್ರೋಫಿ ಕ್ರಿಕೆಟ್ ಟೂರ್ನಿಯ 19 ವರ್ಷೊಳಗಿ-ನವರ ವಿಭಾಗದಲ್ಲಿ ಕರ್ನಾಟಕ ಹಾಗೂ ಹಿಮಾಚಲ ಪ್ರದೇಶ ತಂಡಗಳ ನಡುವಣ ಪೈಪೋಟಿಗೆ ಇಲ್ಲಿನ ರಾಜನಗರದ ಕೆಎಸ್‌ಸಿಎ ಕ್ರೀಡಾಂಗಣ ಸಜ್ಜಾಗಿದೆ.

ನಾಲ್ಕು ದಿನಗಳ ಈ ಪಂದ್ಯವು ಶನಿವಾರ ಆರಂಭಗೊಳ್ಳಲಿದೆ. ಉಭಯ ತಂಡಗಳು ಈಗಾಗಲೇ ತಲಾ ಎರಡು ಪಂದ್ಯ ಆಡಿವೆ. ಹಿಮಾಚಲ ಪ್ರದೇಶ ತಂಡವು ಮೊದಲ ಪಂದ್ಯದಲ್ಲಿ ಜಮ್ಮು ಮತ್ತು ಕಾಶ್ಮೀರ ತಂಡದ ವಿರುದ್ಧ ಡ್ರಾ ಸಾಧಿಸಿತ್ತು. ಎರಡನೇ ಪಂದ್ಯದಲ್ಲಿ ಮೇಘಾಲಯ ತಂಡದ ವಿರುದ್ಧ ಇನಿಂಗ್ಸ್ ಹಾಗೂ 230 ರನ್‌ಗಳಿಂದ ಗೆದ್ದು ತುಂಬು ಆತ್ಮವಿಶ್ವಾ-ಸದಲ್ಲಿದೆ.



ಕರ್ನಾಟಕ ತಂಡದ ಆರಂಭಿಕ ಆಟಗಾರ ರೋಹನ್ ಯರೇಶೀಮಿ ಶುಕ್ರವಾರ ಅಭ್ಯಾಸ ನಡೆಸಿದರು

ತಂಡದ ನಾಯಕ ಇನ್ನೇಶ್ ಮಹಾಜನ್ (77 ರನ್), ಲೋಕೇಶ್ ಚೌಹಾಣ್ (53), ಅನಿಮೇಶ್ ಠಾಕೂರ್(68), ಅರ್ಜುನ್ ವಾಧ್ವಾ(121) ಹಾಗೂ ಗಂಗಾ ಸಿಂಗ್(81) ಹಾಗೂ ಪ್ರವಲ್ ಸಿಂಗ್(75) ಕಳೆದ ಪಂದ್ಯದಲ್ಲಿ ತಲಾ ಅರ್ಧ ಶತಕ ಗಳಿಸಿ ಮಿಂಚಿದ್ದರು.

ಇನ್ನು, ಕರ್ನಾಟಕ ತಂಡವು ಈಗಾಗಲೇ ಆಡಿದ ಎರಡೂ ಪಂದ್ಯಗಳನ್ನು ಡ್ರಾ ಮಾಡಿಕೊಂಡಿದೆ. ಮೊದಲ ಪಂದ್ಯದಲ್ಲಿ ಮುಂಬೈ ತಂಡದ ವಿರುದ್ಧ ಹಾಗೂ ಎರಡನೇ ಪಂದ್ಯದಲ್ಲಿ ಉತ್ತರಾಖಂಡ ವಿರುದ್ಧ ಡ್ರಾ ಸಾಧಿಸಿತ್ತು.

ರಾಜ್ಯ ತಂಡದ ಆರಂಭಿಕ ವಿಶಾಲ್ ಒನತ್, ಪ್ರಖರ್ ಚತುರ್ವೇದಿ ಹಾಗೂ ಧ್ರುವ ಪ್ರಭಾಕರ್ ಉತ್ತಮ ಫಾರ್ಮ್‌ನ-ಲ್ಲಿದ್ದಾರೆ. ಮೊದಲ ಪಂದ್ಯದಲ್ಲಿ ವಿಶಾಲ್ ಒನತ್ 296 ರನ್‌ಗಳಿಸಿ ಮಿಂಚಿದ್ದರು. ಎರಡನೇ ಪಂದ್ಯದಲ್ಲಿ ವಿಶಾಲ್ 163 ಗಳಿಸಿದ್ದಾರೆ.

ಆದರೆ, ಮತ್ತೊಬ್ಬ ಆರಂಭಿಕ ಆಟಗಾರ ರೋಹನ್ ಯರೇಶೀಮಿ ಎರಡೂ ಪಂದ್ಯಗಳಲ್ಲಿ ಬೃಹತ್ ಮೊತ್ತ ಕಲೆಹಾಕುವಲ್ಲಿ ವಿಫಲರಾಗಿದ್ದಾರೆ. ರೋಹನ್ ತವರು ನೆಲದಲ್ಲಿ ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿದ್ದಾರೆ.

ಮುಂಬೈ ಸೆಂಟ್ರಲ್‌ಗೆ ಗೆಲುವು

ಬೀದರ್: ಮುಂಬೈನ ಸೆಂಟ್ರಲ್ ರಿಯಾನ್ ತಂಡವು ಇಲ್ಲಿಯ ನೆಹರೂ ಕ್ರೀಡಾಂ-ಗಣದಲ್ಲಿ ನಡೆಯುತ್ತಿರುವ ನಯೀಮ್, ಜಾವೇದ್ ಹಾಗೂ ಅರುಣ್ ಪಾಲ್ ಸ್ಮರಣಾರ್ಥ ಫುಟ್‌ಬಾಲ್ ಟೂರ್ನಿಯಲ್ಲಿ ಶುಕ್ರವಾರ ಹೈದರಾಬಾದ್‌ನ ಎ.ಜಿ. ಆಫೀಸ್ ತಂಡದ ವಿರುದ್ಧ ರೋಚಕ ಗೆಲುವು ದಾಖಲಿಸಿತು.

ಪಂದ್ಯದಲ್ಲಿ ಗೆಲುವು ಪಡೆಯಲು ಎರಡೂ ತಂಡಗಳು ಜಿದ್ದಾಜಿದ್ದಿನ ಹೋರಾಟ ನಡೆಸಿವು. ಆರಂಭದಲ್ಲಿ ತಲಾ ಒಂದೊಂದು ಗೋಲು ಗಳಿಸಿ, ಪ್ರೇಕ್ಷಕರಲ್ಲಿ ಕುತೂಹಲ ಮೂಡಿಸಿದವು. ಕೊನೆಯಲ್ಲಿ ಮುಂಬೈ ತಂಡ ಇನ್ನೊಂದು ಗೋಲು ಬಾರಿಸಿ, 2-1ರಲ್ಲಿ ಗೆಲುವಿನ ನಗೆ ಬೀರಿತು. ಮುಂಬೈನ ಯಶ್ ಹಾಗೂ ನರಸಿಂಗ್ ತಲಾ ಒಂದು ಗೋಲು ಹೊಡೆದರು.

ಹೈದರಾಬಾದ್‌ನ ಫಲಕ್‌ನುಮಾ ಎಫ್.ಸಿ. ತಂಡ 3-0 ಮಧ್ಯಪ್ರದೇಶದ ಫೇಮಸ್ ಎಫ್.ಸಿ ತಂಡವನ್ನು ಪರಾಭ-ವಗೊಳಿಸಿತು.

ಕೋಲ್ಕತ್ತ ರೇಸ್

ಅಗ್ನಾಸ್ಟಿಕ್ ಗೆಲ್ಲುವ ನಿರೀಕ್ಷೆ

ದಿ ಮೇಫೌಲ್ ಕಪ್ ಶನಿವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆ ಯಾಗಿದ್ದು, ಅಗ್ನಾಸ್ಟಿಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಆರು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಯಾಜ್ 4, ಪ್ರಾಸ್ಪರಸ್ ಪ್ರಿನ್ಸ್ 1
2ನೇ ರೇಸ್: ಸದರ್ನ್ ಲಾಡ್ 6, ಡಾ. ಡೀಮ್ 5, ಜವಾಯ್ 9
3ನೇ ರೇಸ್: ಲಿಯೊನಾರ್ಡೊ 10, ಥಿಯಾಗೊ 7, ದೆವುಸ್ಕ 3
4ನೇ ರೇಸ್: ಕೇಪ್ ಟೆನಾರಸ್ 6, ಬಹುಲೆಯಾನ್ 7, ಎಕ್ಸಾಟಿಕ್ ಕ್ವೀನ್ 2
5ನೇ ರೇಸ್: ಅಗ್ನಾಸ್ಟಿಕ್ 2, ಆವ್‌ಸಮ್ ಒನ್ 3, ಜೇಕ್ 1
6ನೇ ರೇಸ್: ಮಾಂಟೆವರ್ಡಿ 1, ಮೆಜ್ಕಾಲ್ 7, ಮ್ಯಾಗ್ನೆಟೊ 6

ಉತ್ತಮ ಬೆಟ್: ಲಿಯೊನಾರ್ಡೊ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
2.3,4,5,6	1,2,3	4,5,6

ಫುಟ್‌ಬಾಲ್: ರೆಬೆಲ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಬೆಲ್ಸ್ ತಂಡದವರು ಬಿಡಿಎಫ್‌ಎ ಸೂಪರ್ ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿ-ಪ್‌ನಲ್ಲಿ 5–0 ಗೋಲುಗಳಿಂದ ಎಫ್‌ಸಿ ಅಗ್ನಿಪುತ್ರ ತಂಡವನ್ನು ಮಣಿಸಿದರು.

ಶುಕ್ರವಾರ ನಡೆದ ಪಂದ್ಯದಲ್ಲಿ ಪೂರ್ಣ ಪ್ರಾಬಲ್ಯ ಸಾಧಿಸಿದ ರೆಬೆಲ್ಸ್ ಪರ ದವಾಂಚ್ವ ಕಾರ್ಲೊಸ್ (6 ಮತ್ತು 71ನೇ ನಿ.) ಹಾಗೂ ಸಂಜೀಬ್ ಸಿಂಗ್ (7 ಮತ್ತು 73ನೇ ನಿ.) ತಲಾ ಎರಡು ಗೋಲುಗಳನ್ನು ಗಳಿಸಿದರೆ, ಅರ್ನೆಸ್ಟ್ (36 ನೇ ನಿ.) ಒಂದು ಗೋಲು ತಂದಿತ್ತರು.

ಕಿಕ್‌ಸ್ಟಾರ್ಟ್ ಎಫ್‌ಸಿ 5–0 ಗೋಲುಗಳಿಂದ ರೂಟ್ಸ್ ಎಫ್‌ಸಿ ವಿರುದ್ಧ ಗೆದ್ದಿತು. ವಿಜಯಿ ತಂಡದ ಪರ ಅಭಿಷೇಕ್ ಶಂಕರ್ (4), ಜಿಜೊ ಜೋಸೆಫ್ (17), ಪ್ರಿನ್ಸ್ ವಿಲ್ ಎಮೆಕಾ (39), ಅರುಣ್ (90+1) ಹಾಗೂ ಅಕ್ಷಯ್ ಕುಮಾರ್ (90+3) ಗೋಲು ಗಳಿಸಿದರು.

ಇತರ ಪಂದ್ಯಗಳಲ್ಲಿ ಥಾಂಕೋಸ್ ಸ್ಟೂಡೆಂಟ್ಸ್ ಎಫ್‌ಸಿ 2–1 ರಲ್ಲಿ ಬಿಎಫ್‌ಸಿ ವಿರುದ್ಧ, ಯಂಗ್ ಚಾಲೆಂಜರ್ಸ್ ಎಫ್‌ಸಿ 3–1 ರಲ್ಲಿ ಫ್ರೆಂಡ್ಸ್ ಯುನೈಟೆಡ್ ಎಫ್‌ಸಿ ವಿರುದ್ಧ ಗೆದ್ದಿತು.

ಅಮೆರಿಕಕ್ಕೆ ಅಪ್ಪಳಿಸಬಲ್ಲ ಕ್ಷಿಪಣಿ ಉಡಾಯಿಸಿದ ಉತ್ತರ ಕೊರಿಯಾ

ಸೋಲ್ (ಎಪಿ): ಅಮೆರಿಕಕ್ಕೆ ಅಪ್ಪಳಿ-ಸಬಲ್ಲ ಸಾಮರ್ಥ್ಯವಿರುವ ಖಂಡಾಂತರ ಬ್ಯಾಲಿಸ್ಟಿಕ್ ಕ್ಷಿಪಣಿಯನ್ನು (ಐಸಿಬಿಎಂ) ಉತ್ತರ ಕೊರಿಯಾ ಶುಕ್ರವಾರ ಉಡಾಯಿಸಿದೆ ಎಂದು ಅದರ ನೆರೆ ರಾಷ್ಟ್ರಗಳು ಹೇಳಿವೆ.

ಉತ್ತರ ಕೊರಿಯಾ ಉಡಾಯಿಸಿದ ಈ ಕ್ಷಿಪಣಿ ಜಪಾನ್‌ಗೆ ಸೇರಿದ ಸಮುದ್ರ ಗಡಿ ಬಳಿ ಬಿದ್ದಿದೆ. ದಕ್ಷಿಣ ಕೊರಿಯಾ ಮತ್ತು ಜಪಾನ್ ಜೊತೆಗಿನ ಮೈತ್ರಿ ಗಟ್ಟಿಗೊಳಿಸುತ್ತಿರುವ ಅಮೆರಿಕಕ್ಕೆ ಎಚ್ಚರಿಕೆ ನೀಡುವ ಉದ್ದೇಶದಿಂದ ಉತ್ತರ ಕೊರಿಯಾ ಈ ಪರೀಕ್ಷೆ ನಡೆಸಿದೆ ಎಂದು ವಿಶ್ಲೇಷಿಸಲಾ-ಗುತ್ತಿದೆ.

ಉತ್ತರ ಕೊರಿಯಾ ಉಡಾಯಿಸಿದ ಕ್ಷಿಪಣಿಯೊಂದು ಪೂರ್ವ ಕರಾವಳಿ ಬಳಿ ಬಿದ್ದಿರುವುದು ಶುಕ್ರವಾರ ಪತ್ತೆ ಮಾಡಿರುವುದಾಗಿ ದಕ್ಷಿಣ ಕೊರಿಯಾದ ಜಂಟಿ ಸೇನಾ ಮುಖ್ಯಸ್ಥರು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಎರಡು ವಾರಗಳಲ್ಲಿ ಇದು ಉತ್ತರ ಕೊರಿಯಾ ಉಡಾಯಿಸಿದ ಮೊದಲ ಐಸಿಬಿಎಂ ಕ್ಷಿಪಣಿ ಉಡಾವಣೆಯಾಗಿದೆ ಎಂದು ವರದಿ ತಿಳಿಸಿದೆ. ಆದರೆ, ನವೆಂಬರ್ 3ರಂದು ಉತ್ತರ ಕೊರಿಯಾ ಉಡಾಯಿಸಿದ್ದ ಖಂಡಾಂತರ ಕ್ಷಿಪಣಿ ಉದ್ದೇಶಿತ ಗುರಿಯನ್ನು ತಲುಪುವಲ್ಲಿ ವಿಫಲವಾಗಿತ್ತು ಎಂದು ತಜ್ಞರು ಹೇಳಿದ್ದಾರೆ.

ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿ ಸೋಲಿನ ಪರಿಣಾಮ

ಚೇತನ್ ನೇತೃತ್ವದ ಆಯ್ಕೆ ಸಮಿತಿ ವಜಾ


ನವದೆಹಲಿ (ಪಿಟಿಐ): ಚೇತನ್ ಶರ್ಮಾ ನೇತೃತ್ವದ ರಾಷ್ಟ್ರೀಯ ಕ್ರಿಕೆಟ್ ಆಯ್ಕೆ ಸಮಿತಿಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು ಶುಕ್ರವಾರ ವಜಾ ಮಾಡಿದೆ.

ಆಸ್ಟ್ರೇಲಿಯಾದಲ್ಲಿ ಈಚೆಗೆ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡದ ಸೋಲಿನ ಪರಿಣಾಮವಾಗಿ ಬಿಸಿಸಿಐ ಈ ಕ್ರಮ ಕೈಗೊಂಡಿದೆ.

ಚೇತನ್ ಸೇರಿದಂತೆ ನಾಲ್ವರು ಇದ್ದ ಸಮಿತಿಯು ಅಧಿಕಾರ ವಹಿಸಿಕೊಂಡ ನಂತರ ಭಾರತ ತಂಡವು 2021ರ ಟಿ20 ಟೂರ್ನಿಯ ನಾಕ್‌ಔಟ್ ಹಂತ ತಲುಪುವಲ್ಲಿ ವಿಫಲವಾಗಿತ್ತು. ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿಯೂ ಸೋತಿತ್ತು. ಈಚೆಗೆ ಟಿ20 ವಿಶ್ವಕಪ್



ಸುನೀಲ್ ಜೋಶಿ



ಚೇತನ್ ಶರ್ಮಾ

ಸೆಮಿಫೈನಲ್‌ನಲ್ಲಿ ಹೀನಾಯ ಸೋಲನುಭವಿಸಿತ್ತು. ಪ್ರತಿ ಬಾರಿ ತಂಡ ಸೋತಾಗಲೂ ಆಯ್ಕೆ ಪ್ರಕ್ರಿಯೆಗಳ ಕುರಿತು ಟೀಕೆಗಳು ಕೇಳಿಬಂದಿದ್ದವು.

ಸಮಿತಿಯಲ್ಲಿ ಚೇತನ್ (ಉತ್ತರ ವಲಯ), ಹರವಿಂದರ್ ಸಿಂಗ್ (ಕೇಂದ್ರ ವಲಯ), ಸುನೀಲ್ ಜೋಶಿ (ದಕ್ಷಿಣ ವಲಯ) ಹಾಗೂ ದೇಬಾಶಿಶ್ ಮೊಹಾಂತಿ (ಪೂರ್ವವಲಯ) ಇದ್ದರು. ಅತ್ಯಂತ ಅಲ್ಪಾವಧಿ ಕಾರ್ಯನಿರ್ವಹಣೆ ಮಾಡಿದ ಸಮಿತಿ ಇದಾಗಿದೆ.

ರಾಷ್ಟ್ರೀಯ ಆಯ್ಕೆ ಸಮಿತಿಗೆ ಸಾಮಾನ್ಯವಾಗಿ ನಾಲ್ಕು ವರ್ಷಗಳ ಕಾರ್ಯಾವಧಿ ಇರುತ್ತದೆ. ಈ ಸಮಿತಿಯಲ್ಲಿ ಪಶ್ಚಿಮ ವಲಯದ ಪ್ರತಿನಿಧಿ ಇರಲಿಲ್ಲ. ಈ ಮುಂಚೆ ಇದ್ದ ಅಬೆ ಕುರುವಿಲಾ ಅವರ ಕಾರ್ಯಾವಧಿ ಮುಗಿದಿದೆ. ಸೀನಿಯರ್ ಪುರುಷರ ತಂಡದ ಆಯ್ಕೆ ಸಮಿತಿಯ ಸದಸ್ಯರ ನೇಮಕಕ್ಕಾಗಿ ಶುಕ್ರವಾರ ಬಿಸಿಸಿಐ ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ನವೆಂಬರ್ 28 ಕೊನೆಯ ದಿನವಾಗಿದೆ.

ವಯಸ್ಸಿನಲ್ಲಿ ಕಿರಿಯರು ಆಟದಲ್ಲಿ ಅನುಭವಿಗಳು

ಯುವ ಆಟಗಾರರ ಬಗ್ಗೆ ಹಾರ್ದಿಕ್ ವಿಶ್ವಾಸ: ಮಳೆಯಿಂದಾಗಿ ಪಂದ್ಯ ರದ್ದು

ವೆಲ್ಲಿಂಗ್ಟನ್ (ಪಿಟಿಐ): ಭಾರತ ಮತ್ತು ನ್ಯೂಜಿಲೆಂಡ್ ತಂಡಗಳ ನಡುವಣ ಶುಕ್ರವಾರ ಇಲ್ಲಿ ನಡೆಯಬೇಕಿದ್ದ ಪಂದ್ಯವು ಮಳೆಯಿಂದಾಗಿ ರದ್ದಾಯಿತು.

ಈಚೆಗೆ ನಡೆದ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಉಭಯ ತಂಡಗಳೂ ನಾಲ್ಕರ ಘಟ್ಟದಲ್ಲಿ ಸೋತಿದ್ದವು. ಈ ಟಿ20 ಸರಣಿಯಲ್ಲಿ ಭಾರತ ತಂಡಕ್ಕೆ ಆಲ್‌ರೌಂಡರ್ ಹಾರ್ದಿಕ್ ಪಾಂಡ್ಯ ನಾಯಕರಾಗಿದ್ದಾರೆ. ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ ಸೇರಿದಂತೆ ಬಹುತೇಕ ಎಲ್ಲ ಅನುಭವಿ ಆಟಗಾರರು ವಿಶ್ರಾಂತಿ ಪಡೆದಿದ್ದಾರೆ. ಯುವ ಆಟಗಾರರ ಪಡೆಯು ಕಣಕ್ಕಿಳಿಯಲು ಸಿದ್ಧವಾಗಿದೆ.

‘ನಮ್ಮ ತಂಡದಲ್ಲಿರುವವರು ವಯಸ್ಸಿನಲ್ಲಿ ಕಿರಿಯರಾಗಿದ್ದಾರೆ. ಆದರೆ ಅನುಭವದಲ್ಲಿ ಅಲ್ಲ. ಇವರೆಲ್ಲರೂ ಐಪಿಎಲ್‌ನಲ್ಲಿ ಬಹಳಷ್ಟು ಪಂದ್ಯಗಳನ್ನು



ಭಾರತ ತಂಡದ ಹಂಗಾಮಿ ಮುಖ್ಯ ಕೋಚ್ ವಿವಿಎಸ್ ಲಕ್ಷ್ಮಣ್ ಹಾಗೂ ನಾಯಕ ಹಾರ್ದಿಕ್ ಪಾಂಡ್ಯ –ಎಪಿ/ಪಿಟಿಐ ಚಿತ್ರ

ಆಡಿದ್ದಾರೆ. ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡಿದ ಅನುಭವವೂ ಅವರಿಗೆ ಇದೆ’ ಎಂದು ಹಾರ್ದಿಕ್ ಹೇಳಿದರು.

‘ಪರಿಸ್ಥಿತಿಗೆ ತಕ್ಕಂತೆ ವಿಭಿನ್ನ ರೀತಿಯ ಹೊಣೆಗಳನ್ನು ನಾನು ಹಾಗೂ ಹೆಚ್ಚು ಅನುಭವ ಇರುವ ಆಟಗಾರರು ನಿಭಾಯಿಸಬೇಕಿದೆ. ಹೊಸ ಹುಡುಗರಿಗೆ ಉತ್ತಮ ಅನುಭವ ಪಡೆಯಲು ಈ ಪ್ರವಾಸ ಸಹಾಯಕವಾಗಲಿದೆ. ಅವರಿಗೆ ಇದು ಬಹಳ ಮಹತ್ವದ ಅವಕಾಶವೂ ಹೌದು’ ಎಂದು ಹಾರ್ದಿಕ್ ಸುದ್ದಿಗಾರರಿಗೆ ಹೇಳಿದರು.

‘ವಿಶ್ವಕಪ್ ಟೂರ್ನಿ ಮುಗಿದುಹೋಗಿದೆ. ಬೇಸರವೇನೋ ಇದೆ. ಆದರೆ ಹಿಂದಿರುಗಿ ಹೋಗಿ ಬದಲಾಯಿಸಲು ಸಾಧ್ಯವಿಲ್ಲ. ಮುಂದೆ ಆಗಬೇಕಿರುವುದನ್ನು ನಿರ್ವಹಿಸುವುದು ಮುಖ್ಯ’ ಎಂದರು.

ಭಾರತ ತಂಡವು ಟಿ20 ಸರಣಿಯಲ್ಲಿ ಇನ್ನೆರಡು ಪಂದ್ಯಗಳನ್ನು ಆಡಲಿದೆ. ನಂತರ ಮೂರು ಏಕದಿನ ಪಂದ್ಯಗಳ ಸರಣಿ ನಡೆಯುವುದು.

ಚೆಸ್: ಅರ್ಜುನ್‌ಗೆ ಮೊದಲ ಜಯ

ಸ್ಯಾನ್ ಫ್ರಾನ್ಸಿಸ್ಕೊ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಅರ್ಜುನ್ ಎರಿಗೈಸಿ ಅವರು ಮೆಲ್ಟ್‌ವಾಟರ್ ಚಾಂಪಿಯನ್ಸ್ ಟೂರ್ ಚೆಸ್ ಟೂರ್ನಿಯಲ್ಲಿ ಶುಕ್ರವಾರ ಮೊದಲ ಗೆಲುವು ಸಂಪಾದಿಸಿದರು. ಆದರೆ ಆರ್. ಪ್ರಗ್ನಾನಂದ ನಾಲ್ಕನೇ ಸುತ್ತಿನಲ್ಲಿ ಸೋಲನುಭವಿಸಿದರು.

ಅರ್ಜುನ್ ಅವರು ನಾಲ್ಕನೇ ಸುತ್ತಿನಲ್ಲಿ 3–1ರಿಂದ ಅಜರ್‌ಬೈಜಾನ್‌ನ ಶಕ್ರಿಯಾರ್ ಮೆಮೆದ್ಯರೊವ್ ಅವರನ್ನು ಮಣಿಸಿದರು. ಪ್ರಗ್ನಾನಂದ 1–2ರಿಂದ ಅಮೆರಿಕದ ವೇಸ್ಲಿ ಸೊ ಎದುರು ನಿರಾಸೆ ಅನುಭವಿಸಿದರು.

ವಿಶ್ವ ಚಾಂಪಿಯನ್, ನಾರ್ವೆಯ ಮ್ಯಾಗ್ನಸ್ ಕಾರ್ಲ್‌ಸನ್, ಉತ್ತಮ ಲಯದಲ್ಲಿದ್ದು, 3–0ಯಿಂದ ನೆದರ್ಲೆಂಡ್ಸ್‌ನ ಅನೀಶ್ ಗಿರಿ ಅವರನ್ನು ಪರಾಭವಗೊಳಿಸಿದರು. ವಿಯೆಟ್ನಾಂನ ಕುವಾಂಗ್ ಲಿಯೆಮ್ ಲಿ 3–1ರಿಂದ ಪೋಲೆಂಡ್‌ನ ಜಾನ್ ಕ್ರಿಸ್ಟಾಫ್ ಡುಡಾ ಗೆಲುವಿನ ಓಟಕ್ಕೆ ತಡೆಯೊಡ್ಡಿದರು. ನಾಲ್ಕು ಸುತ್ತುಗಳ ಬಳಿಕ ಕಾರ್ಲ್‌ಸನ್ ಎಲ್ಲ ಪಂದ್ಯಗಳ ನ್ನು ಗೆದ್ದು 12 ಪಾಯಿಂಟ್ಸ್‌ನೊಂದಿಗೆ ಅಗ್ರಸ್ಥಾನದಲ್ಲಿದ್ದಾರೆ.



ಅರ್ಜುನ್ ಎರಿಗೈಸಿ– ಟ್ವಿಟರ್ ಚಿತ್ರ

ಡಿ.9ರಿಂದ ಭಾರತ–ಆಸ್ಟ್ರೇಲಿಯಾ ಕ್ರಿಕೆಟ್

ನವದೆಹಲಿ (ಪಿಟಿಐ): ಟಿ20 ವಿಶ್ವ ಚಾಂಪಿಯನ್ ಆಸ್ಟ್ರೇಲಿಯಾ ಮತ್ತು ಭಾರತ ಮಹಿಳಾ ಕ್ರಿಕೆಟ್ ತಂಡಗಳ ನಡುವೆ ಡಿಸೆಂಬರ್ 9ರಿಂದ 20ರವರೆಗೆ ಮುಂಬೈನಲ್ಲಿ ಐದು ಟಿ20 ಪಂದ್ಯಗಳ ಸರಣಿ ನಡೆಯಲಿದೆ. ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಕಾರ್ಯದರ್ಶಿ ಜಯ್ ಶಾ ಈ ವಿಷಯ ತಿಳಿಸಿದರು.

ಮುಂದಿನ ವರ್ಷ ಫೆಬ್ರುವರಿಯಲ್ಲಿ ಐಸಿಸಿ ಟಿ20 ವಿಶ್ವಕಪ್ ಆರಂಭವಾಗುವುದರಿಂದ ಈ ಸರಣಿ ಮಹತ್ವದ್ದೆನಿಸಿದೆ.


ಟಿಟಿ: ಈ ಸಾಧನೆ ಮಾಡಿದ ಮೊದಲ ಆಟಗಾರ್ತಿ

ನಾಲ್ಕರ ಘಟ್ಟಕ್ಕೆ ಮಣಿಕಾ ಬಾತ್ರಾ

ಬ್ಯಾಂಕಾಕ್ (ಪಿಟಿಐ): ಏಷ್ಯಾಕಪ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಮಣಿಕಾ ಬಾತ್ರಾ ಸೆಮಿಫೈನಲ್ ತಲುಪಿದ್ದು, ಈ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ್ತಿ ಎಂಬ ಶ್ರೇಯ ಗಳಿಸಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಎಂಟರಘಟ್ಟದ ಪಂದ್ಯದಲ್ಲಿ ಮಣಿಕಾ 6–11, 11–6, 11–5, 11–7, 8–11, 9–11, 11–9ರಿಂದ (4–3) ತನಗಿಂತ ಮೇಲಿನ ರ‍್ಯಾಂಕಿನ ಚೀನಾ ತೈಪೆ ಆಟಗಾರ್ತಿ ಚೆನ್ ಜು ಯು ಅವರನ್ನು ಪರಾಭವಗೊಳಿಸಿದರು. ಭಾರತದ ಆಟಗಾರ್ತಿ, ವಿಶ್ವ ರ‍್ಯಾಂಕಿಂಗ್‌ನಲ್ಲಿ 44ನೇ ಸ್ಥಾನದಲ್ಲಿದ್ದರೆ, ಚೆನ್ 23ನೇ ಕ್ರಮಾಂಕದಲ್ಲಿದ್ದಾರೆ.

ಹುವಾ ಮಾಕ್ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಹಣಾಹಣಿಯಲ್ಲಿ ಮೊದಲ ಗೇಮ್ ಸೋತರೂ



ಮಣಿಕಾ ಬಾತ್ರಾ– ಪಿಟಿಐ ಚಿತ್ರ

ಛಲಬಿಡದೆ ಆಡಿದ ಮಣಿಕಾ ಗೆಲುವು ಒಲಿಸಿಕೊಂಡರು.

ಮಣಿಕಾ ಮತ್ತು ಚೆನ್ ಒಟ್ಟು ಆರು ಬಾರಿ ಮುಖಾಮುಖಿಯಾಗಿದ್ದಾರೆ. ಭಾರತದ ಆಟಗಾರ್ತಿ ಎರಡು ಮತ್ತು ಚೆನ್ ನಾಲ್ಕು ಪಂದ್ಯಗಳಲ್ಲಿ ಜಯ ಸಾಧಿಸಿದ್ದಾರೆ.

ಭಾರತದ ಶರತ್ ಕಮಲ್ ಮತ್ತು ಜಿ.ಸತ್ಯನ್ ಅವರು ಕ್ರಮವಾಗಿ 2015 ಮತ್ತು 2019ರಲ್ಲಿ ಸಿಂಗಲ್ಸ್ ವಿಭಾಗದಲ್ಲಿ ಆರನೇ ಸ್ಥಾನ ಗಳಿಸಿದ್ದೇ ಇದುವರೆಗಿನ ಶ್ರೇಷ್ಠ ಸಾಧನೆಯಾಗಿತ್ತು.

ಇದಕ್ಕೂ ಮೊದಲು ಮಣಿಕಾ ಅವರು ಪ್ರೀಕ್ವಾರ್ಟರ್‌ಫೈನಲ್‌ನಲ್ಲಿ ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿರುವ, ಚೀನಾದ ಚೆನ್ ಷಿಂಗ್‌ಟಾಂಗ್ ಅವರನ್ನು ಸೋಲಿಸಿದ್ದರು.

ಸೆಮಿಫೈನಲ್‌ನಲ್ಲಿ ಮಣಿಕಾ, ಜಪಾನ್‌ನ ಮಿಮಾ ಇಟೊ ಅವರನ್ನು ಎದುರಿಸುವರು. ಮಿಮಾ ವಿಶ್ವ ರ‍್ಯಾಂಕಿಂಗ್‌ನಲ್ಲಿ ಐದನೇ ಸ್ಥಾನದಲ್ಲಿದ್ದಾರೆ. ಶನಿವಾರ ಈ ಪಂದ್ಯ ನಡೆಯಲಿದೆ.

ಪ್ರೊ ಕಬಡ್ಡಿ ಲೀಗ್: ಹರಿಯಾಣ ಸ್ಟೀಲರ್ಸ್‌ಗೆ ನಿರಾಸೆ

ಪುಣೇರಿ ಪಲ್ಟನ್ ಜಯಭೇರಿ

ಹೈದರಾಬಾದ್: ಅಸ್ಲಂ ಇನಾಂದಾರ್ ಮತ್ತು ಮೋಹಿತ್ ಗೋಯತ್ ಅವರ ‘ಸೂಪರ್ ಟೆನ್‌’ ಸಾಧನೆಯ ಬಲದಿಂದ ಪುಣೇರಿ ಪಲ್ಟನ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಭರ್ಜರಿ ಜಯ ಗಳಿಸಿತು.

ಹೈದರಾಬಾದ್‌ನ ಗಚ್ಚಿಬೌಳಿ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಹಣಾಹಣಿಯಲ್ಲಿ ಪುಣೇರಿ 41–28ರಿಂದ ಹರಿಯಾಣ ಸ್ಟೀಲರ್ಸ್ ತಂಡವನ್ನು ಪರಾಭವಗೊಳಿಸಿತು.

ರೇಡಿಂಗ್‌ನಲ್ಲಿ ಮಿಂಚಿದ ಅಸ್ಲಂ ಮತ್ತು ಮೋಹಿತ್ ತಲಾ 10 ಪಾಯಿಂಟ್ಸ್ ಗಳಿಸಿದರು. ಆಕಾಶ್ ಶಿಂಧೆ (7 ಪಾಯಿಂಟ್ಸ್) ಕೂಡ ಗೆಲುವಿಗೆ ಕೊಡುಗೆ ನೀಡಿದರು.

ಸ್ಟೀಲರ್ಸ್ ತಂಡಕ್ಕಾಗಿ ಪ್ರಪಂಜನ್ ಗಳಿಸಿದ 8 ಪಾಯಿಂಟ್ಸ್ ವ್ಯರ್ಥವಾದವು. ಮೀತು ಶರ್ಮಾ ಮತ್ತು ವಿನಯ್ ತಲಾ 4 ಪಾಯಿಂಟ್ಸ್ ಗಳಿಸಿದರು.

ಆರಂಭದಿಂದಲೇ ಉತ್ತಮ ಆಟವಾಡಿದ ಪುಣೇರಿ ಆಟಗಾರರು ಮೊದಲಾರ್ಧದ ಕೊನೆಯಲ್ಲಿ 20–10ರಿಂದ ಮುಂದಿದ್ದರು. ದ್ವಿತೀಯಾರ್ಧದಲ್ಲಿ ಹರಿಯಾಣ ತಿರುಗೇಟು ನೀಡುವ ಛಲ ತೋರಿತು. ಈ ಅವಧಿಯಲ್ಲಿ ಸ್ಟೀಲರ್ಸ್ 18 ಮತ್ತು ಪುಣೇರಿ 21 ಪಾಯಿಂಟ್ಸ್ ಕಲೆಹಾಕಿದವು. ಆದರೆ ಗೆಲುವು ಒಲಿಸಿಕೊಳ್ಳುವಲ್ಲಿ ಪುಣೇರಿ ಯಶಸ್ವಿಯಾಯಿತು.

ಈ ಜಯದೊಂದಿಗೆ ಪುಣೇರಿ 54 ಪಾಯಿಂಟ್ಸ್‌ನೊಂದಿಗೆ ಅಗ್ರಸ್ಥಾನದಲ್ಲಿತ್ತು. ಬೆಂಗಳೂರು (51) ಎರಡನೇ ಸ್ಥಾನದಲ್ಲಿತ್ತು.

ಬೆಂಗಾಲ್‌ಗೆ ಜಯ: ಇನ್ನೊಂದು ಹಣಾಹಣಿಯಲ್ಲಿ ಬೆಂಗಾಲ್ ವಾರಿಯರ್ಸ್ ತಂಡವು 36–28ರಿಂದ ತೆಲುಗು ಟೈಟನ್ಸ್ ತಂಡಕ್ಕೆ ಸೋಲುಣಿಸಿತು.

ಬೆಂಗಾಲ್ ತಂಡದ ನಾಯಕ ಮಣಿಂದರ್ ಸಿಂಗ್ ಅಮೋಘ 12 ಪಾಯಿಂಟ್ಸ್ ಕಲೆಹಾಕಿದರು. ಶ್ರೀಕಾಂತ್ ಜಾಧವ್ (7) ಕೂಡ ಜಯಕ್ಕೆ ಕಾಣಿಕೆ ನೀಡಿದರು. ಟೈಟನ್ಸ್ ತಂಡಕ್ಕಾಗಿ ಅಭಿಷೇಕ್ ಸಿಂಗ್ 9 ಮತ್ತು ಸಿದ್ಧಾರ್ಥ್ ದೇಸಾಯಿ 8 ಪಾಯಿಂಟ್ಸ್ ಗಳಿಸಿದರು.

ದಿನದ ಕೊನೆಯ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ತಂಡ 45–38ರಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿಯಿತು.

ಇಂದಿನ ಪಂದ್ಯಗಳು

ಯುಪಿ ಯೋಧಾ– ಜೈಪುರ ಪಿಂಕ್ ಪ್ಯಾಂಥರ್ಸ್

ತೆಲುಗು ಟೈಟನ್ಸ್– ಯು ಮುಂಬಾ

ದಬಂಗ್ ಡೆಲ್ಲಿ– ಪಟ್ನಾ ಪೈರೇಟ್ಸ್

ಪಾಯಿಂಟ್ಸ್ ಪಟ್ಟಿ (ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಬೆಂಗಳೂರು	15	10	4	1	56
ಪುಣೇರಿ	15	9	4	2	54
ಜೈಪುರ	14	9	5	0	48
ಯುಪಿ	14	7	5	2	45
ಮುಂಬಾ	14	8	6	0	43
ಬೆಂಗಾಲ್	14	7	5	2	42

ಏರ್‌ಗನ್: ಭಾರತಕ್ಕೆ ಮತ್ತೆರಡು ಚಿನ್ನದ ಪದಕ

ನವದೆಹಲಿ (ಪಿಟಿಐ): ಭಾರತದ ಶೂಟರ್‌ಗಳು 15ನೇ ಏಷ್ಯನ್ ಏರ್‌ಗನ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಎರಡು ಚಿನ್ನ ಗೆದ್ದರು. ಇದರೊಂದಿಗೆ ಒಟ್ಟು 25 ಸ್ವರ್ಣ ಪದಕಗಳೊಂದಿಗೆ ಅಭಿಯಾನ ಕೊನೆಗೊಳಿಸಿದರು.

ಕೊರಿಯಾದ ಡೇಗುನಲ್ಲಿ ನಡೆದ ಟೂರ್ನಿಗೆ ಶುಕ್ರವಾರ ಕೊನೆಯ ದಿನವಾಗಿತ್ತು. ಭಾರತದ ಮನು ಭಾಕರ್, ಸಾಮ್ರಾಟ್ ರಾಣಾ ಅವರು 10 ಮೀಟರ್ಸ್ ಏರ್ ಪಿಸ್ತೂಲ್ ಮಿಶ್ರ ಜೂನಿಯರ್ ತಂಡ ವಿಭಾಗದಲ್ಲಿ ಮತ್ತು ರಿಥಮ್ ಸಂಗ್ವಾನ್ ಮತ್ತು ವಿಜಯ್‌ವೀರ್ ಸಿಧು ಇದೇ ಸ್ಪರ್ಧೆಯ ಸೀನಿಯರ್ ವಿಭಾಗದಲ್ಲಿ ಚಿನ್ನದ ಪದಕಗಳಿಗೆ ಮುತ್ತಿಟ್ಟರು.

ಫೈನಲ್‌ನಲ್ಲಿ ರಿಧಮ್ ಮತ್ತು ವಿಜಯವೀರ್ ಜೋಡಿಯು 17-3ರಿಂದ ಕಜಕಸ್ತಾನದ ವಲೆರಿಯ ರಕೀಮ್‌ಜಾನ್ ಮತ್ತು ಐರಿನಾ ಯೂನುಸ್‌ಮೆಟೊವಾ ಎದುರು ಜಯ ಗಳಿಸಿದರು. ಮನು ಮತ್ತು ರಾಣಾ ಫೈನಲ್‌ನಲ್ಲಿ 17–3ರಿಂದ ಉಜ್ಬೆಕಿಸ್ತಾನದ ನಿಗಿನಾ ಸೈದ್‌ಕುಲೊವಾ– ಮುಖಮ್ಮದ್ ಕಮಲೊವ್ ಎದುರು ಗೆದ್ದರು.

ಹಾಕಿ: ಸದರ್ನ್ ಅಲ್ಫಾ ಸ್ಪೋರ್ಟ್ಸ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಿಂದರಾಜ್ ಮತ್ತು ಸುರೇಶ್ ಅವರ ಉತ್ತಮ ಆಟದ ಬಲದಿಂದ ಸದರ್ನ್ ಅಲ್ಫಾ ಸ್ಪೋರ್ಟ್ಸ್ ಅಕಾಡೆಮಿ ತಂಡವು ರಾಜ್ಯ ಸಿ ಡಿವಿಷನ್ ಹಾಕಿ ಟೂರ್ನಿಯಲ್ಲಿ ಜಯ ಗಳಿಸಿತು.

ಶುಕ್ರವಾರ ನಡೆದ ಪಂದ್ಯದಲ್ಲಿ ಸದರ್ನ್ ಅಲ್ಫಾ 4–2ರಿಂದ ಡೆಕಾಥ್ಲಾನ್ ಹಾಕಿ ತಂಡಕ್ಕೆ ಸೋಲುಣಿಸಿತು. ಗೋವಿಂದರಾಜ್ (2, 47ನೇ ನಿಮಿಷ) ಮತ್ತು ಸುರೇಶ್ (37, 38ನೇ ನಿಮಿಷ) ತಲಾ ಎರಡು ಗೋಲು ದಾಖಲಿಸಿದರು.

ಡೆಕಾಥ್ಲಾನ್ ತಂಡಕ್ಕಾಗಿ ನಿತಿನ್ (8ನೇ ನಿ.) ಮತ್ತು ರೋಷನ್ (11ನೇ ನಿ.) ಗೋಲು ಹೊಡೆದರು.